ಕರ್ಣಾಟಕ

# ವಾಕ್ಯರಚನಾಕ್ರಮ

ಹೊಸಕನ್ನಡದಲ್ಲಿ ಗದ್ಯಬಂಧವನ್ನು ಪಾಠಶಾಲೆಗಳಲ್ಲಿ
ಬೋಧಿಸುವುದಕ್ಕೆ ತಕ್ಕ ಅನೇಕ ಸೂಚನೆಗಳನ್ನೂ
ನೂರಾರು ಅಭ್ಯಾಸಗಳನ್ನೂ ಸೇರಿಸಿ
ಹೊಸ ಮಾದರಿಯಲ್ಲಿ
ಬರೆದಿರುವ ಗ್ರಂಥ

ಲೇಖಕರು:

**ವೈ. ಸುಬ್ಬರಾವ್**

(ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳ ಪೂರ್ವಾಶ್ರಮದ ಹೆಸರು)

ಕ್ರಮಾಂಕ **233**

**ಅಧ್ಯಾತ್ಮ ಪ್ರಕಾಶ ಕಾರ್ಯಾಲಯ**

ಹೊಳೆನರಸೀಪುರ–ಹಾಸನಜಿಲ್ಲೆ: 573211

ದೂ: 08175-273820

www.adhyatmaprakasha.org

2007

ಮೊದಲನೆಯ ಮುದ್ರಣ: 1919
ಪೂರ ತಿದ್ದಿದ ಹತ್ತನೆಯ ಮುದ್ರಣ: 1932
ಮತ್ತೆ ಮುದ್ರಣಗಳು: 1933, 1934, 1935
ಹದಿನಾರನೆಯ ಮುದ್ರಣ: 1936, 1937, 1938
ವಿಶೇಷ ಮುದ್ರಣ (ನಾಲ್ಕರಿಂದ ಏಳನೆಯ ಅಧ್ಯಾಯದವರೆಗೆ): 1942
ಹದಿನೆಂಟನೆಯ ಮುದ್ರಣ: 1952
ಹತ್ತೊಂಬತ್ತನೆಯ ಮುದ್ರಣ: 2007 — 1000 ಪ್ರತಿಗಳು

ಪುಟಗಳು: 10 + **102** = **112**

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶ ಕಾರ್ಯಾಲಯದವು.
All Rights Reserved

ಅಕ್ಷರ ಜೋಡಣೆ:
**ಶ್ರೀರಂಗ ಡಿಜಿಟಲ್ ಸಾಫ್ಟ್‌ವೇರ್ ಟೆಕ್ನಾಲಜೀಸ್ ಪ್ರೈ. ಲಿ.,**
ಜೈನಬಸದಿ ಹಿಂಭಾಗ, ಮೊದಲನೆಯ ಕ್ರಾಸ್,
ರಂಗನಾಥ ನಗರ
ಶ್ರೀರಂಗಪಟ್ಟಣ: 571438
**ದೂ: 08236-292432**
http://www.srirangadigital.com

ಮುದ್ರಣಕಾರರು:
**ಸ್ಟಾಂಡರ್ಡ್ ಪ್ರಿಂಟರ್ಸ್**
ಶಂಕರಮಠದ ರಸ್ತೆ, ಶಂಕರಪುರಮ್
ಬೆಂಗಳೂರು-560004
**ದೂ: 080-22421527**

# ಒಂದನೆಯ ಮುದ್ರಣದ ಪೀಠಿಕೆಯಿಂದ ಆರಿಸಿದ ಭಾಗ.

ವಾಕ್ಯರಚನೆಯನ್ನು ಬೋಧಿಸುವುದಕ್ಕೆ ಕನ್ನಡದಲ್ಲಿ ಕೆಲವು ಪುಸ್ತಕಗಳೇನೋ ಇವೆ ಯಾದರೂ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳು ತರಗತಿಯಲ್ಲಿ ಉಪಯೋಗಿಸಬಹು ದಾದ ಸೂಚನೆಗಳಾಗಲಿ ಅಭ್ಯಾಸಗಳಾಗಲಿ ಇರುವ ಪುಸ್ತಕಗಳು ಇಲ್ಲದೆ ಇರುವುದು ದೊಡ್ಡ ಕೊರತೆಯೆಂಬುದು ನಮ್ಮೆಲ್ಲರಿಗೂ ತಿಳಿದ ಮಾತು. ಇದರಿಂದಲೇ ವಾಕ್ಯರಚನೆ ಯೆಂದರೆ ಕೆಳಗಣ ತರಗತಿಗಳಲ್ಲಿ ಆಗತಾನೆ ಕೇಳಿರುವ ಕಥೆಯನ್ನು ಅದೇ ಮಾತಿನಲ್ಲಿ ಬರೆಯುವುದೆಂದೂ ಮೇಲಿನ ತರಗತಿಗಳಲ್ಲಿ ಮತ್ತೊಬ್ಬರು ಸಿದ್ಧಪಡಿಸಿರುವ ಪ್ರಬಂಧ ಗಳನ್ನು ಬರೆಯುವುದೆಂದೂ ಅರ್ಥವಾಗಿಬಿಟ್ಟಿದೆ.

ಈ ಪುಸ್ತಕದಲ್ಲಿ ಸುಮ್ಮನೆ ನಿಯಮಗಳನ್ನು ಕೊಟ್ಟಿರುವುದಿಲ್ಲ; ಅಥವಾ ಬರಿಯ ಕೆಲವು ಪ್ರಬಂಧಗಳನ್ನು ಬರೆದಿಟ್ಟಿರುವುದೂ ಇಲ್ಲ. ಬಾಲಕರಿಗೆ ತರಗತಿಯಲ್ಲಿ ವಾಕ್ಯ ರಚನೆಯ ಪಾಠ ಬಂದಾಗ – **ಏನು ಬರೆಯಬೇಕು? ಹೇಗೆ ಬರೆಯಬೇಕು? ಎಂಥ ಮಾತುಗಳನ್ನು ಬರೆಯಬೇಕು? ವಾಕ್ಯಗಳನ್ನು ಹೇಗೆ ಜೋಡಿಸಬೇಕು? ವಾಕ್ಯ ಗಳನ್ನು ವಿಂಗಡಿಸುವುದು ಹೇಗೆ? ಇಂಥಿಂಥ ವಾಕ್ಯರಚನೆಗೆ ಸಿದ್ಧ ಮಾಡಿಟ್ಟಿರಬೇಕಾ ದದ್ದೇನು? ಅದನ್ನು ಹೇಗೆ ಸಿದ್ಧಮಾಡಬೇಕು?** – ಎಂದು ಯೋಚನೆ ಹುಟ್ಟುವುದು ಸ್ವಭಾವವಾದುದರಿಂದ ಈ ಪ್ರಶ್ನೆಗಳನ್ನು ಮನಸ್ಸಿನಲ್ಲಿಟ್ಟು ಅವಕ್ಕೆ ತಕ್ಕ ಉತ್ತರಗಳನ್ನೊಳ ಗೊಂಡ ಪ್ರಕರಣಗಳನ್ನು ಅಧ್ಯಾಯವಾಗಿ ವಿಂಗಡಿಸಿರುತ್ತದೆ.

ಉಪಾಧ್ಯಾಯರು ವಾಕ್ಯರಚನೆಗೆ ವಿಷಯವನ್ನು ಹುಡುಕಬೇಕಾಗದಂತೆ ಅವು ಸಿಕ್ಕುವ ಕಡೆಗಳನ್ನು ತಿಳಿಸಿರುವುದಲ್ಲದೆ, ಅಲ್ಲಲ್ಲಿ ಯಾವ ಯಾವ ವಿಚಾರಕ್ಕೆ ಲಕ್ಷ್ಯಕೊಟ್ಟು ಬೋಧಿಸಬೇಕೆಂಬುದನ್ನೂ ಸೂಚಿಸಿರುತ್ತದೆ. **'ಕಥೆ'** ಎಂದರೆ ಹಿಂದೆ ನಡೆದ ಚರಿತ್ರೆಯ ಅಥವಾ ಆದರಂತೆ ಕಲ್ಪಿತವಾದ ವಿಷಯವನ್ನು ತಿಳಿಸಿ ಹೇಳುವುದು, **'ವರ್ಣನೆ'** ಎಂದರೆ ಒಂದು ವಸ್ತುವನ್ನು ಅಥವಾ ಸ್ಥಳವನ್ನು ವಿವರಿಸುವುದು, **'ಕಾಗದಪತ್ರಗಳು'** ಎಂದರೆ ವ್ಯವಹಾರದಲ್ಲಿ ಒಬ್ಬೊಬ್ಬರ ಅನುಕೂಲಕ್ಕಾಗಿ ಉಪಯೋಗಿಸುವ ಬರಹಗಳು – ಇಷ್ಟು ಬಗೆಯ ವಿಷಯಗಳನ್ನು ಬರೆಯುವ ವಿಧಾನವನ್ನು ವಿವರವಾಗಿ ಮಾದರಿಗಳೊಡನೆ ತಿಳಿಸಿರುತ್ತದೆ. ಅಭ್ಯಾಸಗಳು ನೂರರ ಮೇಲೆ ಇರುವುದರಿಂದ ಹೆಚ್ಚಿಗೆ ಹುಡುಕಬೇಕಾದು ದಿಲ್ಲ, ಅಥವಾ ಬೇಕಾದರೆ ಕಲ್ಪಿಸುವುದಕ್ಕೆ ಅವಕಾಶವನ್ನೂ ಸೂಚಿಸಿರುತ್ತದೆ.

[ಮನಸ್ಸಿಗೆ ಮಾತ್ರ ಗೋಚರವಾಗುವ ಅಧ್ಯಾತ್ಮ ವಿಷಯಗಳೂ ರಸ, ಗುಣ, ದೋಷ, ಅಲಂಕಾರ – ಮೊದಲಾದ ವಿಚಾರಗಳೂ ಪ್ರೌಢ ಗದ್ಯಬಂಧಕ್ಕೆ ಸೇರತಕ್ಕವಾದುದರಿಂದ ಚಿಕ್ಕವರ ಸಲುವಾಗಿ ಬರೆದ ಈ ಗ್ರಂಥದಲ್ಲಿ ಇವನ್ನು ಸೇರಿಸಲಿಲ್ಲ.]

**1919** ಗ್ರಂಥಕರ್ತ

# ಹತ್ತನೆಯ ಮುದ್ರಣದ ಪೀಠಿಕೆ

ಅನೇಕ ಕಾರಣಗಳಿಂದ ಈ ಪುಸ್ತಕವು ಎರಡು ವರ್ಷಗಳಿಂದಲೂ ಅಚ್ಚಾಗದೆ ಹೋಯಿತು. ಇದನ್ನು ಮೊದಲು ಬರೆದಾಗ ಈಗಿನ ಮಿಡಲ್ ಮೂರನೆಯ ತರಗತಿಯ ವರೆಗೂ ಈ ಗ್ರಂಥದ ಉಪಯೋಗವು ಆಗಬೇಕೆಂದು ನನಗೆ ಉದ್ದೇಶವಿದ್ದಿತು; ಆದರೆ ವಿದ್ಯಾಭ್ಯಾಸದ ಇಲಾಖೆಯವರು ಮೊದಲನೆಯ ಎರಡು ತರಗತಿಗಳಿಗೆ ಮಾತ್ರವೇ ಇದನ್ನು ನಿಯಮಿಸಿದ್ದರಿಂದ ಕೆಲವು ಪಾಠಗಳು ಆ ತರಗತಿಗೆ ಸ್ವಲ್ಪ ಹೆಚ್ಚಿನ ಅಂತಸ್ತಿನಲ್ಲಿರುವು ದೆಂದು ಕಂಡು ಬಂದು ಹಲವು ಉಪಾಧ್ಯಾಯರುಗಳ ಸೂಚನೆಯಂತೆ ಗ್ರಂಥದ ಅಧ್ಯಾಯ ಗಳ ಮತ್ತು ಅಭ್ಯಾಸಗಳ ಕ್ರಮವನ್ನೂ ಪ್ರತಿಪಾದನಸರಣಿಯನ್ನೂ ಸ್ವಲ್ಪ ಹೆಚ್ಚು ಕಡಿಮೆ ಮಾಡಿರುತ್ತೇನೆ. ಈಗಿನ ರೂಪದಲ್ಲಿ ಮೊದಲನೆಯ ನಾಲ್ಕು ಅಧ್ಯಾಯಗಳನ್ನು ಒಂದೆರ ಡನೆಯ ತರಗತಿಗಳಲ್ಲಿಯೂ ಮಿಕ್ಕ ಅಧ್ಯಾಯಗಳನ್ನು ಮೂರನೆಯ ತರಗತಿಯಲ್ಲಿಯೂ ಉಪಯೋಗಿಸಬಹುದಾಗಿರುತ್ತದೆ. ಕೆಳಗಿನ ಎರಡು ತರಗತಿಗಳಲ್ಲಿ ಈ ಅಧ್ಯಾಯಗಳ ಅಭ್ಯಾಸಗಳನ್ನು ಅವಕಾಶವಿರುವಷ್ಟು ಮಟ್ಟಿಗೆ ಬಾಯಿಯಲ್ಲಿ ಮಾಡಿಸಿದರೆ ಸಾಕಾಗಿದೆ. ಅಂತೂ ಇದು ಬರಿಯ ಹೊಸ ಮುದ್ರಣವಲ್ಲ, ಹೊಸ ಸಂಸ್ಕರಣವೇ. ಇನ್ನು ಮೇಲೆ ಹಳೆಯ ಸಂಸ್ಕರಣದ ಪ್ರತಿಗಳನ್ನು ಈಗಿನ ಪುಸ್ತಕಗಳ ಜೊತೆಗೆ ಒಂದೇ ತರಗತಿಯಲ್ಲಿ ಉಪಯೋಗಿಸುವುದಕ್ಕೆ ಆಗುವ ಹಾಗೆಯೇ ಇಲ್ಲ.

ಉಪಾಧ್ಯಾಯರುಗಳಿಗಾಗಿ ಬರೆದಿರುವ ಪೀಠಿಕೆಯನ್ನೂ ಈಗ ಸ್ವಲ್ಪ ವಿಸ್ತರಿಸಿ ಬರೆದಿರು ತ್ತೇನೆ. ಇದನ್ನು ಒಂದು ಸಲ ಚಿತ್ತವಿಟ್ಟು ಓದಿ ಆಯಾ ಪಾಠಗಳಲ್ಲಿರುವ ಅಡಿಯ ಟಿಪ್ಪಣಿಗಳನ್ನೂ ಲಕ್ಷ್ಯದಲ್ಲಿಟ್ಟುಕೊಂಡು ಪಾಠಗಳನ್ನು ಸಿದ್ಧಗೊಳಿಸುವುದಕ್ಕೆ ಯತ್ನಿಸು ವವರ ಬೋಧನೆಯು ಹೆಚ್ಚು ಕಾರ್ಯಕಾರಿಯಾಗುವುದೆಂದು ನನಗೆ ಭರವಸೆಯುಂಟು.

ಚಾಮರಾಜಪೇಟೆ,<br>
**10-10-1932.**

ಗ್ರಂಥಕರ್ತ.

# ಹದಿನಾರನೆಯ ಮುದ್ರಣದ ಪೀಠಿಕೆ

ಈ ಮುದ್ರಣದಲ್ಲಿ ಅಚ್ಚಿನ ತಪ್ಪುಗಳನ್ನು ತಿದ್ದಿರುವದಲ್ಲದೆ ಅಲ್ಲಲ್ಲಿ ಕೆಲವು ಚಿಕ್ಕ ಮಾರ್ಪಾಡುಗಳನ್ನು ಮಾಡಿರುತ್ತದೆ. ಮುದ್ರಣಾಲಯದ ಅಚ್ಚಿನ ಮೊಳೆಗಳು ಬೇರ್ಪಟ್ಟ ಕಾರಣದಿಂದ ಹಿಂದಿನ ಪುಟಸಂಖ್ಯೆಗಳೂ ಈ ಮುದ್ರಣದ ಪುಟಸಂಖ್ಯೆಗಳೂ ಬೇರೆಬೇರೆ ಯಾಗಿರುತ್ತವೆಯಾದರೂ ಅಭ್ಯಾಸಗಳ ಸಂಖ್ಯೆಯು ಒಂದೇ ಸಮನಾಗಿರುವುದರಿಂದ ಎರಡು ಮುದ್ರಣದ ಪ್ರತಿಗಳನ್ನು ಒಂದೇ ತರಗತಿಯಲ್ಲಿ ಉಪಯೋಗಿಸುವದರಿಂದ ತೊಂದರೆಯೇನೂ ಆಗುವಂತಿಲ್ಲ.

ಬೆಂಗಳೂರು,<br>
**15-4-1938.**

ಗ್ರಂಥಕರ್ತ.

# ವಿಶೇಷಮುದ್ರಣದ ಪೀಠಿಕೆ

ಪುಸ್ತಕವನ್ನು ಈ ವರ್ಷದಿಂದ ಮಿಡಲ್ ಮೂರನೆಯ ತರಗತಿಗೆ ಇಲಾಖೆಯವರು ನಿಯಮಿಸಿರುತ್ತಾರೆ. ಕಾಗದವು ಸಿಕ್ಕುವದು ಕಷ್ಟವಾದುದರಿಂದ ತರಗತಿಗೆ ನಿಯಮಿತವಾದ ಭಾಗವನ್ನು ಮಾತ್ರ ಮುದ್ರಿಸಲಾಗಿದೆ (ನಾಲ್ಕರಿಂದ 7ನೆಯ ಅಧ್ಯಾಯದ ವರಿಗೆ ಪೂರ). ಈ ಭಾಗವನ್ನೇ ಕೊಂಡು ಉಪಯೋಗಿಸುವವರ ಸಲುವಾಗಿ "ಮೊದಲಿನ ಅಭ್ಯಾಸಗಳು" ಎಂಬ ಹೆಸರಿನ ಕೆಲವು ಅಭ್ಯಾಸಗಳನ್ನು ಪುಸ್ತಕದ ಮೊದಲಿನಲ್ಲಿ ಸೇರಿಸಿರುತ್ತದೆ. ಹಳೆಯ ಪುಸ್ತಕಗಳೂ ಉಪಯೋಗಕ್ಕೆ ಬರಲೆಂದು ಪುಸ್ತಕದ ಪುಟಸಂಖ್ಯೆಯನ್ನು ಮಾರ್ಪಡಿಸದೆ ಹಾಗೆಯೇ ಬಿಟ್ಟಿದೆ. ಪುಸ್ತಕವನ್ನು ಹೊಸ ತರಗತಿಯಲ್ಲಿ ಬಳಸಿದ ಅನುಭವ ದಿಂದ ಅವಶ್ಯವೆಂದು ತೋರಿಬರುವ ಮಾರ್ಪಾಡುಗಳನ್ನು ಉಪಾಧ್ಯಾಯರುಗಳು ದಯವಿಟ್ಟು ತಿಳಿಸಿದರೆ ಅವರ ಸೂಚನೆಗಳನ್ನು ಮುಂದಿನ ಸಂಸ್ಕರಣಕ್ಕೆ ಉಪಯೋಗಿಸಿ ಕೊಳ್ಳುವೆನು.

ಹೊಳೆನರಸೀಪುರ, ಗ್ರಂಥಕರ್ತ.
**20–3–1942.**

# ಉಪಾಧ್ಯಾಯರಿಗೆ

ವಾಕ್ಯರಚನೆಯ ಬೋಧನೆಯಲ್ಲಿ ಎರಡು ಅಂತಸ್ತುಗಳಿವೆ: ತಿಳಿದಿರುವ ವಿಷಯಗಳನ್ನು ವಿಂಗಡಿಸಿಕೊಂಡು ತಪ್ಪಿಲ್ಲದಂತೆ ಬರೆಯುವುದಕ್ಕೆ ಬೇಕಾಗುವ ಭಾಷೆಯ ಅಂಗಗಳನ್ನು ಕಲಿಸುವುದು ಮೊದಲನೆಯದು; ಹೊಸ ಹೊಸ ವಿಷಯಗಳನ್ನು ಸಂಗ್ರಹಿಸಿ ಮತ್ತೊಬ್ಬರಿಗೆ ವಿಷಯಬೋಧನೆಯೋ ವಿನೋದವೋ ಆಗುವ ರೀತಿಯಲ್ಲಿ ಬರೆಯುವುದಕ್ಕೆ ಬೇಕಾಗುವ ವಾಕ್ಯರಚನೆಯ ಸಲಕರಣೆಗಳ ತಿಳಿವಳಿಕೆಯನ್ನು ಕೊಡುವುದು ಎರಡನೆಯದು. ಈ ಚಿಕ್ಕ ಪುಸ್ತಕದಲ್ಲಿ ಮೊದಲನೆಯ ಅಂತಸ್ತನ್ನು ಮಾತ್ರ ಲಕ್ಷ್ಯದಲ್ಲಿಟ್ಟುಕೊಂಡಿರುತ್ತದೆ.

ಈ ಅಂತಸ್ತಿನಲ್ಲಿ ಹುಡುಗರಿಗೆ ನಾವು ಕಲಿಸಬೇಕಾಗಿರುವ ಭಾಗಗಳು ಯಾವು ವೆಂದರೆ:–

1. ವಾಕ್ಯಗಳನ್ನು ಬರೆಯುವಾಗ ಮಾತುಗಳ ನಡುವೆ ತಕ್ಕಷ್ಟು ಸ್ಥಳವನ್ನು ಬಿಟ್ಟು ಬರೆಯುವುದು.
2. ಅರ್ಥಕ್ಕನುಸಾರವಾಗಿ ವಾಕ್ಯಗಳ ಕೊನೆಯಲ್ಲಿ ಪೂರ್ಣವಿರಾಮ, ಪ್ರಶ್ನೆಯಚಿಹ್ನೆ, ಭಾವಬೋಧಕಚಿಹ್ನೆ– ಇವುಗಳನ್ನೂ ವಾಕ್ಯಗಳ ನಡುವೆ ಅಲ್ಪವಿರಾಮ, ಅರ್ಧ ವಿರಾಮ, ವಿವರಣಚಿಹ್ನೆ, ಅನುವಾದಕಚಿಹ್ನೆ, ಭಾವಬೋಧಕಚಿಹ್ನೆ–ಇವುಗಳನ್ನೂ ಉಪಯೋಗಿಸುವುದು.

3. ವಾಕ್ಯಗಳಿಗೆ ಬಿಗಿ ಬರುವಂತೆ ಒಂದುಗೂಡಿಸಿ ಸ್ವಲ್ಪದರಲ್ಲಿ ಬರೆಯುವುದು; ಅವಶ್ಯವಾದ ಕಡೆಯಲ್ಲಿ ವಿಶೇಷಣಗಳನ್ನು, ಸಂಯುಕ್ತಪದಗಳನ್ನು, ಅಥವಾ ಉಪವಾಕ್ಯಗಳನ್ನು ಉಪಯೋಗಿಸಿಕೊಂಡು ಹಿಗ್ಗಿಸಿ ಬರೆಯುವುದು.
4. ವಾಕ್ಯಗಳಿಗೆ ಸಂಬಂಧವು ತೋರುವಂತೆ ಸಂಬಂಧಸೂಚಕಗಳನ್ನು ಉಪಯೋಗಿಸುವುದು.
5. ಹಲವು ವಾಕ್ಯಗಳನ್ನು ಸೇರಿಸಿ ಮಹಾವಾಕ್ಯವಾಗಿ ಬರೆಯುವುದು; ಮಹಾವಾಕ್ಯದ ಮೊದಲನೆಯ ವಾಕ್ಯವನ್ನು ಎಡಕ್ಕೆ ಸ್ವಲ್ಪ ಸ್ಥಳವನ್ನು ಬಿಟ್ಟು ಬರೆಯುವುದು. ಇವಿಷ್ಟೂ ಎಲ್ಲಾ ಬಗೆಯ ವಾಕ್ಯರಚನೆಯಲ್ಲಿಯೂ ಬೋಧಕನು ಲಕ್ಷ್ಯದಲ್ಲಿಡಬೇಕಾದ **ಸಾಮಾನ್ಯ ವಿಷಯಗಳು.** ಕಥೆಯಲ್ಲಿ ನಡೆದ ಸಂಗತಿಗಳನ್ನು ಕ್ರಮವಾಗಿ ಬರೆಯುವುದು, ಸಂಭಾಷಣೆಯ ವಾಕ್ಯಗಳನ್ನು ಅಲ್ಲಲ್ಲಿ ತಕ್ಕಂತೆ ಬೆರೆಯಿಸಿಕೊಳ್ಳುವುದು; ವಸ್ತುವರ್ಣನೆಯಲ್ಲಿ ವಿಶೇಷಣಗಳನ್ನೂ ಹೋಲಿಕೆಗಳನ್ನೂ ಬೇಕಾದ ಕಡೆಯಲ್ಲಿ ಒಪ್ಪಾಗುವಂತೆ ಜೋಡಿಸಿಕೊಳ್ಳುವುದು; ಕಾಗದಗಳಲ್ಲಿ ಒಕ್ಕಣೆಯ ಭಾಗಗಳನ್ನು ಸರಿಯಾಗಿ ವಿಂಗಡಿಸುವುದು, ಗೌರವಕ್ಕೆ ತಕ್ಕ ಮಾತುಗಳನ್ನುಪಯೋಗಿಸುವುದು – ಇವು ಆಯಾ ವಾಕ್ಯರಚನೆಯಲ್ಲಿ ಲಕ್ಷ್ಯವಿಡಬೇಕಾದ **ವಿಶೇಷವಿಷಯಗಳು.**

ವಾಕ್ಯರಚನೆಯ ನಿಯಮಗಳನ್ನಾಗಲಿ ವ್ಯಾಕರಣದ ನಿಯಮಗಳನ್ನಾಗಲಿ ಗಟ್ಟಿಮಾಡಿಸಬೇಕಾದುದೇನೂ ಅವಶ್ಯವಲ್ಲ; ಇವುಗಳನ್ನು ಕುರಿತು ದೀರ್ಘವಾದ ಉಪನ್ಯಾಸಗಳನ್ನು ತರಗತಿಯಲ್ಲಿ ಮಾಡಬೇಕಾದುದೂ ಅವಶ್ಯವಲ್ಲ. ಅಲ್ಲಲ್ಲಿ ಕಪ್ಪಕ್ಷರದಲ್ಲಿ ಕೊಟ್ಟಿರುವ ಪಾರಿಭಾಷಿಕಶಬ್ದಗಳ ನಿಜವಾದ ಅರ್ಥವನ್ನು ಹುಡುಗರು ತಿಳಿದುಕೊಂಡಿದಾರೆಂಬುದನ್ನು ಹುಡುಗರು ಬರೆಯುವ ವಾಕ್ಯರಚನೆಯಿಂದಲೂ ಅಭ್ಯಾಸಗಳಲ್ಲಿರುವ ಪ್ರಶ್ನೆಗಳಿಗೆ ಅವರು ಕೊಡುವ ಉತ್ತರಗಳಿಂದಲೂ ಬೋಧಕನು ಮನಗಂಡರೆ ಸಾಕಾಗಿದೆ.

ವಾಕ್ಯರಚನೆಯಲ್ಲಿ ಕ್ರಮವು ಮುಖ್ಯವಾಗಿರಬೇಕೇ ಹೊರತು ವಿಷಯದ ಕಡೆಗೆ ಅಷ್ಟು ಲಕ್ಷ್ಯಕೊಡಬಾರದು; ಅಂದರೆ ಹೊಸದಾಗಿ ಹುಡುಗರು ಬರೆದ ವಾಕ್ಯರಚನೆಯಲ್ಲಿ ವಿಷಯಗಳು ಸಾಲದೆ ಇದ್ದರೂ ಬರೆದ ಕ್ರಮ ಸರಿಯಾಗಿದ್ದರೆ ಪೂರ ಗುಣಸಂಖ್ಯೆಯನ್ನು ಕೊಡಬೇಕು. ಹುಡುಗರಿಗೆ ಕಷ್ಟವಾದ, ಅವರೆಂದೂ ಕಾಣದಿರುವ, ವಿಷಯಗಳನ್ನೂ ಎಂದಿಗೂ ವಾಕ್ಯರಚನೆಗೆ ಇಡಬಾರದು. ಮೊದಲೇ ವಿಷಯವನ್ನು ಕೊಡಬೇಕು, ಅಥವಾ ವಿಷಯಗಳು ಸಿಕ್ಕುವ ಸ್ಥಳವನ್ನು ತಿಳಿಸಬೇಕು. ತರಗತಿಯಲ್ಲಿ ವಾಕ್ಯರಚನೆಯನ್ನು ಬರೆದರೆ ಹುಡುಗರು ಕೇಳುವ ಪ್ರಶ್ನೆಗಳಿಗೆ ಉತ್ತರಹೇಳಬೇಕು. ಯಾವ ಮಾತಿನ ಅರ್ಥವು, ಯಾವ ವ್ಯಾಕರಣದ ನಿಯಮವು, ಅಥವಾ ಮತ್ತೆ ಯಾವ ವಿಷಯವು ಬೇಕಾದರೂ ಹುಡುಗರು ಕೇಳಿ ತಿಳಿದುಕೊಳ್ಳುವುದಕ್ಕೆ ಅವಕಾಶವನ್ನೂ ಕೊಡಬೇಕು, ಇದರಿಂದ ಬಾಲಕರು ತಮ್ಮ ತಮ್ಮ ಸ್ವಂತರೀತಿಯಿಂದ ಬರೆಯುವುದಕ್ಕೆ ಪ್ರೋತ್ಸಾಹವಾಗುವುದು. 1. ವಸ್ತುಗಳನ್ನು

ತೋರಿಸುವುದು, 2. ಬಾಲಕರು ಕೇಳಿರುವ ಕಥೆಗಳನ್ನೂ ಪುರಾಣದ ಆಖ್ಯಾಯಿಕೆಗಳನ್ನೂ ಚರಿತ್ರೆಗಳನ್ನೂ ವಿಷಯಕ್ಕೆ ಇಟ್ಟುಕೊಳ್ಳುವುದು, 3. ಹೊಸ ವಿಷಯಗಳನ್ನು ವರ್ತಮಾನ ಪತ್ರಿಕೆಗಳು, ಮಾಸಪುಸ್ತಕಗಳು ಮುಂತಾದುವುಗಳಿಂದ ಸಂಗ್ರಹಿಸುವುದಕ್ಕೆ ಪ್ರೋತ್ಸಾಹ ಕೊಡುವುದು – ಇವೇ ಮುಂತಾದ ಉಪಾಯಗಳಿಂದ ವಿಷಯದ ಯೋಚನೆಯನ್ನು ತಪ್ಪಿಸಿ, ತಿಳಿದಿರುವ ವಿಷಯವನ್ನು ಉತ್ತಮವಾದ ರೀತಿಯಲ್ಲಿ ಓದುವವರ ಮನಸ್ಸಿನ ಮೇಲೆ ಪರಿಣಾಮವಾಗುವ ಹಾಗೆ ಬರೆಯುವುದೇ ಮುಖ್ಯೋದ್ದೇಶವೆಂಬುದನ್ನು ಚೆನ್ನಾಗಿ ಮನ ಗಾಣಿಸಬೇಕು. ಪ್ರತಿಯೊಂದು ವಾಕ್ಯರಚನೆಯೂ ಚೊಕ್ಕಟವಾದ ಬರೆವಣಿಗೆ, ಸರಿಯಾದ ಅಕ್ಷರಸಂಯೋಜನೆ ಮತ್ತು ಲೇಖನಚಿಹ್ನೆಗಳು, ಶುದ್ಧವಾದ ಭಾಷೆ, ವಾಕ್ಯರಚನೆಯ ನಿಯಮಗಳಿಗನುಸಾರವಾದ ವಿಂಗಡ–ಇವೆಲ್ಲವನ್ನೂ ಎಷ್ಟುಮಟ್ಟಿಗೆ ಒಳಗೊಂಡಿದೆ ಯೆಂಬುದರ ಮೇಲೆ ಅದರ ಯೋಗ್ಯತೆಯನ್ನು ನಿರ್ಣಯಿಸಬೇಕೇ ಹೊರತು, ಎಷ್ಟು ಪುಟ ಗಳ ವಿಷಯವಿದೆಯೆಂಬುದನ್ನೇ ಮುಖ್ಯವೆಂದೆಣಿಸಲಾಗದು.

ಈ ಪುಸ್ತಕದಲ್ಲಿ ಒಂದೊಂದು ಅಭ್ಯಾಸದ ಕೆಳಗೆ ಕೊಟ್ಟಿರುವ ಕಥೆ, ವರ್ಣನೆ, ಕಾಗದ ಪತ್ರ- ಮುಂತಾದುವುಗಳನ್ನು ಬೇರೆಯ ಅಭ್ಯಾಸಕ್ಕಾಗಿಯೂ ಉಪಯೋಗಿಸಬಹುದು. ಉದಾಹರಣೆಗೆ 12ನೆಯ ಅಭ್ಯಾಸದಲ್ಲಿರುವ ಮಹಾವಾಕ್ಯಗಳಲ್ಲಿ ಒಂದನ್ನು ಕಪ್ಪುಹಲಗೆಯ ಮೇಲೆ ಪೂರ್ಣವಿರಾಮಗಳನ್ನೆಲ್ಲ ಬಿಟ್ಟು ಬರೆದು, ಅವು ಎಲ್ಲೆಲ್ಲಿರಬೇಕೋ ನೋಡಿ ಸೇರಿಸುವಂತೆ ಹುಡುಗರಿಗೆ ಹೇಳಬಹುದು; 46ನೆಯ ಅಭ್ಯಾಸದಲ್ಲಿರುವ ವಿಷಯವನ್ನು ಒಂದು ಕಾಗದದಲ್ಲಿ ಸೇರಿಸಿ ಸರಿಯಾದ ಒಕ್ಕಣೆಯನ್ನು ಜೋಡಿಸಿ ಬರೆಯುವಂತೆ ಹೇಳ ಬಹುದು. 81ನೆಯ ಅಭ್ಯಾಸದಲ್ಲಿರುವ ವಿಷಯವನ್ನು ಸಂಗೀತಗಾರನು ಮತ್ತೊಬ್ಬರಿಗೆ ಹೇಳಿದಂತೆ ಬರೆಯಿರೆಂದು ಕೇಳಬಹುದು, ಇತ್ಯಾದಿ. ಹೀಗೆ ಮಾಡುವುದರಿಂದ ಅಭ್ಯಾಸಗಳ ಸಂಖ್ಯೆಯು ಬೇಕಾದಷ್ಟಾಗುವುದು. ಇಲ್ಲಿರುವ ಅಭ್ಯಾಸಗಳನ್ನು ಬಹುಮಟ್ಟಿಗೆ ಬಾಯ ಲ್ಲಿಯೇ ಮಾಡಿಸಿ ಅವುಗಳಲ್ಲಿ ಕೆಲವನ್ನು ಮಾತ್ರ ಬರೆಯುವುದಕ್ಕೆ ಕೊಡುವುದಾದರೆ, ಕಷ್ಟ ವಾದ ಉದಾಹರಣೆಗಳನ್ನು ಉಪಾಧ್ಯಾಯರೇ ಬಿಡಿಸಿ ಹೇಳಿದರೆ, ಹುಡುಗರಿಗೆ ಉತ್ತೇಜಕ ವಾಗಿರುವುದು. ಇದಕ್ಕಾಗಿಯೇ ಅಲ್ಲಲ್ಲಿ ಮಾದರಿಯ ಉದಾಹರಣೆಗಳನ್ನು ಕೊಟ್ಟಿರು ವುದು.

ಈ ಪುಸ್ತಕವನ್ನುಪಯೋಗಿಸುವ ಬೋಧಕರು ಪಾಠಕಾಲದಲ್ಲಿ ತಮಗುಂಟಾಗುವ ಅನುಭವಗಳಿಂದ ಕಂಡುಬರುವ ಹೆಚ್ಚುಕುಂದುಗಳನ್ನು ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥನೆ.

**1952** **ಗ್ರಂಥಕರ್ತ**

# ಪ್ರಕಾಶಕರ ಬಿನ್ನಹ

ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು ತಮ್ಮ ಪೂರ್ವಾಶ್ರಮದಲ್ಲಿ ವೈ. ಸುಬ್ಬ ರಾವ್ ಎಂಬ ಹೆಸರಿನಿಂದ ಉಪಾಧ್ಯಾಯರಾಗಿದ್ದಾಗ, ಸಂನ್ಯಾಸ ಸ್ವೀಕಾರಕ್ಕೆ ಸುಮಾರು ಮೂವತ್ತು ವರ್ಷಗಳ ಹಿಂದೆಯೇ ಬರೆದ ಪುಸ್ತಕ ಇದು (ವಾಕ್ಯರಚನಾಕ್ರಮ). ಒಮ್ಮೆ ಕುರ್ತಕೋಟಿಯಲ್ಲಿದ್ದಾಗ ಕೆಲವು ಕನ್ನಡದ ಪ್ರಖ್ಯಾತ ಲೇಖಕರ ಅನುಕರಣೀಯ ಶೈಲಿಯ ಸೊಬಗು, ಶಬ್ದ ಮರ್ಯಾದೆ, ವ್ಯಾಕರಣ ನಿಯಮಗಳು, ಅಲಂಕಾರ ರಸಾದಿಗಳನ್ನು ತಿಳಿಸುವ ಪ್ರೌಢಸಾಹಿತ್ಯಗ್ರಂಥವೊಂದರ ರಚನೆಯ ಆಸೆ ಮೂಡಿತು. ಅದಕ್ಕಾಗಿ, ಅಂತಹ ಲೇಖಕರ ರಸಾಕರ್ಷಕ ಬರೆವಣಿಗೆಯ ಉತ್ತಮ ವಾಕ್ಯಬಂಧಗಳನ್ನೂ ಪ್ರತಿಮಾಡಿಕೊಳ್ಳುವದರೊಡನೆ ಕೆಲವು ಪ್ರಯತ್ನಗಳನ್ನೂ, ಮಾಡಿದ್ದರು. ಆ ಸಮಯದಲ್ಲಿ ಸಹೋಪಾಧ್ಯಾಯರಾಗಿದ್ದ ಶ್ರೀ ಸನ್ನತಿ (ಸನ್ಮತಿ) ರಾಯರು ಶಾಲಾ ಮಕ್ಕಳಿಗೆ ಅನುಕೂಲವಾಗುವಂತಹ ಕನ್ನಡ ವ್ಯಾಕರಣ ಪುಸ್ತಕಗಳನ್ನು ಬರೆದರೆ ಹುಡುಗರಿಗೂ ಉಪಯೋಗ, ಆರ್ಥಿಕ ಸ್ವಪ್ರಯೋಜನವೂ ಇದೆ ಎಂದು ಮಾಡಿದ ಸಲಹೆಯಂತೆ, ಈ **'ಕರ್ಣಾಟಕ ವಾಕ್ಯರಚನಾಕ್ರಮ'** ಪುಸ್ತಕವನ್ನು ಬರೆದರು. ಇದು ಸುಮಾರು 1916ರಲ್ಲಿ ಹರಿಹರದಲ್ಲಿದ್ದಾಗ ಬರೆದದ್ದು. ಕೆಲವು ವರ್ಷಗಳನಂತರ ಇದು ಪಠ್ಯಪುಸ್ತಕವೆಂದು ವಿದ್ಯಾ ಇಲಾಖೆಯವರು ನಿಗದಿ ಮಾಡಿದರು.

ಸುಬ್ಬರಾಯರಿಗೆ ಮೊದಲಿನಿಂದಲೂ ಉಪಾಧ್ಯಾಯ ವೃತ್ತಿಯ ಆಕರ್ಷಣೆ ಇತ್ತು. ಇವರು ವಿದ್ಯಾರ್ಥಿಯಾಗಿ ಐದನೆಯ ತರಗತಿಯಲ್ಲಿ ಓದುತ್ತಿದ್ದಾಗಲೇ ಅವರ ಉಪಾಧ್ಯಾಯರು ಆಗಾಗ ಒಂದನೆಯ ತರಗತಿಗೆ ಪಾಠ ಹೇಳಿಕೊಡಲು ಕಳುಹಿಸುತ್ತಿದ್ದರು. ಆಗಿನಿಂದಲೇ ಈ ವೃತ್ತಿಯಲ್ಲಿನ ಒಲವು ಮೊಳೆತು ಬಲಿಯುತ್ತ ಬಂತು. ಆರ್ಥಿಕ ಪರಿಸ್ಥಿತಿಯಿಂದಾಗಿ ಬೆಂಗಳೂರಿನಲ್ಲಿನ ತಮ್ಮ ವ್ಯಾಸಂಗವನ್ನು ಬಿಟ್ಟು ಬಂದಾಗ ಸಿಕ್ಕಿದ ಓವರ್ಸೀಯರ್ ಕೆಲಸದಲ್ಲಿದ್ದರು, ಆದರೂ ಅವರಿಗೆ ಉಪಾಧ್ಯಾಯ ವೃತ್ತಿಯದೇ ಹಂಬಲ. ಈ ವೃತ್ತಿ ಜೀವನೋಪಾಯವೆನ್ನುವದಕ್ಕಿಂತಲೂ ಹೆಚ್ಚಾಗಿ ಅವರಿಗೆ ಮನಃತೃಪ್ತಿಯನ್ನು ನೀಡುವ ಸಾಧನವಾಗಿತ್ತು. ಜೊತೆಗೆ, ಬರೆವಣಿಗೆಯ ತಮ್ಮ ಸಹಜ ಪ್ರವೃತ್ತಿಯನ್ನೂ ಅನುಸರಿಸಿ, ಬೇಕಾದ ವಸ್ತುವಿಷಯಗಳನ್ನು ಜೋಡಿಸಿ ಬರೆದ ಇದು ಉತ್ತಮ ಪಠ್ಯ ವಸ್ತುವಾಗಿದ್ದರಲ್ಲಿ ಆಶ್ಚರ್ಯವೇನು! ಏಕೆಂದರೆ, ಏನಿದೆ ಎಂಬುದಕ್ಕೆ ಅವರ ಪೀಠಿಕೆ ಮತ್ತು **'ಉಪಾಧ್ಯಾಯರಿಗೆ'** ಪುಟಗಳನ್ನು ಅವಶ್ಯವಾಗಿ ಓದಬೇಕು.

ಬರೆದಾದ ಮೇಲೆ ತಮ್ಮ ಹಿತೈಷಿ ಶಾಲಾಗುರುಗಳಾಗಿದ್ದ, ಆಗ ದೊಡ್ಡ ಸರ್ಕಾರಿ ಹುದ್ದೆಯಲ್ಲಿದ್ದ ಶ್ರೀ ಸುಬ್ರಹ್ಮಣ್ಯ ಅಯ್ಯರ್‌ರವರಿಗೆ ತೋರಿಸಿದಾಗ, ಅವರು ವಾಕ್ಯರಚನೆಯ ಕ್ರಮ ಹೇಗಿರಬೇಕು ಎಂದು ನೀಡಿದ ಸೂಚನೆಯಂತೆ ಇಡೀ ಕರಡು ಹಸ್ತಪ್ರತಿಯನ್ನು ಮೊದಲಿನಿಂದ ಬರೆದರು. ಸ್ವಲ್ಪ ದೊಡ್ಡದೆನಿಸಿದ ಪುಸ್ತಕ ಮುದ್ರಣಕ್ಕೆ ಸಾಕಷ್ಟು ಹಣ ತಮ್ಮಲ್ಲಿಲ್ಲವೆಂದು ಇದನ್ನು ಎರಡು ಭಾಗ ಮಾಡಿ ಒಂದನ್ನು ಮಾತ್ರ ಅಚ್ಚು ಮಾಡಿಸುವ ಯೋಚನೆಯಲ್ಲೂ ಇದ್ದರು. ಅಂತೂ ಇದು ಅಚ್ಚಾದದ್ದು 1919ರಲ್ಲಿ. ಕೂಡಲೇ, **ವಿದ್ಯಾರ್ಥಿಗಳಿಗೂ, ಹೆಚ್ಚಾಗಿ ಉಪಾಧ್ಯಾಯರಿಗೂ ಬಹಳ ಉಪಯುಕ್ತವಾದ ಈ ಪುಸ್ತಕ, ಎರಡು ವರ್ಗದ ಮನ್ನಣೆಯನ್ನೂ ಪಡೆದು ಹೆಚ್ಚಿನ ಬೇಡಿಕೆಯನ್ನು ಗಳಿಸಿತು.** ಆ ಕಾರಣದಿಂದಲೇ, ಸಾಮಾನ್ಯವಾಗಿ ವರ್ಷಕ್ಕೊಮ್ಮೆ ಎಂಬಂತೆ ಮರು ಮುದ್ರಣಗಳಾಗಿ, 1932ರಲ್ಲಿ ಪರಿಷ್ಕೃತ ಆವೃತ್ತಿಯು ಹತ್ತನೆಯ ಮುದ್ರಣವಾಗಿ ಹೊರ

ಬಂತು. ಮುಂದೆ, ನಾಲ್ಕರಿಂದ ಏಳನೆಯ ಅಧ್ಯಾಯದವರೆಗೆ 1942ರಿಂದ 1952ರಲ್ಲಿ ಒಟ್ಟು 18 ಮುದ್ರಣಗಳಾದುವು. ಇಲ್ಲಿಂದಾಚೆಗೆ ಕೆಲವು ಮುದ್ರಣಗಳಾಗಿರಬಹುದಾದರೂ ಕಾರ್ಯಾಲಯ ದಲ್ಲಿ ಪ್ರತಿಗಳಾವುವೂ ದೊರೆತಿರಲಿಲ್ಲ. ಈ ಪುಸ್ತಕಕ್ಕಾಗಿ ಅಧ್ಯಾತ್ಮಪ್ರಕಾಶ ಪತ್ರಿಕೆಯಲ್ಲಿ ಯಾರಲ್ಲಾ ದರೂ ಪ್ರತಿ ಇದ್ದರೆ ಕಳಿಸಿಕೊಡಿ ಎಂಬ ಕೋರಿಕೆ ಸಲ್ಲಿಸಿದರೂ ಅದು ವ್ಯರ್ಥವೇನೋ, ಇಷ್ಟು ಹಳೆಯ ಪುಸ್ತಕ ಯಾರಲ್ಲಿದ್ದೀತು ಎಂಬ ಅನುಮಾನವಿತ್ತು. ಆದರೆ ನಮ್ಮ ಪುಣ್ಯಕ್ಕೆ ದಾವಣಗೆರೆ ಯಲ್ಲಿರುವ ಮಹನೀಯರಾದ **ಸಿ. ಕೆ. ವೈ. ದೀಕ್ಷಿತ್** ಎಂಬ ಸಹೃದಯರು ತಮ್ಮಲ್ಲಿದ್ದ 1938ರ ಪ್ರತಿಯನ್ನು ಕಳುಹಿಸಿ ಅತ್ಯುಪಕಾರ ಮಾಡಿದ್ದಾರೆ. ಅವರಿಗೆ ಕಾರ್ಯಾಲಯ ತಮ್ಮ ವಿಶ್ವಾಸ ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುತ್ತದೆ. ಈ ಪ್ರತಿಯಿಂದಲೇ ಈಗ ಹೊಸ ಪುಸ್ತಕ ಮುದ್ರಣ ವಾಗಿದೆ. ಪಠ್ಯಪುಸ್ತಕವೆಂದು ಇಲಾಖೆಯ ಮಾನ್ಯತೆ ದೊರೆತದ್ದು, ಮೊದಲು ಈ ಪುಸ್ತಕಕ್ಕೇ. ಇದರೊಡನೆಯೇ, 1916ರಲ್ಲೇ ಬರೆದ 'ಪದತ್ರಯ' ಪುಸ್ತಕವೂ ಇದರ ಜೊತೆಯಲ್ಲಿ ಈಗ ಮುದ್ರಣವಾಗಿದೆ.

ಇವೆರಡು ಪುಸ್ತಕಗಳೂ, ವ್ಯಾಕರಣಶಾಸ್ತ್ರಾಭ್ಯಾಸವೇ ನಶಿಸಿಹೋಗಿ ಕೇವಲ ಬಳಕೆಯಿಂದ ಉಪಯೋಗಕ್ಕೆ ಬಂದಿರುವ ಬರೆವಣಿಗೆಯ ರೀತಿಗೆ ಬಲವನ್ನು ಕೊಡುವ ಉಪಯೋಗಿ ಪುಸ್ತಕ ಗಳು. **ವಿಶೇಷವಾಗಿ ವಿದ್ಯಾರ್ಥಿಗಳಿಗೆ, ಅನಂತರ ದೊಡ್ಡವರಿಗೂ ಪ್ರಯೋಜನಕ್ಕೆ ಬರಬಹು ದಾದ ಉತ್ತಮ ಪುಸ್ತಕಗಳೆಂದು ಇವನ್ನು ಈಗ ಕನ್ನಡ ಜನತೆಯ ಮುಂದೆ ತಂದಿದೆ.** ಈ ಪುಸ್ತಕಗಳು ಕೇವಲ ಮರುಮುದ್ರಣಗಳಾಗಿ, ಹಿಂದೆ ಲೇಖಕರು ಬರೆದಂತೆಯೇ ಉಳಿಸಿಕೊಂಡು ಬಂದಿದೆ. ಮುಂದೆ ಮತ್ತೊಂದು ಮುದ್ರಣಕ್ಕೆ ಅವಕಾಶವಾದರೆ, ಅಲ್ಲಲ್ಲೇ ಉಪಯುಕ್ತವಾಗು ವಂತೆ ಕೆಲವು ವಿಷಯಗಳನ್ನು, ಮಾರ್ಪಾಡುಗಳನ್ನು ಸೇರಿಸಬಹುದು. ಉದಾಹರಣೆಗೆ, 1. ಅಭ್ಯಾಸ ಗಳಲ್ಲಿರುವ ಒಂದೆರಡು ಪ್ರಶ್ನೆಗಳಿಗೆ ಮಾದರಿ ಉತ್ತರ; 2. ಕಾಗದಗಳ ಒಕ್ಕಣೆಯಲ್ಲಿ ಈಗ ಪ್ರಚಲಿತದಲ್ಲಿರುವ ರೀತಿ; 3. ಅಧ್ಯಾಯದ ಕೊನೆಯಲ್ಲಿ ಸಂಕ್ಷಿಪ್ತವಾಗಿ ಸಾರಾಂಶ; 4. ನೆನಪಿ ನಲ್ಲಿಡುವ ಮುಖ್ಯಾಂಶಗಳು ಇತ್ಯಾದಿ. ಈಗಿರುವಂತೆಯೇ ಸೊಗಸಾದ ಈ ಪುಸ್ತಕಗಳನ್ನು ಅಭಿ ಮಾನದಿಂದ ಕನ್ನಡ ಪ್ರೇಮಿಗಳು ಸ್ವಾಗತಿಸುವರೆಂದು ಆಶಿಸುತ್ತೇವೆ.

ಈ ಗ್ರಂಥ ಪ್ರಕಟನೆಗೆ ಬೆಂಗಳೂರಿನಲ್ಲಿರುವ

1. ಪೂಜ್ಯ ಸದಾನಂದಗಿರಿಸ್ವಾಮಿಜೀ (500 ರೂ.);
2. ಕೆ. ಸಿ. ಸುಬ್ರಹ್ಮಣ್ಯ (501 ರೂ.);
3. ಕೆ. ಪಿ. ಅಭಿರಾಮ ಮೂರ್ತಿ (500 ರೂ.);
4. ವೈ. ವಿ. ವೆಂಕಟಸುಬ್ಬಯ್ಯ (5000 ರೂ.)

ಇವರುಗಳು ಸಹಾಯ ಮಾಡಿರುತ್ತಾರೆ. ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕವಾದ ವಂದನೆಗಳು.

**ಸರ್ವಜಿತು ಸಂವತ್ಸರ** **ಪ್ರಕಾಶಕರು**
**ಆಷಾಢ ಬಹುಳ ತ್ರಯೋದಶಿ**
**ತಾ|| 10.8.2007**

# ವಿಷಯಾನುಕ್ರಮಣಿಕೆ


| ಅಧ್ಯಾಯ | | ಪುಟ |
|---|---|---|
| 1 | **ವಿಷಯಸಂಗ್ರಹ**<br>ಕಥೆಗಳು, ವರ್ಣನೆಗಳು—ಇವುಗಳನ್ನು ಬರೆಯುವ ವಿಧ; ವಾಕ್ಯಗಳು, ಪ್ರಶ್ನೆಗಳು, ಪೂರ್ಣವಿರಾಮ, ಪ್ರಶ್ನೆಯ ಚಿಹ್ನೆ; ಮಹಾವಾಕ್ಯ, ವಿಷಯವಾಕ್ಯ; ವಸ್ತುವರ್ಣನೆಗೆ ಬೇಕಾದ ಸಲಕರಣೆ. ಅಭ್ಯಾಸಗಳು 1 ರಿಂದ 22 | **1–11** |
| 2 | **ಸಂಕ್ಷೇಪವಾಗಿ ಬರೆಯುವುದು**<br>ವಾಕ್ಯಗಳ ಸಂಖ್ಯೆಯನ್ನೂ ಮಾತುಗಳನ್ನೂ ಕಡಿಮೆ ಮಾಡುವುದು; ಸಂಬಂಧ ಸೂಚಕಗಳು, ವಿಶೇಷಣಗಳು, ಕೃದಂತಗಳು—ಇವುಗಳ ಉಪಯೋಗ. ಅಭ್ಯಾಸಗಳು 23 ರಿಂದ 36 | **11–27** |
| 3 | **ವಾಕ್ಯಗಳ ವಿಂಗಡ**<br>ವಸ್ತುಬೋಧಕ, ನಿಷೇಧಕ, ಪ್ರಶ್ನಾರ್ಥಕ, ವಿಧ್ಯಾದ್ಯರ್ಥಕ, ಭಾವಬೋಧಕ–ವಾಕ್ಯಗಳು; ಭಾವಬೋಧಕ ಚಿಹ್ನೆ; ತಿಳಿವಳಿಕೆ, ಎಚ್ಚರಿಕೆ, ಬುದ್ಧಿವಾದ–ಇವುಗಳನ್ನೊಳಗೊಂಡ ವಾಕ್ಯರಚನೆಗಳು. ಅಭ್ಯಾಸಗಳು 37 ರಿಂದ 54 | **27–38** |
| 4 | **ಕಾಗದಗಳು**<br>ಬಂಧುಗಳಿಗೆ ಬರೆಯುವ ಕಾಗದಗಳ ಒಕ್ಕಣೆ; ಕಾಗದದಲ್ಲಿ ಬರುವ ಸಂಕ್ಷೇಪಗಳು; ಗೌರವದ ಮಾತುಗಳು, ಮೇಲುವಿಳಾಸ. ಅಭ್ಯಾಸಗಳು 55 ರಿಂದ 76 | **38–53** |
| 5 | **ವಾಕ್ಯಗಳನ್ನು ಬೆಳೆಯಿಸುವುದು**<br>ವಿಶೇಷಣಗಳು, ಸಂಯುಕ್ತಪದಗಳು, ಉಪವಾಕ್ಯಗಳು; ಸಾಮಾನ್ಯ, ಮಿಶ್ರ, ಸಂಯೋಜಿತ–ಈ ವಾಕ್ಯಗಳನ್ನು ಏರ್ಪಡಿಸುವ ರೀತಿ; ಅಲ್ಪವಿರಾಮ, ಅರ್ಧವಿರಾಮ, ವಿವರಣ ಚಿಹ್ನೆ – ಇವುಗಳ ಉಪಯೋಗ. ಅಭ್ಯಾಸಗಳು 77 ರಿಂದ 85 | **54–66** |
| 6 | **ವಾಕ್ಯಗಳನ್ನು ಹಿಗ್ಗಿಸುವುದು, ಕುಗ್ಗಿಸುವುದು**<br>ಸಾಮಾನ್ಯ, ಮಿಶ್ರ, ಸಂಯೋಜಿತ—ವಾಕ್ಯಗಳನ್ನು ಒಂದು ರೂಪದಿಂದ ಮತ್ತೊಂದು ರೂಪಕ್ಕೆ ಮಾರ್ಪಾಡಿಸುವುದು. ಅಭ್ಯಾಸಗಳು 86 ರಿಂದ 98 | **67–84** |
| 7 | **ವಾಕ್ಯರಚನೆಗೆ ಕಳೆ ಕಟ್ಟುವ ರೀತಿ**<br>ಸಂಭಾಷಣೆಯ ವಾಕ್ಯಗಳು, ಸ್ವರೂಪಾನುವಾದ, ವಿರೂಪಾನುವಾದ; ಸಂಬೋಧನೆಗಳು, ನಿಪಾತಗಳು, ಅನುವಾದಕಚಿಹ್ನೆ, ವಸ್ತುವರ್ಣನೆಯಲ್ಲಿ ಅನುಸರಿಸಬೇಕಾದ ಕ್ರಮ, ವಿಶೇಷಣಗಳು; ಸ್ನೇಹಿತರಿಗೆ ಬರೆಯುವ ಕಾಗದಗಳ ಒಕ್ಕಣೆ. ಅಭ್ಯಾಸಗಳು 99 ರಿಂದ 120 | **84–102** |

# ವಾಕ್ಯರಚನಾಕ್ರಮ

## ಒಂದನೆಯ ಅಧ್ಯಾಯ

### ವಿಷಯಸಂಗ್ರಹ

1. ಯಾವುದಾದರೊಂದು ವಿಷಯದಲ್ಲಿ ನಮ್ಮ ಅಭಿಪ್ರಾಯವನ್ನು ಮತ್ತೊಬ್ಬರಿಗೆ ತಿಳಿಸುವುದಕ್ಕಾಗಲಿ ಅವರ ಅಭಿಪ್ರಾಯವನ್ನು ನಾವು ತಿಳಿದುಕೊಳ್ಳುವುದಕ್ಕಾಗಲಿ ಮಾತುಗಳನ್ನು ಉಪಯೋಗಿಸಬೇಕಾಗುತ್ತದೆಯಷ್ಟೆ; ಇದಕ್ಕಾಗಿ ನಾವು ಉಪಯೋಗಿಸುವ ಮಾತುಗಳ ಗುಂಪಿಗೆ **ವಾಕ್ಯ**ವೆಂದು ಹೆಸರು. ಈ ಕೆಳಗೆ ಮಾವಿನ ಹಣ್ಣಿನ ವಿಷಯದಲ್ಲಿ ಎರಡು ವಾಕ್ಯಗಳನ್ನು ಬರೆದಿದೆ:–

ಮತ್ತೊಬ್ಬರ ಅಭಿಪ್ರಾಯವನ್ನು ಕೇಳುವ ವಾಕ್ಯ: ಇದು ಯಾವ ಹಣ್ಣು?

ನಮ್ಮ ಅಭಿಪ್ರಾಯವನ್ನು ಹೇಳುವ ವಾಕ್ಯ: ಇದು ಮಾವಿನ ಹಣ್ಣು.

ಅಭಿಪ್ರಾಯವನ್ನು ಕೇಳುವ ವಾಕ್ಯಕ್ಕೆ ಪ್ರಶ್ನೆಯೆಂದು ಹೆಸರು. ಪ್ರಶ್ನೆಯ ವಾಕ್ಯದ ಕೊನೆಯಲ್ಲಿ (?) ಈ ಚಿಹ್ನೆಯನ್ನು ಹಾಕಬೇಕು. ಅಭಿಪ್ರಾಯವನ್ನು ಹೇಳುವ ವಾಕ್ಯಕ್ಕೆ ವಸ್ತುಬೋಧಕವಾಕ್ಯವೆಂದು ಹೆಸರು; ಇದರ ಕೊನೆಯಲ್ಲಿ ಯಾವಾಗಲೂ **ಪೂರ್ಣವಿರಾಮ(.)**ವೆಂಬ ಈ ಚಿಹ್ನೆಯನ್ನು ಹಾಕಬೇಕು.

### ಅಭ್ಯಾಸ 1

ಇಲ್ಲಿರುವ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆಯಿರಿ. ಉತ್ತರದ ವಾಕ್ಯಗಳನ್ನು ಒಂದರ ಕೆಳಗೊಂದು ಸಾಲಾಗಿ ಬರೆಯಬೇಡಿ; ಸಂಖ್ಯೆಯನ್ನು ಹಾಕದೆ ಉದ್ದಕ್ಕೆ ಎಲ್ಲಾ ವಾಕ್ಯಗಳನ್ನೂ ಸೇರಿಸಿ. ಮಾತುಗಳ ನಡುವೆ ತಕ್ಕಷ್ಟು ಸ್ಥಳವನ್ನು ಬಿಟ್ಟು ಬರೆಯಿರಿ. ಒಂದೊಂದು ವಾಕ್ಯದ ಕೊನೆಯಲ್ಲಿಯೂ **ಪೂರ್ಣವಿರಾಮ(.)**ವನ್ನು ಹಾಕಿ.

ನೀನು ಯಾರು? ನಿನ್ನ ಹೆಸರೇನು? ನಿನ್ನ ವಯಸ್ಸೆಷ್ಟು? ನಿನ್ನ ಜತೆಗಾರರು ಯಾರು? ನಿಮ್ಮ ಊರು ಯಾವುದು? ಈ ಊರಿನಲ್ಲಿ ಎಷ್ಟು ದಿನದಿಂದ ಇದ್ದೀಯೆ? ನಿಮ್ಮ ಪಾಠಶಾಲೆ ಯಾವುದು? ಅಲ್ಲಿ ಏನೇನು ಓದುತ್ತೀರಿ? ನಿಮಗೆ ಯಾವ ಪಾಠದಲ್ಲಿ ರುಚಿ ಹೆಚ್ಚು? ನೀವು ಎಷ್ಟು ಹೊತ್ತಿನವರೆಗೆ ಓದುತ್ತೀರಿ? ನೀವು ಚಂಡಾಡುವುದು ಯಾವಾಗ?

## ಅಭ್ಯಾಸ 2

ಒಂದು ಹೊಸ ಪುಸ್ತಕವನ್ನು ನಿಮ್ಮ ಸ್ನೇಹಿತನು ತಂದಿರುತ್ತಾನೆ; ಅದನ್ನು ಕುರಿತು ಕೆಲವು ಪ್ರಶ್ನೆಗಳನ್ನು ಕೇಳಿರಿ.

**ಉದಾಹರಣೆ:** ಇದು ಯಾವ ಪುಸ್ತಕ? ಇದನ್ನು ಎಲ್ಲಿ ಕೊಂಡುಕೊಂಡೆ?...

## ಅಭ್ಯಾಸ 3

**1. ತೆಂಗಿನ ಮರ 2. ಆನೆ. 3. ಒತ್ತುವ ಕಾಗದ**– ಇವುಗಳ ವಿಷಯವಾಗಿ ನಿಮಗೆ ತಿಳಿದಿರುವುದನ್ನು ನಾಲ್ಕು ನಾಲ್ಕು ವಾಕ್ಯಗಳಲ್ಲಿ ಬರೆಯಿರಿ; ಮತ್ತೊಬ್ಬರಿಂದ ತಿಳಿಯಬೇಕಾಗಿರುವುದನ್ನು ಕೇಳುವುದಕ್ಕೆ ನಾಲ್ಕು ನಾಲ್ಕು ವಾಕ್ಯಗಳನ್ನು ಬರೆಯಿರಿ. ಕೇಳುವ ವಾಕ್ಯಗಳ ಮುಂದೆ ಪ್ರಶ್ನೆಯ ಚಿಹ್ನೆ(?)ಯನ್ನು ಹಾಕಿ.

2. ಯಾವುದಾದರೊಂದು ವಿಷಯವನ್ನು ಕುರಿತು ಬರೆಯಬೇಕಾದರೆ "ಏನು ಬರೆಯ ಬೇಕು?" ಎಂಬ ಯೋಚನೆ ಹುಟ್ಟುವುದು. ಆಗ ಅದರ ವಿಷಯಕ್ಕೆ ಕೆಲವು ಪ್ರಶ್ನೆಗಳನ್ನು ನಮಗೆ ನಾವೇ ಹಾಕಿಕೊಳ್ಳಬೇಕು. ಇದರಿಂದ ನಮಗೆ ಎಷ್ಟೋ ವಿಷಯಗಳು ಗೊತ್ತಿರುವುದು ಹೊರಬೀಳುವುದು. ಹೇಗೆಂದರೆ, ಗಾಳಿಯಪಟದ ವಿಷಯವಾಗಿ ಬರೆಯಬೇಕಾಗಿದೆ ಎಂದು ಇಟ್ಟುಕೊಳ್ಳೋಣ. ಇದಕ್ಕಾಗಿ ಈ ಪ್ರಶ್ನೆಗಳನ್ನು ಹಾಕಬಹುದು:–

### ಗಾಳಿಯಪಟದ ವಿಷಯುವಾದ ಪ್ರಶ್ನೆಗಳು

ಗಾಳಿಯಪಟವನ್ನು ಯಾರು ಉಪಯೋಗಿಸುತ್ತಾರೆ? ಹೇಗೆ ಯಾವಾಗ ಉಪಯೋಗಿಸುತ್ತಾರೆ? ಅದು ಯಾವ ಯಾವ ಪದಾರ್ಥಗಳಿಂದ ಆಗಿದೆ? ಅದನ್ನು ಹೇಗೆ ಮಾಡುತ್ತಾರೆ? ಅದಕ್ಕೆ ಯಾವ ಯಾವ ಭಾಗಗಳು ಇರುತ್ತವೆ? ಈ ಭಾಗಗಳನ್ನು ಜೋಡಿಸುವುದು ಹೇಗೆ? ಮಾಡಿದ ಮೇಲೆ ಯಾವ ಆಕಾರವಾಗುತ್ತದೆ? ಎಷ್ಟು ಗಾತ್ರ? ಇದರ ಸ್ವಭಾವವೇನು? ಪಟವನ್ನು ಎಲ್ಲಿಟ್ಟಿರುತ್ತಾರೆ? ಬಿಡುವುದು ಹೇಗೆ? ಬಗೆ ಬಗೆಯ ಪಟಗಳುಂಟೊ?......

## ಅಭ್ಯಾಸ 4

**ಗಾಳಿಯ ಪಟದ** ವಿಷಯವಾಗಿ ಕೆಲವು ವಾಕ್ಯಗಳನ್ನು ಬರೆಯಿರಿ.

## ಅಭ್ಯಾಸ 5[1]

**ಅಕ್ಕಿಯ ರೊಟ್ಟಿಯ** ವಿಷಯವಾಗಿ ವಾಕ್ಯರಚನೆಯನ್ನು ಬರೆಯಬೇಕಾಗಿದೆ. ಇದಕ್ಕಾಗಿ ಯಾವ ಯಾವ ಪ್ರಶ್ನೆಯನ್ನು ಹಾಕಿಕೊಳ್ಳಬಹುದು?

---

[1] ಪ್ರಶ್ನೆಗಳನ್ನು ಹುಡುಗರು ಹೇಳಿದ ಮೇಲೆ ಕಪ್ಪುಹಲಗೆಯ ಮೇಲೆ ಬರೆದು ಎಲ್ಲಾ ಮುಗಿದ ಮೇಲೆ ಅವಕಾಶವಿದ್ದರೆ ಉತ್ತರವನ್ನು ಹೇಳಿಸಬೇಕು

**3.** ಪ್ರಶ್ನೆಗಳನ್ನು ಕೇಳುವುದಕ್ಕೆ ಕನ್ನಡದಲ್ಲಿ ಬೇರೆ ಬೇರೆ ರೂಪಗಳುಂಟು. ಹೇಗೆಂದರೆ:–

(1) ರಾಮನು ಆ ಗಡಿಯಾರವನ್ನು ತನ್ನ ಗೆಳೆಯನಿಗೆ ಕೊಟ್ಟನೆ? (ಅಥವಾ 'ಕೊಟ್ಟನೊ?')

(2) ನೀವೆಲ್ಲ ಅಲ್ಲಿಗೆ ಹೋಗಿದ್ದಿರಾ? ('ಹೋಗಿದ್ದಿರೊ?')

(3) ರಾಮನು ಗಡಿಯಾರವನ್ನು ತನ್ನ ಗೆಳೆಯನಿಗೆ ಕೊಟ್ಟನೇನು?

(4) ರಾಮನು ಗಡಿಯಾರವನ್ನು ಕೊಟ್ಟನೇಕೆ? ('ಏಕೆ ಕೊಟ್ಟನು?', 'ಕೊಟ್ಟದ್ದೇಕೆ?')

(5) ನಾನೊಂದು ಮಾತು ಕೇಳಲೆ? ('ಕೇಳಲೊ?')

(6) ಹೀಗೆಂದು ಯಾರು ಹೇಳಿದರು? ('ಹೇಳಿದವರು ಯಾರು?')

[ಮೇಲಿನ ವಾಕ್ಯಗಳನ್ನು ನೋಡಿದರೆ 'ಎ', 'ಒ' – ಎಂಬ ನಿಪಾತಗಳು ಎಲ್ಲಾ ಕ್ರಿಯೆ ಗಳಿಗೂ[2] 'ಆ' – ಎಂಬುದು ಮಧ್ಯಮಪುರುಷದ ಕ್ರಿಯೆಗಳಿಗೂ ಸೇರಿ ಪ್ರಶ್ನೆ ಗಳಾಗುವುವೆಂತಲೂ 'ಏನು?', 'ಏಕೆ?', 'ಎಲ್ಲಿ?'[3] – ಮೊದಲಾದ ಪ್ರಶ್ನಾರ್ಥಕ ಶಬ್ದಗಳಿದ್ದರೆ ಕ್ರಿಯೆಗೆ ಯಾವ ನಿಪಾತವೂ ಸೇರುವುದಿಲ್ಲವೆಂತಲೂ ಗೊತ್ತಾಗು ತ್ತದೆ.]

## ಅಭ್ಯಾಸ 6

ಗಡಿಗೆಯ ವಿಷಯವಾಗಿ ಕೆಲವು ಪ್ರಶ್ನೆಗಳನ್ನು ಕೇಳಬೇಕಾಗಿದೆ. **1.** 'ಎ?', 'ಒ?', 'ಆ?' – ಎಂಬ ನಿಪಾತಗಳನ್ನುಪಯೋಗಿಸಿ ಪ್ರಶ್ನೆಗಳನ್ನು ಬರೆಯಿರಿ. ಪ್ರಶ್ನೆಯ ಮುಂದೆ ಪ್ರಶ್ನಾ ರ್ಥಕ ಚಿಹ್ನೆಯನ್ನು ಮರೆಯದೆ ಹಾಕಿ. ಸಾಧ್ಯವಾಗುವಷ್ಟು ಬೇರೆ ಬೇರೆ ಪುರುಷದ ಕ್ರಿಯೆ ಗಳನ್ನು ಉಪಯೋಗಿಸಿ. **2.** 'ಏನು?',[3] 'ಯಾರು?', 'ಎಷ್ಟು?', 'ಎಂಥ?', 'ಏಕೆ?', 'ಹೇಗೆ?', 'ಎಂತು?', 'ಎಲ್ಲಿ?', 'ಎಂದು?' – ಎಂಬ ಮಾತುಗಳನ್ನುಪಯೋಗಿಸಿ ಪ್ರಶ್ನೆ ಮಾಡಿ. **3.** 'ಯಾವನು?', 'ಯಾವಳು?', 'ಯಾವಾತನು?', 'ಯಾವಾಕೆ?', 'ಏನನ್ನು?', 'ಏತರಿಂದ?', 'ಏತಕ್ಕೆ?', 'ಏತರ?', 'ಏತರಲ್ಲಿ?', 'ಏತರಂತೆ?', 'ಎಷ್ಟು ದಿನ?', – ಎಂಬ ಮಾತುಗಳನ್ನುಪಯೋಗಿಸಿ ಒಂದೊಂದು ಪ್ರಶ್ನೆಯನ್ನು ಹಾಕಿರಿ.

ಒಂದೇ ಪ್ರಶ್ನೆಯನ್ನು ಬೇರೆ ಬೇರೆ ರೂಪಗಳಲ್ಲಿ ಬರೆಯಬಹುದಾದರೆ ಆ ರೂಪಗಳನ್ನೆಲ್ಲ ತೋರಿಸಿ. ಎರಡು ಅರ್ಥವಿರುವ ಮಾತುಗಳಿಗೆ ಎರಡೆರಡು ಪ್ರಶ್ನೆಗಳು ಇರಲಿ.

---

[2] 'ಕ್ರಿಯೆ'ಯೆಂದರೆ ವಿಧೇಯದ ಮುಖ್ಯವಾದ ಮಾತು. ಉದಾಹರಣೆ: 'ಕೊಟ್ಟದ್ದೇಕೆ?' ಇಲ್ಲಿ 'ಕೊಟ್ಟದ್ದು' ಕರ್ತೃ; 'ಆಯಿತು' ಅಧ್ಯಾಹೃತಕ್ರಿಯೆ.

[3] 'ಏನು?', 'ಏತರಿಂದ?', 'ಏತಕ್ಕೆ?' – ಎಂಬ ಸರ್ವನಾಮಗಳಿಗೆ ಕಾರಣಾರ್ಥವೂ ಉಂಟು. ಉದಾಹರಣೆ: ರಾಯರೆ, ಬಂದದ್ದೇನು? ಏತರಿಂದ ಹೀಗಾಯಿತು? ನೀನು ಏತಕ್ಕೆ ಅಲ್ಲಿಗೆ ಹೋದೆ?

## ಅಭ್ಯಾಸ 7

ಈ ಕೆಳಗೆ ಚಂಡಿನ ವಿಷಯವಾಗಿ ಕೆಲವು ವಾಕ್ಯಗಳನ್ನು ಬರೆದಿರುತ್ತದೆ. ಇವುಗಳಲ್ಲಿ (1) ಚಂಡಿನ ಬಗೆಗಳನ್ನು ಹೇಳುವ ವಾಕ್ಯಗಳು ಯಾವುವು? (2) ಚಂಡುಗಳನ್ನು ಮಾಡುವ ವಿಧವನ್ನು ತಿಳಿಸುವ ವಾಕ್ಯಗಳನ್ನು ಆರಿಸಿ. (3) ಚಂಡುಗಳ ಸ್ವಭಾವ, ಆಕಾರ, ಗಾತ್ರ, ತೂಕ – ಮೊದಲಾದದ್ದನ್ನು ವರ್ಣಿಸುವ ವಾಕ್ಯಗಳು ಯಾವುವು? (4) ಚಂಡಿನ ಉಪಯೋಗವನ್ನು ಯಾವ ಯಾವ ವಾಕ್ಯಗಳು ಹೇಳುತ್ತವೆ?

### ಚಂಡು

ಚಂಡನ್ನು ಜನರು ಆಟದಲ್ಲಿ ಉಪಯೋಗಿಸುತ್ತಾರೆ. ಸಾಯಂಕಾಲದಲ್ಲಿ ಹುಡುಗರು ಚಂಡಾಡುತ್ತಾರೆ. ಚಂಡುಗಳು ನಾನಾವಿಧವಾಗಿರುತ್ತವೆ. ಕೆಲವು ಬಟ್ಟೆಯ ಚಂಡುಗಳು. ಕೆಲವು ಹೆಣಿಗೆಯ ಚಂಡುಗಳು. ಚಂಡುಗಳೆಲ್ಲ ಗುಂಡಗಿರುತ್ತವೆ. ಟೆನ್ನಿಸ್ ಚಂಡುಗಳು ರಬ್ಬರಿನಿಂದಾಗಿರುತ್ತವೆ. ಕ್ರಿಕೆಟ್ ಚಂಡಿಗಿಂತ ಟೆನ್ನಿಸ್ ಚಂಡು ಹಗುರ. ಕೆಲವು ರಬ್ಬರಿನ ಚಂಡುಗಳು; ಮತ್ತೆ ಕೆಲವು ಚರ್ಮದ ಚಂಡುಗಳು. ಕ್ರಿಕೆಟ್, ಫುಟ್‌ಬಾಲ್ ಆಟಗಳಿಗೆ ಚರ್ಮದಿಂದ ಮಾಡಿದ ಚಂಡುಗಳನ್ನು ಉಪಯೋಗಿಸುತ್ತಾರೆ. ಸಾಮಾನ್ಯವಾಗಿ ಚಂಡುಗಳು ನೆಲಕ್ಕೆ ಹಾಕಿದರೆ ಪುಟಕೊಡುತ್ತವೆ. ಫುಟ್‌ಬಾಲ್ ಚಂಡು ಗಾತ್ರದಲ್ಲಿ ದೊಡ್ಡದು. ನಮ್ಮ ಸೀಮೆಯಲ್ಲಿ ಲಗ್ಗೆ ಚಂಡು, ಸಾಲುಚಂಡು – ಮುಂತಾಗಿ ಎಷ್ಟೋ ಬಗೆಯಾದ ಚಂಡಾಟಗಳನ್ನು ಆಡುತ್ತಾರೆ. ಚಂಡು ಹಾರಿಬಂದರೆ ಅದಕ್ಕೆ 'ಬುತ್ತಿ' ಎನ್ನುತ್ತಾರೆ. ಹೆಣಿಗೆಯ ಚಂಡೂ, ಕ್ರಿಕೆಟ್ ಚಂಡೂ ಕೈಗೆ ಬಿರುಸಾಗಿರುತ್ತವೆ. ಬುತ್ತಿ ಹಿಡಿಯುವುದು ಗಟ್ಟಿಗತನ. ಟೆನ್ನಿಸ್ ಚಂಡು ಮೆದು. ಅರಿವೆಯ ಚಂಡಿನೊಳಗೆ ಗಜ್ಜುಗವನ್ನು ಹಾಕಿರುವುದುಂಟು. ಇದರಿಂದ ಹೆಚ್ಚಾಗಿ ಪುಟವೇಳುತ್ತದೆ. ಕೆಲವು ಚಂಡುಗಳಲ್ಲಿ ಕಲ್ಲು ಹಾಕಿರುವುದೂ ಉಂಟು. ಸೀಮೆಯ ಚಂಡುಗಳು ಇಲ್ಲಿ ತಯಾರಾಗುವುದಿಲ್ಲ. ಪಂಜಾಬು ಮೊದಲಾದ ಕಡೆಗಳಲ್ಲಿಯೂ ವಿಲಾಯತಿಯಲ್ಲಿಯೂ ಇವನ್ನು ಮಾಡಿ ಕಳುಹಿಸಿಕೊಡುತ್ತಾರೆ. ಇವುಗಳಿಗೆ ಬೆಲೆ ಹೆಚ್ಚು.

## ಅಭ್ಯಾಸ 8

ಏಳನೆಯ ಅಭ್ಯಾಸವನ್ನು 1. ಚಂಡಿನ ಉಪಯೋಗ, 2. ಬಗೆಗಳು, ಮಾಡುವ ವಿಧ, 3. ಬೇರೆ ಬೇರೆ ಚಂಡುಗಳ ಸ್ವಭಾವ, 4. ಯಾವ ಯಾವ ಚಂಡನ್ನು ಹೇಗೆ ಎಲ್ಲಿ ಮಾಡುತ್ತಾರೆ? – ಎಂಬ ವಿಷಯಗಳು ಕ್ರಮವಾಗಿ ಸೇರಿರುವಂತೆ ಜೋಡಿಸಿ ಬರೆಯಿರಿ. ಒಂದೊಂದು ವಿಷಯವಾಗುತ್ತಲೂ ಹೊಸ ವಿಷಯವನ್ನು ಕುರಿತು ಬರೆಯುವ ಮೊದಲನೆಯ ವಾಕ್ಯದ ಎಡಕ್ಕೆ ಸ್ವಲ್ಪ ಸ್ಥಳವನ್ನು ಬಿಡಿ.

4. ಒಂದು ವಿಷಯದಲ್ಲಿ ಹಲವು ವಾಕ್ಯಗಳನ್ನು ಹೊಂದಿಸಿ ಬರೆದರೆ ಆ ವಾಕ್ಯಗಳ ಗುಂಪಿಗೆ **ಮಹಾವಾಕ್ಯ**ವೆಂದು ಹೆಸರು. ಇದನ್ನು "ವಾಕ್ಯವೃಂದ", "ವಾಕ್ಯರಾಶಿ", "ಕಲಂ" – ಎಂದೂ ಕರೆಯುವರು. **ಪ್ರತಿಯೊಂದು ಮಹಾವಾಕ್ಯದ**

**ಮೊದಲನೆಯ ವಾಕ್ಯವನ್ನೂ ಪಙ್ಕ್ತಿಯ ಎಡಕ್ಕೆ ಸ್ವಲ್ಪ ಸ್ಥಳವನ್ನು ಬಿಟ್ಟು ಬರೆಯಬೇಕು.**

## ಅಭ್ಯಾಸ 9

ಇಲ್ಲಿ ಗೋಧಿಯ ರೊಟ್ಟಿಯ ವಿಷಯಕ್ಕೆ ಮೂರು ಮಹಾವಾಕ್ಯಗಳನ್ನು ಕೊಟ್ಟಿದೆ; ಇವುಗಳಲ್ಲಿ ಒಂದೊಂದರ ವಿಷಯವೇನು?

## ಗೋಧಿಯ ರೊಟ್ಟಿ

ಗೋಧಿಯ ರೊಟ್ಟಿಯನ್ನೇ ಮುಖ್ಯವಾಗಿ ತಿನ್ನುವವರು ಬಹು ಜನರಿರುತ್ತಾರೆ. ಇದು ಒಳ್ಳೆಯ ಬಲವಾದ ಆಹಾರವಾದುದರಿಂದ ಇದನ್ನು ತಿನ್ನುವವರಿಗೆ ಮಾಂಸಾಹಾರವನ್ನು ತಿನ್ನುವ ಅಗತ್ಯವೇ ಬೀಳುವುದಿಲ್ಲ. ಜೀರ್ಣಶಕ್ತಿಯು ತೀರ ಕಡಿಮೆಯಾಗಿರುವವರನ್ನು ಬಿಟ್ಟರೆ ಇದನ್ನು ಎಲ್ಲರೂ ಉಪಯೋಗಿಸಬಹುದು.

ರವೆಯ ರೊಟ್ಟಿ, ಹಿಟ್ಟಿನ ರೊಟ್ಟಿ, ಒಟ್ಟು ರೊಟ್ಟಿ – ಎಂದು ಗೋಧಿಯ ರೊಟ್ಟಿಗಳು ಮೂರು ವಿಧ. ಹಿಟ್ಟಿನ ರೊಟ್ಟಿಯಲ್ಲಿ ಸಣ್ಣ ತೌಡೂ ಸ್ವಲ್ಪ ಮಿಶ್ರವಾಗಿರುತ್ತದೆ. ಹಿಟ್ಟು, ರವೆ, ಸಣ್ಣ ತೌಡು – ಇವುಗಳನ್ನು ವಿಂಗಡಿಸದೆಯೇ ಒಟ್ಟು ರೊಟ್ಟಿಯನ್ನು ಮಾಡುತ್ತಾರೆ.

ರವೆಯ ರೊಟ್ಟಿಯು ತಿನ್ನುವುದಕ್ಕೆ ರುಚಿ. ಆದರೆ ಮೈಗೆ ಅಷ್ಟು ಪುಷ್ಟಿಕರವಲ್ಲ. ಸಾಮಾನ್ಯವಾಗಿ ಮಾಡುವ ಒಟ್ಟುರೊಟ್ಟಿಯು ಒರಟಾದರೂ ಹೆಚ್ಚು ಪುಷ್ಟಿಕರವಾಗಿರುವುದು. ರವೆಯ ರೊಟ್ಟಿಯನ್ನು ತಿಂದರೆ ಹೊಟ್ಟೆಕಟ್ಟುವುದು ಹೆಚ್ಚು. ಒಟ್ಟುರೊಟ್ಟಿಯಲ್ಲಿರುವ ಸಣ್ಣ ತೌಡಿನಿಂದ ಕಾಲ ಪ್ರವೃತ್ತಿಗೆ ಹೆಚ್ಚು ಅನುಕೂಲವಾಗುತ್ತದೆ.

## ಅಭ್ಯಾಸ 10

ಈ ಕಥೆಯಲ್ಲಿ ಎಷ್ಟು ಮಹಾವಾಕ್ಯಗಳಿವೆ? ಅವುಗಳಲ್ಲಿರುವ ವಿಷಯಗಳೇನು?

## ಕವಾಡಿಗನ(ಗೊಲ್ಲ) ದುರಾಶೆ

ಒಬ್ಬ ಕವಾಡಿಗನಲ್ಲಿ (ಹಾಲು ಮಾರುವವನಲ್ಲಿ) ಒಂದು ಎಮ್ಮೆ ಇತ್ತು. ಅದು ದಿನಕ್ಕೆ ಆರು ಸೇರು ಹಾಲು ಕೊಡುತ್ತಿತ್ತು. ಇದನ್ನು ಮಾರಿ ಅವನು ಜೀವಿಸುತ್ತಿದ್ದನು. ಆ ಊರಿನಲ್ಲಿ ಹಾಲು ತುಟ್ಟಿಯಾಗಿದ್ದುದರಿಂದ ಅವನಿಗೆ ಎಮ್ಮೆಗೆ ಹಾಕುವ ಮೇವು ಮೊದಲಾದುದರ ಖರ್ಚು ಕಳೆದು ತಿಂಗಳಿಗೆ ಮೂವತ್ತು ರೂಪಾಯಿಗಳ ಮೇಲೆಯೇ ಉಳಿಯುತ್ತಿತ್ತು. ಹೀಗೆ ಅವನು ತಕ್ಕ ಮಟ್ಟಿಗೆ ಹಣವನ್ನು ಕೂಡಿಸಿಟ್ಟನು.

ಆದರೂ ಕವಾಡಿಗನಿಗೆ ಹಣದಾಸೆ ತೀರಲಿಲ್ಲ. ಒಂದೊಂದು ದಿನವೂ ಆರೇ ಸೇರು ಹಾಲನ್ನು ಕರೆದುಕೊಂಡು ಅದನ್ನು ಮಾರಿಕೊಳ್ಳುತ್ತ ಇರುವುದು ಅವನಿಗೆ ಬೇಸರವಾಗಿ ತೋರಿತು. "ಈ ಪ್ರಾಣಿಯ ಕೆಚ್ಚಲಲ್ಲಿ ಎಷ್ಟು ಹಾಲಿರುವುದೋ ಅದನ್ನೆಲ್ಲ ಒಮ್ಮೆಗೇ ಏತಕ್ಕೆ ತೆಗೆದು ಮಾರಿಬಿಡಬಾರದು?" –ಹೀಗೆಂದು ಆ ದುರಾಶೆಯವನು ಯೋಚನೆಮಾಡಿದನು.

ಆ ಮೂರ್ಖನು ಕೂಡಲೆ ಒಂದು ಚಾಕನ್ನು ತೆಗೆದುಕೊಂಡು ಎಮ್ಮೆಯ ಕಾಲುಗಳನ್ನು ಕಟ್ಟಿ ಅದರ ಕೆಚ್ಚಲನ್ನು ಕೊಯ್ದುಬಿಟ್ಟನು! ಒಳಗೆ ರಕ್ತ, ಮಾಂಸ—ಇವುಗಳಿದ್ದವೇ ಹೊರತು ಹಾಲೇನೂ ಇರಲಿಲ್ಲ. ಎಮ್ಮೆಯಂತೂ ಸತ್ತೇಹೋಯಿತು.

ತನ್ನ ಹಿಡಿಯದಾಸೆಗೆ ತಕ್ಕ ಶಿಕ್ಷೆಯಾಗಲು ಕವಾಡಿಗನು "ಅನ್ಯಾಯವಾಗಿ ಎಮ್ಮೆಯನ್ನು ಕೊಂದೆನಲ್ಲ!" ಎಂದು ಪಶ್ಚಾತ್ತಾಪಪಟ್ಟನು.

## ಅಭ್ಯಾಸ 11

ಇಲ್ಲಿ ಕೊಟ್ಟಿರುವ ಮಹಾವಾಕ್ಯದ ವಿಷಯವನ್ನು ತಿಳಿಸುವ ವಾಕ್ಯವು ಯಾವುದು?

"ಮುಂದೆ ಕೊಟ್ಟಿರುವುದು ಒಂದು ಜ್ವಾಲಾಮುಖಿಯ ಚಿತ್ರವು. ಜ್ವಾಲಾಮುಖಿಯನ್ನು ಅಗ್ನಿಪರ್ವತವೆಂದೂ ಹೇಳುವುದುಂಟು. ಜ್ವಾಲಾಮುಖಿಯ ತಲೆಯ ಮೇಲೆ ಒಂದು ದೊಡ್ಡ ಬಿಲವಿದೆ. ಈ ಬಿಲವು ಪರ್ವತದೊಳಗಡೆ ಇಳಿದು ಭೂಮಿಯೊಳಕ್ಕೆ ಬಹುದೂರ ವ್ಯಾಪಿಸಿರುತ್ತದೆ. ಈ ಬಿಲದ ಮುಖದಿಂದ ಕೆಲವು ವೇಳೆಗಳಲ್ಲಿ ಉಗಿಯೂ, ಉರಿಯೂ, ಕಲ್ಲುಗಳು, ಕಾದು ಕರಗಿದ ಬಂಡೆಗಳೂ ಮಹಾರಭಸದಿಂದ ಗಗನಕ್ಕೆ ಹಾರುತ್ತವೆ. ಕೆಲವು ವೇಳೆ ಈ ಕಾದು ಕರಗಿದ ಪದಾರ್ಥಗಳು ಮಣ್ಣಿನಂತೆ ಕರ್ರಗಾಗಿ ಮೇಲಕ್ಕೆ ಉಕ್ಕಿ, ಬೆಟ್ಟದ ಪಕ್ಕದಲ್ಲಿ ಉರುಳಿ, ನದಿಗಳಂತೆ ಹರಿದುಬಂದು, ಸುತ್ತು ಮುತ್ತು ಬಹು ದೂರ ವ್ಯಾಪಿಸುತ್ತವೆ. ಇವು ಅನೇಕ ದಿನಗಳವರೆಗೂ ಬೆಂಕಿಯಿಂದ ಕಾವಾಗಿದ್ದು ಆಮೇಲೆ ಮೆಲ್ಲಮೆಲ್ಲಗೆ ಆರುತ್ತಾ ತಣ್ಣಗಾಗುತ್ತವೆ."

**5.** ಮಹಾವಾಕ್ಯದ ವಿಷಯವನ್ನು ತಿಳಿಸುವ ವಾಕ್ಯಕ್ಕೆ **ವಿಷಯವಾಕ್ಯವೆಂದು** ಹೆಸರು. ಈ ವಾಕ್ಯವು ಸಾಮಾನ್ಯವಾಗಿ ಮೊದಲುಗಡೆಯಲ್ಲಿಯೇ ಇರುತ್ತದೆ; ಆದರೆ ಕೆಲವು ಕಡೆಯಲ್ಲಿ ಮಹಾವಾಕ್ಯದ ಕೊನೆಯವರೆಗೂ ಇದನ್ನು ಹಾಕದೆ ಇರುವುದುಂಟು. ಇನ್ನೂ ಕೆಲವು ಸಂದರ್ಭಗಳಲ್ಲಿ ಒಟ್ಟು ಮಹಾವಾಕ್ಯದಿಂದ ಅದರ ವಿಷಯವನ್ನು ಊಹಿಸಬೇಕಾಗಿರುತ್ತದೆ.

## ಅಭ್ಯಾಸ 12

ಇಲ್ಲಿರುವ ಮಹಾವಾಕ್ಯಗಳ ವಿಷಯಗಳನ್ನು ತಿಳಿಸಿ:—

1. "ದ್ರಾಕ್ಷಾರಸ, ಬ್ರಾಂದಿ, ಸಾರಾಯಿ—ಮುಂತಾದ ಮಾದಕಪದಾರ್ಥಗಳನ್ನು ಔಷಧಿರೂಪವಾಗಿ ಕೆಲವು ವೇಳೆ ಉಪಯೋಗಿಸುವುದರಲ್ಲಿ ಶರೀರಕ್ಕೆ ಸ್ವಲ್ಪ ಗುಣವುಂಟು; ಆದರೆ ಇವುಗಳನ್ನು ಸ್ವೇಚ್ಛೆಯಾಗಿ ಉಪಯೋಗಿಸುವುದರಿಂದ ಬಹಳವಾಗಿ ದ್ರವ್ಯನಷ್ಟವಾಗುವುದಲ್ಲದೆ ಅಜೀರ್ಣ, ಅತಿಮೂತ್ರ—ಮೊದಲಾದ ರೋಗಗಳೂ ಉತ್ಪನ್ನವಾಗುವುವು. ಅನೇಕರು ಅತಿಮದ್ಯಪಾನಮಾಡಿ ಮೂರ್ಛೆ ರೋಗ ಪಾರ್ಶ್ವವಾಯುಗಳಿಂದ ನರಳುತ್ತಾರೆ. ಮಾದಕ ಪದಾರ್ಥಗಳೆಲ್ಲವೂ ಸಾಮಾನ್ಯವಾಗಿ ಶರೀರದ ವ್ಯಾಪಾರವನ್ನು ಕೆಡಿಸುತ್ತವೆ. ಅವನ್ನು ಅತಿಯಾಗಿ ಸೇವಿಸುವವರು ನಾನಾವಿಧವಾದ ಸಾಂಕ್ರಾಮಿಕ ರೋಗಗಳಿಗೆ ತುತ್ತಾಗುತ್ತಾರೆ."

**2.** "ಅಕ್ಬರನ ಆಳಿಕೆಯಲ್ಲಿ ಪ್ರಜೆಗಳ ಸ್ಥಿತಿ ಹೇಗಿದ್ದಿತು? ಅವರು ಎಂದಿಗಿಂತಲೂ ಹೆಚ್ಚಾಗಿ ಸುಖವಾಗಿದ್ದರು. ಪಠಾನರಾಜರ ಕಾಲಕ್ಕಿಂತಲೂ ಆಗ ಸುಂಕತೆರಿಗೆಗಳು ಕಡಿಮೆಯಾಗಿದ್ದವು. ಹಿಂದುಗಳು ಮಹಮ್ಮದೀಯರು ಎಂಬ ಪಕ್ಷಪಾತವಿಲ್ಲದೆ ಎಲ್ಲರೂ ಒಂದೇ ರೀತಿಯಾಗಿ ಕಂದಾಯಕೊಡುತ್ತಿದ್ದರು. ಹಿಂದಿನ ಮಹಮ್ಮದೀಯ ರಾಜರೆಲ್ಲ ಹಿಂದುಗಳ ಮೇಲೆ ಜೆಸ್ಸಿಯಾ ಎಂಬ ಅಸಹ್ಯಕರವಾದ ತೆರಿಗೆಯನ್ನು ಹಾಕಿದ್ದರು. ಮಹಮ್ಮದೀಯಮತಕ್ಕೆ ಸೇರದವರೆಲ್ಲರೂ ಅದನ್ನು ತೆರಬೇಕಾಗಿದ್ದಿತು. ಅಕ್ಬರನು ಆ ತೆರಿಗೆಯನ್ನು ಎತ್ತುತ್ತಿರಲಿಲ್ಲ. ಆದರಂತೆಯೇ ತೀರ್ಥಯಾತ್ರಿಕರ ಮೇಲೆ ಹಾಕಿದ್ದ ತೆರಿಗೆಯನ್ನೂ ತೆಗೆದುಹಾಕಿ ಬಿಟ್ಟನು."

**3.** "ಸೀಮೆಯ ಎಣ್ಣೆಯ ಡಬ್ಬಾಗಳು ಬರೀ ತವರದ ಪಾತ್ರೆಗಳಲ್ಲ. ಕಬ್ಬಿಣಕ್ಕೆ ಸುಲಭ ವಾಗಿ ತುಕ್ಕು ಹಿಡಿಯುವುದರಿಂದ ಅದನ್ನು ತಪ್ಪಿಸುವುದಕ್ಕಾಗಿ ಕಬ್ಬಿಣದ ಉಕ್ಕಿನ ತಗಡುಗಳನ್ನು ಚೆನ್ನಾಗಿ ಶುದ್ಧವಾಗಿ ಕರಗಿದ ತವರದಲ್ಲಿ ಅದ್ದುವುದರಿಂದ ಟಿನ್ ತಗಡಾಗುತ್ತದೆ. ಈ ತಗಡು ಗಳನ್ನು ಜೋಡಿಸಿ ಡಬ್ಬಾಗಳನ್ನು ಮಾಡುತ್ತಾರೆ. ಈ ತಗಡಿನಲ್ಲಿ ಕಬ್ಬಿಣವಿದೆ ಎಂದು ನೀವು ಸುಲಭವಾಗಿ ತಿಳಿದುಕೊಳ್ಳಬಹುದು. ಮೇಲಿನ ತವರವು ಸವೆದುಹೋದ ಹಳೆಯ ಟಿನ್‌ತಗ ಡನ್ನು ಮಣ್ಣಿನ ಮೇಲೆ ಬಿಸಾಡಿದರೆ ಕಬ್ಬಿಣವು ತುಕ್ಕು ಹಿಡಿದಿರುವುದು ಗೊತ್ತಾಗುತ್ತದೆ. ಟಿನ್ ತಗಡಿನ ಚೂರನ್ನು ಅಯಸ್ಕಾಂತದ ಹತ್ತಿರ ಹಿಡಿದರೆ ಅಯಸ್ಕಾಂತವು ಆಕರ್ಷಿಸುತ್ತದೆ. ಬರಿಯ ತವರನ್ನು ಅಯಸ್ಕಾಂತವು ಆಕರ್ಷಿಸುವುದಿಲ್ಲ."

**6.** ಕೊಟ್ಟ ವಿಷಯದಲ್ಲಿ ವಾಕ್ಯರಚನೆಯನ್ನು ಬರೆಯುವಾಗ ವಿಷಯವನ್ನು ಭಾಗ ಗಳಾಗಿ ವಿಂಗಡಿಸಿಕೊಂಡು ಒಂದೊಂದು ಭಾಗಕ್ಕೆ ಒಂದು ಅಥವಾ ಹೆಚ್ಚು ಮಹಾ ವಾಕ್ಯಗಳನ್ನು ಬರೆಯಬೇಕು. ಪ್ರತಿಯೊಂದು ಮಹಾವಾಕ್ಯದಲ್ಲಿಯೂ ಒಂದೊಂದೇ ಸಂಗತಿಯನ್ನು ಕುರಿತು ಬರೆಯಬೇಕು. ಹೇಗೆಂದರೆ:-

## ಎಲ್ಲರನ್ನೂ ಮೆಚ್ಚಿಸುವುದು

ಒಂದು ಸಲ ಒಬ್ಬ ಪ್ರಸಿದ್ಧನಾದ ಚಿತ್ರಗಾರನು ಎಲ್ಲರೂ ಮೆಚ್ಚುವಂತೆ ಒಂದು ಚಿತ್ರ ವನ್ನು ಬರೆಯಬೇಕೆಂದು ನಿಶ್ಚಯಿಸಿಕೊಂಡನು. ಚಿತ್ರವು ಮುಗಿದ ಮೇಲೆ ಆತನು "ಇದರಲ್ಲಿ ದೋಷವನ್ನು ಕಂಡವರೆಲ್ಲ ಗುರ್ತುಮಾಡಬಹುದು" -ಎಂದು ಕೆಳಗೆ ಬರೆದು ಅದನ್ನು ಒಂದು ಚಾವಡಿಯಲ್ಲಿಟ್ಟನು. ದಾರಿಗರು ಅದನ್ನು ಬಂದು ನೋಡಿ "ಇದೊಂದು ಹೀಗಿರಬೇಕು, ಇದೊಂದು ಸರಿಯಾಗಿಲ್ಲ" -ಎಂದುಕೊಳ್ಳುತ್ತ ತಮಗೆ ತೋಚಿದಂತೆ ಗುರ್ತುಮಾಡುತ್ತಾ ಹೋದರು. ಸಾಯಂಕಾಲದ ಹೊತ್ತಿಗೆ ಚಿತ್ರವೆಲ್ಲಾ ಮಸಿಯಾಗಿ ಹೋಗಿತ್ತು.

ಚಿತ್ರಗಾರನು ಜನರನ್ನು ಇನ್ನೊಂದು ಬಗೆಯಲ್ಲಿ ಪರೀಕ್ಷಿಸೋಣವೆಂದು ಮತ್ತೊಂದು ಚಿತ್ರ ವನ್ನು ಸಿದ್ಧಪಡಿಸಿ ಅದೇ ಸ್ಥಳದಲ್ಲಿಟ್ಟನು. ಈ ಸಲ "ಇದರಲ್ಲಿ ಕಾಣುವ ಗುಣವನ್ನು ಮೆಚ್ಚಿ ದವರು ಗುರ್ತುಮಾಡಬೇಕು" -ಎಂದು ಚಿತ್ರದ ಕೆಳಗೆ ಬರೆದಿದ್ದನು. ಇದನ್ನು ನೋಡಿದ ಜನರೆಲ್ಲರೂ "ಇದು ಬಲು ಚೆನ್ನಾಗಿದೆ! ಆ ಭಾವವೆಷ್ಟು ಸೊಗಸಾಗಿ ಬಂದಿದೆ!" -ಎಂದು ಅವರವರಿಗೆ ಒಪ್ಪುವ ಭಾಗದಲ್ಲಿ ಗುರ್ತುಮಾಡಿದರು. ಹೀಗೆ ಚಿತ್ರಕ್ಕೆ ಚಿತ್ರವೇ ಗುರ್ತಿನಿಂದ ತುಂಬಿಹೋಯಿತು.

ಇಲ್ಲಿ ಕಥೆಯನ್ನು ಎರಡು ಭಾಗವಾಗಿ ವಿಂಗಡಿಸಿದೆ: ಜನರು ಚಿತ್ರದ ದೋಷ ಗಳನ್ನು ತೆಗೆದದ್ದು ಮೊದಲನೆಯ ಭಾಗ; ಚಿತ್ರದ ಗುಣವನ್ನು ಮೆಚ್ಚಿದ್ದು ಎರಡನೆಯ ಭಾಗ; ಬೇಕಾದರೆ ಮೊದಲನೆಯ ಭಾಗವನ್ನು ಎರಡು ಮಹಾವಾಕ್ಯಗಳಾಗಿ ವಿಂಗಡಿಸಬಹುದಾಗಿತ್ತು; ಒಂದನೆಯದು ಚಿತ್ರವನ್ನು ಬರೆದಿಟ್ಟದ್ದು; ಎರಡನೆಯದು ಅದನ್ನು ದಾರಿಹೋಕರು ಜರೆದದ್ದು. ಹೀಗೆಯೇ ಎರಡನೆಯ ಭಾಗವನ್ನೂ ಎರಡು ಪಾಲಾಗಿ ಒಡೆಯಬಹುದು. (ಹೇಗೆ?)

## ಅಭ್ಯಾಸ 13

ಮೇಲೆ ಕೊಟ್ಟಿರುವ ಕಥೆಯನ್ನು ನಾಲ್ಕು ಮಹಾವಾಕ್ಯಗಳಾಗಿ ಒಡೆದು ವಿಷಯವಾಕ್ಯಗಳನ್ನು ಗುರ್ತುಮಾಡಿ.

## ಅಭ್ಯಾಸ 14

ಕತ್ತೆಯ ವಿಷಯದಲ್ಲಿ ವಾಕ್ಯರಚನೆಯನ್ನು ಬರೆಯಬೇಕಾಗಿದೆ. ಇದಕ್ಕೆ ಬೇಕಾಗುವ ಕೆಲವು ಪ್ರಶ್ನೆಗಳನ್ನು ಹಾಕಿರಿ. 1. ಆಹಾರ 2. ಸ್ವಭಾವ 3. ಆಕಾರ 4. ಉಪಯೋಗ – ಈ ಭಾಗ ಗಳಲ್ಲಿ ಒಂದೊಂದಕ್ಕೆ ಮೂರು ಪ್ರಶ್ನೆಗಳಿಗೆ ಕಡಿಮೆಯಿಲ್ಲದಂತೆ ಬರೆಯಿರಿ.

## ಅಭ್ಯಾಸ 15

ಕತ್ತೆಯ 1. ಉಪಯೋಗ, 2. ಆಹಾರ, 3. ಸ್ವಭಾವ, 4. ಕುದುರೆಗೂ ಅದಕ್ಕೂ ಇರುವ ಭೇದ – ಈ ವಿಷಯಗಳನ್ನು ತೋರಿಸುವಂತೆ ನಾಲ್ಕು ಮಹಾವಾಕ್ಯಗಳನ್ನು ಬರೆಯಿರಿ.

## ಅಭ್ಯಾಸ 16

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರವನ್ನು ಬರೆದು ಒಂದು ಕಥೆಯನ್ನು ಮಾಡಿರಿ. ಕಥೆಯಲ್ಲಿ ಮೂರು ಮಹಾವಾಕ್ಯಗಳಿರಲಿ.

### ಅಗಸನ ಕತ್ತೆಯೂ ನಾಯಿಯೂ

1. ಅಗಸನು ರಾತ್ರೆ ಏನು ಮಾಡುತ್ತಿದ್ದನು? ಕಳ್ಳನೇನು ಮಾಡಿದನು? ಅಗಸನನ್ನು ಯಾರು ಎಬ್ಬಿಸಬೇಕಾಗಿತ್ತು? ನಾಯಿ ಏತಕ್ಕೆ ಬಗುಳಲಿಲ್ಲ?
2. ಕತ್ತೆ ಏನೆಂದು ಯೋಚಿಸಿತು? ಅಗಸನನ್ನು ಎಬ್ಬಿಸುವುದಕ್ಕೆ ಕತ್ತೆ ಏನು ಮಾಡಿತು? ಇದರಿಂದ ಏನಾಯಿತು?
3. ಅಗಸನಿಗೇಕೆ ಸಿಟ್ಟು ಬಂತು? ಅವನು ಎದ್ದು ಏನು ಮಾಡಿದನು?

## ಅಭ್ಯಾಸ 17

ಮೇಲಿನ ಕಥೆಯನ್ನು ಮುಂದುವರಿಸಿ ಎರಡು ವಾಕ್ಯಗಳಲ್ಲಿ[4] ಪೂರ್ತಿಗೊಳಿಸಿರಿ. ಆಗಸನು ಮತ್ತೆ ಮಲಗಿ ನಿದ್ರೆಹೋದದ್ದು, ಕಳ್ಳನು ಕನ್ನವನ್ನು ಕೊರೆಯುತ್ತಲೇ ಇದ್ದದ್ದು, ಕೊನೆಗೆ ಅವನು ಒಳಕ್ಕೆ ಬಂದದ್ದು, ನಾಯಿಯು ಕನಿಕರದಿಂದ ಬಗುಳಿದ್ದು, ಆಗಸನು ಎಚ್ಚತ್ತು ಅತ್ತಿತ್ತ ನೋಡಿದ್ದು, ಕಳ್ಳನು ಸಿಕ್ಕಿಬಿದ್ದದ್ದು – ಇವುಗಳನ್ನೆಲ್ಲ ಸೇರಿಸಿ ಬರೆಯಿರಿ.

## ಅಭ್ಯಾಸ 18

ಈ ಕಥೆಯ ಸಾರಾಂಶವು ಗೊತ್ತಾಗುವುದಕ್ಕೆ ಬೇಕಾದ ಪ್ರಶ್ನೆಗಳನ್ನು[5] ಹಾಕಿರಿ:–

## ಭೂಪ್ರದಕ್ಷಿಣೆ

ಒಂದಾನೊಂದು ಕಾಲದಲ್ಲಿ ವಿನಾಯಕನಿಗೂ ಷಣ್ಮುಖನಿಗೂ ತಮ್ಮಿಬ್ಬರಲ್ಲಿ ಯಾರು ಗಟ್ಟಿಗರೆಂಬ ವಿಷಯಕ್ಕೆ ವಾದವು ಹುಟ್ಟಿತು. ಪ್ರಪಂಚವನ್ನೆಲ್ಲ ಸುತ್ತಿಕೊಂಡು ಯಾರು ಮೊದಲೇ ಕೈಲಾಸಕ್ಕೆ ಹಿಂದಿರುಗುವರೋ ಅವರೇ ಗಟ್ಟಿಗರೆಂದು ಇಬ್ಬರೂ ಒಪ್ಪಿದರು.

ಕೂಡಲೆ ಷಣ್ಮುಖನು ನವಿಲನ್ನೇರಿ ಹೊರಟನು. ವಿನಾಯಕನು ಮಟ್ಟಿಗೆ ಇನ್ನೂ ಅಲ್ಲಿಯೇ ಇರುತ್ತಿದ್ದನು. ಷಣ್ಮುಖನು ತಾನೇ ಗೆಲ್ಲುವೆನೆಂದು ಹಿಗ್ಗಿ ಬೇಗ ಬೇಗ ಎಲ್ಲಾ ಲೋಕಗಳನ್ನೂ ಸುತ್ತಿಕೊಂಡು ಹಿಂತಿರುಗಿದನು. ಆದರೆ ಅಷ್ಟರಲ್ಲಿ ವಿನಾಯಕನು ಆತನಿಗೆ ಕಾಣುವಂತೆ ಶಿವನನ್ನು ಮೂರು ಸುತ್ತು ಸುತ್ತಿ ಕೂತುಕೊಂಡನು.

ಶಿವನ ಹೊಟ್ಟೆಯಲ್ಲಿ ಎಲ್ಲಾ ಪ್ರಪಂಚವೂ ಅಡಗಿರುವುದೆಂದು ಶಾಸ್ತ್ರದಲ್ಲಿ ಹೇಳಿದೆ. ಆದುದರಿಂದ ಶಿವನನ್ನು ಮೊದಲು ಸುತ್ತಿದ ವಿನಾಯಕನೇ ಗಟ್ಟಿಗನೆಂದು ತೀರ್ಮಾನವಾಯಿತಂತೆ!

## ಅಭ್ಯಾಸ 19

ಕವಾಡಿಗನು ಎಮ್ಮೆಯನ್ನು ಕೊಂದ ಕಥೆಯ ವಿಷಯವಾಗಿ ಮುಖ್ಯವಾದ ಕೆಲವು ಪ್ರಶ್ನೆಗಳನ್ನು ಬರೆಯಿರಿ.

## ಅಭ್ಯಾಸ 20

ಈ ಕಥೆಯನ್ನು ಓದಿ ಇದರ ಸಾರಾಂಶದ ವಿಷಯವಾಗಿ ಒಬ್ಬರು ಪ್ರಶ್ನೆಮಾಡಿ ಇನ್ನೊಬ್ಬರು ಉತ್ತರಕೊಡಿ:–

---

[4] ಯಾವ ಯಾವ ಮಹಾವಾಕ್ಯಕ್ಕೆ ಎಷ್ಟೆಷ್ಟು ವಿಷಯಗಳನ್ನು ಸೇರಿಸಿಕೊಳ್ಳಬೇಕಾಗುವುದೆಂಬುದನ್ನು ಹುಡುಗರು ಮೊದಲೇ ಗೊತ್ತುಪಡಿಸಿಕೊಳ್ಳುವಂತೆ ಮಾಡಬೇಕು.

[5] ಹುಡುಗರು ಹೇಳುವ ಪ್ರಶ್ನೆಗಳನ್ನು ತಿದ್ದಿ ಕಪ್ಪುಹಲಗೆಯ ಮೇಲೆ ಬರೆಯಬೇಕು.

## ಪಂಡಿತನ ಗುಟ್ಟು

ಪೂರ್ವದಲ್ಲಿ ಬಿದರೆಯಲ್ಲಿ ಶಿವಪ್ಪನಾಯಕನೆಂಬ ಒಬ್ಬ ಅರಸು ಆಳುತ್ತಿದ್ದನು. ಒಂದು ದಿನ ಅವನಲ್ಲಿಗೆ ಒಬ್ಬ ಪಂಡಿತನು ಬಂದನು. ದೊರೆಯು ಅವನನ್ನು ಪರೀಕ್ಷಿಸಬೇಕೆಂದು ಮನಸ್ಸುಮಾಡಿದನು. ಆಗ ಸಭೆಯಲ್ಲಿದ್ದ ಪಂಡಿತರೆಲ್ಲರೂ ಅವನಿಗೆ ಪ್ರಶ್ನೆಯನ್ನು ಹಾಕುವುದಕ್ಕೆ ಮೊದಲುಮಾಡಿದರು. ಹೊಸ ಪಂಡಿತನು "ಸರ್‌ಡಬ್‌ಭಂಯ್!"– ಎಂದು ಎಲ್ಲರಿಗೂ ಹೇಳುತ್ತಾ ಬಂದನು. ಆದರ ಅರ್ಥವು ಯಾರಿಗೂ ಆಗಲಿಲ್ಲ.

ನಿಜವಾಗಿ ಆ ಹೊಸಬನು ಪಂಡಿತನಲ್ಲ. ಅವನಿಗೆ ಏನೂ ತಿಳಿಯದು. ಅವನು ತೋಟಕ್ಕೆ ಹೋಗಿದ್ದಾಗ ಒಂದು ತೆಂಗಿನ ಸೋಗೆ "ಸರ್!"– ಎಂದು ಬೀಳುವುದಕ್ಕಾರಭಿಸಿತಂತೆ. ಮರದ ಕೆಳಗೆ ಒಂದು ಎಮ್ಮೆಯು ಹೋಗುತ್ತಿತ್ತು. ಆದರ ಮೇಲೆ ಸೋಗೆಯು "ಡಬ್!"– ಎಂದು ಬಿತ್ತು. ಆಗ ಎಮ್ಮೆಯು "ಅಂಯ್!"– ಎಂದು ಕೂಗಿಕೊಂಡಿತು. "ಸರ್-ಡಬ್-ಅಂಯ್!" ಎಂಬ ಮೂರು ಮಾತುಗಳನ್ನೂ ಸೇರಿಸಿ "ಸರ್‌ಡಬ್‌ಭಂಯ್!" ಎಂದು ಆತನು ಮಾಡಿಕೊಂಡನು. ಇದರ ಗುಟ್ಟು ಯಾರಿಗೂ ತಿಳಿಯದೆ ಪಂಡಿತರೆಲ್ಲ ಮೋಸಹೋದರು.

7. ಒಂದು ವಸ್ತುವಿನ ವಿಷಯವಾಗಿ ವಾಕ್ಯರಚನೆಯನ್ನು ಬರೆಯುವುದಕ್ಕೆ ಮುಂಚೆ ಕೇಳಿಕೊಳ್ಳಬಹುದಾದ ಪ್ರಶ್ನೆಗಳನ್ನು ಇಲ್ಲಿ ಕೊಟ್ಟಿರುತ್ತದೆ:–

## ವಸ್ತುವರ್ಣನೆಗೆ ಬೇಕಾಗುವ ಪ್ರಶ್ನೆಗಳು

**1.** ಇದೇನು? **2.** ಇದಕ್ಕೆ ಈ ಹೆಸರು ಬರಲು ಕಾರಣವೇನು? **3.** ಇದನ್ನು ಯಾರು ಉಪಯೋಗಿಸುತ್ತಾರೆ? **4.** ಯಾವಾಗ ಎಲ್ಲಿ ಉಪಯೋಗಿಸುತ್ತಾರೆ? **5.** ಇದು ಮೊದಲು ಹೇಗಿತ್ತು? **6.** ಇದು ಎಲ್ಲಿ ಸಿಕ್ಕುತ್ತದೆ? **7.** ಇದು ಯಾವ ವಸ್ತುಗಳಿಂದ ಆಗಿದೆ? **8.** ಇದು ಎಲ್ಲೆಲ್ಲಿಂದ ಬರುತ್ತದೆ? **9.** ಇದರ ಭಾಗಗಳು ಯಾವುವು? **10.** ಇದನ್ನು ಮಾಡುತ್ತಾರೆಯೊ, ಬೆಳೆಯುತ್ತಾರೆಯೊ, ಜೋಡಿಸಿಡುತ್ತಾರೆಯೊ? **11.** ಇದನ್ನು ಮಾಡುವುದು, ಬೆಳೆಯುವುದು, ಅಥವಾ ಜೋಡಿಸಿಡುವುದು ಹೇಗೆ? **12.** ಇದನ್ನು ಮಾಡುವವರು ಯಾರು? **13.** ಎಲ್ಲಿ ಮಾಡುತ್ತಾರೆ? **14.** ಮಾಡಿದ ಮೇಲೆ ಹೇಗೆ ಕಾಣಿಸುತ್ತದೆ? **15.** ಇದರ ಗಾತ್ರವೇನು, ಆಕಾರವೇನು, ಬಣ್ಣವೇನು? **16.** ಇದರ ಗುಣಗಳು ಯಾವುವು? ಅಥವಾ ಸ್ವಭಾವವೇನು? **17.** ಇದು ಯಾರಿಗೆ ಹೆಚ್ಚಾಗಿ ಬೇಕು? **18.** ಏತಕ್ಕೆ ಬೇಕು? **19.** ಇದನ್ನು ತರುವುದು ಅಥವಾ ಕೊಂಡುಕೊಳ್ಳುವುದು ಹೇಗೆ? **20.** ಇದನ್ನು ಇಡುವುದು ಎಲ್ಲಿ? **21.** ಜನರು ಇದನ್ನು ಹೇಗೆ ಕಾಣುವರು? **22.** ಇದಕ್ಕೇನಾದರೂ ಅಪಾಯಗಳುಂಟೆ? **23.** ಇದರಲ್ಲಿ ಎಷ್ಟು ವಿಧಗಳುಂಟು? **24.** ಇದರಿಂದ ಪ್ರಪಂಚಕ್ಕಾಗುವ ವಿಶೇಷವಾದ ಉಪಕಾರವೇನು? ಅಥವಾ ನಷ್ಟವೇನು?

**ಸೂ||** ಈ ಎಲ್ಲಾ ಪ್ರಶ್ನೆಗಳೂ ಒಂದೇ ವಿಷಯಕ್ಕೆ ಹೊಂದುವುದಿಲ್ಲ; ಆಯಾ ವಿಷಯಕ್ಕೆ ತಕ್ಕಂತೆ ಇವನ್ನು ಉಪಯೋಗಿಸಬೇಕು.

### ಅಭ್ಯಾಸ 21

ಜೋಡು, ಕೊಡೆ, ಎಮ್ಮೆಯಕರು, ಕನ್ನಡಿ—ಇವುಗಳಿಗೆ ಹೊಂದುವ ಪ್ರಶ್ನೆಗಳನ್ನು ತರಗತಿಯ ಹುಡುಗರು ಒಬ್ಬೊಬ್ಬರಾಗಿ ಕೇಳಿ ಮತ್ತೊಬ್ಬರು ಉತ್ತರ ಕೊಡಲಿ.

### ಅಭ್ಯಾಸ 22

ನಿಮ್ಮ ಮುಂದಿಟ್ಟಿರುವ ಚಿತ್ರದ[6] ವಿಷಯವಾಗಿ ಕೆಲವು ಪ್ರಶ್ನೆಗಳನ್ನು ಬರೆಯಿರಿ. ಅವುಗಳಿಗೆ ಉತ್ತರಗಳನ್ನು ಬರೆದುಕೊಂಡು ಮಹಾವಾಕ್ಯಗಳಾಗಿ ವಿಂಗಡಿಸಿ.

---

# ಎರಡನೆಯ ಅಧ್ಯಾಯ

## ಸಂಕ್ಷೇಪವಾಗಿ ಬರೆಯುವುದು

8. ಮಹಾವಾಕ್ಯದಲ್ಲಿ ಅನೇಕ ವಾಕ್ಯಗಳಿರುವವಷ್ಟೆ. ಒಂದೇ ವಾಕ್ಯದಲ್ಲಿ ಸುಲಭವಾಗಿ ತಿಳಿಸಿಬಿಡಬಹುದಾದ ಬೇರೆಬೇರೆ ಸಂಗತಿಗಳಿಗೆ ಬೇರೆಬೇರೆ ವಾಕ್ಯಗಳನ್ನು ಮಾಡಬಾರದು. ಇದರಿಂದ ವಾಕ್ಯಗಳ ಬಿಗಿ ತಪ್ಪುತ್ತದೆ. ಹೇಗೆಂದರೆ:–

1 ಆ ಹುಡುಗಿ ಕಾಡಿನಲ್ಲಿ ಹೋಗುತ್ತಿದ್ದಳು. ಅವಳು ಚಿಕ್ಕವಳು. ಅವಳು ಒಬ್ಬಳೇ ಹೋಗುತ್ತಿದ್ದಳು. ಅವಳು ಮೆಲ್ಲಗೆ ನಡೆಯುತ್ತಿದ್ದಳು.

ಈ ನಾಲ್ಕು ವಾಕ್ಯಗಳನ್ನು ಸೇರಿಸಿ "ಕಾಡಿನಲ್ಲಿ ಆ ಚಿಕ್ಕ ಹುಡುಗಿಯೊಬ್ಬಳೇ ಮೆಲ್ಲಗೆ ನಡೆಯುತ್ತ ಹೋಗುತ್ತಿದ್ದಳು" –ಎಂದು ಪುಟ್ಟ ವಾಕ್ಯವನ್ನು ಮಾಡಿ ಬರೆದರೆ ಸ್ವಲ್ಪದರಲ್ಲಿಯೇ ಅರ್ಥವು ಬೇಗ ಚೆನ್ನಾಗಿ ಗೊತ್ತಾಗುತ್ತದೆ.

2 ದಾವಣಗೆರೆಯ ಕಡೆಯಲ್ಲಿ ಕಂಬಳಿಗಳನ್ನು ಮಾಡುತ್ತಾರೆ. ಅವು ಒಳ್ಳೆಯ ಕಂಬಳಿಗಳು. ಅವು ನಯವಾಗಿರುತ್ತವೆ. ಅವು ಬಾಳಿಕೆಬರುತ್ತವೆ.

ಈ ವಾಕ್ಯಗಳನ್ನೆಲ್ಲ ಸೇರಿಸಿ "ದಾವಣಗೆರೆಯ ಕಡೆಯಲ್ಲಿ ಒಳ್ಳೆಯ ನಯವಾದ ಬಾಳಿಕೆಬರುವ ಕಂಬಳಿಗಳನ್ನು ಮಾಡುತ್ತಾರೆ" – ಎಂದು ಒಂದೇ ವಾಕ್ಯದಲ್ಲಿ ಬಿಕ್ಕಟ್ಟಾಗಿ ಬರೆಯಬಹುದು.

---

[6] ಯಾವುದಾದರೂ ಪ್ರಾಣಿಯ, ವಸ್ತುವಿನ ಅಥವಾ ಸ್ಥಳದ ಚಿತ್ರವನ್ನೂ ತಂದಿಟ್ಟು ಚಿತ್ರಕ್ಕೆ ಸಂಬಂಧವಾಗುವ ಪ್ರಶ್ನೆಗಳನ್ನು ಬಾಲಕರು ಮಾಡುವಂತೆ ಕೇಳಬೇಕು. ಅವರಲ್ಲಿಯೇ ಕೆಲವರು ಉತ್ತರಹೇಳಲಿ; ಉಪಾಧ್ಯಾಯರೂ ಸಹಾಯಮಾಡಬಹುದು. ಹೀಗೆ ಕೂಡಿಹಾಕಿದ ವಿಷಯವು ಆಮೇಲೆ ವಾಕ್ಯರಚನೆಗೆ ಆಗುತ್ತದೆ.

## ಅಭ್ಯಾಸ 23

ಈ ವಾಕ್ಯಗಳನ್ನು ಕೂಡಿಸಿ ಒಂದೊಂದು ವಾಕ್ಯವನ್ನು ಮಾಡಿ (ಅನವಶ್ಯವಾದ ಮಾತುಗಳನ್ನು ತೆಗೆದುಬಿಡಿ):—

1. ರಾಮನ ಹತ್ತಿರ ಒಂದು ಸ್ಲೇಟು ಇತ್ತು. ಅದು ಹೊಸದು. ಅವನು ಅದನ್ನು ಒಡೆದುಕೊಂಡನು. ಅದು ಈ ದಿನ ಒಡೆಯಿತು. 2. ಒಂದು ವ್ಯಾಪಾರವು ಹಬ್ಬಿರುತ್ತದೆ. ಅದು ಈಚೆಗೆ ಹಬ್ಬಿದೆ. ಅದು ಬಹಳವಾಗಿ ಹಬ್ಬಿದೆ ಇದೇ ಕೊಡೆಗಳ ವ್ಯಾಪಾರ. 3. ಇಂಗ್ಲಿಷರು ಇಂಡಿಯಕ್ಕೆ ಬಂದರು. ಅವರು ವ್ಯಾಪಾರಕ್ಕಾಗಿ ಬಂದರು. ಅವರು ಮುನ್ನೂರು ವರುಷಗಳ ಕೆಳಗೆ ಬಂದರು. 4. ಆ ಗಡಿಗೆ ಬಿತ್ತು. ಅದು ಹಳೆಯದು. ಅದು ಬಾಯಿಯೊಳಕ್ಕೆ ಬಿತ್ತು. ಬಾವಿಯು ಆಳವಾಗಿತ್ತು. 5. ಮುದುಕನಿಗೆ ಮಕ್ಕಳಿದ್ದಾರೆ. ಆ ಮುದುಕನು ಯಾರೆಂದರೆ ನಮ್ಮ ನೆರೆಯವನು. ಇವನಿಗೆ ಮೂರು ಜನ ಮಕ್ಕಳು. 6. ಬೇಡರು ವಿಶೇಷವಾಗಿದ್ದರು. ಅವರು ಸುರಪುರ ಪ್ರಾಂತದಲ್ಲಿದ್ದರು. ಅವರು ಇದ್ದು ಈಗ್ಗೆ ಅನೇಕ ವರ್ಷವಾಯಿತು. 7. ಜನರು ಮೋಸಮಾಡುತ್ತಾರೆ. ಎಲ್ಲರೂ ಹಾಗೆ ಮಾಡುವುದಿಲ್ಲ. ಕೆಲವರು ಮಾತ್ರ ಮಾಡುತ್ತಾರೆ. ಅವರು ಬಡವರಿಗೆ ಮೋಸಮಾಡುತ್ತಾರೆ. ಅವರು ಹಾಗೆ ಮಾಡುವುದು ಐಶ್ವರ್ಯದ ಮದದಿಂದ. 8. ಆ ಮುದುಕನು ಬಹು ದಯೆಯುಳ್ಳವನು. ಅವನು ಕೆಲವು ಬಟ್ಟೆಗಳನ್ನು ತಂದನು. ಅವುಗಳನ್ನು ಅವನು ಪೇಟೆಯಿಂದ ತಂದನು. ಬಟ್ಟೆಗಳೆಲ್ಲ ಹೊಸವು. ಅವುಗಳನ್ನು ಈ ಹುಡುಗರಿಗಾಗಿ ತಂದನು. ಹುಡುಗರು ಬಡವರು.

9. ಈ ಕಥೆಯನ್ನು ನೋಡಿ:—

| ಮಲಮಗಳು | ಮಲಮಗಳು |
|---|---|
| ಒಂದೂರಿನಲ್ಲಿ ಒಬ್ಬ ಮುದುಕಿಯಿದ್ದಳು. ಅವಳಿಗೆ ಒಬ್ಬ ಮಗಳಿದ್ದಳು. ಅವಳಿಗೆ ಒಬ್ಬ ಮಲಮಗಳೂ ಇದ್ದಳು. ಮಗಳು ಕುರೂಪಿ. ಇದಲ್ಲದೆ ಅವಳು ಸೋಮಾರಿಯಾಗಿದ್ದಳು. ಮಲಮಗಳು ಸುಂದರಿಯಾಗಿದ್ದಳು. ಮತ್ತು ಅವಳು ಕಷ್ಟಪಟ್ಟು ಕೆಲಸ ಮಾಡುತ್ತಿದ್ದಳು. ಆದರೆ ಆ ಮಲ ತಾಯಿಯೂ ಅವಳನ್ನು ಯಾವಾಗಲೂ ಬಯ್ಯುತ್ತಿದ್ದಳು. ಹುಡುಗಿಯು ಅದನ್ನೆಲ್ಲ ಸಹಿಸಿಕೊಂಡಿದ್ದಳು. | ಒಂದೂರಿನಲ್ಲಿ ಒಬ್ಬ ಮುದುಕಿ ಇದ್ದಳು. ಅವಳಿಗೆ ಒಬ್ಬ ಮಗಳೂ ಒಬ್ಬ ಮಲಮಗಳೂ ಇದ್ದರು. ಮಗಳು ಕುರೂಪಿಯಾಗಿಯೂ ಸೋಮಾರಿಯಾಗಿಯೂ ಇದ್ದಳು. ಮಲಮಗಳು ಸುಂದರಿ. ಮಲತಾಯಿಯೂ ತನ್ನನ್ನು ಯಾವಾಗಲೂ ಬಯ್ಯುತ್ತಿದ್ದರೂ ಅವಳು ಸಹಿಸಿಕೊಂಡು ಕಷ್ಟಪಟ್ಟು ಕೆಲಸಮಾಡುತ್ತಿದ್ದಳು. |

| | |
|---|---|
| ಒಂದು ದಿನ ಮಲಮಗಳು ಬಾವಿಗೆ ಹೋದಳು. ಅವಳು ನೀರು ತರಬೇಕಾಗಿತ್ತು. ಅದಕ್ಕಾಗಿ ಒಂದು ಗಡಿಗೆಯನ್ನು ತೆಗೆದುಕೊಂಡು ಹೋಗಿದ್ದಳು. ಅಲ್ಲಿಗೆ ಒಬ್ಬ ಹಣ್ಣು ಹಣ್ಣು ಮುದುಕಿ ಬಂದಳು. ಅವಳನ್ನು ಕಂಡಳು. “ನನಗೆ ತುಂಬ ಬಾಯಾರಿಕೆಯಾಗಿದೆ. ಸ್ವಲ್ಪ ನೀರನ್ನು ಕೊಡು”– ಎಂದು ಅವಳನ್ನು ಕೇಳಿದಳು. ಹುಡುಗಿಯು ಅವಳಿಗೆ ನೀರು ಕೊಟ್ಟಳು. ಆಮೇಲೆ ಮನೆಗೆ ಬಂದಳು. ಆಗ ಅವಳು ಮಲತಾಯಿಯೊಡನೆ ಮಾತಾಡುವುದಕ್ಕೆ ಮೊದಲುಮಾಡಿದಳು. ಅವಳು ಮಾತಾಡುತ್ತಲೂ ಅವಳ ಬಾಯಿಯಿಂದ ಕೆಲವು ಮಲ್ಲಿಗೆ ಹೂಗಳು ಉದುರಿದವು. ಆಗ ಕೆಲವು ಮುತ್ತುಗಳೂ ಉದುರಿದವು. | ಒಂದು ದಿನ ಈ ಮಲಮಗಳು ನೀರು ತರುವುದಕ್ಕಾಗಿ ಗಡಿಗೆಯನ್ನು ತೆಗೆದುಕೊಂಡು ಬಾವಿಗೆ ಹೋದಳು. ಅಲ್ಲಿಗೆ ಒಬ್ಬ ಹಣ್ಣು ಹಣ್ಣು ಮುದುಕಿ ಬಂದು ಅವಳನ್ನು “ನನಗೆ ತುಂಬ ಬಾಯಾರಿಕೆಯಾಗಿದೆ. ಸ್ವಲ್ಪ ನೀರನ್ನು ಕೊಡು” – ಎಂದು ಕೇಳಿದಳು. ಹುಡುಗಿಯು ನೀರು ಕೊಟ್ಟು ಮನೆಗೆ ಬಂದಳು. ಅವಳು ಮಲತಾಯಿಯೊಡನೆ ಮಾತಾಡುವುದಕ್ಕೆ ಮೊದಲು ಮಾಡುತ್ತಲೂ ಅವಳ ಬಾಯಿಯಿಂದ ಮಲ್ಲಿಗೆ ಹೂಗಳೂ ಮುತ್ತುಗಳೂ ಉದುರಿದವು. |
| ಮಾರನೆಯ ದಿನ ಅವಳ ಅಕ್ಕನು ಒಂದು ಬೆಳ್ಳಿಯ ಕೊಡವನ್ನು ತೆಗೆದುಕೊಂಡಳು. ಅವಳೂ ಬಾವಿಗೆ ಹೋದಳು. ಅಲ್ಲಿ ಒಬ್ಬ ಹೆಂಗಸು ಕೂತ್ತಿದ್ದಳು. ಅವಳು ಬಹಳ ಸುಂದರಿಯಾಗಿದ್ದಳು. ಆಕೆಯು ಇವಳನ್ನು ಸ್ವಲ್ಪ ನೀರನ್ನು ಕೇಳಿದಳು. ಹುಡುಗಿಯು ಕೊಡಲಿಲ್ಲ. ನೀರು ತೆಗೆದುಕೊಂಡು ಆಕೆಯು ಮನೆಗೆ ಬೇಗ ಬೇಗ ಬಂದಳು. ಅವಳು ತಾಯಿಯೊಡನೆ ಮಾತಾಡುವುದಕ್ಕೆ ಮೊದಲು ಮಾಡಿದಳು. ಈ ಸಲ ಹೂವೂ ಬೀಳಲಿಲ್ಲ. ಮುತ್ತೂ ಬೀಳಲಿಲ್ಲ. ಅದಕ್ಕೆ ಬದಲು ಅವಳ ಬಾಯಿಯಿಂದ ಕೆಲವು ಹಾವುಗಳು ಬಿದ್ದವು. ಅವುಗಳಲ್ಲಿ ಒಂದು ಆ ತಾಯಿಯನ್ನು ಕೊಂದು ಹಾಕಿತು. | ಮಾರನೆಯ ದಿನ ಅವಳ ಅಕ್ಕನು ಒಂದು ಬೆಳ್ಳಿಯ ಕೊಡವನ್ನು ತೆಗೆದುಕೊಂಡು ತಾನೂ ಬಾವಿಗೆ ಹೋದಳು ಅಲ್ಲಿ ಕೂತಿದ್ದ ಬಹು ಸುಂದರಿಯಾಗಿದ್ದ ಒಬ್ಬ ಹೆಂಗಸು ಇವಳನ್ನು ಸ್ವಲ್ಪ ನೀರನ್ನು ಕೇಳಿದಳು. ಈ ಹುಡುಗಿಯು ಕೊಡದೆ ನೀರು ತೆಗೆದುಕೊಂಡು ಬೇಗ ಬೇಗ ಮನೆಗೆ ಬಂದಳು. ಅವಳು ತಾಯಿಯೊಡನೆ ಮಾತಾಡುವುದಕ್ಕೆ ಮೊದಲು ಮಾಡುತ್ತಲೂ ಹೂವೂ ಮುತ್ತೂ ಬೀಳುವುದಕ್ಕೆ ಬದಲು ಕೆಲವು ಹಾವುಗಳು ಬಿದ್ದವು. ಅವುಗಳಲ್ಲಿ ಒಂದು ಹಾವು ಆ ತಾಯಿಯನ್ನು ಕೊಂದುಹಾಕಿತು. |

ಎಡಗಡೆ ಬರೆದಿರುವ ಕಥೆಗಿಂತ ಬಲಗಡೆ ಬರೆದಿರುವ ಕಥೆಯಲ್ಲಿ ಎಷ್ಟು ವಾಕ್ಯಗಳು ಕಡಿಮೆಯಾಗಿವೆ, ನೋಡಿ! ಹೀಗೆ ಎರಡು ಮೂರು ವಾಕ್ಯಗಳನ್ನು ಸೇರಿಸಿ ಒಂದುಮಾಡುವುದರಿಂದ ತಾತ್ಪರ್ಯವೇನೂ ಕೆಡುವುದಿಲ್ಲ; ಇನ್ನೂ ಚೆನ್ನಾಗಿಯೇ ಎದ್ದುಕಾಣುವುದು. ಈ ರೀತಿಯಲ್ಲಿ ವಾಕ್ಯಗಳ ಸಂಖ್ಯೆಯನ್ನೂ ಮಾತುಗಳ ಸಂಖ್ಯೆಯನ್ನೂ ಆದಷ್ಟು ಕಡಿಮೆಮಾಡಿ ಬರೆಯುವ ಅಭ್ಯಾಸವನ್ನು ಇಡಬೇಕು.

## ಅಭ್ಯಾಸ 24

ಇಲ್ಲಿರುವ ವಾಕ್ಯಗಳನ್ನು ಕೂಡಿಸಿ ಅವುಗಳ ಸಂಖ್ಯೆಯನ್ನು ಆದಷ್ಟು ಕಡಿಮೆ ಮಾಡಿ:—

### ಕಣ್ಣು

ಕಣ್ಣೆಂಬುದು ಒಂದು ದುಂಡನೆಯ ವಸ್ತು. ಅದು ಒಂದು ಗುಣಿಯಲ್ಲಿದೆ. ಗುಣಿಯು ತಲೆಯ ಬುರುಡೆಯಲ್ಲಿದೆ. ಕಣ್ಣನ್ನು ರೆಪ್ಪೆಗಳು ಮುಚ್ಚಿಕೊಂಡಿವೆ. ಒಂದೊಂದು ಕಣ್ಣಿಗೆ ಎರಡೆರಡು ರೆಪ್ಪೆಗಳು. ರೆಪ್ಪೆಯ ತುದಿಯಲ್ಲಿ ರೆಪ್ಪೆಯ ಕೂದಲು ಇದೆ. ರೆಪ್ಪೆಯ ಮೇಲುಗಡೆಯಲ್ಲಿ ಹುಬ್ಬು ಇದೆ. ಕಣ್ಣುಗಳಿಂದ ಆಗಾಗ್ಗೆ ನೀರು ಸುರಿಯುತ್ತದೆ. ಹಾಗೆ ಸುರಿಯುವುದರಿಂದ ಕಣ್ಣುಗಳು ಒದ್ದೆಯಾಗಿರುತ್ತವೆ. ಇದರಿಂದ ಕಣ್ಣುಗಳು ತಣ್ಣಗೂ ಇರುತ್ತವೆ. ಕಣ್ಣಿನ ನಡುವೆ ಒಂದು ಉಂಗುರವಿರುತ್ತದೆ. ಇದು ಕೆಲವರಲ್ಲಿ ಎಳೆಗೆಂಪಾಗಿರುತ್ತದೆ. ಮತ್ತೆ ಕೆಲವರಲ್ಲಿ ಕಪ್ಪುಬಣ್ಣವಾಗಿರುತ್ತದೆ. ಇನ್ನೂ ಕೆಲವರಲ್ಲಿ ಬೂದುಬಣ್ಣವಾಗಿರುವುದು. ಇದರ ನಡುವೆ ಕಣ್ಣುಗುಡ್ಡೆ ಇರುವುದು. ಕಣ್ಣುಗುಡ್ಡೆಯ ನಡುವೆ ಒಂದು ಸಣ್ಣ ರಂಧ್ರವು ಇರುತ್ತದೆ. ರಂಧ್ರವು ಬೇಕಾದರೆ ದೊಡ್ಡದಾಗುತ್ತದೆ. ಅದು ಸಣ್ಣದೂ ಆಗಬಹುದಾಗಿರುತ್ತದೆ. ಗುಡ್ಡೆಯು ಕನ್ನಡಿಯಂತೆ ಇರುವುದು. ಅದರಲ್ಲಿ ನೋಡುವವನ ಪ್ರತಿಬಿಂಬವು ಬೀಳುತ್ತದೆ.

## ಅಭ್ಯಾಸ 25

ಈ ಕಥೆಯಲ್ಲಿರುವ ವಾಕ್ಯಗಳನ್ನೂ ಮಾತುಗಳನ್ನೂ[1] ಆದಷ್ಟು ಕಡಿಮೆಮಾಡಿ ಬರೆಯಿರಿ:—

### ನಾಯಿಯೂ ಅದರ ನೆರಳೂ

ಒಂದು ನಾಯಿ ಹೋಗುತ್ತಿತ್ತು. ಅದು ಎಂಥ ನಾಯಿ ಎಂದರೆ, ಕರಿಯ ನಾಯಿ. ಅದರ ಬಾಯಿಯಲ್ಲಿ ಒಂದು ಕಡುಬು ಇತ್ತು. ಅದು ಒಂದು ಸೇತುವೆಯ ಮೇಲೆ ಹೋಗುತ್ತಿತ್ತು. ಕೆಳಗೆ ನೀರು ಹರಿಯುತ್ತಿತ್ತು. ನಾಯಿ ನೀರಿನಲ್ಲಿ ನೋಡಿತು. ನೋಡುತ್ತಲೂ ಅದರ ನೆರಳು ಕಾಣಿಸಿತು. ನಾಯಿ ಅದನ್ನು ಮತ್ತೊಂದು ಕಡುಬು ಕಚ್ಚಿಕೊಂಡಿರುವ ನಾಯಿಯೆಂದು ಭಾವಿಸಿತು. ಹೀಗೆಂದು ತಿಳಿದು ಆ ಕಡುಬನ್ನು ಕಸಿದುಕೊಳ್ಳುವುದಕ್ಕೆ ಬಾಯಿಬಿಟ್ಟಿತು. ಅದು

---

[1] ಹುಡುಗರು ತರಗತಿಯಲ್ಲಿ ಯಾವುದಾದರೊಂದು ಕಥೆಯನ್ನು ಹೇಳುವಂತೆ ಮಾಡಿ ಅವರು ಮಾತುಗಳನ್ನು ಅನವಶ್ಯಕವಾಗಿ ಎರಡು ಮೂರು ಸಲ ಉಪಯೋಗಿಸಿರುತ್ತಾರೆಂಬುದನ್ನು ಸ್ಪಷ್ಟಪಡಿಸಬಹುದು.

ಬಾಯಿಬಿಡುತ್ತಲೂ ಕಡುಬು ಕೆಳಕ್ಕೆ ಬಿದ್ದು ಹೋಯಿತು. ಆದರ ಆಸೆಯು ಪೂರ್ತಿಯಾಗಲಿಲ್ಲ. ತನ್ನಲ್ಲಿದ್ದ ಕಡುಬನ್ನೂ ಕಳೆದುಕೊಂಡಿತು.

**10.** ವಾಕ್ಯಗಳನ್ನು ಒಂದುಗೂಡಿಸುವುದಕ್ಕೆ ಮುಖ್ಯವಾಗಿ

(1) ಸಂಬಂಧಸೂಚಕಗಳು,[2] (2) ನಾಮವಿಶೇಷಣಗಳು, ಮತ್ತು ಕ್ರಿಯಾ ವಿಶೇಷಣಗಳು, (3) ಕೃದಂತಗಳು – ಇವು ಉಪಯೋಗವಾಗುತ್ತವೆ.

## (a) ಸಂಬಂಧಸೂಚಕಗಳು

ವಾಕ್ಯಗಳ ಕ್ರಿಯೆಯು ಒಂದೇ ಆಗಿದ್ದು ಕರ್ತೃಗಳು ಬೇರೆಯಾಗಿದ್ದರೆ ಕೂಡಿಸುವುದಕ್ಕೆ 'ಊ', 'ಆಗಲಿ', 'ಮತ್ತು', 'ಓ', 'ಅಥವಾ', 'ಹೀಗೆ', – ಎಂಬ ಅವ್ಯಯಗಳೂ 'ಅದು', 'ಇದು', 'ಅಂಥ', 'ಇಂಥ'[3] ಎಂಬ ಶಬ್ದಗಳೂ ಉಪಯೋಗವಾಗುತ್ತವೆ.

| ಬೇರೆ ಬೇರೆ ಇರುವ ವಾಕ್ಯಗಳು | ಕೂಡಿಸಿದ ವಾಕ್ಯ |
|---|---|
| 1. ರಾಮನು ಅರಣ್ಯಕ್ಕೆ ಹೋದನು. ಲಕ್ಷ್ಮಣನು ಅರಣ್ಯಕ್ಕೆ ಹೋದನು. | 1. ರಾಮನೂ ಲಕ್ಷ್ಮಣನೂ ಅರಣ್ಯಕ್ಕೆ ಹೋದರು. |
| 2. ಆ ಮರದಲ್ಲಿ ಹಣ್ಣು ತುಂಬಿದ್ದವು; ಕಾಯಿ ತುಂಬಿದ್ದವು; ಹೀಚು ತುಂಬಿದ್ದವು. | 2. ಆ ಮರದಲ್ಲಿ ಹಣ್ಣು, ಹೀಚು, ಕಾಯಿ – ಇವು ತುಂಬಿದ್ದವು. ಅಥವಾ 'ಹಣ್ಣು ಕಾಯಿ ಹೀಚುಗಳು ತುಂಬಿದ್ದವು'. |
| 3. ಚಿನ್ನವು ಒಂದು ಬೆಲೆಯುಳ್ಳ ಲೋಹ. ಬೆಳ್ಳಿಯು ಒಂದು ಬೆಲೆಯುಳ್ಳ ಲೋಹ. | 3. ಚಿನ್ನವೂ ಬೆಳ್ಳಿಯೂ ಬೆಲೆಯುಳ್ಳ ಲೋಹಗಳು. ಅಥವಾ 'ಚಿನ್ನ ಮತ್ತು ಬೆಳ್ಳಿ–ಇವು...' |
| 4. ತೋಟಗಳಲ್ಲಿ ಮಾವಿನಗಿಡಗಳನ್ನು ಬೆಳೆಯುತ್ತಾರೆ. ತೋಟಗಳಲ್ಲಿ ನಿಂಬೆಯ ಗಿಡಗಳನ್ನು ಬೆಳೆಯುತ್ತಾರೆ. ತೋಟಗಳಲ್ಲಿ ಕಿತ್ತಿಳೆಯಗಿಡಗಳನ್ನು ಬೆಳೆಯುತ್ತಾರೆ. ತೋಟಗಳಲ್ಲಿ ಇನ್ನೂ ಕೆಲವು ಹಣ್ಣಿನ ಗಿಡಗಳನ್ನು ಬೆಳೆಯುತ್ತಾರೆ. | 4. ತೋಟಗಳಲ್ಲಿ ಮಾವು, ನಿಂಬೆ ಕಿತ್ತಿಳೆ – ಮುಂತಾದ ಹಣ್ಣಿನ ಗಿಡಗಳನ್ನು ಬೆಳೆಯುತ್ತಾರೆ. |

[2] ಈ ಹೆಸರುಗಳನ್ನು ಹುಡುಗರು ಗಟ್ಟಿಮಾಡಬೇಕಾದ ಅಗತ್ಯವಿಲ್ಲ; ಅವರಿಗೆ ಇವುಗಳನ್ನು ವಾಕ್ಯಗಳಲ್ಲಿ ಉಪಯೋಗಿಸುವುದಕ್ಕೆ ಬಂದರೆ ಸಾಕಾಗಿದೆ.

[3] 'ಅಂತಪ್ಪ', 'ಇಂತಪ್ಪ' – ಎಂಬ ಶಬ್ದಗಳಿಂದ ಬಂದಿರುವ 'ಆತಹ', 'ಇಂತಹ' – ಎಂಬ ರೂಪಗಳನ್ನೇ ಉಪಯೋಗಿಸಬೇಕೆಂದು ಕೆಲವರು ನಿರ್ಬಂಧಮಾಡುವರು. ಆದರೆ ಹೊಸಕನ್ನಡದಲ್ಲಿ 'ಅಂಥ', 'ಇಂಥ' – ಎಂಬ ರೂಪಗಳು ಈಗಾಗಲೆ ಬಳಕೆಗೆ ಬಂದುಬಿಟ್ಟಿವೆ.

**ಸೂ॥** ಒಂದರ ಜೊತೆಗೆ ಮತ್ತೊಂದು ಅಥವಾ ಮತ್ತೂ ಹೆಚ್ಚು ಸೇರಿದೆ ಎಂಬರ್ಥಕ್ಕೆ ಸಮುಚ್ಚಯವೆನ್ನುತ್ತಾರೆ. ಹಿಂದಿನ ವಾಕ್ಯಗಳೆಲ್ಲ ಕರ್ತೃಗಳ ಸಮುಚ್ಚಯವನ್ನು ತೋರಿಸುತ್ತವೆ. ಈ ಅರ್ಥದಲ್ಲಿ 'ಇವೆಲ್ಲ', 'ಇಂಥವೆಲ್ಲ', 'ಇವುಗಳಂಥ', 'ಮೊದಲಾದ', 'ಇವುಗಳಲ್ಲದೆ' – ಎಂಬ ಸೂಚಕಗಳನ್ನೂ ಸಂದರ್ಭಾನುಸಾರವಾಗಿ ಉಪಯೋಗಿಸಬಹುದು.

| | |
|---|---|
| 5. ಅಲ್ಲಿ ರಾಮನಿರಲಿಲ್ಲ. ಕೃಷ್ಣನೂ ಇರಲಿಲ್ಲ. | 5. ಅಲ್ಲಿ ರಾಮನಾಗಲಿ ಕೃಷ್ಣನಾಗಲಿ ಇರಲಿಲ್ಲ. |
| 6. ಅವನಿಗೆ ದಿನದಿನವೂ ತಲೆನೋವು ಬರುತ್ತಿತ್ತು. ಇಲ್ಲದಿದ್ದರೆ ಮೂಗು-ನೋವು ಬರುತ್ತಿತ್ತು. | 6. ಅವನಿಗೆ ದಿನದಿನವೂ ತಲೆನೋವೋ ಮೂಗುನೋವೋ ಬರುತ್ತಿತ್ತು. |
| 7. ರಾಮನು ಬರುತ್ತಾನೆ; ಇಲ್ಲದಿದ್ದರೆ ಕೃಷ್ಣನು ಬರುತ್ತಾನೆ. | 7. ರಾಮನೋ ಕೃಷ್ಣನೋ ಯಾವ-ನಾದರೊಬ್ಬನು ಬರುತ್ತಾನೆ. ಅಥವಾ 'ಯಾರಾದರೊಬ್ಬರು ಬರುತ್ತಾರೆ'. |

**ಸೂ॥** 7ನೆಯ ವಾಕ್ಯದಂತೆ ಕೂಡಿಸಿದ ವಾಕ್ಯದಲ್ಲಿ ಅರ್ಥಕ್ಕನುಸಾರವಾಗಿ ಕ್ರಿಯೆಯ ಪುರುಷವಚನಗಳು ಇರುತ್ತವೆ.

**ಉದಾಹರಣೆ:**

ನಾನೋ ಅವನೋ ಬರುತ್ತೇವೆ. ನೀನೋ ಅವನೋ ಬನ್ನಿ. ಅವಳೋ ಅವನೋ ಬರುತ್ತಾರೆ. ನಾನು, ರಾಮ, ಕೃಷ್ಣ – ಹೀಗೆ ನಮ್ಮಲ್ಲಿ ಯಾರಾದರೊಬ್ಬರು ಬರುತ್ತೇವೆ. (ಅಥವಾ 'ಯಾರಾದರೊಬ್ಬರು ಬರುತ್ತಾರೆ' ಅಂದರೆ ನಾನಿಲ್ಲ.)

## ಅಭ್ಯಾಸ 26

ಈ ವಾಕ್ಯಗಳನ್ನು ('ಊ', 'ಮತ್ತು', 'ಆಗಲಿ', 'ಇವು', 'ಓ', 'ಇಂಥ' – ಮುಂತಾದ ಸಂಬಂಧಸೂಚಕಗಳನ್ನುಪಯೋಗಿಸಿ) ಒಂದುಗೂಡಿಸಿ ಸಂಕ್ಷೇಪವಾಗಿ ಬರೆಯಿರಿ:–

**1.** ಈ ಸೀಮೆಯಲ್ಲಿ ಕೆಲವು ಬೆಳ್ಳಿಯ ನಾಣ್ಯಗಳುಂಟು. ಈ ಸೀಮೆಯಲ್ಲಿ ಕೆಲವು ಚಿನ್ನದ ನಾಣ್ಯಗಳು ಉಂಟು. **2.** ಅವನು ನಾಳೆ ಬರುತ್ತಾನೆ. ಅವನು ನಾಡಿದ್ದು ಬರುತ್ತಾನೆ. **3.** ಹಸು ಬಹಳ ಉಪಯೋಗವಾದ ಪ್ರಾಣಿ. ಕುರಿ ಬಹಳ ಉಪಯೋಗವಾದ ಪ್ರಾಣಿ. ಮೇಕೆ ಬಹಳ ಉಪಯೋಗವಾದ ಪ್ರಾಣಿ. **4.** ಅವನ ನಡೆ ಚೆನ್ನಾಗಿಲ್ಲ. ಅವನ ನುಡಿ ಚೆನ್ನಾಗಿಲ್ಲ. **5.** ನೀನು ಆ ದಿನ ಅಲ್ಲಿದ್ದೆ. ಅವನು ಆ ದಿನ ಅಲ್ಲಿದ್ದನು. **6.** ನೀನು ನಾಳೆ ನಮ್ಮ ಮನೆಯ ಹತ್ತಿರಕ್ಕೆ ಬಾ. ನಿಮ್ಮಣ್ಣನು ನಮ್ಮ ಮನೆಯ ಹತ್ತಿರಕ್ಕೆ ನಾಳೆ ಬರಲಿ. ಒಬ್ಬರು ಬಂದರೆ ಸಾಕು. **7.** ರಾಮನು

ಈ ಕಾಗದವನ್ನು ಬರೆದಿದ್ದಾನೆ. ಸೀತೆಯು ಈ ಕಾಗದವನ್ನು ಬರೆದಿದ್ದಾಳೆ. ಅವರಿಬ್ಬರನ್ನು ಬಿಟ್ಟರೆ ಯಾರೂ ಬರೆದಿಲ್ಲ.

ಉಳಿದ ಕಾರಕಗಳನ್ನೂ[4] ಕರ್ತೃಗಳಂತೆಯೇ ಸೇರಿಸಬಹುದು.

| ಬೇರೆ ಬೇರೆಯಾಗಿರುವ ವಾಕ್ಯಗಳು | ಒಂದುಗೂಡಿಸಿದ ವಾಕ್ಯ |
|---|---|
| 1. ಅವನು ಒಂದು ಕೆಂಪನ್ನು ತಂದನು. ಅವನು ಒಂದು ಮುತ್ತನ್ನು ತಂದನು. | 1. ಅವನು ಒಂದು ಕೆಂಪನ್ನೂ ಒಂದು ಮುತ್ತನ್ನೂ ತಂದನು. |
| 2. ಕಾಗದದ ಮೇಲೆ ಸೀಸದ ಕಡ್ಡಿಯಿಂದ ಬರೆಯಬಹುದು. ಅದರ ಮೇಲೆ ಲೇಖನಿಯಿಂದ ಬರೆಯಬಹುದು. | 2. ಕಾಗದ ಮೇಲೆ ಸೀಸದ ಕಡ್ಡಿಯಿಂದಾಗಲಿ ಲೇಖನಿಂದಾಗಲಿ ಬರೆಯಬಹುದು. |
| 3. ಅವನ ಆಸ್ತಿಯೆಲ್ಲ ತುಂಟರಿಗೆ ಆಯಿತು. ಸ್ವಲ್ಪ ತುಡುಗರಿಗೆ ಆಯಿತು. | 3. ಅವನ ಆಸ್ತಿಯೆಲ್ಲ ತುಂಟರಿಗೂ ತುಡುಗರಿಗೂ ಆಯಿತು. |
| 4. ನಮ್ಮೂರಿನಲ್ಲಿ ಇವನೇ ಹೆಸರಾದವನು. ನಿಮ್ಮೂರಿನಲ್ಲಿ ಇವನೇ ಹೆಸರಾದವನು. | 4. ನಮ್ಮೂರಿನಲ್ಲಿಯೂ ನಿಮ್ಮೂರಿನಲ್ಲಿಯೂ ಇವನೇ ಹೆಸರಾದವನು. |

**ಸೂ॥** "ಕೆರೆ ಅಥವಾ ಕಾಲುವೆಯ ನೀರು ಬೇಕಾಗುತ್ತದೆ." —ಇಲ್ಲಿ 'ಅಥವಾ' ಎಂಬುದು ಬೇರೆ ಬೇರೆ ವಿಭಕ್ತಿಗಳನ್ನು ಸೇರಿಸುತ್ತದೆ; ಇದು ಸರಿಯಲ್ಲ. 'ಕೆರೆ ಅಥವಾ ಕಾಲುವೆ—ಇವುಗಳ', 'ಕೆರೆ, ಕಾಲುವೆ ಇವುಗಳಲ್ಲೊಂದರ', 'ಕೆರೆಯ ಅಥವಾ ಕಾಲುವೆಯ' —ಎಂದು ಬರೆಯಬೇಕು.

## ಅಭ್ಯಾಸ 27

ಇಲ್ಲಿರುವ ವಾಕ್ಯಗಳನ್ನು ಒಂದುಗೂಡಿಸಿ:—

**1.** ಮಲ್ಲನು ತಾಯಿತಂದೆಗಳಲ್ಲಿ ವಿಶೇಷಭಕ್ತಿಯನ್ನಿಟ್ಟುಕೊಂಡಿದ್ದಾನೆ. ಅವನು ದೇವರಲ್ಲಿ ವಿಶೇಷಭಕ್ತಿಯನ್ನಿಟ್ಟುಕೊಂಡಿದ್ದಾನೆ. **2.** ಅವರು ನನಗಾಗಿ ಹಾಲನ್ನು ತಂದಿಟ್ಟರು. ಹಣ್ಣುಗಳನ್ನು ತಂದಿಟ್ಟರು. **3.** ಆ ಹಣ್ಣು ಕೈಗೆ ಸಿಕ್ಕುವುದಿಲ್ಲ. ಅದು ಕೋಲಿಗೆ ಸಿಕ್ಕುವುದಿಲ್ಲ. **4.** ನಿಮ್ಮಗಳೆಲ್ಲರ ಯೋಗಕ್ಷೇಮಕ್ಕೆ ಕಾಗದ ಬರೆಯುತ್ತಿರಬೇಕು. ಹೆಚ್ಚಿನ ಸಂಗತಿಗಳಿಗೆ ಕಾಗದ ಬರೆಯುತ್ತಿರಬೇಕು. **5.** ನೀನು ದಾಸಯ್ಯನಲ್ಲ. ನೀನು ಜಂಗಮಯ್ಯನಲ್ಲ. ನಿನಗೇಕೆ ಭಿಕ್ಷ?

[4] ಕ್ರಿಯೆಯಲ್ಲಿ ಅನ್ವಯಿಸುವ ವಿಭಕ್ತ್ಯಂತಪದಗಳಿಗೆ 'ಕಾರಕ'ಗಳೆಂದು ಹೆಸರು.

ಕಾರಕಗಳನ್ನು ಕೂಡಿಸುವುದರಲ್ಲಿ ಎಚ್ಚರಿಕೆ ಬೇಕು. ಅನವಶ್ಯಕವಾದ ಮಾತುಗಳನ್ನು ಉಪಯೋಗಿಸಕೂಡದು. ಲಿಂಗವಚನಗಳಲ್ಲಿ ಮಾತುಗಳಿಗೆ ಹೊಂದಿಕೆ ಇರಬೇಕು.

**ಉದಾಹರಣೆ:**

1 ಪುಸ್ತಕಗಳೂ ಮತ್ತು ಕಲ್ಲುಹಲಗೆಗಳೂ ಅಲ್ಲಿವೆ. 'ಮತ್ತು' ಅನವಶ್ಯ.

2 ಕುರುಡ, ಕುಂಟ, ಅಥವಾ ಮೂಕ—ಇಂಥವರಿಗೆ ದಾನಕೊಡುವುದು ನ್ಯಾಯ. 'ಅಥವಾ' ಹೆಚ್ಚು.

3 ರಾಮನಾಗಲಿ ಅಥವಾ ರಾಧೆಯಾಗಲಿ ಬರುತ್ತಾಳೆ. 'ಅಥವಾ' ತೆಗೆದುಹಾಕು; 'ಬರುತ್ತಾರೆ' ಎಂದಿರಲಿ.

4 ಆನೆಗಳೂ ಕುದುರೆಗಳೂ ರಥಗಳೂ ಕಾಲಾಳುಗಳೂ – ಇವರೇ ಚತುರಂಗಗಳು. 'ಊ' ತೆಗೆ; 'ಇವೇ' ಎಂದಿರಬೇಕು.

## ಅಭ್ಯಾಸ 28

ಈ ವಾಕ್ಯಗಳನ್ನು ಸರಿಪಡಿಸಿರಿ:—

1. ಒಬ್ಬ ಗೃಹಸ್ಥನಿಗೆ ಒಂದು ಗಂಡು ಮತ್ತು ಒಂದು ಹೆಣ್ಣು—ಹೀಗೆ ಇಬ್ಬರು ಮಕ್ಕಳಿದ್ದರು. 2. ಸುರೇಂದ್ರನೂ ಮತ್ತು ಸೂರ್ಯಪ್ರಕಾಶನೂ ನಿದ್ದೆ ಮಾಡುತ್ತಿದ್ದರು. 3. ಆವೂರಿನ ಜನರು ಮತ್ತು ಅದರಲ್ಲಿಯೂ ಈ ಅಡಗೂಳಜ್ಜಿಯು ಮನಸ್ಸುಬಂದಂತೆ ಮಾತನಾಡುತ್ತಿದ್ದಳು. 4. ಅವನಿಗೆ ಎಂಟು ವರ್ಷದ ಒಬ್ಬಳು ಮಗಳೂ ಮತ್ತು ಇವಳ ಜತೆಗೆ ಹನ್ನೆರಡು ವರ್ಷದ ಒಬ್ಬ ಮಗನೂ ಇದ್ದನು. 5. ನಮ್ಮ ಮನೆಯಲ್ಲಿ ಸೀತೆ, ಕೃಷ್ಣ, ಗೋಪಾಲ, ಇದರ ಮೇಲೆ ಒಬ್ಬ ಆಳು ಮತ್ತು ಒಬ್ಬಳು ಕಸಗುಡಿಸುವವಳು ಇದ್ದಾಳೆ. ಇದರಲ್ಲಿ ಯಾವನೋ ಒಬ್ಬನು ಈ ಕೆಲಸಮಾಡಿದ್ದಾನೆ.

## (b) ನಾಮವಿಶೇಷಣಗಳು, ಕ್ರಿಯಾವಿಶೇಷಣಗಳು

ವಿಶೇಷಣಗಳನ್ನು ಕೂಡಿಸುವ ಬಗೆಯನ್ನು ಈ ಮುಂದಿನ ಉದಾಹರಣೆಗಳಿಂದ ತಿಳಿಯಬಹುದು:—

| ಬಿಡಿಬಿಡಿಯ ವಾಕ್ಯಗಳು | ಒಂದುಗೂಡಿಸಿದ ವಾಕ್ಯ |
|---|---|
| 1. ಚಿಕ್ಕ ಮನೆಗೆ ಒಂದು ಬಾಗಿಲು ಇತ್ತು. ಅದು ತೀರ ಸಣ್ಣದು. | 1. ಚಿಕ್ಕ ಮನೆಗೆ ಒಂದು ತೀರ ಸಣ್ಣ ಬಾಗಿಲು ಇತ್ತು. |
| 2. ಅಲ್ಲಿ ಒಂದು ಪರ್ವತವಿದೆ. ಅದೇ ವಿಂಧ್ಯ. | 2. ಅಲ್ಲಿ ವಿಂಧ್ಯವೆಂಬ ಪರ್ವತವಿದೆ |
| 3. ಕೆಲವರಲ್ಲಿ ಹಣವಿರುತ್ತದೆ. ಅವರೇ ಕುಲೀನರೊ? | 3. ಹಣವುಳ್ಳವರೇ ಕುಲೀನರೊ? |
| 4. ಸಾವಿತ್ರಿಯು ಒಬ್ಬ ಮುನಿಪುತ್ರನನ್ನು ಕಂಡಳು. ಅವನು ವಿದ್ಯಾಬುದ್ಧಿಗಳಲ್ಲಿ ಶ್ರೇಷ್ಠನಾಗಿದ್ದನು. ಅವನು ದಿವ್ಯಸುಂದರವಿಗ್ರಹವುಳ್ಳವನಾಗಿದ್ದನು. | 4. ಸಾವಿತ್ರಿಯು ವಿದ್ಯಾಬುದ್ಧಿಗಳಲ್ಲಿ ಶ್ರೇಷ್ಠನಾಗಿಯೂ ದಿವ್ಯಸುಂದರ ವಿಗ್ರಹವುಳ್ಳವನಾಗಿಯೂ ಇರುವ ಒಬ್ಬ ಮುನಿಪುತ್ರನನ್ನು ಕಂಡಳು. ಅಥವಾ 'ಶ್ರೇಷ್ಠನಾಗಿ ದಿವ್ಯಸುಂದರ ವಿಗ್ರಹವುಳ್ಳ. . . |
| 5. ರಾಮನು ದಶರಥನ ಹಿರಿಯ ಮಗನು. ಅವನು ಲೋಕಕ್ಕೆಲ್ಲ ಪ್ರಿಯನಾಗಿದ್ದನು. ದಶರಥನು ಅವನಿಗೆ ಪಟ್ಟಾಭಿಷೇಕವನ್ನು ಮಾಡಲೆಳಸಿದನು. | 5. ದಶರಥನು ತನ್ನ ಹಿರಿಯ ಮಗನಾಗಿಯೂ ಲೋಕಕ್ಕೆಲ್ಲ ಪ್ರಿಯನಾಗಿಯೂ ಇದ್ದ ರಾಮನಿಗೆ ಪಟ್ಟಾಭಿಷೇಕವನ್ನು ಮಾಡಲೆಳಸಿದನು. |
| 6. ಅವರು ನಗುತ್ತಿದ್ದರು. ಅವರು ಅಳುತ್ತಿದ್ದರು. | 6. ಅವರು ನಗುತ್ತಲೂ ಅಳುತ್ತಲೂ ಇದ್ದರು. |
| 7. ರಾಮನು ಜಾಣ. ಕೃಷ್ಣನು ಇನ್ನೂ ಜಾಣ. | 7. ರಾಮನಿಗಿಂತ ಕೃಷ್ಣನು ಜಾಣ. |

## ಅಭ್ಯಾಸ 29

ಇವುಗಳನ್ನು ಒಂದುಗೂಡಿಸಿ:-

**1.** ಹುಡುಗನು ದಡ್ಡನಾಗಿದ್ದನು. ಅವನು ಹಿರಿಯವನು. **2.** ಆಕೆಯ ಮುಖವು ಹೊಳೆಯುತ್ತಿತ್ತು. ಅದು ಚಂದ್ರನಂತಿತ್ತು. **3.** ಕಳ್ಳನು ಆ ಪೆಟ್ಟಿಗೆಯನ್ನು ಒಡೆದನು. ಅದು ಬಲವಾದದ್ದು. ಅದು ಕಬ್ಬಿಣದಿಂದ ಮಾಡಿದ್ದದ್ದು. **4.** ವಸಂತದಲ್ಲಿ ಗಾಳಿ ಬೀಸುತ್ತದೆ. ಅದು ತೆಂಕಲಿಂದ ಬೀಸುತ್ತದೆ. ಆ ಗಾಳಿ ತಂಪಾಗಿರುತ್ತದೆ. **5.** ಅವನಿಗೆ ಒಂದು ಬಹುಮಾನವು ದೊರಕಿತು. ಅದಕ್ಕೆ ಬಹಳ ಬೆಲೆ. **6.** ಒಂದು ನಗರವಿತ್ತು. ಅದರ ಹೆಸರು ಅಮರಾವತಿ. ಅಲ್ಲಿ ದೊರೆ ಇದ್ದನು. ಅವನ ಹೆಸರು ಅಮರಶೇಖರನು. ಆತನು ರಾಜ್ಯವಾಳುತ್ತಿದ್ದನು.

ಆತನು ಸುಖದಿಂದ ಇರುತ್ತಿದ್ದನು. 7. ಅವನು ಮೊದಲೇ ಕಷ್ಟಪಡುತ್ತಿದ್ದನು. ಈಗ ಇನ್ನೂ ಕಷ್ಟಪಡುತ್ತಿದ್ದಾನೆ. 8. ಹರಿಶ್ಚಂದ್ರನು ಎಂಥ ಸತ್ಯವಂತನು! ಈಗ ಅಷ್ಟು ಸತ್ಯವಂತರು ಯಾರಿದ್ದಾರೆ? 9. ಈ ಛತ್ರವು ಭೂಮಂಡಲವನ್ನು ಧರ್ಮದಿಂದ ಪರಿಪಾಲನವನ್ನು ಮಾಡುವ ಅರಸಿಗೆ ಯೋಗ್ಯವಾದದ್ದು. ಭೂಮಂಡಲವು ಬ್ರಾಹ್ಮಣ, ಕ್ಷತ್ರಿಯ—ಮುಂತಾದ ಪ್ರಾಣಿಗಳಿಂದ ಕೂಡಿದ್ದು. ಅದು ಸಪ್ತದ್ವೀಪಗಳಿಂದ ಸಮೇತವಾದದ್ದು. 10. ಅವನು ರಥವನ್ನು ಹತ್ತಿದನು. ರಥವು ಸುವರ್ಣಮಯವಾದ ಕಿರುಗಂಟೆಗಳಿಂದ ಅಲಂಕೃತವಾಗಿತ್ತು. ಉತ್ತ ಮಾಶ್ವಗಳಿಂದ ಕೂಡಿತ್ತು. ಖಡ್ಗ, ಗುರಾಣಿ, ಪಾಶ—ಮುಂತಾದ ಸಕಲಾಯುಧಗಳಿಂದ ಪೂರ್ಣವಾಗಿತ್ತು. 11. ಅವನಿಗೆ ಒಬ್ಬ ಪುತ್ರನಿದ್ದನು. ಆವನ ಹೆಸರು ರೋಹಿತಾಶ್ವನು. ಅವನು ಸರ್ವಲಕ್ಷಣ ಸಂಪನ್ನನು. ಆವನು ಸುಂದರನು. 12. ಆಕೆಯೂ ಮರಣವೇ ಲೇಸೆಂದು ನಿಶ್ಚಯಿಸಿದಳು. ಪತಿ ವಿಯೋಗದ ದುಃಖದಿಂದ ಆಕೆಗೆ ಪ್ರಾಣದ ಮೇಲಣ ಜುಗುಪ್ಸೆಯುಂಟಾಯಿತು.

ವಿಶೇಷಣಗಳ ಉಪಯೋಗದಲ್ಲಿ ಎಚ್ಚರಿಕೆ ಇರಬೇಕು. ವಿಶೇಷಣ ಸೂಚಕ ಪ್ರತ್ಯಯಗಳನ್ನು ಅನವಶ್ಯವಾಗಿ ಒಂದಕ್ಕೊಂದು ಜೋಡಿಸಬಾರದು. 'ದೊಡ್ಡವ ಳಾದ', 'ಹಣವುಳ್ಳವರಾದ', 'ಕೊಡತಕ್ಕವನಾದಂಥ', 'ಕಬ್ಬಿಣದ್ದಾದಂಥ' — ಎಂದು ಬರೆಯುವುದಕ್ಕೆ ಬದಲಾಗಿ 'ದೊಡ್ಡ', 'ಹಣವುಳ್ಳ', 'ಕೊಡತಕ್ಕ', 'ಕಬ್ಬಿ ಣದ' —ಎಂದು ಬರೆದರೇಸಾಕು.

## ಅಭ್ಯಾಸ 30

ಇಲ್ಲಿ ವಿಶೇಷಣಗಳ ರೂಪಗಳನ್ನು ಸರಿಮಾಡಿ:—

1. ನವರತ್ನಗಳಿಂದ ಕೆತ್ತಲ್ಪಟ್ಟಿರತಕ್ಕಂಥ ಆ ಚಿನ್ನದಿಂದ ಮಾಡಿದ್ದಾದಸ್ತಂಭವು ಥಳಥಳನೆ ಹೊಳೆಯತಕ್ಕಂಥಾದ್ದಾಗಿತ್ತು. 2. ಬಳಿಕ ಭೂಮಿಪತಿಯಾಗಿರತಕ್ಕಂಥ ಜನಮೇಜಯರಾಯ ನನ್ನು ಕುರಿತು ಋಷೀಶ್ವರನಾಗಿರತಕ್ಕಂಥ ವೈಶಂಪಾಯನನು ಹೀಗೆಂದು ಹೇಳತಕ್ಕಂಥಾವ ನಾದನು. 3. ಜ್ಞಾನವೆಂಬಂಥ ರತ್ನವನ್ನು ಶಿರೋಭೂಷಣವಾಗಿಯುಳ್ಳಂಥ ತಮ್ಮಂಥ ಮಹನೀಯರಲ್ಲಿ ನಮ್ಮಂಥ ಅಲ್ಪಪ್ರಜ್ಞರಾಗಿರತಕ್ಕಂಥವರು ವಿಜ್ಞಾಪಿಸಿಕೊಳ್ಳತಕ್ಕಂಥಾ ದ್ದೇನಿದೆ? 4. ಆ ಪುಸ್ತಕದಲ್ಲಿ ಹಿರಿಯವರಾದಂಥವರಲ್ಲಿ ಕಿರಿಯರಾದಂಥವರೂ ಕಿರಿಯವ ರಾದಂಥವರಲ್ಲಿ ಹಿರಿಯವರಾದಂಥವರೂ ನಡೆದುಕೊಳ್ಳಬೇಕಾಗಿರುವಂಥ ಮಾರ್ಗವು ವಿವರ ವಾಗಿ ಹೇಳಲ್ಪಡತಕ್ಕಂಥಾದ್ದಾಗಿದೆ.

ಎರಡೆರಡು ಸಂಬಂಧಸೂಚಕಗಳನ್ನುಪಯೋಗಿಸುವಾಗ ಅವುಗಳು ಕೂಡಿಸುವ ಕಾರಕಗಳೂ ವಿಶೇಷಣಗಳೂ ಒಂದೇ ಬಗೆಯವಾಗಿರಬೇಕು.

**ಉದಾಹರಣೆ:**

1. ಬೊಂಬಾಯಿಪಟ್ಟಣವು ಹಿಂದೂ ದೇಶದಲ್ಲಿ ಜನಸಂಖ್ಯೆಯಲ್ಲಿ ಎರಡನೆಯದಾಗಿಯೂ ಒಂದೇ ಸಮನಾಗಿ ಅಭಿವೃದ್ಧಿಹೊಂದುತ್ತಲೂ ಇದೆ.

ಇಲ್ಲಿ 'ಎರಡನೆಯದಾಗಿಯೂ' – ಎಂಬ ನಾಮವಿಶೇಷಣಕ್ಕೆ 'ಅಭಿವೃದ್ಧಿ ಹೊಂದುತ್ತಲೂ' –ಎಂಬ ಕ್ರಿಯಾವಿಶೇಷಣನ್ನು ಸೇರಿಸಿದೆ. ಇದು ತಪ್ಪು; 'ಹೊಂದುತ್ತಲೂ' – ಎಂಬುದನ್ನು 'ಹೊಂದುತ್ತಲಿರುವುದಾಗಿಯೂ' –ಎಂದು ತಿದ್ದಬೇಕು.

2. ಇದು ಜಹಜುಗಳು ನಿಲ್ಲುವುದಕ್ಕೂ ವ್ಯಾಪಾರಕ್ಕೂ ಅನುಕೂಲವಾಗಿದೆ.

ಇಲ್ಲಿ ಒಂದು ಕೃದಂತವನ್ನೂ ಒಂದು ನಾಮವಾಚಕವನ್ನೂ ಸೇರಿಸಿದೆ. 'ವ್ಯಾಪಾರವು ಸಾಗುವುದಕ್ಕೂ' ಎಂದಿದ್ದರೆ ಸರಿಯಾಗಿರುವುದು.

3. ಮುತ್ತು, ರತ್ನ–ಬೆಲೆಯುಳ್ಳವು.

ಇಲ್ಲಿ ಇವು ಬೆಲೆಯುಳ್ಳವು' –ಎಂದಿರಬೇಕು.

## ಅಭ್ಯಾಸ 31

ಇಲ್ಲಿರುವ ವಾಕ್ಯಗಳಲ್ಲಿರುವ ಹೆಚ್ಚು ಕುಂದುಗಳನ್ನು ತಿಳಿಸಿ ತಿದ್ದಿರಿ:

1. ನನಗೆ ಇಂಗ್ಲೀಷನ್ನು ಓದಲೂ ಬರೆಯುವುದಕ್ಕೂ ಬರುತ್ತದೆ. 2. ಇದು ತಲೆಗೆ ಹಾಕಿಕೊಳ್ಳುವುದಕ್ಕಾಗಲಿ ಹುಡುಗರಿಗಾಗಲಿ ಬರುತ್ತದೆ. 3. ಬತ್ತ, ಕಬ್ಬು–ಬೆಳೆಯುವ ಭೂಮಿಗಳನ್ನು 'ಗದ್ದೆಗಳು' ಎನ್ನುತ್ತಾರೆ. 4. ತೋಟ ಅಥವಾ ಗದ್ದೆಯನ್ನು ಜಾಗರೂಕತೆಯಿಂದ ನೋಡಿಕೊಳ್ಳುತ್ತಿರಬೇಕು. 5. ಓದುವುದು, ಆಡುವುದು, ಊಟ ಉಪಚಾರ – ನಿಯಮವಾಗಿರಬೇಕು. 6. ಅಶೋಕನು ಬೌದ್ಧದೀಕ್ಷೆಯನ್ನು ಧರಿಸಿದ ಮೇಲೆ ಎರಡು ನವಿಲುಗಳು, ಸಿಕ್ಕಿದರೆ ಒಂದು ಸಾರಗ–ಹೀಗೆ ಮೂರೇ ಮೂರು ಪ್ರಾಣಿಗಳನ್ನು ಕೊಂದು ಅಡಿಗೆಮಾಡಬೇಕೆಂದು ಗೊತ್ತುಮಾಡಿದನು. 7. ಅವನು ತನ್ನ ವೃದ್ಧರಾದ ತಾಯಿತಂದೆಗಳನ್ನಲ್ಲದೆ ಇಬ್ಬರು ಅಕ್ಕಂದಿರ ರಕ್ಷಣೆಯ ಭಾರವನ್ನು ವಹಿಸಲೂ ಬೇಕಾಗಿದೆ. 8. ಈ ಕಬ್ಬಿನ ಜಲ್ಲೆಯು ಹತ್ತರಿಂದ ಹನ್ನೆರಡು ಅಡಿಗಳವರೆಗೂ ಬೆಳೆಯುತ್ತದೆ. 9. ಎಷ್ಟೋ ವಸ್ತುಗಳ ಉಪಯೋಗವು ನಮಗೆ ತಿಳಿಯದೆಯೊ ಕೆಲವು ವಸ್ತುಗಳನ್ನು ಮುಟ್ಟಬಾರದೆಂದು ತಿಪ್ಪೆಯ ಪಾಲುಮಾಡುತ್ತಿರುವುದೂ ನಮ್ಮೆಲ್ಲರಿಗೂ ತಿಳಿದ ವಿಷಯವಾಗಿದೆ.

## (c) ಕೃದಂತಗಳು

ಕ್ರಿಯಾಪದಗಳನ್ನು ಸೇರಿಸಬೇಕಾಗಿರುವಾಗ ಕೃದಂತಗಳನ್ನುಪಯೋಗಿಸುವುದು ಅನುಕೂಲವಾಗಿರುವುದು. ಇಲ್ಲಿ ಕೆಲವು ಉದಾಹರಣೆಗಳನ್ನು ಕೊಟ್ಟಿರುತ್ತದೆ:–

## ಮಾದರಿ ೧

| ಬಿಡಿಯ ವಾಕ್ಯಗಳು | ಒಂದುಗೂಡಿಸಿದ ವಾಕ್ಯ |
|---|---|
| 1. ಆಗ ವಿಶ್ವಾಮಿತ್ರನು ಅಗ್ನಿಯನ್ನು ನಿರ್ಮಾಣಮಾಡಿದನು. ಅದನ್ನು ಅರಣ್ಯದಲ್ಲಿ ಕಾಡುಗಿಚ್ಚಾಗಿ ಬರುವಂತೆ ಮಾಡಿದನು. | 1. ಆಗ ವಿಶ್ವಾಮಿತ್ರನು ಅಗ್ನಿಯನ್ನು ನಿರ್ಮಾಣಮಾಡಿ ಅದನ್ನು ಅರಣ್ಯದಲ್ಲಿ ಕಾಡುಗಿಚ್ಚಾಗಿ ಬರುವಂತೆ ಮಾಡಿದನು. |
| 2. ದೊರೆಯ ಹೆಂಡತಿಯು ಅಳು-ತ್ತಿದ್ದಳು. ಆಕೆ ಅರಮನೆಯಿಂದ ಈಚೆಗೆ ಬಂದಳು. | 2. ದೊರೆಯ ಹೆಂಡತಿಯು ಅಳುತ್ತಾ ಅರಮನೆಯಿಂದ ಈಚೆಗೆ ಬಂದಳು. |
| 3. ಅವನು ಇದಕ್ಕೆ ಏನೂ ಉತ್ತರ ಹೇಳಲಿ. ಅವನು ಸುಮ್ಮನಿದ್ದನು. | 3. ಅವನು ಇದಕ್ಕೆ ಏನೂ ಉತ್ತರ ಹೇಳದೆ ಸುಮ್ಮನಿದ್ದನು. |
| 4. ಗಾಯಕರು ಗಾನಮಾಡುತ್ತಿದ್ದರು. ವಂದಿಗಳು ಹೊಗಳುತ್ತಿದ್ದರು. ರಾಜನು ಪುರವನ್ನು ಪ್ರವೇಶಿಸಿದನು. | 4. ಗಾಯಕರು ಗಾನಮಾಡುತ್ತಿರಲು, ವಂದಿಗಳು ಹೊಗಳುತ್ತಿರಲು, ರಾಜನು ಪುರವನ್ನು ಪ್ರವೇಶಿಸಿದನು. |
| 5. ಕೈಯಲ್ಲಿರುವುದನ್ನೆಲ್ಲ ಕೊಟ್ಟು-ಬಿಡು. ಹಾಗಾದರೆ ನಿನ್ನನ್ನು ಬಿಡುತ್ತೇವೆ. | 5. ಕೈಯಲ್ಲಿರುವುದನ್ನೆಲ್ಲ ಕೊಟ್ಟು-ಬಿಟ್ಟರೆ ನಿನ್ನನ್ನು ಬಿಡುತ್ತೇವೆ. ಅಥವಾ 'ಕೊಟ್ಟು ಬಿಟ್ಟಲ್ಲಿ.' |
| 6. ನೀನು ಏನಾದರೂ ಹೇಳು. ನಿನ್ನನ್ನು ಬೇರೆ ಬಿಡುವುದಿಲ್ಲ. | 6. ನೀನು ಏನು ಹೇಳಿದರೂ ನಿನ್ನನ್ನು ಬೇರೆ ಬಿಡುವುದಿಲ್ಲ |

## ಅಭ್ಯಾಸ 32

(ಇ, ದು, ದರೆ, ಉತ್ತ, ಉತ್ತಲು, ಅದೆ, ಅಲು, ಉದೂ, ಅಲ್ಲಿ—ಎಂಬ ಪ್ರತ್ಯಯದ) ಅವ್ಯಯಕೃದಂತಗಳನ್ನುಪಯೋಗಿಸಿ ಒಂದುಗೂಡಿಸಿ:—

1. ಅವನು ಬಂದನು. ಕೆಲಸ ಕೆಟ್ಟಿತು. 2. ನಾನುಂಡೆನು; ನೀನುಂಡೆ; ಇನ್ನೂ ಮಿಕ್ಕಿದೆ. 3. ಎಲ್ಲಾ ಕಡೆಯಲ್ಲಿಯೂ ನೋಡಿದರು. ದೊಡ್ಡ ದೊಡ್ಡ ಬಂಡೆಗಳೇ ಇದ್ದುವು. 4. ಅವನು ಮೆಲ್ಲಗೆ ಹೋದನು. ಮರೆಯಾಗಿ ನಿಂತನು. ಅತ್ತಿತ್ತ ನೋಡಿದನು. 5. ನೀವು ಮಾತುಕೊಡಬೇಕು. ಹಾಗಾದರೆ ನಿಜ ಹೇಳುತ್ತೇನೆ. 6. ಹಾಸಿಗೆಯನ್ನು ಆಳು ಬಿಚ್ಚಿದನು. ಒಂದು ದೊಡ್ಡ ಸರ್ಪವಿತ್ತು. ಅದು ಬುಸುಗುಟ್ಟುತ್ತ ಎದ್ದಿತು. 7. ಆ ಮುದುಕಿ ಮಾತಾಡಲಿಲ್ಲ. ಸುಮ್ಮನೆ ಕಣ್ಣೀರು ಸುರಿಸುತ್ತಿದ್ದಳು. 8. ಮಗನು ದೊಡ್ಡವನಾಗಲಿ. ಅವನು ಬುದ್ಧಿವಂತನಾಗಲಿ. ಅವನು ಎಲ್ಲವನ್ನೂ ತಾನೇ ನೋಡಿಕೊಳ್ಳಲಿ. ಆಗ ತಂದೆಗೆ ಸಂತೋಷವಲ್ಲವೆ? 9. ತುರುಕರು ಆ ಕಾಲದಲ್ಲಿ ಈ ದಕ್ಷಿಣದೇಶಕ್ಕೆ ಬರುತ್ತಿದ್ದರು. ಕೊಳ್ಳೆ ಹೊಡೆಯುತ್ತಿದ್ದರು. ಜನರನ್ನು ಕೊಲ್ಲುತ್ತಿದ್ದರು. ರಾಜ್ಯವನ್ನು ಹಾಳುಮಾಡಿ ಹೋಗುತ್ತಿದ್ದರು. 10. ಅವನು ಎಲ್ಲವನ್ನೂ

ತಾಳಿಕೊಂಡನು. ಮುಖವನ್ನು ಗಂಟುಹಾಕಿಕೊಂಡನು. ಮಾತಾಡಲಿಲ್ಲ. ದೂರವಾಗಿ ಕೂತಿದ್ದನು. 11. ದುಷ್ಟರು ತಾವು ಕೆಡುತ್ತಾರೆ. ಇತರರನ್ನು ಕೆಡಿಸುತ್ತಾರೆ. 12. ಕಾವೇರಿಯು ಕೊಡಗುಸೀಮೆಯಲ್ಲಿ ಹುಟ್ಟುತ್ತದೆ. ಸ್ವಲ್ಪದೂರ ಪೂರ್ವವಾಹಿನಿಯಾಗುತ್ತದೆ. ಅನಂತರ ಉತ್ತರವಾಹಿನಿ. ಆಮೇಲೆ ಆಗ್ನೇಯಮುಖವಾಗಿ ಹರಿಯುತ್ತದೆ. ಚುಂಚನಕಟ್ಟೆಯಲ್ಲಿ ವೇಗವಾಗಿ ಇಳಿಯುತ್ತದೆ. ಎಡತೊರೆಯ ಮಾರ್ಗವಾಗಿ ಬರುತ್ತದೆ. ಎರಡು ಭಾಗವಾಗುತ್ತದೆ. ಶ್ರೀರಂಗಪಟ್ಟಣವನ್ನು ಬಳಸಿಕೊಳ್ಳುತ್ತದೆ. ಮರಳಿ ಒಂದಾಗಿ ಸೇರುತ್ತದೆ. ತಲಕಾಡಿನ ಮಾರ್ಗವಾಗಿ ಹರಿಯುತ್ತದೆ. ಶಿವನಸಮುದ್ರ ಎಂಬ ಸ್ಥಳದಲ್ಲಿ ಮುನ್ನೂರಡಿಯಷ್ಟು ಧುಮುಕುತ್ತದೆ. ಪೂರ್ವವಾಹಿನಿಯಾಗುತ್ತದೆ. ಮುಂದೆ ಮತ್ತೆ ಎರಡು ಶಾಖೆಗಳಾಗುತ್ತದೆ. ಸಮುದ್ರವನ್ನು ಸೇರುತ್ತದೆ.

## ಮಾದರಿ ೨

| ಬಿಡಿಯ ವಾಕ್ಯಗಳು | ಒಂದುಗೂಡಿಸಿದ ವಾಕ್ಯ |
|---|---|
| 1. ಒಂದು ಮನೆಯನ್ನು ಕಟ್ಟಿಸಬೇಕು. ಅದಕ್ಕೆ ಎಷ್ಟು ಹಿಡಿದೀತು? | 1. ಒಂದು ಮನೆಯನ್ನು ಕಟ್ಟಿಸುವುದಕ್ಕೆ ಎಷ್ಟು ಹಿಡಿದೀತು? |
| 2. ಅವನು ಕೊಡಲಿಯನ್ನು ತರಬೇಕಾಗಿತ್ತು. ಮನೆಗೆ ಹೋದನು. | 2. ಅವನು ಕೊಡಲಿಯನ್ನು ತರುವುದಕ್ಕೆ ಮನೆಗೆ ಹೋದನು. ಅಥವಾ 'ತರಲಿಕ್ಕೆ'. |
| 3. ಕೆಲವರು ಸಿಕ್ಕಿದವರಿಗೆ ದಾನ ಕೊಡುತ್ತಾರೆ. ಇದರಿಂದ ಏನೂ ಪ್ರಯೋಜನವಿಲ್ಲ. | 3. ಸಿಕ್ಕಿದವರಿಗೆ ದಾನಕೊಡುವುದರಿಂದ ಏನೂ ಪ್ರಯೋಜನವಿಲ್ಲ. |
| 4. ನಾನು ಏನನ್ನೋ ಕಂಡೆನು. ಅಪ್ಪಣೆಯಾದರೆ ಅದನ್ನು ಹೇಳುತ್ತೇನೆ. ಒಂದು ಸಂಗತಿ ನಡೆಯಿತು. ಅದನ್ನೂ ಹೇಳುತ್ತೇನೆ. | 4. ಅಪ್ಪಣೆಯಾದರೆ ನಾನು ಕಂಡದ್ದನ್ನೂ[5] ನಡೆದ ಸಂಗತಿಯನ್ನೂ ಹೇಳುತ್ತೇನೆ. |
| 5. ನೀವು ಆ ಮನೆಯಲ್ಲಿ ಮಲಗುತ್ತೀರಿ. ಅಲ್ಲಿ ದೆವ್ವವಿದೆ. | 5. ನೀವು ಮಲಗುವ ಮನೆಯಲ್ಲಿ ದೆವ್ವವಿದೆ. 'ಮಲಗುವಂಥ' ಎಂದರೂ ಆಗುತ್ತದೆ; ಆದರೆ 'ಅಂಥ' ಹೆಚ್ಚು. |

[5] 'ಮಾಡಿದುದನ್ನು', 'ಕಂಡುದನ್ನು', 'ಕೊಟ್ಟುದರಿಂದ', 'ಹೇಳಿದುದರಲ್ಲಿ' – ಎಂದು 'ಉದು' ಪ್ರತ್ಯಯವೇ ಕೃದಂತಗಳಲ್ಲಿರಬೇಕೆಂದು ಕೆಲವರು ಅನ್ನುವರು. ಆದರೆ 'ಉದು' ಎಂಬ ಸರ್ವನಾಮದಂತೆ 'ಉದು' ಎಂಬ ಪ್ರತ್ಯಯವೂ ಹೋಗಿ ಹೊಸಕನ್ನಡದಲ್ಲಿ ಅದರ ಸ್ಥಾನವನ್ನು 'ಅದು' ಆಕ್ರಮಿಸುತ್ತಿರುವುದು; ಮತ್ತು ಇದಕ್ಕೆ ಕೃದಂತಗಳ ಮುಂದೆ 'ಇದ್ದು', 'ಅದ್ದು' –ಎಂಬ ಆದೇಶಗಳು ಹೆಚ್ಚು ಉಪಯೋಗವಾಗುತ್ತಿರುವುವು.

## ಅಭ್ಯಾಸ 33

ನಾಮಕೃದಂತಗಳನ್ನುಪಯೋಗಿಸಿ ಒಂದುಗೂಡಿಸಿ:—

1. ಓಲೇಕಾರರು ಮದನನನ್ನು ಹುಡುಕಬೇಕಾಗಿತ್ತು. ಅದಕ್ಕೆ ಬಂದಿದ್ದರು. 2. ನಿನ್ನ ಮನಸ್ಸಿನಲ್ಲಿ ಏನೋ ಇದೆ. ಅದೇನು? 3. ಹುಡುಗರು ಜೊತೆಯಲ್ಲಿರಬೇಕು. ಇದರಿಂದ ಒಬ್ಬರ ಸುಗುಣಗಳನ್ನೊಬ್ಬರು ಕಲಿತುಕೊಳ್ಳಬಹುದು. 4. ನಾನು ಮಾತುಕೊಟ್ಟದ್ದೇನೆ. ಅದಕ್ಕೆ ತಪ್ಪಲಾರೆನು. 5. ಸೌಖ್ಯವನ್ನು ಪಡೆಯಬೇಕೊ? ಇದಕ್ಕಾಗಿ ಹೊರಗೆ ಹುಡುಕಬೇಕಾದುದಿಲ್ಲ. 6. ಅಶೋಕನ ತಮ್ಮನು ಅನುರಾಧಾಪುರದಲ್ಲಿ ಬೋಧಿವೃಕ್ಷದ ರೆಂಬೆಯೊಂದನ್ನು ನೆಟ್ಟನು, ಅದು ಇನ್ನೂ ಬೆಳೆಯುತ್ತಿರುವುದು. 7. ಅಲ್ಲಿ ಪ್ರತಿಸಾಯಂಕಾಲವೂ ಸಂತೆಯು ನೆರೆಯುವುದು. ಆ ಪೇಟೆಯಲ್ಲಿ ಹೂಗಳನ್ನು ಮಾರುತ್ತಾರೆ. 8. ಜಪಾನು ಜನರು ಮೀನು ತಿನ್ನುತ್ತಾರೆ. ಇದಕ್ಕೆ ಮಿತಿಯಿಲ್ಲ. 9. ಪತಿಯ ಸೇವೆಯನ್ನು ಮಾಡಬೇಕು. ಇದೇ ಸ್ತ್ರೀಯರ ಧರ್ಮವು. 10. ನೀನು ಒಂದು ಸಣ್ಣ ಕೆಲಸಮಾಡಿದೆ. ಅದಕ್ಕೆ ಇಷ್ಟು ಪೇಚಾಟವೆ?

### ಮಾದರಿ ೩

| ಬಿಡಿಯ ವಾಕ್ಯಗಳು | ಒಂದುಗೂಡಿಸಿದ ವಾಕ್ಯ |
|---|---|
| 1. ಅವನು ಸತ್ತನು. ಆಮೇಲೆ ರಾಜ್ಯವು ಅನಾಯಕವಾಯಿತು. | 1. ಅವನು ಸತ್ತಮೇಲೆ ರಾಜ್ಯವು ಅನಾಯಕವಾಯಿತು. |

ಹೀಗೆಯೇ ಕಾಲವನ್ನು ಹೇಳುವುದಕ್ಕೆ ಸಂದರ್ಭಾನುಸಾರ 'ಸಾಯುವ-ಮುಂಚೆ', 'ಸಾಯುವುದರೊಳಗೆ', 'ಸತ್ತಾಗ', 'ಸಾಯುವ ಹೊತ್ತಿಗೆ', 'ಸತ್ತಕೂಡಲೆ', 'ಸಾಯುವವರೆಗೆ', 'ಸಾಯುವತನಕ', 'ಸತ್ತಂದಿನಿಂದ', 'ಸತ್ತಾಗಿನಿಂದ, 'ಸಾಯುತ್ತಿದ್ದ ಹಾಗೆಯೆ' – ಎಂಬ ಅವ್ಯಯಗಳನ್ನು ಉಪಯೋಗಿಸಬಹುದು. 'ನಂತರ' ಎಂಬುದು ತಪ್ಪು; ಇದು 'ಅನಂತರ' ಎಂದಿರಬೇಕು.

| | |
|---|---|
| 2. ಅವರನ್ನು ಅಡಗಿಸಬೇಕು ಇಲ್ಲದಿದ್ದರೆ ರಾಜ್ಯಕ್ಕೆ ಉಳಿಗಾಲವಿಲ್ಲ. | 2. ಅವರನ್ನು ಅಡಗಿಸಿದ ಹೊರತು ರಾಜ್ಯಕ್ಕೆ ಉಳಿಗಾಲವಿಲ್ಲ. |

ಹೀಗೆಯೇ 'ಅಡಗಿಸದಿದ್ದರೆ', 'ಅಡಗಿಸಿದಲ್ಲದೆ', 'ಅಡಗಿಸಿದ ಪಕ್ಷಕ್ಕೆ' —ಎಂದೂ ಉಪಯೋಗಿಸಬಹುದು. 'ಅಡಗಿಸಿದ ವಿನಾ',[6]. 'ಅಡಗಿಸಿದ ಹೊರತು'[7] ಎಂದು ಉಪಯೋಗಿಸಕೂಡದು.

---

[6] 'ವಿನಾ' ಎಂಬುದು ಸಂಸ್ಕೃತದ ಅವ್ಯಯವಾದ್ದರಿಂದ ಅದನ್ನು ಕನ್ನಡದಲ್ಲಿ ಉಪಯೋಗಿಸುವುದು ಸರಿಯಲ್ಲ; 'ವಿನಹ', 'ವಿನಃ' —ಎಂಬಿವುಗಳಂತೂ ಅಶುದ್ಧ ರೂಪಗಳೆ.

[7] ಅಡಗಿಸದ ಹೊರತು—ಎಂಬಲ್ಲಿ ಎರಡು ನಿಷೇಧಗಳಿವೆ.

| | |
|---|---|
| 3. ನೀನು ಎಲ್ಲಿದ್ದೀಯೆ? ಅಲ್ಲಿಯೇ ಇರು. | 3. ನೀನು ಇದ್ದಲ್ಲಿರು. ಅಥವಾ 'ಇದ್ದ ಕಡೆ'. |
| 4. ನನಗೆ ಸ್ವಲ್ಪ ತಿಳಿದಿದೆ ಅದನ್ನು ಹೇಳು-ತ್ತೇನೆ. | 4. ನನಗೆ ತಿಳಿದಮಟ್ಟಿಗೆ ಹೇಳುತ್ತೇನೆ. ಅಥವಾ 'ತಿಳಿದಷ್ಟು'. |
| 5. ಗಿಡವೂ ಬೆಳೆಯುತ್ತ ಹೋಗುತ್ತದೆ. ಸೋಗೆಯೂ ಉದುರುತ್ತ ಬರುತ್ತದೆ. | 5. ಗಿಡವು ಬೆಳೆದ ಹಾಗೆಲ್ಲ ಸೋಗೆಯು ಉದುರುತ್ತದೆ. ಅಥವಾ 'ಬೆಳೆ-ದಷ್ಟೂ'. |
| 6. ಮಹಾರಾಜನಿಗೆ ತಿಳಿಯಬೇಕಾಗಿತ್ತು. ಅದಕ್ಕೆ ಹೀಗೆ ಮಾಡಿದೆನು. | 6. ಮಹಾರಾಜನಿಗೆ ತಿಳಿಯುವುದಕ್ಕೋ-ಸ್ಕರ ಹೀಗೆ ಮಾಡಿದೆನು. |
| 7. ನೀವು ಹೇಗೆ ಹೇಳುತ್ತೀರಿ? ಅದರಂತೆ ಮಾಡುತ್ತೇನೆ. | 7. ನೀವು ಹೇಳಿದಹಾಗೆ ಮಾಡುತ್ತೇನೆ. ಅಥವಾ 'ಹೇಳಿದಂತೆ'. |
| 8. ಇರುವೆಗಳು ಬರಕೂಡದು. ಅದಕ್ಕೆ ಗಿಡಗಳ ಬದಿಯಲ್ಲಿ ಬೂದಿಯನ್ನು ಚೆಲ್ಲುವರು. | 8. ಇರುವೆಗಳು ಬರದಂತೆ ಗಿಡಗಳ ಬದಿಯಲ್ಲಿ ಬೂದಿಯನ್ನು ಚೆಲ್ಲುವರು. ಅಥವಾ 'ಬರದ ಹಾಗೆ'. |

## ಅಭ್ಯಾಸ 34

(ಯಾವಾಗ? ಹೇಗಾದರೆ? ಎಲ್ಲಿ? ಎಷ್ಟು? ಏಕೆ? ಹೇಗೆ? ಎಂಬುದನ್ನು ತಿಳಿಸುವ) ಅವ್ಯಯಗಳಿಂದ ಕೂಡಿದ ಕೃದಂತಗಳನ್ನುಪಯೋಗಿಸಿ ಒಂದುಗೂಡಿಸಿ:—

1. ಯುದ್ಧವು ಮುಗಿಯಿತು. ಸೂರ್ಯನು ಮುಳುಗಿದ್ದನು. 2. ಒಂದು ಸಲ ಹುಡುಗರು ಹೊರಗೆ ಹೋಗಲಿ. ಅವರನ್ನು ಮತ್ತೆ ಒಳಕ್ಕೆ ಬಿಡುವುದಿಲ್ಲ. 3. ನಿನಗೆ ಎಷ್ಟು ಸಿಕ್ಕಿದೆ? ಅಷ್ಟನ್ನು ತೆಗೆದುಕೊಂಡು ಬಾ. 4. ಅವನು ಒಂದು ಕಡೆ ಕೂರುತ್ತಾನೆ. ಅಲ್ಲಿ ಬಹಳ ಹೊತ್ತು ಕೂರುವುದಿಲ್ಲ. 5. ನೀವು ಹೊರಟುಹೋದಿರಷ್ಟೆ. ಯಾವ ಯಾವ ಊರನ್ನು ನೋಡಿದಿರಿ? 6. ಕರ್ಣನೂ ಅರ್ಜುನನೂ ಗುರುಗಳ ಬಳಿಯಲ್ಲಿ ವಿದ್ಯಾಭ್ಯಾಸಮಾಡುತ್ತಿದ್ದರು. ಅವರಿಬ್ಬರಿಗೂ ಪೈಪೋಟಿಯು ಮೊದಲಾಯಿತು. 7. ನಾನು ಹಣವನ್ನು ಕೊಟ್ಟೆನಷ್ಟೆ. ನೀವು ಹಾಗೆಯೇ ತೆಗೆದುಕೊಂಡು ಹೋಗಬೇಕಾಗಿತ್ತು. 8. ಸಣ್ಣ ಹುಡುಗರು ಕತ್ತಲೆಯಲ್ಲಿ ಹೋಗಲಿಕ್ಕೆ ಅಂಜುತ್ತಾರೆ. ಮನುಷ್ಯರು ಸಾವಿಗೆ ಅಂಜುತ್ತಾರೆ. 9. ಹುಡುಗರಿಗೆ ದುಃಖವಾಗುತ್ತದೆ. ಅವರು ಮತ್ತಷ್ಟು ಅಳುತ್ತಾರೆ. 10. ಗಾಳಿ ಹೇಗೆ ಬರುತ್ತದೆ? ಹಾಗೆಯೆ ತೂರಿಕೊ. 11. ರಾಮನನ್ನು ತೋರಿಸು. ಇಲ್ಲದಿದ್ದರೆ ನಿನ್ನನ್ನು ಬಿಡುವುದಿಲ್ಲ. 12. ಎಷ್ಟು ಆಯಿತು? ಅಷ್ಟೇ ಆಗಲಿ. 13. ಅವರು ಹೋಗುತ್ತಿದ್ದರು. ಹಾಗೆಯೇ ದಾರಿ ಇಕ್ಕಟ್ಟಾಯಿತು. 14. ಎಲ್ಲರೂ ಕೇಳಲಿ. ಗಟ್ಟಿಯಾಗಿ ಕೂಗು. ಹಾಗಾದರೆ ಮಾತ್ರ ನಿನಗೆ ಸಹಾಯವು ದೊರಕೀತು. 15. ಆ ಹುಡುಗನನ್ನು ಕಳುಹಿಸಿಕೊಡಲಿ. ಇದಕ್ಕಾಗಿ ಅವರ ತಂದೆಗೆ ಬರೆಸಿದೆ. 16. ಅವನ ಮಾತು ಕೇಳು

ವುದೆ! ಮಣ್ಣುತಿನ್ನುವುದು ಮೇಲು. 17. ಬೆಂಕಿಮಾಡುವುದಕ್ಕೆ ಚಕ್ಕಮುಕ್ಕಿಯನ್ನು ಕುಟ್ಟಿಕುಟ್ಟಿ ಸಾಕಾಗುತ್ತಿದ್ದರು. ಅದಕ್ಕಿಂತ ಇದು ಮತ್ತೂ ಸುಲಭಮಾರ್ಗ.

## ಅಭ್ಯಾಸ 35

ಯಾವುದಾದರೊಂದು ಬಗೆಯಲ್ಲಿ ಈ ವಾಕ್ಯಗಳನ್ನು ಒಂದುಗೂಡಿಸಿ ಮಾತುಗಳನ್ನು ಕಡಿಮೆಮಾಡಿ ಬರೆಯಿರಿ:—

(ಮಾದರಿ: ಮರುದಿನ ಸಂಜೆಯಾಗಲು ಸುಲ್ತಾನನು ಮಂತ್ರಿಯನ್ನು ಜೊತೆಯಲ್ಲಿ ಕರೆದುಕೊಂಡು ಬೇಟೆಯಾಡುವುದಕ್ಕೆ ಹೊರಟನು)

1. ಮರುದಿನ ಸಂಜೆಯಾಯಿತು. ಸುಲ್ತಾನನು ಮಂತ್ರಿಯನ್ನು ಜೊತೆಯಲ್ಲಿ ಕರೆದುಕೊಂಡನು. ಬೇಟೆಯಾಡುವುದಕ್ಕೆ ಹೊರಟನು. 2. ಇಬ್ಬರೂ ಹಾದಿಯಲ್ಲಿ ಹೋಗುತ್ತಿದ್ದರು. ಎರಡು ಗೂಗೆಗಳು ಮಾತಾಡುತ್ತಿದ್ದವು. ಅವು ತಮ್ಮೊಳಗೆ ಮಾತಾಡುತ್ತಿದ್ದುವು. ಅವು ಒಂದು ಮರದ ಮೇಲೆ ಇದ್ದುವು. ಅವು ಕೂತುಕೊಂಡಿದ್ದುವು. 3. ಸಮುದ್ರದ ಮಟ್ಟದಿಂದ ಮೇಲಕ್ಕೆ ಹೋಗೋಣ. ಅಷ್ಟಷ್ಟು ವಾಯುವಿನ ಒತ್ತುವಿಕೆಯು ಕಡಿಮೆಯಾಗುವುದು. ಇದರಿಂದ ಕೊಳವೆಯ ಪಾದರಸವು ಕೆಳಕ್ಕಿಳಿಯುತ್ತದೆ. 4. ಎಲ್ಲಾ ಲೋಹಗಳೂ ಪೃಥ್ವಿಯಲ್ಲಿವೆ. ಅಲ್ಯುಮಿನಿಯಂ ಲೋಹಾಂಶವು ಮಾತ್ರ ಹೆಚ್ಚಾಗಿದೆ. 5. ಅರಸರು ಪರದೇಶಗಳ ಮೇಲೆ ದೌಡುಮಾಡುತ್ತಾರೆ. ಅವರಿಗೆ ಬಹಳ ಆಶೆ ಇರುವುದು. ಅವರು ರಾಜ್ಯವನ್ನು ಬೆಳೆಸಬೇಕಾಗಿರುವುದು. ದೊಡ್ಡಸ್ತಿಕೆಯನ್ನು ಹೆಚ್ಚಿಸಬೇಕಾಗಿರುವುದು. ಕೀರ್ತಿಯನ್ನು ಹೆಚ್ಚಿಸಬೇಕಾಗಿರುವುದು. 6. ಅನಂತರದಲ್ಲಿ ವಸಿಷ್ಠಋಷೀಶ್ವರನು ಸಭೆಯಿಂದ ಹೊರಟನು. ಅಯೋಧ್ಯಾ ಪಟ್ಟಣಕ್ಕೆ ತೆರಳಿದನು. ಹರಿಶ್ಚಂದ್ರ ಮಹಾರಾಜನನ್ನು ಕಂಡನು. ಆತನಿಂದ ಮಾಡಲ್ಪಟ್ಟ ಸತ್ಕಾರವನ್ನು ಪರಿಗ್ರಹಿಸಿದನು. ಆನಂತರ ದೇವಸಭೆಯಲ್ಲಿ ನಡೆದ ವೃತ್ತಾಂತವನ್ನೆಲ್ಲ ಆತನಿಗೆ ಶ್ರುತಪಡಿಸಿದನು. 7. ಸಮಯವು ಹೀಗಿತ್ತು. ಆ ಬ್ರಾಹ್ಮಣನು ಚಂದ್ರಮತಿಗೆ ಹಗ್ಗವನ್ನು ಕಟ್ಟಿದನು. ಆಕೆಯ ಕೈಗೆ ಕಟ್ಟಿದನು. ಆತನ ಹೆಸರು ಕಾಲಕೌಶಿಕನು. ಹರಿಶ್ಚಂದ್ರನು ನೋಡುತ್ತಿದ್ದನು. ಆಗಲೇ ಅವಳನ್ನು ಕಶೆಯಿಂದ ಪ್ರಹರಿಸಿದನು. ಪಶುಗಳನ್ನು ಹಿಡಿದುಕೊಂಡು ಹೋಗುತ್ತಾರಷ್ಟೆ; ಹಾಗೆ ಅವಳನ್ನು ಎಳೆದುಕೊಂಡು ಹೋದನು. 8. ರಾಮಜೋಯಿಸನು ಈ ಮಾತನ್ನು ಕೇಳಿದನು. ಸುಮತಿಯ ಒಳ್ಳೆಯತನಕ್ಕೆ ಸಂತೋಷಪಟ್ಟನು. ಅವನು ಅರಮನೆಗೆ ಹೋದನು. ಅನಂಗರಾಜನನ್ನು ಕಂಡನು. ನಡೆದ ಸಂಗತಿಯನ್ನೆಲ್ಲ ಹೇಳಿದನು. 9. ಚಾರುದತ್ತನು ಅಲ್ಪನಾಗಿ ಕಾಣುತ್ತಾನೆ. ಅವನು ಎಂಥ ರಹಸ್ಯಗಳನ್ನು ಬಲ್ಲನು! 10. ಒಳ್ಳೆಯ ನೀರಿರಬೇಕು. ಅಂಥ ಕೆರೆಯಾಗಬೇಕು. ಅದಕ್ಕೆ ಏನು ಮಾಡಬೇಕು? 11. ಬೆಕ್ಕಿನ ಮರಿಗಳು ಮನೆಗಳಲ್ಲಿರುತ್ತವೆ. ಇದನ್ನು ಎಲ್ಲರೂ ನೋಡಿದ್ದಾರೆ. ರಾಗಿಯ ಪೈರು ಹೊಲದಲ್ಲಿರುತ್ತದೆ. ಇದನ್ನೂ ಎಲ್ಲರೂ ನೋಡಿದ್ದಾರೆ. 12. ಮೇರಿನ ಎಂಬುದು ವಿಹಾರಮಾರ್ಗ. ಇದು ಸಮುದ್ರತೀರದಲ್ಲಿದೆ. ಕೋಟೆಗೆ ದಕ್ಷಿಣಭಾಗದಲ್ಲಿದೆ. ಮಾರ್ಗವು ಮನೋಹರವಾಗಿದೆ. ಎರಡು ಮೈಲಿಗಳಷ್ಟು ನೀಳವಾಗಿದೆ.

### ಅಭ್ಯಾಸ 36

ಇವುಗಳನ್ನುಪಯೋಗಿಸಿ ವಾಕ್ಯಗಳನ್ನು ಬರೆಯಿರಿ:–

(**ಮಾದರಿ:** ಯೂರೋಪಿನಲ್ಲಿಯೂ ಏಷಿಯಾಖಂಡದ ಕೆಲವು ಭಾಗಗಳಲ್ಲಿಯೂ ಕಲ್ಲಿದ್ದಲು ಹೇರಳವಾಗಿ ಸಿಕ್ಕುತ್ತದೆ.)

(a) 1. ಯೂರೋಪಿನಲ್ಲಿಯೂ ಏಷಿಯಾಖಂಡದ ಕೆಲವು ಭಾಗಗಳಲ್ಲಿಯೂ 2. ಬಾಗಿಲಿಗೂ ಚಪ್ಪರಕ್ಕೂ, 3. ಕೆಲವನ್ನು ಬಲ್ಲವರಿಂದ ಕಲಿಯುವುದರಿಂದಲೂ ಕೆಲವನ್ನೂ ತಾನೇ ತಿಳಿದುಕೊಳ್ಳುವುದರಿಂದಲೂ. 4. ಉಣ್ಣುವುದಕ್ಕೆ ಅನ್ನವನ್ನೂ ಉಡುವುದಕ್ಕೆ ಬಟ್ಟೆಯನ್ನೂ. 5. ಧೈರ್ಯಶಾಲಿಗಳಾಗಿಯೂ ಉದಾರಿಗಳಾಗಿಯೂ. 6. ಯುದ್ಧ ಕಾಲದಲ್ಲಿಯಾಗಲಿ ಮಿಕ್ಕ ಕಾಲದಲ್ಲಿಯಾಗಲಿ. 7. ವ್ಯಾಪಾರದಲ್ಲಿಯೂ ಐಶ್ವರ್ಯದಲ್ಲಿಯೂ.

(b) 1. ಭರವಸೆಯಿಟ್ಟು. 2. ತಾಮ್ರವನ್ನು ತೇವವಾದ ಸ್ಥಳದಲ್ಲಿಟ್ಟರೆ. 3. ವಿಷಯವನ್ನು ಮರೆಯದೆ. 4. ಆಪತ್ಕಾಲಕ್ಕೆ ಹಣವನ್ನಿಟ್ಟುಕೊಂಡರೆ. 5. ಆ ಕಂಪೆನಿಯು ಮುಳುಗಲು. 6. ಈ ಕಾಗದಪತ್ರಗಳನ್ನು ಪರೀಕ್ಷಿಸಿದಲ್ಲಿ 7. ನಿಮ್ಮಿಂದ ಈಚೆಗೆ ಕಾಗದ ಬರದೆ. 8. ಅವನು ಈ ದುಃಖಕರವಾದ ಸಮಾಚಾರವನ್ನು ಹೇಳುವುದೂ.

(c) 1. ಕೆಲಸಮಾಡುವ. 2. ತನ್ನಲ್ಲಿದ್ದ. 3. ಒಡಂಬಟ್ಟಿದ್ದರಿಂದ. 4. ಕಾಪಾಡಿದ್ದಕ್ಕೆ. 5. ಕಂಡದ್ದರಲ್ಲಿ. 6. ಪರೋಪಕಾರವನ್ನು ಮಾಡುವರು. 7. ಕಡಿಯುವ ಕೊಡಲಿ. 8. ಉಡುವ ಸೀರೆ. 9. ಬಂದದ್ದನ್ನು. 10. ಕೊಟ್ಟ ತಪ್ಪಿಗೆ.

(d) 1. ಅವನು ಬಂದಹೊರತು. 2. ಕೊಡುವತನಕ. 3. ನಂಬಿದಲ್ಲದೆ. 4. ತೆಗೆದ ಹಾಗೆಲ್ಲ. 5. ಒಡಂಬಟ್ಟಂತೆ. 6. ಮರುಗುವುದಕ್ಕಿಂತ 7. ಕೊಂಡಾಡುವಹಾಗೆ. 8. ಹಬ್ಬುವುದರೊಳಗೆ. 9. ಮುಟ್ಟುವಮುಂಚೆ.

---

# ಮೂರನೆಯ ಅಧ್ಯಾಯ

## ವಾಕ್ಯಗಳ ವಿಂಗಡ

11. ಎಂಥ ವಾಕ್ಯವಾದರೂ ಅಭಿಪ್ರಾಯಕ್ಕನುಸಾರವಾಗಿ ನೋಡುವಾಗ ಐದರಲ್ಲಿ ಒಂದು ಬಗೆಯಾಗಿರುತ್ತದೆ. ಹೇಗೆಂದರೆ:–

1. ಪುಟ್ಟ ಗಡಿಯಾರಗಳನ್ನು ನ್ಯೂರೆನ್‌ಬರ್ಗೆಂಬ ಪಟ್ಟಣದಲ್ಲಿ ಮೊದಲು ಮಾಡಿದರಂತೆ. (ವಸ್ತು ಬೋಧಕ)
2. ಈ ಮಾತನ್ನು ಯಾರೂ ಒಪ್ಪರು. (ನಿಷೇಧಕ)
3. ಹಿಮಾಲಯಪರ್ವತದ ಉತ್ತರಕ್ಕೆ ಇರುವ ದೇಶವು ಯಾವುದು? (ಪ್ರಶ್ನಾರ್ಥಕ)
4. ಈ ಕಾಗದವನ್ನು ಕಂಡ ಕೂಡಲೆ ಅವರೆಲ್ಲರೂ ಹೊರಟುಬರಲಿ. (ವಿಧ್ಯಾದ್ಯರ್ಥಕ)
5. ವಿದ್ಯಾವಂತರು ಎಷ್ಟು ಧನ್ಯರೊ! (ಭಾವಬೋಧಕ)

## (a) ವಸ್ತುಬೋಧಕವಾಕ್ಯಗಳು

**12.** ಇದ್ದದ್ದನ್ನು ಇದ್ದಂತೆಯೂ ಆಗಬಹುದಾದದ್ದನ್ನು ಆಗಬಹುದಾದಂತೆಯೂ ತಿಳಿಸುವ ವಾಕ್ಯಗಳಿಗೆ ವಸ್ತುಬೋಧಕವಾಕ್ಯಗಳೆಂದು ಹೆಸರು.

ಉದಾಹರಣೆ: ಹಿಮಾಲಯವೇ ಪೃಥ್ವಿಯಲ್ಲೆಲ್ಲ ದೊಡ್ಡ ಪರ್ವತವು
ಆ ಜಟ್ಟಿಯು ಎಂಥ ಬಲಶಾಲಿಯನ್ನಾದರೂ ಗೆದ್ದಾನು.

ವಸ್ತುಬೋಧಕವಾಕ್ಯಗಳನ್ನು ಬರೆದ ಮೇಲೆ ಪೂರ್ಣವಿರಾಮ ಚಿಹ್ನವನ್ನು ಹಾಕಬೇಕು.

## ಅಭ್ಯಾಸ 37[1]

ಈ ಚಿತ್ರದಲ್ಲಿ ನಿಮಗೆ ತೋರುವುದನ್ನೆಲ್ಲ ಬರೆಯಿರಿ. ವಾಕ್ಯಗಳಿಗೆ ಸಂಬಂಧವಿರುವಂತೆ ಜೋಡಿಸಿ ಬರೆಯಿರಿ.

ಮುಂದೆ ಆಗಬಹುದಾದದ್ದನ್ನು ಅಥವಾ ಹಿಂದೆ ಆಗಿರಬಹುದಾದದ್ದನ್ನು ತಿಳಿಸುವ ವಸ್ತು ಬೋಧಕವಾಕ್ಯಗಳಿಗೆ ಸಂಭಾವನಾವಾಕ್ಯಗಳೆಂದು ಹೆಸರು. ಅವುಗಳ ಬೇರೆ ಬೇರೆ ರೂಪಗಳನ್ನು ಇಲ್ಲಿ ಕೊಡುತ್ತೇವೆ:–

(1) ನಾನು ನಿನಗೆ ಏನು ಬೇಕಾದರೂ ಕೊಟ್ಟೇನು.
(2) ಒಂದಾಣೆ ಇದ್ದರೆ ಎಷ್ಟೋ ಕೆಲಸಗಳನ್ನು ಮಾಡಬಹುದು.
(3) ಅವನು ಬಂದಿದ್ದರೆ ಆಗ ದಿಟವು ಗೊತ್ತಾಗುತ್ತಿತ್ತು.
(4) ನಿಮ್ಮ ಹುಡುಗನೇ ಒಂದು ವೇಳೆ ಆ ಪುಸ್ತಕವನ್ನು ತೆಗೆದಿಟ್ಟಿದ್ದಾನು.
(5) ಈ ಕಾರ್ಯವು ಅವರ ಮನೆಯಲ್ಲಿಯೇ ನಡೆದಿರಬೇಕು.
(6) ನಿಮ್ಮ ರಾಯರು ಇಂದೋ ನಾಳೆಯೋ ಬರುವಹಾಗಿದೆ.

---

[1] ಇಲ್ಲಿ ಉಪಾಧ್ಯಾಯರು ಪಾಠಶಾಲೆಯಲ್ಲಿರುವ ಯಾವುದಾದರೊಂದು ಚಿತ್ರವನ್ನು ತರಗತಿಯಲ್ಲಿ ಎಲ್ಲರಿಗೂ ಕಾಣುವಂತೆ ಇಡಬೇಕು. ಎದುರಿಗೆ ಕಾಣುವುದನ್ನೇ ಹುಡುಗರು ವಸ್ತುಬೋಧಕವಾಕ್ಯಗಳಿಂದ ತಿಳಿಸಬೇಕು.

[ಇಲ್ಲಿ (1)ನೆಯ ಮತ್ತು (2)ನೆಯ ರೂಪಗಳು ಮುಂದೆ ನಡೆಯಬಹುದಾದ ದ್ದನ್ನು ತಿಳಿಸುತ್ತವೆ. (3)ನೆಯ ವಾಕ್ಯವು ಹಿಂದೆ ನಡೆಯಬಹುದಾಗಿದ್ದು ನಡೆಯದೆ ಹೋದದ್ದನ್ನು ಹೇಳುತ್ತದೆ. (4)ನೆಯ ಮತ್ತು (5)ನೆಯ ವಾಕ್ಯಗಳು ಹಿಂದೆ ನಡೆದಿರ ಬಹುದೆಂದು ತೋರುವುದನ್ನು ತಿಳಿಸುವುವು. (6)ನೆಯ ವಾಕ್ಯದಲ್ಲಿ ನಡೆಯಬಹು ದಾದದ್ದೆಂದು ತೋರುವುದನ್ನು ತಿಳಿಸಿದೆ.]

## ಅಭ್ಯಾಸ 38

ಇಲ್ಲಿ ತಕ್ಕ ಸಂಭಾವನಾರ್ಥಕವಾದ ವಿಧೇಯಗಳನ್ನು ಗೀಟುಹಾಕಿರುವ ಕಡೆ ಜೋಡಿಸಿ ಬರೆಯಿರಿ:–

ಜರ್ಮನಿಯವರಿಗೂ ನಮ್ಮವರಿಗೂ ಈಗ ನಡೆದಿರುವ ಯುದ್ಧದಲ್ಲಿ ಈಚೀಚೆಗೆ ನಮ್ಮವರಿಗೇ ಜಯ–ತೋರುವುದು. ಜರ್ಮನಿಯವರಿಗೆ ಮೊದಮೊದಲು ಆದಂತೆ ಎಲ್ಲೆ ಲ್ಲಿಯೂ ಅನುಕೂಲಗಳೇ ದೊರಕಿದ್ದರೆ ಇಷ್ಟರಲ್ಲಿ ಅವರು ನಮ್ಮ ಸೀಮೆಯವರೆಗೂ– ಶತ್ರು ಗಳು ಹಿಮ್ಮೆಟ್ಟುತ್ತಿರುವುದರಿಂದ ಕೆಲವರು ಅವರಿಗೆ–ಊಹಿಸುವರು; ಆದರೆ ಮತ್ತೆ ಕೆಲವರು ಯುದ್ಧದಲ್ಲಿ ತಂತ್ರಕ್ಕಾಗಿ ಅವರು ಹೀಗೆ ಮಾಡಿದ್ದರೂ–ಅನ್ನುತ್ತಾರೆ. ಇದು ಹೇಗಾದರೂ ಇರಲಿ. ಸದ್ಯಕ್ಕೆ ಬೇಗನೆ ಯುದ್ಧವೊಂದು ಮುಗಿದರೆ ಜನರೆಲ್ಲರೂ ಕ್ಷೇಮ– ಎಷ್ಟೋ ದೇಶ ಗಳಲ್ಲಿ ಮಳೆಯಾಗಿಲ್ಲ, ಬೆಳೆಯಾಗಿಲ್ಲ. ಕ್ಷಾಮವು–ಜನರು ಹೆದರಿದ್ದಾರೆ. ದಿನಸಿಗಳ ಧಾರಣೆ ಗಳ ದಿನದಿನಕ್ಕೆ ಹೆಚ್ಚುತ್ತಲೇ ಇರುವುದರಿಂದ ಮುಂದೆ–ತಿಳಿಯದೆ ಇದೆ.

## (b) ನಿಷೇಧಕವಾಕ್ಯಗಳು

**13.** ಇಲ್ಲವೆಂದಾಗಲಿ ಅಲ್ಲವೆಂದಾಗಲಿ ತಿಳಿಸುವ ವಾಕ್ಯಗಳಿಗೆ ನಿಷೇಧಕವಾಕ್ಯ ಗಳೆಂದು ಹೆಸರು.

ಇವುಗಳ ರೂಪಗಳನ್ನು ಕೆಳಗಿನ ವಾಕ್ಯಗಳಿಂದ ತಿಳಿಯಬಹುದು:–

(1) ಮಕ್ಕಳು ತಂದೆತಾಯಿಗಳ ಉಪಕಾರವನ್ನು ಎಂದಿಗೂ ತೀರಿಸಲಾರರು.

(2) ನನಗೇನೂ ಗೊತ್ತಿಲ್ಲ.

(3) ಮೂರು ಮೂರು ಎಂಟಲ್ಲ.

(4) ರಾಮನು ಹದಿನಾಲ್ಕು ವರ್ಷದವರೆಗೆ ಅಯೋಧ್ಯೆಗೆ ಹೋಗಲಿಲ್ಲ.

(5) ಅವನಿಗೆ ಇನ್ನು ಎಂಟು ವರ್ಷ ಹೇಳಿಕೊಟ್ಟರೂ ತಿಳಿಯುವುದಿಲ್ಲ.

[ಕ್ರಿಯೆಯ ನಿಷೇಧರೂಪವನ್ನೋ 'ಇಲ್ಲ', 'ಅಲ್ಲ'[2] ಎಂಬ ಅವ್ಯಯಕ್ರಿಯೆಗಳನ್ನೋ ಉಪಯೋಗಿಸುವುದರಿಂದ ಈ ವಾಕ್ಯಗಳಾಗುತ್ತವೆ. ಕ್ರಿಯಾಪದದ ನಿಷೇಧರೂಪವು ವರ್ತಮಾನದಲ್ಲಿ ಮಟ್ಟಿಗೆ ಉಪಯೋಗವಾಗುತ್ತದೆ; ಇದರ ಪ್ರಯೋಗವು ಹೊಸಕನ್ನಡದಲ್ಲಿ ಕಡಿಮೆಯಾಗುತ್ತಿರುವುದು.]

ನಿಷೇಧಕವಾಕ್ಯಗಳ ಮುಂದೆಯೂ ಪೂರ್ಣವಿರಾಮವನ್ನು ಹಾಕಬೇಕು.

## ಅಭ್ಯಾಸ 39

ಇಲ್ಲಿರುವ ವಾಕ್ಯಗಳ ಅಭಿಪ್ರಾಯಗಳನ್ನು ತಿಳಿಸುವ ನಿಷೇಧರೂಪದ ವಾಕ್ಯಗಳನ್ನು ಬರೆಯಿರಿ. (**ಮಾದರಿ:** ನಾಯಿ ಜೀವಿಸದ ಕಡೆಯೇ ಇಲ್ಲ.)

### ನಾಯಿ

ನಾಯಿ ಎಲ್ಲಾ ಕಡೆಯಲ್ಲಿಯೂ ಜೀವಿಸುವುದು. ಅದು ಏನು ಬೇಕಾದರೂ ತಿನ್ನುವುದು. ಸಾಕಿದ ಪ್ರಾಣಿಗಳಲ್ಲೆಲ್ಲ ನಾಯಿಯೊಂದಕ್ಕೇ ಯಜಮಾನನಲ್ಲಿ ಹೆಚ್ಚು ಪ್ರೀತಿ. ರಾತ್ರಿಯಲ್ಲಿ ಬಹಳ ಎಚ್ಚರಿಕೆಯಿಂದ ಇರುತ್ತದೆ. ಹೊಸಬರು ಯಾರು ಬಂದರೂ ಸಂಶಯಪಡುತ್ತದೆ. ಮನೆಯಲ್ಲಿ ನಾಯಿ ಇದ್ದದ್ದರಿಂದಲೇ ಎಷ್ಟೋ ಜನರು ಧನವನ್ನೂ ಪ್ರಾಣವನ್ನೂ ಉಳಿಸಿಕೊಂಡಿರುತ್ತಾರೆ. ಹೀಗೆ ನಾಯಿಯನ್ನು ಸಾಕುವುದರಿಂದ ಪ್ರಯೋಜನವಿದ್ದೇ ಇದೆ.

## ಅಭ್ಯಾಸ 40

ಇಲ್ಲಿರುವ ವಾಕ್ಯಗಳ ಅಭಿಪ್ರಾಯವು ಹೆಚ್ಚುಕಡಿಮೆಯಾಗದಂತೆ ಎರಡೆರಡು ನಿಷೇಧವಿರುವ ವಾಕ್ಯಗಳಾಗಿ ಬರೆಯಿರಿ:–

(**ಮಾದರಿ:** ಇಷ್ಟು ಬರೆದದ್ದಕ್ಕೂ ಪ್ರಯೋಜನವಿಲ್ಲದೆ ಇಲ್ಲ.)

1. ಇಷ್ಟು ಬರೆದದ್ದಕ್ಕೂ ಪ್ರಯೋಜನವಿದ್ದೇ ಇದೆ. 2. ಪಾಠಶಾಲೆಯಲ್ಲಿ ಗಡಿಯಾರವು ಇದ್ದೇ ಇರುವುದು. 3. ಎಲ್ಲರೂ ನಿನ್ನನ್ನು ಹಾಸ್ಯ ಮಾಡಿಯೇ ಮಾಡುವರು. 4. ಈ ಕೆಲಸಕ್ಕೆ ತಕ್ಕ ಯೋಗ್ಯತೆಗಳು ನಮ್ಮ ಹುಡುಗನಲ್ಲಿ ಇದ್ದೇ ಇವೆ. 5. ಕೆರೆಯ ಏರಿಯು ಒಡೆದುಕೊಂಡೇ ಬಿಟ್ಟಿತು. 6. ನನಗೂ ಈ ವಿಷಯವು ತಿಳಿದೇ ಇತ್ತು. 7. ಆ ಹುಡುಗನು ನಮ್ಮ ಗುಟ್ಟನ್ನು ಮನೆಯ ಯಜಮಾನನಿಗೆ ತಿಳಿಸಿಯೇಬಿಟ್ಟನು. 8. ಇಷ್ಟು ಹಿಟ್ಟಿಗೆ ನಾಲ್ಕು ದುಡ್ಡಾದರೂ ಸಿಕ್ಕುವುದು.

---

[2] 'ಅಲ್ಲ' ಎಂಬ ಅವ್ಯಯವಿದ್ದ ಮಾತ್ರಕ್ಕೆ ನಿಷೇಧಾರ್ಥಕವಾಕ್ಯವಾಗದು. ಉದಾಹರಣೆ: (1) ನನಗೆ ರೂಪಾಯಿ ಕೊಡುತ್ತೇನೆಂದೆಯಲ್ಲ, ಕೊಡು. (2) ಅವರೆಲ್ಲ ಹೋಗಿಬಿಟ್ಟರಲ್ಲ! (3) ಶೆಟ್ಟರೆ, ಒಂದು ಪದಾರ್ಥ ಬೇಕಾಗಿದೆಯಲ್ಲ! ಈ ಮೂರು ವಾಕ್ಯಗಳಲ್ಲಿಯೂ 'ಅಲ್ಲ' ಎಂಬ ಮಾತಿಗೆ ಬೇರೆ ಬೇರೆ ಅರ್ಥವಿದೆ.

## (c) ಪ್ರಶ್ನಾರ್ಥಕವಾಕ್ಯಗಳು

**14.** ಅಭಿಪ್ರಾಯವನ್ನು ಕೇಳುವ ವಾಕ್ಯಗಳಿಗೆ ಪ್ರಶ್ನಾರ್ಥಕ ವಾಕ್ಯಗಳೆಂದು ಹೆಸರು.

ಇವುಗಳನ್ನು ಬರೆಯುವ ಕ್ರಮವನ್ನು ಹಿಂದೆಯೇ (3ನೆಯ ಪುಟದಲ್ಲಿ) ತಿಳಿಸಿದೆ. ಪ್ರಶ್ನೆಯ ರೂಪದಲ್ಲಿರುವ ವಾಕ್ಯಗಳನ್ನು ಬೇರೆ ಅರ್ಥದಲ್ಲಿಯೂ ಉಪಯೋಗಿಸುವುದುಂಟು. ಹೇಗೆಂದರೆ:–

1. ಇಷ್ಟಕ್ಕೆ ಸಿಟ್ಟುಮಾಡಿಕೊಳ್ಳಬಹುದೆ? (ಆಕ್ಷೇಪ)

2. ನಾನಂತೂ ಗೆದ್ದೆನೊ? ಇನ್ನೇನಾದರೂ ಆಗಲಿ. (ಒಪ್ಪಿಗೆಕೇಳುವುದು)

[1ನೆಯ ವಾಕ್ಯದಲ್ಲಿ 'ಸಿಟ್ಟುಮಾಡಿಕೊಳ್ಳಬಾರದು'[3] ಎಂದು ಆಕ್ಷೇಪರೂಪವಾಗಿ ತಿಳಿಸಿದೆ. 2ನೆಯ ವಾಕ್ಯದಲ್ಲಿ 'ನಾನು ಗೆದ್ದೆನು ಎಂಬುದು ಎಲ್ಲರಿಗೂ ಗೊತ್ತು, ಹಾಗೆಯೇ ನಿನಗೂ ಗೊತ್ತು' –ಎಂಬ ತನ್ನಭಿಪ್ರಾಯಕ್ಕೆ ಒಪ್ಪಿಗೆಯನ್ನು ಕೇಳಿದೆ.]

ಪ್ರಶ್ನಾರ್ಥಕವಾಕ್ಯಗಳ ಮುಂದೆ ಪ್ರಶ್ನಚಿಹ್ನೆಯನ್ನು ಹಾಕಬೇಕು.

### ಅಭ್ಯಾಸ 41

ಇಲ್ಲಿರುವ ಪ್ರಶ್ನೆಗಳಲ್ಲಿ ದಮಯಂತಿಯ ಅಭಿಪ್ರಾಯವು ತೋರುವಂತೆ ಪ್ರಶ್ನೆಗಳಿಲ್ಲದ ಹಾಗೆ ರೂಪಾಂತರದಲ್ಲಿ ಮಹಾವಾಕ್ಯವನ್ನು ಬರೆದಿಡಿ:–

"ಎಲೈ ಬಾಹುಕನೆ, ಪೂರ್ವದಲ್ಲಿ ನಿರ್ಜನವಾದ ಅರಣ್ಯದಲ್ಲಿ ಮಲಗಿದ್ದ ಸ್ತ್ರೀಯನ್ನು ಬಿಟ್ಟು ಹೋದ ಒಬ್ಬ ಧರ್ಮಜ್ಞನಾದ ಪುರುಷನನ್ನು ನೀನು ಬಲ್ಲೆಯ? ಮಾರ್ಗಾಯಾಸದಿಂದ ಬಳಲಿ ನಿದ್ರೆ ಮಾಡುತ್ತಿದ್ದ ನಿರಪರಾಧಳಾದ ತನ್ನ ಪ್ರಿಯ ಪತ್ನಿಯನ್ನು ಪುಣ್ಯಶ್ಲೋಕನಾದ ನಳಮಹಾರಾಜನೊಬ್ಬನು ಹೊರತು ಮತ್ತೊಬ್ಬನು ಬಿಟ್ಟು ಹೋದಾನೆ? ಹೀಗೆ ನನ್ನೊಬ್ಬಳನ್ನೇ ಅರಣ್ಯದಲ್ಲಿ ಬಿಟ್ಟು ಹೋದನಲ್ಲ! ಆತನಿಗೆ ತಿಳಿಯದೆ ನಾನೇನು ಅಪರಾಧವನ್ನು ಮಾಡಿದ್ದೇನು? ನನ್ನ ಸ್ವಯಂವರ ಕಾಲದಲ್ಲಿ ಇಂದ್ರಾದಿದೇವತೆಗಳು ಬಂದು ಪ್ರಾರ್ಥಿಸಿದರೂ ಅವರನ್ನು ಬಿಟ್ಟು ಆತನನ್ನೇ ನಾನು ವರಿಸಿದೆನು. ಆತನು ಮಾತ್ರ ತನ್ನಲ್ಲಿಯೇ ಅನುರಕ್ತಳಾಗಿ ತನ್ನನ್ನೇ ಅನುವರ್ತಿಸಿಕೊಂಡಿದ್ದ ಪುತ್ರವತಿಯಾದ ನನ್ನನ್ನು ಹೇಗೆ ಬಿಟ್ಟು ಹೋದನು? ಆತನು ಅಗ್ನಿಸಾಕ್ಷಿಕನಾಗಿ ನನ್ನ ಪಾಣಿಗ್ರಹಣವನ್ನು ಮಾಡಿಕೊಂಡು ದೇವತೆಗಳ ಮುಂದೆ 'ನಿನ್ನನ್ನು ನಾನು ಬಿಡುವವನಲ್ಲ' ಎಂದು ಹೇಳಿದ ಸತ್ಯವಚನವು ಎಲ್ಲಿ ಹೋಯಿತು?"

---

[3] ಆಕ್ಷೇಪವನ್ನು ತಿಳಿಸುವ ಪ್ರಶ್ನೆಯ ರೂಪದ ವಾಕ್ಯಗಳನ್ನು ಮಾರ್ಪಡಿಸುವಾಗ ನಿಷೇಧಕವಾಕ್ಯಗಳನ್ನು ಉಪಯೋಗಿಸಬೇಕು.

## ಅಭ್ಯಾಸ 42

ಇಲ್ಲಿ ಮಾತನಾಡುವವನ ಅಭಿಪ್ರಾಯವು ತೋರುವಂತೆ ವಾಕ್ಯಗಳನ್ನು ಮಾರ್ಪಡಿಸಿರಿ:—

1. ಪೂರ್ವಕ್ಕೆ ಪಾಂಡವರು ಕೌರವರ ಕಪಟದ್ಯೂತದಲ್ಲಿ ಸೋತು ಅರಣ್ಯಕ್ಕೆ ಹೋದರಷ್ಟೆ? 2. ಇದೆಲ್ಲ ಅವರ ಆಸ್ತಿಯಲ್ಲವೆ? 3. ಅವರು ನಿಮ್ಮನ್ನು ಆಗಾಗ್ಗೆ ಆಲೋಚನೆ ಕೇಳುತ್ತಿರುವುದಿಲ್ಲವೊ? 4. ನಮ್ಮ ನಾಯಿ ಅವನನ್ನು ಕಡಿಯಲಿಲ್ಲವಷ್ಟೆ? 5. ಈ ವರ್ಷ ಅಳಿಯಂದಿರನ್ನು ಕರೆಯಿಸುವುದಿಲ್ಲವೆ? 6. ನೀವು ನಮ್ಮಿಂದ ತಂದ ಸಾಲಕ್ಕೆ ವರ್ಷವರ್ಷಕ್ಕೆ ಬಡ್ಡಿಯನ್ನು ಕೊಡುತ್ತಿಲ್ಲವಲ್ಲವೆ? 7. ಹೀಗೆ ಯಾರು ತಾನೆ ಹೇಳಿಯಾರು? 8. ಅವನು ಓದಿದನೋ ಆಡಿದನೋ ಯಾರು ಬಲ್ಲರು? 9. ಆ ಹಾಳುಹುಡುಗನನ್ನು ಎಲ್ಲಿ ಹುಡುಕಲಿ? 10. ತಮ್ಮಂಥವರು ಹೀಗೆ ಹೇಳಬಹುದೆ? 11. ಅವನು ಆ ಗ್ರಂಥವನ್ನು ತಿಳಿದು ಕೊಳ್ಳುವುದೆ? ಎಲ್ಲಿಂದೆಲ್ಲಿಗೆ? 12. ಮುತ್ತು ಹುಳಿತರೆ ಜೋಳಕ್ಕೆ ಕಡಿಮೆಯೆ?

## ಅಭ್ಯಾಸ 43

ಇಲ್ಲಿರುವ ವಾಕ್ಯಗಳ ಅಭಿಪ್ರಾಯವು ಚೆನ್ನಾಗಿ ತೋರುವಂತೆ ಅವುಗಳನ್ನು ಪ್ರಶ್ನೆಯ ರೂಪಕ್ಕೆ ತಿರುಗಿಸಿ:—

1. ಇಷ್ಟರಲ್ಲಿಯೇ ಯಜಮಾನರು ಬರುವರು. 2. ಅವರು ನಿನ್ನನ್ನು ಸುಮ್ಮನೆ ಬಿಡುವುದಿಲ್ಲ. 3. ಆಗಲಾದರೂ ನಿಜವನ್ನು ಹೇಳುತ್ತೀಯೆ. 4. ಆದುದರಿಂದ ಈಗಲೇ ಇದ್ದದ್ದನ್ನು ತಿಳಿಸಿಬಿಡುವುದು ಒಳ್ಳೆಯದು. 5. ಇಲ್ಲದಿದ್ದರೆ ನಿನಗೆ ಒಳ್ಳೆಯದಾಗಲಾರದು. 6. ನಂಬಿದವರನ್ನು ಯಾರೂ ಕೈಬಿಡುವುದಿಲ್ಲ. 7. ನಿನ್ನಂತೆಯೇ ನಾನೊಬ್ಬ ಮನುಷ್ಯನು. 8. ನಿಜವನ್ನು ಹೇಳಿದರೆ ಮಾನವನ್ನು ಕಾಯುತ್ತೇನೆ.

## (d) ವಿಧ್ಯಾದ್ಯರ್ಥಕವಾಕ್ಯಗಳು

15. **'ವಿಧ್ಯಾದ್ಯರ್ಥಕವಾಕ್ಯಗಳು'** ಎಂದರೆ ಅಪ್ಪಣೆ ಮುಂತಾದ ಅರ್ಥವುಳ್ಳ ವಾಕ್ಯಗಳು. ಈ ವಾಕ್ಯಗಳು ಅಪ್ಪಣೆ, ಬುದ್ಧಿಯಮಾತು, ಔತಣ, ಸೂಚನೆ, ಬೇಡುವುದು, ಕೇಳಿಕೊಳ್ಳುವುದು, ಹಾರೈಕೆ, ಬಯ್ಗುಳು, ಒಪ್ಪಿಗೆ, ಊಹೆ, ಉದ್ದೇಶ, ಇಟ್ಟುಕೊಂಡ ಪಕ್ಷ—ಮುಂತಾದ ಎಷ್ಟೋ ಅರ್ಥಗಳಲ್ಲಿ ಉಪಯೋಗವಾಗುತ್ತವೆ. ಸಂದರ್ಭದಿಂದ ಆಯಾ ವಾಕ್ಯದ ಅರ್ಥವನ್ನು ಕಂಡುಹಿಡಿಯಬೇಕು.

ಇವುಗಳ ರೂಪಗಳನ್ನು ಇಲ್ಲಿ ಕೊಟ್ಟಿರುತ್ತದೆ:—

(1) ಅವನು ಬಹುಕಾಲ ಬದುಕಲಿ! (ಹಾರೈಕೆ)

(2) ಅವನ ಮನೆಗೆ ಬೆಂಕಿ ಬೀಳ! (ಬಯ್ಗುಳು)

(3) ಎಲೋ, ಈ ಕೂಡಲೆ ಚಾವಡಿಗೆ (ಗ್ರಾಮಪಂಚಾಯ್ತಿ) ಹೋಗು. (ಅಪ್ಪಣೆ)

(4) ನಮ್ಮ ಮನೆಗೆ ಈ ದಿನ ಊಟಕ್ಕೆ ಬಾರಯ್ಯ. (ಔತಣ)

(5) ಆ ಪುಸ್ತಕವನ್ನು ತೆಗೆದುಕೊ. (ಕೆಲಸಹೇಳುವಿಕೆ)

(6) ಎಲ್ಲಿ ಆ ಪುಸ್ತಕವನ್ನು ನೋಡೋಣ (ಉದ್ದೇಶ)

(7) ಈ ಕಾಗದವನ್ನು ಕಂಡಕೂಡಲೆ ಹೊರಟುಬರುವುದು. (ಪ್ರೇರಣೆ)

['ಬರತಕ್ಕದ್ದು' ಅಥವಾ 'ಬರಬೇಕು'
—ಎಂದರೂ ಆಗುತ್ತದೆ.]

(8) ಎಲ್ಲರೂ ಒಳಕ್ಕೆ ಬರಬಹುದು. (ಅನುಮತಿ)

[ಮೇಲಿನ ವಾಕ್ಯಗಳನ್ನು ನೋಡಿದರೆ ಕ್ರಿಯಾಪದ ವಿಧ್ಯಾದ್ಯರ್ಥಕ ರೂಪವನ್ನಾಗಲಿ ಅದೇ ಅರ್ಥವನ್ನು ಕೊಡುವ ಸಂಯುಕ್ತರೂಪಗಳನ್ನಾಗಲಿ ವಿಧೇಯದಲ್ಲಿ ಉಪಯೋಗಿಸುವುದರಿಂದ ಈ ವಾಕ್ಯಗಳಾಗುತ್ತವೆಯೆಂದು ಗೊತ್ತಾಗುತ್ತದೆ.]

ವಿಧ್ಯಾದ್ಯರ್ಥಕವಾಕ್ಯದ ಕಡೆಯಲ್ಲಿ ಪೂರ್ಣವಿರಾಮವನ್ನು ಹಾಕಬೇಕು. ವಿಶೇಷವಾದ ಸಿಟ್ಟೇ ಮುಂತಾದ ಭಾವಗಳನ್ನು ತಿಳಿಸುವಾಗ **ಭಾವಬೋಧಕಚಿಹ್ನೆ** (!) ಯನ್ನು ಹಾಕಬೇಕು.

## ಅಭ್ಯಾಸ 44

ಈ ವಾಕ್ಯಗಳು ಅಪ್ಪಣೆ ಮುಂತಾದ ಯಾವ ಅರ್ಥದಲ್ಲಿ ಉಪಯೋಗವಾಗಿವೆ?

1. ಏಳಿ, ಎಚ್ಚರವಾಗಿ, ದೊಡ್ಡವರನ್ನು ಸೇರಿ ತಿಳಿದುಕೊಳ್ಳಿರಿ. 2. ಈ ವಾಕ್ಯವನ್ನು ಬರೆಯಿರಿ. 3. ನಮ್ಮ ಸೈನ್ಯವು ಬೆಂಗಳೂರ ಕಡೆಗೆ ನಡೆಯಲಿ. 4. ಇತ್ತಲಾಗಿ ಬನ್ನಿ, ಸ್ವಾಮಿ. 5. ಎಲ್ಲಿ ನೋಡೋಣ, ಹಿಡಿ! 6. ದೇವ, ನಮಗೆ ಒಳ್ಳೆಯ ಬುದ್ಧಿಯನ್ನು ಕೊಡು. 7. ಅವನ ಮನೆ ನೆಲಮಟ್ಟವಾಗ! 8. ಅವನು ಬಂದರೂ ಬರಲಿ, ಬಿಡು. 9. ಅವರು ಎಲ್ಲಿದ್ದಾರೋ ತಿಳಿದವರು ಹೇಳಲಿ. 10. ಆದದ್ದು ಆಗಲಿ. 11. ಗಿಡವು ಬೆಳೆಯಲಿ, ನೀರುಹಾಕು. 12. ಇಲ್ಲಿ ಬಾ, ನಿನಗೆ ಆಗುತ್ತದೆ. 13. ನಡೆ ಆಚೆ!

ಮಾಡುವುದು ಸರಿಯಲ್ಲವೆಂದು ಕೆಲಸವನ್ನು ಬಿಡಿಸುವ ಅಥವಾ ಎಚ್ಚರಿಕೆಯನ್ನು ಕೊಡುವ ವಾಕ್ಯಗಳಿಗೆ **ನಿವಾರಣಾರ್ಥಕವಾಕ್ಯಗಳೆಂದು** ಹೆಸರು. ಇವುಗಳ ಕ್ರಿಯೆಗಳು ನಿಷೇಧವೇ ಮುಂತಾದ ರೂಪಗಳಲ್ಲಿಯೇ ಇದ್ದರೂ ವಿಧ್ಯಾದ್ಯರ್ಥಕವಾಕ್ಯಗಳ ವಿರೋಧವನ್ನು ತಿಳಿಸುವ ಈ ವಾಕ್ಯಗಳನ್ನು ವಿದ್ಯಾರ್ಥಿಗಳ ಲಕ್ಷ್ಯಕ್ಕೆ ತರುವುದಕ್ಕಾಗಿ ಇಲ್ಲಿ ಬೇರೆ ಕೊಟ್ಟಿರುತ್ತದೆ:—

1. ಹಾಗೆ ಮಾಡಬೇಡ. 2. ಹುಡುಗರು ಯಾವಾಗಲೂ ಆಡುತ್ತಿರಬಾರದು. 3. ಅವರ ಹತ್ತಿರಕ್ಕೆ ಹೋಗದಿರು. (ಹೋಗದಿರಬೇಕು) 4. ಇಲ್ಲಿ ಮಧ್ಯಾಹ್ನದಲ್ಲಿ ಯಾರೂ ಓಡಾಡ ಕೂಡದು. 5. ಈ ಕೆಲಸಕ್ಕೆ ನೀನು ಕೈಹಾಕಲಾಗದು. 6. ಆಳು ಅಲ್ಲಿಗೆ ಹೋಗದಿರಲಿ.

ನಿವಾರಣಾರ್ಥಕವಾಕ್ಯಗಳ ಕೊನೆಯಲ್ಲಿಯೂ ಪೂರ್ಣವಿರಾಮವಿರಬೇಕು.

## ಅಭ್ಯಾಸ 45

ಪೋಸ್ಟಾಫೀಸಿಗೆ (ಅಂಚೆಯ ಕಚೇರಿಗೆ) ಹೋಗಿ ನಿಮ್ಮ ಹೆಸರಿಗೆ ಬಂದಿರುವ ಒಂದು ಭಾಂಗಿಯನ್ನು[4] ತರುವುದಕ್ಕೆ ನಿಮ್ಮ ಆಳಿಗೆ ಹೇಳಿಕಳುಹಿಸಬೇಕಾಗಿದೆ. ಆಳಿಗೆ ನೀವು ಹೇಳುವ ವಾಕ್ಯಗಳನ್ನು ಬರೆಯಿರಿ. ಅವನಿಗೆ ಹೋಗುವ ದಾರಿ. ಆಫೀಸಿನಲ್ಲಿ ಎಷ್ಟು ಹೊತ್ತಿಗೆ ಇರಬೇಕು, ಅಲ್ಲಿ ಹೇಗೆ ನಡೆಸಿಕೊಳ್ಳಬೇಕು, ಎಷ್ಟು ಹೊತ್ತಿನಲ್ಲಿ ಹಿಂತಿರುಗಿ ಬರಬೇಕು– ಮೊದಲಾದುದರ ತಿಳಿವಳಿಕೆಯನ್ನು ಕೊಡಿರಿ. (ಆದಷ್ಟು ವಿಧ್ಯಾದ್ಯರ್ಥಕವಾಕ್ಯಗಳನ್ನೂ ನಿವಾರಣಾರ್ಥಕವಾಕ್ಯ ಗಳನ್ನು ಉಪಯೋಗಿಸಿ.)

## ಅಭ್ಯಾಸ 46

ಪುಸ್ತಕಗಳನ್ನು ಜೋಕೆಯಾಗಿಟ್ಟುಕೊಳ್ಳುವುದಕ್ಕೆ ಬೇಕಾದ ತಿಳಿವಳಿಕೆಯನ್ನು ನಿಮ್ಮ ತಮ್ಮ ನಿಗೆ ವಿವರವಾಗಿ ಕೊಡಬೇಕಾದರೆ ಉಪಯೋಗಿಸಬೇಕಾಗುವ ವಾಕ್ಯಗಳನ್ನು ಬರೆಯಿರಿ.

## ಅಭ್ಯಾಸ 47

ಇಲ್ಲಿರುವ ವಾಕ್ಯಗಳಲ್ಲಿ ವಿಧ್ಯಾದ್ಯರ್ಥಕವಾಕ್ಯಗಳು ಯಾವುವು? ಅವುಗಳ ಅರ್ಥ ವನ್ನು ಬೇರೆ ರೂಪದಿಂದ ತಿಳಿಸುವುದಕ್ಕಾದರೆ ಆ ರೂಪದಲ್ಲಿ ಬರೆಯಿರಿ:–

### ಹೊಸ ಅಕ್ಕಿಯ ಅನ್ನ

ಹೊಸ ಅಕ್ಕಿಯ ಅನ್ನವನ್ನು ಮಾಡುವುದಕ್ಕೆ ಸ್ವಲ್ಪ ಎಚ್ಚರಿಕೆಯು ಇರಬೇಕು. ಒಲೆಯ ಮೇಲಿರುವ ತಪ್ಪಲೆಯಲ್ಲಿ ನೀರು ಕುದಿಯುತ್ತಲೂ ಅಕ್ಕಿಯನ್ನು ತೊಳೆದು ಕೂಡಲೆ ತಪ್ಪಲೆಯ ಒಳಕ್ಕೆ ಹಾಕಬೇಕು. ಸ್ವಲ್ಪ ತುಪ್ಪವನ್ನೂ ಹಾಕಿರಬೇಕು. ಇದರಿಂದ ಅನ್ನವು ಮೆಡ್ಡೆಯಾಗದಿರು ವುದು. ಅಕ್ಕಿ ಮುಕ್ಕಾಲುವಾಸಿ ಬೆಂದಮೇಲೆ ಗಂಜಿಯನ್ನು ಬಸಿಯಬೇಕು. ಆಮೇಲೆ ಸ್ವಲ್ಪ ತುಪ್ಪವನ್ನು ಹಾಕಿ ಒಲೆಯ ಮೇಲೆ ಸ್ವಲ್ಪಹೊತ್ತು ಮುಚ್ಚಿಡಬೇಕು. ಆಗ ಉರಿಯೇನೂ ಬೇಕಿರು ವುದಿಲ್ಲ; ಕೆಂಡದ ಕಾವಿಗೇ ಅನ್ನವಾಗುವುದು. ಅನ್ನವಾದ ಕೂಡಲೆ ಕೆಳಕ್ಕಿಳಿಸಬೇಕು; ಇಲ್ಲ ದಿದ್ದರೆ ತಳಹತ್ತುವುದು.

---

[4] ಭಾಂಗಿಯನ್ನು ತರುವ ರೀತಿ' ಎಂಬ ತಲೆಬರಹವನ್ನು ವಾಕ್ಯರಚನೆಯ ಮೇಲುಗಡೆಯಲ್ಲಿ ನಡುಗಡೆಗೆ ಸರಿಯಾಗಿ ದಪ್ಪಕ್ಷರದಲ್ಲಿ ಬರೆದು ಕೆಳಗಡೆ ಗೀಟುಹಾಕಬೇಕೆಂಬುದನ್ನು ಹುಡುಗರಿಗೆ ತಿಳಿಸಬೇಕು.

## ಅಭ್ಯಾಸ 48

ರೈಲಿಗೆ ಹೋಗಬೇಕಾಗಿರುವವರಿಗೆ ಬುದ್ಧಿವಾದವನ್ನು ಹೇಳುವ ಕೆಲವು ವಾಕ್ಯಗಳನ್ನು ಬರೆಯಿರಿ. ಇಲ್ಲಿ ಕೊಟ್ಟಿರುವ ವಾಕ್ಯಗಳ ಜೊತೆಗೆ ಅವುಗಳ ಮುಂದೆ ಕೊಟ್ಟಿರುವ ಪದಗಳನ್ನು ಉಪಯೋಗಿಸಿ ಬೇಕಾಗುವ ಬೇರೆ ಮಾತುಗಳನ್ನೂ ಜೋಡಿಸಿಕೊಂಡು ವಾಕ್ಯರಚನೆಯನ್ನು ಪೂರ್ತಿಮಾಡಿ:–

### ರೈಲುಪ್ರಯಾಣಕ್ಕೆ ಸಿದ್ಧತೆ

ಸಾಮಾನುಗಳನ್ನು ಒಬ್ಬೊಬ್ಬರು ಸುಲಭವಾಗಿ ಎತ್ತುವುದಕ್ಕೆ ಬರುವಂತೆ ರಾತ್ರಿಯೇ ಗಂಟುಗಳನ್ನು ಮಾಡಿ ಕಟ್ಟಿಟ್ಟುಕೊಳ್ಳಿ; ಇಲ್ಲದಿದ್ದರೆ ಸಮಯದಲ್ಲಿ ಗಡಿಬಿಡಿಯಾಗಿ ಏನಾದರೂ ಮರೆತೀರಿ. ನೀವೆಲ್ಲರೂ ನಾಳೆ ಬೆಳಗ್ಗೆ ಐದು ಘಂಟೆಯೊಳಗೇ ಏಳಿ. ಕೂಡಲೇ ಸ್ನಾನವನ್ನು ಮಾಡಿಕೊಳ್ಳಿ......ತಿಂಡಿಯನ್ನು ಮಾಡಿಡಲಿ......ಗೊತ್ತು ಮಾಡಿಕೊಂಡು ಬಾ. ಜಟ್ಕ ಬಂತೋ ಇಲ್ಲವೊ......ಟಿಕೆಟ್ಟುಗಳನ್ನು ತೆಗೆದುಕೊಂಡಿರಲಿ......ತಲಪುವಂತೆ ಹೋಗಿ......ರೈಲು ಹೊರಡುತ್ತದೆ; ಆದುದರಿಂದ ಏಳೂಕಾಲಿಗೆ......ಸಾಧ್ಯವಾದ ಮಟ್ಟಿಗೆ ರೈಲಿನಲ್ಲಿ ಎಲ್ಲರೂ ಒಂದೇ ಗಾಡಿಯಲ್ಲಿ......

## ಅಭ್ಯಾಸ 49[5]

ನಾಲ್ಕು ಜನಕ್ಕೆ ಕುಡಿಯುವುದಕ್ಕೆ ಆಗುವಷ್ಟು ಕಾಫಿಯನ್ನು ಮಾಡಬೇಕಾದರೆ ಏನೇನು ಮಾಡಬೇಕೆಂಬ ವಿವರವನ್ನು – ಯಾವ ವಿಷಯವನ್ನು ಎಚ್ಚರಿಕೆಯಿಂದ ನೋಡಿಕೊಳ್ಳಬೇಕೆಂಬುದಕ್ಕೆ ಬೇಕಾದ ಸೂಚನೆಗಳನ್ನೂ ಕೊಟ್ಟು ನಿಮ್ಮ ಪರಿಚಾರಕರ ಹುಡುಗನಿಗೆ ಒಂದು ಚೀಟಿಯನ್ನು ಬರೆಯಿರಿ. ಕಾಫಿಮಾಡುವ ಬಗೆಯನ್ನೂ ವಿವರಿಸಬೇಕು. ವಿಧ್ಯಾದ್ಯರ್ಥಕವಾಕ್ಯಗಳನ್ನೂ ನಿವಾರಣಾರ್ಥಕವಾಕ್ಯಗಳನ್ನೂ ಉಪಯೋಗಿಸಿ.

## ಅಭ್ಯಾಸ 50[5]

ಗಡಗಡೆಯ ಬಾವಿಯಲ್ಲಿ ಒಂದು ತಂಬಿಗೆ ನೀರುಸೇದುವ ಕ್ರಮವನ್ನು ನಿಮ್ಮ ಸ್ನೇಹಿತನಿಗೆ ತಿಳಿಸಿಕೊಡಬೇಕಾಗಿದೆ. ಆ ಸಂದರ್ಭದಲ್ಲಿ ನೀವು ಉಪಯೋಗಿಸುವ ವಾಕ್ಯಗಳನ್ನು ಬರೆಯಿರಿ. ಬೇಕಾದ ಎಚ್ಚರಿಕೆಯನ್ನೂ ಕೊಟ್ಟಿರಬೇಕು.

---

[5] 'ಕಾಫಿ ಮಾಡುವ ರೀತಿ', 'ಬಾವಿಯಲ್ಲಿ ನೀರುಸೇದುವ ಕ್ರಮ' ಎಂದು ತಲೆಬರಹವನ್ನು ವಾಕ್ಯರಚನೆಯ ಮೇಲುಗಡೆಯಲ್ಲಿ ನಡುಗಡೆಗೆ ಸರಿಯಾಗಿ ದಪ್ಪಕ್ಷರದಲ್ಲಿ ಬರೆದು ಕೆಳಗಡೆ ಗೀಟುಹಾಕಬೇಕೆಂಬದನ್ನು ಹುಡುಗರಿಗೆ ತಿಳಿಸಬೇಕು.

## (e) ಭಾವಬೋಧಕವಾಕ್ಯಗಳು

**16.** ಮನಸ್ಸಿನ ಭಾವಗಳನ್ನು ಎದ್ದು ಕಾಣುವಂತೆ ತಿಳಿಸುವ ವಾಕ್ಯಗಳಿಗೆ **ಭಾವ ಬೋಧಕವೆಂದು** ಹೆಸರು. ಇವು ಪ್ರಶ್ನಾರ್ಥಕವಾಕ್ಯಗಳಂತೆಯೂ ನಿಷೇಧಕವಾಕ್ಯಗಳಂತೆಯೂ ಕಾಣುವುವು; ಅರ್ಥದಿಂದ ಇವುಗಳನ್ನು ಭಾವಭೋಧಕವೆಂದು ಗೊತ್ತುಪಡಿಸಬೇಕಾಗುವುದು.

ಈ ವಾಕ್ಯಗಳ ಮುಂದೆ **ಭಾವಭೋಧಕ ಚಿಹ್ನೆ(!)**ಯನ್ನು ಹಾಕಬೇಕು. ಕೆಲವು ಕಡೆ ಪ್ರಶ್ನ ಚಿಹ್ನೆಯಿದ್ದರೂ ಆಗುತ್ತದೆ.

**ಉದಾಹರಣೆ:** ಎಲಾ, ಏನು ಮಾಡಿದೆ!

## ಅಭ್ಯಾಸ 51

ಈ ವಾಕ್ಯಗಳಲ್ಲಿ ಮಾತಾಡುವವನ ಮನಸ್ಸಿನ (ಸುಖ, ದುಃಖ, ಆಶ್ಚರ್ಯ, ಭಯ—ಮುಂತಾದ) ಭಾವಗಳನ್ನು ತಿಳಿಸಿ, ಅರ್ಥವು ಹೆಚ್ಚು ಕಡಿಮೆಯಾಗದಂತೆ ಇವುಗಳನ್ನು ವಸ್ತುಬೋಧಕವಾಕ್ಯಗಳಾಗಿ ಅಥವಾ ನಿಷೇಧಕವಾಕ್ಯಗಳಾಗಿ ಮಾರ್ಪಡಿಸಿರಿ:—

**1.** ಎಲಾ, ಏನು ಮಾಡಿದೆ! **2.** ಅಯ್ಯೋ ದೇವರೆ! ನನಗಿನ್ನೇನುಗತಿ! **3.** ಛೆ! ಇಂಥ ಸ್ನೇಹಿತರೂ ಮೋಸಮಾಡಿದರೆ! **4.** ಆಹ! ಇರುಳು ತಿಳಿದ ಬಾವಿಗೆ ಹಗಲು ಬಿದ್ದ ದಡ್ಡತನಕ್ಕೇನೆನ್ನಬೇಕು! **5.** ಅಯ್ಯೋ! ಅವನು ಸತ್ತೇಹೋದನಲ್ಲ! **6.** ಭಲೆ! ಹೀಗಲ್ಲವೆ ಇರಬೇಕು! **7.** ಶಿವ ಶಿವ! ಅದನ್ನು ಕಿವಿಯಿಂದ ಕೇಳಬಹುದೆ? **8.** ಛೀ! ಎಲ್ಲಿಯ ಮಾತು! **9.** ಪಾಪ! ಹರಿಶ್ಚಂದ್ರನು ಸತ್ಯಕ್ಕಾಗಿ ಏನೇನು ಕಷ್ಟವನ್ನನುಭವಿಸಲಿಲ್ಲ! **10.** ಆ ದಿನದ ವೈಭವವನ್ನು ನಾನೇನು ಹೇಳಲಿ! **11.** ಅಬ್ಬಬ್ಬ! ಎಷ್ಟು ದೊಡ್ಡ ಕಡುಬಪ್ಪ! **12.** ಅಹಹ! ಎಂಥ ಮೋಸವಾಯಿತು! **13.** ಥೂ! ಚಂಡಾಲ! ಸುಳ್ಳು ಬೊಗಳುತ್ತೀಯ! **14.** ಓಹೋ! ಅವರೂ ದಯಮಾಡಿಸಿದ್ದರೇನು? **15.** ಅಸಿಸಿ! ಅದನ್ನು ಮುಟ್ಟುವವರು ಯಾರು?

## ಅಭ್ಯಾಸ 52

ಇಲ್ಲಿರುವ ವಾಕ್ಯಗಳು ಯಾವ ಬಗೆ? ಸಾಧ್ಯವಾದ ಕಡೆಯಲ್ಲಿ ಬೇರೆ ರೂಪಕ್ಕೆ ತಿರುಗಿಸಿ:—

(**ಮಾದರಿ: 1.** ಸ್ವಲ್ಪ ತಮ್ಮ ಕತ್ತರಿ ಕೊಡುತ್ತೀರ? **2.** ಸ್ವಲ್ಪ ತಮ್ಮ ಕತ್ತರಿ ಕೊಡಿ. **3.** ಸ್ವಲ್ಪ ತಮ್ಮ ಕತ್ತರಿ ಬೇಕಾಗಿದೆಯಲ್ಲ!)

"ಎಲೈ ಮಹಾರಾಜನೆ, ನನ್ನ ವಿಷಯದಲ್ಲಿ ನೀನು ಸ್ವಲ್ಪವೂ ಅಪರಾಧವನ್ನು ಮಾಡಿದವನಲ್ಲ. ಹಾಗೆ ನೀನೊಂದು ವೇಳೆ ಅಪರಾಧವನ್ನು ಮಾಡಿದ್ದರೂ ಆ ವಿಷಯದಲ್ಲಿ ನಾನು ಕೋಪ ಮಾಡಿಕೊಳ್ಳುವವನಾದರಲ್ಲವೆ, ಕ್ಷಮಿಸಬೇಕು? ಪೂರ್ವದಿಂದಲೂ ನೀನು ನನಗೆ ಮಿತ್ರ

ನಾಗಿಯೂ ಸಂಬಂಧಿಯಾಗಿಯೂ ಇದ್ದವನು ಇಲ್ಲಿಂದ ಮುಂದಕ್ಕೂ ನೀನು ನನ್ನಲ್ಲಿ ವಿಶೇಷ ವಾದ ಪ್ರೀತಿಯನ್ನು ಇಡಬೇಕು. ನಾನು ಪೂರ್ವದಲ್ಲಿ ನಮ್ಮ ಅರಮನೆಯಲ್ಲಿ ಹೇಗೆ ಸುಖ ವಾಗಿದ್ದೆನೋ ಹಾಗೆಯೇ ನಿನ್ನ ಅರಮನೆಯಲ್ಲಿಯೂ ಬೇಕಾದ ಹಾಗೆ ಸುಖವಾಗಿಯೇ ಇದ್ದೆನು. ಎಲೈ ಮಹಾರಾಜನೆ, ಅಶ್ವಹೃದಯವೆಂಬ ವಿದ್ಯೆ ನಿನ್ನದಾಗಿ ನನ್ನಲ್ಲಿರುವುದು. ಈಗ ನೀನು ಅಪೇಕ್ಷಿಸಿದ ಪಕ್ಷದಲ್ಲಿ ಅದನ್ನು ನಿನಗೆ ಕೊಡುವೆನು."

## ಅಭ್ಯಾಸ 53

ಈ ಕಥೆಯನ್ನು ನೋಡಿಕೊಂಡು ಬರೆಯಿರಿ. ವಾಕ್ಯಗಳು ಮುಗಿಯುವ ಕಡೆಯಲ್ಲಿ ಪೂರ್ಣವಿರಾಮ, ಪ್ರಶ್ನಚಿಹ್ನೆ, ಭಾವಬೋಧಕಚಿಹ್ನೆ—ಇವುಗಳನ್ನು ಹಾಕಿ. ಕಥೆಯನ್ನು ಎರಡು ಮಹಾವಾಕ್ಯಗಳಾಗಿ ವಿಂಗಡಿಸಿ:—

### ಆವೂರಲ್ಲಿ ಮಾಡಿದಂತೆ ಮಾಡಲೊ?

ಒಂದು ದಿನ ಒಬ್ಬ ಮುದುಕಿಯ ಮನೆಗೆ ಒಬ್ಬ ಬ್ರಾಹ್ಮಣನು ಬಂದನು ಅವನಿಗೆ ತುಂಬ ಹಸಿವಾಗಿತ್ತು ಅವನು "ಅಮ್ಮ, ಈ ಕೂಡಲೆ ನನಗೆ ಊಟಕ್ಕೆ ಹಾಕಿರಿ; ಇಲ್ಲದಿದ್ದರೆ ನೋಡಿ ಕೊಳ್ಳಿ, ನಾನು ಆವೂರಿನಲ್ಲಿ ಮಾಡಿದಂತೆ ಮಾಡಬೇಕಾಗುತ್ತದೆ" ಎಂದನು ಅವನು ಮಾತ ನಾಡಿದ ಧ್ವನಿಯನ್ನು ನೋಡಿದರೆ ತುಂಬ ಹೆದರಿಕೆಯಾಗುವಂತಿತ್ತು ಊಟಕ್ಕೆ ಹಾಕದಿದ್ದರೆ ಏನು ಮಾಡಿಬಿಡುವನೋ ಎಂದು ಮುದುಕಿಯು ಸ್ವಲ್ಪವೂ ತಡಮಾಡದೆ ತನಗೋಸ್ಕರ ಮಾಡಿ ಕೊಂಡಿದ್ದ ಅಡಿಗೆಯನ್ನೇ ಬ್ರಾಹ್ಮಣನಿಗೆ ಬಡಿಸಿದಳು ಅವನು ಉಂಡು ತಾಂಬೂಲವನ್ನು ಹಾಕಿ ಕೊಳ್ಳುತ್ತಾ ಕೂತಿರುವಾಗ ಆಕೆಯೂ "ಅಯ್ಯ, ಆವೂರಲ್ಲಿ ಮಾಡಿದಂತೆ ಮಾಡುತ್ತೇನೆಂದೆ ಯಲ್ಲ; ಅಲ್ಲಿ ನೀನು ಮಾಡಿದ್ದೇನು" ಎಂದು ಕುತೂಹಲದಿಂದ ಕೇಳಿದಳು ಆತನು " ಮಾಡುವು ದೇನಮ್ಮ, ಊಟಕ್ಕಿಕ್ಕದಿದ್ದರೆ ಅಲ್ಲಿ ಉಪವಾಸವನ್ನೇ ಮಾಡಿದೆನು" ಎಂದನು ಮುದುಕಿಯು ಘಕಾರನೆ ನಕ್ಕು " ಇಷ್ಟೇನೇ ಒಳ್ಳೆಯ ಕೆಲಸ ಮಾಡಿದೆ" ಎಂದು ಅಡಿಗೆಮಾಡಿಕೊಳ್ಳುವುದಕ್ಕೆ ಒಳಕ್ಕೆ ಹೋದಳು.

## ಅಭ್ಯಾಸ 54

ಈ ಕಥೆಯಲ್ಲಿ ಅರ್ಧವನ್ನು ಬರೆದಿದೆ. ಮಿಕ್ಕ ಅರ್ಧವನ್ನು ನಿಮಗೆ ತಿಳಿದಂತೆ ಪೂರೈಸಿ ವಾಕ್ಯಗಳ ಕೊನೆಯಲ್ಲಿ ಹಾಕಬೇಕಾದ ಲೇಖನಚಿಹ್ನೆಗಳನ್ನು ಹಾಕಿರಿ:—

### ಬೇನೆಬಿದ್ದ ಗಡಿಯಾರ

ಒಂದು ದಿನ ಒಬ್ಬ ಕುರುಬನು ಒಬ್ಬ ವಕೀಲನನ್ನು ಕಳ್ಳರ ಕೈಯಿಂದ ಬಿಡಿಸಿದನು ಈ ಉಪಕಾರಕ್ಕೆ ವಕೀಲನು ಅವನಿಗೆ ಒಂದು ಚಿನ್ನದ ಗಡಿಯಾರವನ್ನು ಬಹುಮಾನವಾಗಿ ಕೊಟ್ಟನು ಗಡಿಯಾರವು 'ಟಕ್! ಟಕ್!' ಎನ್ನುತ್ತಾ ನಡೆಯುತ್ತಿದ್ದುದನ್ನು ಕಂಡು ಕುರುಬನು ಅದು ಒಂದು

ಪ್ರಾಣಿಯಾಗಿರಬೇಕೆಂದು ಭಾವಿಸಿಕೊಂಡನು ಕೀಲುಕೊಡದೆ ಇದ್ದುದರಿಂದ ಎರಡು ಮೂರು ದಿನವಾಗುತ್ತಲೂ ಅದು ನಿಂತುಹೋಯಿತು ಕುರುಬನು ಅದಕ್ಕೇನೋ ಬೇನೆಯಾಗಿರಬೇಕೆಂದು ಅದನ್ನು ಒಬ್ಬ ವೈದ್ಯನ ಬಳಿಗೊಯ್ದನು.

ವೈದ್ಯನು "ಎಲಾ, ಇದನ್ನು ಮೂವತ್ತು ರೂಪಾಯಿಗೆ ಕೊಡುತ್ತೀಯ" ಎಂದನು......

---

# ನಾಲ್ಕನೆಯ ಅಧ್ಯಾಯ

## ಕಾಗದಗಳು

**17.** ಕಾಗದಗಳನ್ನು ಬರೆಯುವಾಗ ಅವುಗಳ ಭಾಗಗಳನ್ನು ವಿಂಗಡಿಸಿ ಗೊತ್ತಾದ ಸ್ಥಳದಲ್ಲಿ ಬರೆಯಬೇಕಾಗುವುದು.

### ಮಾದರಿ 1

(ತಂದೆಗೆ ಬರೆದ ಕಾಗದ)

ಕುಶಲ ಶ್ರೀ ಚಿಕ್ಕಮಗಳೂರು,
12-8-1916.

ತೀರ್ಥರೂಪುರವರ ಸನ್ನಿಧಿಗೆ

ಬಾಲಕ ರಾಮಣ್ಣನು ಮಾಡುವ ಬಿನ್ನಹ. ಅದಾಗಿ ಈವರೆಗೆ ಇಲ್ಲಿ ನಾವೆಲ್ಲರೂ ಕ್ಷೇಮ ದಿಂದಿದ್ದೇವೆ. ಅಲ್ಲಿ ಎಲ್ಲರ ಯೋಗಕ್ಷೇಮಕ್ಕೂ ಆಗಿಂದಾಗ್ಗೆ ಅಪ್ಪಣೆಕೊಡಿಸುತ್ತಾ ಬರಬೇಕಾಗಿ ಬೇಡುತ್ತೇನೆ.

ಸಾಂಪ್ರತ

ನನಗೆ ಈ ವರ್ಷದ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುತ್ತದೆ. ಇನ್ನೊಂದು ವರ್ಷದಲ್ಲಿ ಓದಿದರೆ 'ಸ್ಕೂಲ್ ಫೈನಲ್' ಎಂಬ ಪರೀಕ್ಷೆಯಾಗುತ್ತದೆ. ನಾನು ಚೆನ್ನಾಗಿ ಓದಿಕೊಂಡು ಇರುವುದರಿಂದಲೂ ಇಲ್ಲಿನ ಉಪಾಧ್ಯಾಯರೆಲ್ಲರೂ ಆಯಾ ದಿನದ ಪಾಠಪ್ರವಚನಗಳನ್ನು ನಡೆಸಿಯೇ ತೀರುತ್ತ ಉತ್ತಮವಾದ ರೀತಿಯಲ್ಲಿ ಪಾಠಶಾಲೆಯನ್ನಿಟ್ಟಿರುವುದರಿಂದಲೂ ಆ ಪರೀಕ್ಷೆಯಲ್ಲಿಯೂ ತೇರ್ಗಡೆಯಾದೇನೆಂಬ ಭರವಸೆ ಇರುತ್ತದೆ.

ಸದ್ಯಕ್ಕೆ ಸ್ಕೂಲ್ ಫೀಜಿಗಾಗಿಯೂ ಹೊಸ ಪುಸ್ತಕಗಳಿಗಾಗಿಯೂ ಹದಿನೆಂಟು ರೂಪಾಯಿ ಬೇಕಾಗಿದೆ. ಅನುಕೂಲವಿದ್ದರೆ ದಯವಿಟ್ಟು ಬೇಗ ಕಳುಹಿಸೋಣವಾಗಬೇಕು. ನನ್ನಲ್ಲಿ ದುಡ್ಡು ಇಲ್ಲದಿದ್ದುದರಿಂದ ನಾನು ಇದುವರೆಗೂ ಪುಸ್ತಕಗಳನ್ನು ತೆಗೆದುಕೊಂಡಿಲ್ಲ. ಪಾಠಕ್ಕೆ ಅಡಚಣೆ ಯಾಗಿರುತ್ತದೆ.

ಹೆಚ್ಚಿಗೆ ಸಂಗತಿಗಳಿಗೆ ಹಿಂದಿನಿಂದ ಅರಿಕೆಮಾಡಿಕೊಳ್ಳುತ್ತೇನೆ.

ಇಂತೀಬಿನ್ನಹ,
ರಾಮಣ್ಣ.

## ವಿಚಾರ

ಕಾಗದದಲ್ಲಿ ಅಗತ್ಯವಾಗಿ ಪದ್ಧತಿಯಂತೆ ಸೇರಿಸಬೇಕಾದ ಮಾತುಗಳ ಗುಂಪಿಗೆ **'ಒಕ್ಕಣೆ'** ಎನ್ನುತ್ತಾರೆ. ರೂಢಿಯಾಗಿ ಬರೆಯುವ ಒಕ್ಕಣೆಯನ್ನೆಲ್ಲ ಮೇಲಿನ ಮಾದರಿಯಲ್ಲಿ ತೋರಿಸಿರುತ್ತದೆ. ಈ ವಿಷಯದಲ್ಲಿ ನೆನಪಿಡಬೇಕಾದುದೇನೆಂದರೆ:—

**(1) 'ಕುಶಲ' :** ಸತ್ತ ಸುದ್ದಿಯನ್ನು ಬರೆಯುವ ಕಾಗದಗಳಿಗೆ ಹೊರತು ಮಿಕ್ಕವುಗಳಲ್ಲೆ ಈ ಮಾತನ್ನು ಬರೆಯಬೇಕು. ಬಂಧುಗಳಿಗೆ ಬರೆಯುವ ಕಾಗದದಲ್ಲಿ ಇದನ್ನು ಎಂದಿಗೂ ಮರೆಯ-ಕೂಡದು. 'ಕ್ಷೇಮ' ಎಂದೂ ಬರೆಯುವುದುಂಟು.

**(2) ಶ್ರೀಕಾರ :** ಇದರ ಬದಲು 'ಶ್ರೀರಾಮ', 'ಶ್ರೀಲಕ್ಷ್ಮೀನರಸಿಂಹ ಪ್ರಸನ್ನ'—ಎಂದು ಮೊದಲಾಗಿ ತಮ್ಮ ತಮ್ಮ ಕುಲ ದೇವತೆಯ ಹೆಸರನ್ನು ಬರೆಯುವ ಪದ್ಧತಿಯಿತ್ತು. ಈಗ ಇದು ಕಡಮೆಯಾಗುತ್ತಿದೆ.

**(3) ಸ್ಥಳ, ತಾರೀಖು :** ಪೂರ್ವದಲ್ಲಿ ಊರು ತಾರೀಖುಗಳನ್ನು ಕಾಗದದ ಬಲಗಡೆ ಬರೆಯುವ ರೂಢಿ ಇರಲಿಲ್ಲ; ಆದುದರಿಂದ 'ಈವರೆಗೆ' ಎಂಬುದರ ಸ್ಥಳದಲ್ಲಿ 'ಕಾರ್ತಿಕ ಶುದ್ಧ ದಶಮಿಯವರೆಗೆ ಚಿಕ್ಕಮಗಳೂರಿನಲ್ಲಿ ನಾವೆಲ್ಲರೂ ಕ್ಷೇಮ'—ಎಂದು ಬರೆಯುತ್ತಿದ್ದರು. ಆದರೆ ಊರು, ಬರೆದ ದಿನ—ಇವು ಗೊತ್ತಾಗುವುದಕ್ಕೆ ಈಗಿನ ಪದ್ಧತಿಯೇ ಉತ್ತಮ. 12-8-16 ಎಂಬುದನ್ನು 12 ನೆಯ ತಾರೀಖು, ಆಗಸ್ಟು 1906—ಎಂದೂ ಬರೆಯುವುದುಂಟು.

**(4) ಯಾರಿಗೆ :** ನಾವು ಯಾರಿಗೆ ಬರೆಯಬೇಕೋ ಅವರ ಮರ್ಯಾದೆಗೆ ತಕ್ಕ ಮಾತುಗಳನ್ನು ಸೇರಿಸಿ ಬರೆಯಬೇಕಾಗುವುದು. ಉದಾಹರಣೆಗೆ:—ತಂದೆಗೆ 'ತೀರ್ಥರೂಪರು', ತಾಯಿಗೆ 'ಮಾತೃಶ್ರೀಯವರು',—ಎಂದು ಬರೆಯುತ್ತಾರೆ. ತಂದೆತಾಯಿಗಳ ಹೆಸರನ್ನು ಬರೆಯುವ ರೂಢಿಯಿಲ್ಲ 'ತೀರ್ಥರೂಪು ತಂದೆಯವರು', 'ಮಾತೃಶ್ರೀ ತಾಯಿಯವರು'—ಎಂದೂ ಬರೆಯಕೂಡದು.

**(5) ಯಾರಿಂದ :** ನಮಗಿಂತ ದೊಡ್ಡವರಾದ ನೆಂಟರಿಗೆ ಬರೆಯುವಾಗ ನಮ್ಮ ಹೆಸರಿಗೆ 'ಬಾಲಕ' ಎಂದು ಹಾಕಿಕೊಳ್ಳುವ ರೂಢಿ. ಇದರ ಜೊತೆಗೆ ಯೋಗಕ್ಷೇಮದ ಮಾತುಗಳನ್ನೂ ಜೋಡಿಸುವರು.

(6) 'ಸಾಂಪ್ರತ' : ಇದಕ್ಕೆ ಬದಲು 'ತರುವಾಯ'—ಎಂದೂ ಬರೆಯಬಹುದು. ಅಲ್ಲಿಗೆ ಕಾಗದದ ಪ್ರಾರಂಭದ ಒಕ್ಕಣೆ ಮುಗಿಯಿತು.

(7) ವಿಷಯ : ಬರೆಯಬೇಕಾದ ವಿಷಯವನ್ನು ಹಿಂದೆ ತಿಳಿಸಿದ ರೀತಿಯಲ್ಲಿ ಮಹಾವಾಕ್ಯಗಳಾಗಿ ವಿಂಗಡಿಸಬೇಕು. ಇಲ್ಲಿಯೂ ಯಾರಿಗೆ ಬರೆಯುತ್ತೇವೋ ಅವರಿಗೆ ತಕ್ಕಂತೆ ಗೌರವದ ಮಾತನ್ನು ಉಪಯೋಗಿಸಬೇಕು.

(8) ಇಂತೀಬಿನ್ನಹ : ಇದು ಕಾಗದದ (ಕೊನೆಯ ಮಾತು 'ಬಿನ್ನಹ' ಎಂಬುದಕ್ಕೆ 'ವಿಜ್ಞಾಪನೆ' ಎಂಬ ಬೇರೆಯ ಮಾತನ್ನೂ ಉಪಯೋಗಿಸಬಹುದು. ಆದರೆ 'ಯಾರಿಂದ' ಎಂಬ ಕಡೆ ಇವೆರಡರಲ್ಲಿ ಯಾವ ಮಾತಿರುವುದೋ ಇಲ್ಲಿಯೂ ಅದನ್ನೇ ಉಪಯೋಗಿಸಬೇಕು. ಇದರ ಕೆಳಗೆ ಕಾಗದವನ್ನು ಬರೆದವರ ರುಜು ಇರಬೇಕು.

## ಅಭ್ಯಾಸ 55

ನಿಮ್ಮ ತಂದೆಯವರಿಗೆ ನಿಮ್ಮ ಸ್ಕೂಲಿನ ವಿಷಯವಾಗಿ ಕೆಲವು ಸಂಗತಿಗಳನ್ನು ಬರೆಯಿರಿ. ವಿಷಯವನ್ನು ಮಹಾವಾಕ್ಯಗಳಾಗಿ ವಿಂಗಡಿಸಿರಿ.

## ಅಭ್ಯಾಸ 56[1]

ಮೇಲಿನ ಅಭ್ಯಾಸ ವಿಷಯಗಳಿಗೆ ಒಕ್ಕಣೆಯನ್ನು ಜೋಡಿಸಿ ಕಾಗದವನ್ನು ಬರೆಯಿರಿ. ಮಾದರಿಗಾಗಿ 38ನೆಯ ಪುಟದಲ್ಲಿ ಕೊಟ್ಟಿರುವ ಕಾಗದದಲ್ಲಿ ಭಾಗಗಳನ್ನು ವಿಂಗಡಿಸಿರುವುದನ್ನು ಸಂಶಯವಾದ ಕಡೆ ನೋಡಿಕೊಳ್ಳಬಹುದು. ಕಾಗದದಲ್ಲಿ ಯಾವಾಗಲೂ ಎಡಕ್ಕೆ ಸ್ವಲ್ಪ ಸ್ಥಳವನ್ನು ಬಿಟ್ಟು ಬರೆಯಬೇಕು.

## ಅಭ್ಯಾಸ 57

ನಿಮ್ಮ ತಂದೆಯವರಿಗೆ ನಿಮ್ಮ ಉಪಾಧ್ಯಾಯರ ಪರಿಚಯವನ್ನು ತಿಳಿಸಿ, ಅವರ ಸ್ವಭಾವವನ್ನು ವಿವರಿಸಿ, ಒಂದು ಕಾಗದವನ್ನು ಬರೆಯಿರಿ. ಸರಿಯಾದ ಒಕ್ಕಣೆಯನ್ನು ಜೋಡಿಸಬೇಕು.

---

[1] ಕಾಗದಗಳಿಗೆ ತಕ್ಕ "ನೋಟುಪೇಪರು"ಗಳು ಹುಡುಗರಲ್ಲಿರಬೇಕು. ಅಥವಾ ಅವರು ಬರಿಯ ಕಾಗದದ ಹಾಳೆಗಳನ್ನೇ ಈ ಮಾದರಿಯಲ್ಲಿ ಕತ್ತರಿಸಿಟ್ಟುಕೊಂಡಿದ್ದು ಅದರಲ್ಲಿಯೇ ಕಾಗದವನ್ನು ಬರೆಯಬೇಕು.

## ಅಭ್ಯಾಸ 58

ನಿಮ್ಮ ಭಾವನವರಿಗೆ ಬೇಸಿಗೆಯ ರಜದಲ್ಲಿ ನೀವು ಎಲ್ಲಿಗೆ ಹೋಗಿದ್ದಿರೆಂಬುದನ್ನು ತಿಳಿಸುವುದಕ್ಕೆ ಒಂದು ಕಾಗದವನ್ನು ಬರೆಯಿರಿ. ಅಲ್ಲಿ ನೋಡಿದ ಏನಾದರೊಂದು ವಿಶೇಷ ಸಂಗತಿಯನ್ನು ಕಾಗದಲ್ಲಿ ವಿವರಿಸಿ. (ಒಕ್ಕಣೆಯಲ್ಲಿ 'ತೀರ್ಥರೂಪರವರಿಗೆ'—ಎಂಬುದಕ್ಕೆ 'ತೀರ್ಥರೂಪು' ಶಾಮಣ್ಣ ಭಾವನವರ ಸನ್ನಿಧಾನಕ್ಕೆ— ಎಂಬಂತೆ ಹೆಸರನ್ನೂ ಸೇರಿಸಿ ಬರೆಯಿರಿ.)

## ಅಭ್ಯಾಸ 59

ನಿಮ್ಮ ತಾಯಿಯವರಿಗೆ ನೀವು ಹೇಗೆ ಕಾಲವನ್ನು ಕಳೆಯುತ್ತೀರೋ ತಿಳಿಸಿ ಮತ್ತೇನಾದರೂ ಸಂಗತಿಯಿದ್ದರೆ ಅದನ್ನೂ ಸೇರಿಸಿ, ಒಂದು ಕಾಗದವನ್ನು ಬರೆಯಿರಿ.

18. ಯಾರಿಗೆ ಕಾಗದವನ್ನು ಬರೆಯಬೇಕೋ ಅವರ ಗೌರವಕ್ಕೆ ತಕ್ಕಂತೆ ಇರಬೇಕಾದ ಮೊದಲನೆಯ ಒಕ್ಕಣೆ ಹೇಗೆಂದರೆ:—

### ಗಂಡಸರಿಗೆ

1. ಹಿರಿಯರಿಗೆ: ತೀರ್ಥರೂಪು[2] ಗುಂಡಪ್ಪ ಮಾವನವರ ಚರಣಕಮಲಕ್ಕೆ, ಬಾಲಕ ಕೃಷ್ಣಪ್ಪನ ವಿಜ್ಞಾಪನೆಗಳು.
2. ಕಿರಿಯರಿಗೆ: ಚಿರಂಜೀವಿ ರಾಮಣ್ಣನಿಗೆ, ರಾಮಕೃಷ್ಣಯ್ಯನ ಆಶೀರ್ವಾದಗಳು.

### ಹೆಂಗಸರಿಗೆ

1. ಹಿರಿಯರಿಗೆ: ಮಾತೃಶ್ರೀ ಗೌರಕ್ಕನವರ ಸನ್ನಿಧಿಗೆ, ಬಾಲಕ.....
2. ಕಿರಿಯವರಿಗೆ: ಸೌಭಾಗ್ಯವತಿ ಗೌರಮ್ಮನಿಗೆ ಅಥವಾ ಚಿರಂಜೀವಿ ಸೌಭಾಗ್ಯವತಿ ಗೌರಮ್ಮನಿಗೆ, ರಂಗಣ್ಣನ ಆಶೀರ್ವಾದಗಳು.

### ವಿಧವೆಯರಿಗೆ

1. ಹಿರಿಯರಿಗೆ: ಭಾಗೀರಥೀಸಮಾನರಾದ ಮಾತೃಶ್ರೀಯವರ ಸನ್ನಿಧಿಗೆ, ಭಾಗೀರಥೀಸಮಾನರಾದ ಗಂಗಕ್ಕನವರ ಚರಣನ್ನಿಧಿಗೆ. ಬಾಲಕ...
2. ಕಿರಿಯವರಿಗೆ: ಗಂಗಮ್ಮನಿಗೆ, ರಂಗಣ್ಣನ ಆಶೀರ್ವಾದಗಳು.

---

[2] 'ತೀರ್ಥರೂಪು'—ಇಲ್ಲಿ ರೂಪ ಎಂಬುದರ ತದ್ಭವವು 'ರೂಪು' ಎಂದಾಗಿದೆ.

## ಅಭ್ಯಾಸ 60

ಊರಿಂದ ಹೊರಟು ರೈಲಿನಲ್ಲಿ ಪ್ರಯಾಣಮಾಡಿ ಮತ್ತೊಂದೂರಿಗೆ ಸುಖವಾಗಿ ತಲಪಿದ್ದಕ್ಕೆ ನಿಮ್ಮ ತಾಯಿಯವರಿಗೆ ಒಂದು ಕಾಗದವನ್ನು ಬರೆಯಿರಿ.

## ಅಭ್ಯಾಸ 61

ಸ್ನೇಹಿತ ತಿಮ್ಮಯ್ಯನು ತನ್ನ ಚಿಕ್ಕಪ್ಪನಿಗೆ ನೀವು ಪರೀಕ್ಷೆಯಲ್ಲಿ ತೇರ್ಗಡೆಯಾದಿರೆಂಬುದನ್ನು ಸೂಚಿಸಿ, ಯೋಗಕ್ಷೇಮದ ವಿಚಾರವನ್ನೂ ಸೇರಿಸಿ, ಬರೆದಂತೆ ಒಂದು ಕಾಗದವನ್ನು ಬರೆಯಿರಿ.

## ಅಭ್ಯಾಸ 62

ಚಿಕ್ಕಪ್ಪನು ತಮ್ಮ ಮನೆಯ ಯೋಗಕ್ಷೇಮವನ್ನೂ ತಿಳಿಸಿ ಮೇಲಿನ ಕಾಗದಕ್ಕೆ ಉತ್ತರ ಕೊಟ್ಟಂತೆ ಒಂದು ಕಾಗದವನ್ನು ಬರೆಯಿರಿ.

**19.** ಒಕ್ಕಣೆಯ ಮಾತುಗಳನ್ನು ಸ್ವಲ್ಪಮಟ್ಟಿಗೆ ಬದಲಾಯಿಸಬಹುದು. ಹೇಗೆಂದರೆ:—

1. 'ಚರಣಸನ್ನಿಧಿಗೆ'—ಇದನ್ನು 'ಸಮಕ್ಷಮದಲ್ಲಿ,' 'ಚರಣಸನ್ನಿಧಾನಕ್ಕೆ', 'ಚರಣಕಮಲಂಗಳಿಗೆ', 'ಪಾದಪದ್ಮಂಗಳಿಗೆ', ಎಂದೂ ಬರೆಯುವುದುಂಟು.

**ಸೂ॥** 'ಸಮಕ್ಷಮಕ್ಕೆ', 'ಸಮಕ್ಷೇಮಕ್ಕೆ'—ಇವೆರಡೂ ತಪ್ಪು ರೂಪಗಳು.

2. 'ಸೌಭಾಗ್ಯವತಿ ಲಕ್ಷ್ಮೀದೇವಮ್ಮನಿಗೆ ಆಶೀರ್ವಾದಗಳು'—ಇದನ್ನು 'ಚಿರಂಜೀವಿ ಸೌಭಾಗ್ಯವತಿ ಲಕ್ಷ್ಮೀದೇವಮ್ಮನಿಗೆ.......ಅನೇಕಾಶೀರ್ವಾದಗಳು' ಎಂದು ಹೆಚ್ಚಿಸಿ ಬರೆಯಬಹುದು.

**ಸೂ॥** 'ಆಶೀರ್ವಾದ' ಎಂಬಲ್ಲಿ 'ಶ್ರೀ' ದೀರ್ಘ.

3. 'ಮಾತೃಶ್ರೀಯವರ'—ಎಂಬುದಕ್ಕೆ "ಸೌಭಾಗ್ಯವತಿ ಮಾತೃಶ್ರೀಯವರ" ಎಂದು ಬರೆಯುವುದುಂಟು.

**ಸೂ॥** ವಿಧವೆಯಾಗಿದ್ದರೆ 'ಗಂಗಾಭಾಗಿರಥೀಸಮಾನರಾದ' ಎಂದು ಬರೆಯುವುದು ತಪ್ಪು; 'ಗಂಗಾ' ಎಂಬುದು ಬೇಕಿಲ್ಲ. 'ಮಾತೃಶ್ರೀ'—ಎಂಬುದಕ್ಕೆ 'ಮಾತೋಶ್ರೀ' ಎಂದು ಬರೆಯುವುದೂ ತಪ್ಪು.

4. 'ವಿಜ್ಞಾಪನೆ', 'ಬಿನ್ನಹ', 'ನಮಸ್ಕಾರಗಳು'—ಇವುಗಳಲ್ಲಿ ಯಾವುದಾದರೊಂದನ್ನು ಉಪಯೋಗಿಸಬಹುದು. ಕಾಗದದ ಮೊದಲು, ಕೊನೆ—ಇವೆರಡು ಕಡೆಗಳಲ್ಲಿಯೂ ಒಂದೇ ಮಾತನ್ನು ಉಪಯೋಗಿಸಬೇಕು.

5. 'ಇಂತೀ'—ಎಂಬುದಕ್ಕೆ ಕೆಲವರು 'ಇತೀ'—ಎಂದು ಬರೆಯುವರು. 'ಬಿನ್ನಹ'ಕ್ಕೆ 'ಇತಿ' ಯೂ ಒಪ್ಪುವುದಿಲ್ಲ.

## ಅಭ್ಯಾಸ 63

ಹುಟ್ಟಿದ ಹಬ್ಬಕ್ಕೆ ಸರಿಯಾಗಿ ತಲಪುವಂತೆ ಬೆಂಗಳೂರಿಂದ ರಾಮರಾಯರು ತನ್ನ ಸೋದರಳಿಯ ವೆಂಕಟಸುಬ್ಬಯ್ಯನಿಗೆ ಕೊಡುವಂತೆ ಒಂದು ಪುಟ್ಟ ಗಡಿಯಾರವನ್ನೂ, ಮನೆಗೆ ಸ್ವಲ್ಪ ಕಾಯಿಪಲ್ಯ, ಹೂ—ಇವುಗಳನ್ನೂ ಕಳುಹಿಸಿರುತ್ತಾರೆ. ಅವರ ಹೆಸರಿನಲ್ಲಿ ಮೈದುನ ಕೃಷ್ಣಯ್ಯನಿಗೆ ಒಂದು ಕಾಗದವನ್ನು ಬರೆಯಿರಿ.

## ಅಭ್ಯಾಸ 64

ಮೇಲೆ ಹೇಳಿದ ಸಾಮಾನು ಸರಿಯಾಗಿ ತಲಪಿದ್ದಕ್ಕೆ ಕೃಷ್ಣಯ್ಯನ ಉತ್ತರವನ್ನು ಬರೆಯಿರಿ. ಕೃಷ್ಣಯ್ಯನು ಮಧುಗಿರಿಯಲ್ಲಿರುತ್ತಾನೆಂತ ಇಟ್ಟುಕೊಳ್ಳಿ.

## ಅಭ್ಯಾಸ 65

ಸೋದರಳಿಯ ವೆಂಕಟಸುಬ್ಬಯ್ಯನು ಗಡಿಯಾರವು ಬಂದದ್ದಕ್ಕೆ ಸಂತೋಷವನ್ನೂ ಕೃತಜ್ಞತೆಯನ್ನೂ ತಿಳಿದಂತೆ ರಾಮರಾಯರಿಗೆ ಒಂದು ಕಾಗದವನ್ನು ಬರೆಯಿರಿ.

**20.** ಹಿಂದೆ ಹೇಳಿದ ಒಕ್ಕಣೆಗಳು ಬಂಧುಗಳಿಗೆ ಬರೆಯುವುವುಗಳಾಗಿವೆ. ಮಿಕ್ಕವರಿಗೆ ಬರೆಯುವ ಬಗೆ ಹೇಗೆಂದರೆ:—

### ಗಂಡಸರಿಗೆ

| | |
|---|---|
| 1. ಮಿತ್ರರಿಗೆ: | ಪ್ರಿಯಮಿತ್ರರಾದ ಕೃಷ್ಣಪ್ಪನವರ ಸಮಕ್ಷದಲ್ಲಿ .................. ವಿಜ್ಞಾಪನೆಗಳು. |
| 2. ಸಾಮಾನ್ಯ ಪರಿಚಯದ ಲೌಕಿಕರಿಗೆ: | ಮಹಾರಾಜ ಶ್ರೀ ರಾಮಣ್ಣನವರ ಸನ್ನಿಧಿಗೆ. ................. ನಮಸ್ಕಾರಗಳು. |
| 3. ವೈದಿಕಬ್ರಾಹ್ಮಣರಿಗೆ : | ಬ್ರಹ್ಮಶ್ರೀ (ಅಥವಾ ವೇದಮೂರ್ತಿಗಳಾದ) ..... ರ ಸನ್ನಿಧಿಗೆ ..... ನಮಸ್ಕಾರಗಳು. |
| 4. ಶ್ರೀವೈಷ್ಣವರಿಗೆ | ಶ್ರೀಮದ್ವೇದಮಾರ್ಗೇತ್ಯಾದಿಗಳಾದ ............ ರ ಸನ್ನಿಧಿಗೆ ....... ನಮಸ್ಕಾರ. |

**ಸೂ||** ಬಂಧುಗಳಲ್ಲದ ಗಂಡಸರಿಗೆಲ್ಲ 'ಶ್ರೀಯುತ'[3]—ಎಂತಲೂ ಹೆಂಗಸರಿಗೆಲ್ಲ 'ಶ್ರೀಮತಿ'—ಎಂತಲೂ ಬರೆಯುವ ರೂಢಿಯು ಈಚೀಚೆಗೆ ಬರುತ್ತಲಿದೆ.

---

[3]'ಶ್ರೀಮಾ' ಎಂಬ ಸಂಸ್ಕೃತಶಬ್ದವನ್ನು ಮಾರ್ಪಡಿಸದೆ ಉಪಯೋಗಿಸುವುದಕ್ಕಿಂತ ಶ್ರೀಯುತ ಎಂದು ಉಪಯೋಗಿಸುವುದು ಉತ್ತಮವೆಂದು ತೋರುತ್ತದೆ.

## ಅಭ್ಯಾಸ 66

ಈ ಕಾಗದಗಳ ಒಕ್ಕಣೆಯನ್ನು ಮಾತ್ರ ಬರೆದು ವಿಷಯದ ಸ್ಥಳಕ್ಕೆ ಮೂರು ಗೀಟು ಹಾಕಿ ತೋರಿಸಿ:—

| ಕಾಗದ ಬರೆಯುವುದು | ಯಾರಿಗೆ |
|---|---|
| 1. ರಾಮಣ್ಣ | ಶಿವರಾಮಶಾಸ್ತ್ರಿಗಳಿಗೆ (ತಂದೆ) |
| 2. ಕೃಷ್ಣಪ್ಪ (ಶಾನುಭೋಗರು) | ಶಿವರಾಮಶಾಸ್ತ್ರಿಗಳಿಗೆ (ಪುರೋಹಿತರು) |
| 3. ಭೀಮರಾಯ | ವೆಂಕಟರಾಯರಿಗೆ (ಸ್ನೇಹಿತರು) |
| 4. ಕಮಲಮ್ಮ | ಗೌರಮ್ಮನಿಗೆ (ತಾಯಿ ವಿಧವೆ) |
| 5. ಹಿರಿಯಣ್ಣ | ಗೌರಮ್ಮನಿಗೆ (ಚಿಕ್ಕಮ್ಮ) |
| 6. ಸುಬ್ಬಾಭಟ್ಟ | ರಾಮಯ್ಯನಿಗೆ (ಲೌಕಿಕ ಸ್ನೇಹಿತರು) |
| 7. ರಾಮರಾವ್ | ಭೀಮರಾಯರಿಗೆ (ಮಾಧ್ವವೈದಿಕರು) |
| 8. ಧೊಂಡೋಪಂತ | ಸರಸ್ವತೀಬಾಯಿಗೆ (ಅಕ್ಕ) |
| 9. ಶಿವರಾಮಯ್ಯ | ರಾಮಕೃಷ್ಣನಿಗೆ (ತಮ್ಮ) |

**21.** ಈಚೆಗೆ 'ಕಾರ್ಡು' ಗಳಲ್ಲಿ ಕಾಗದವನ್ನು ಬರೆಯುವ ರೂಢಿ ಹೆಚ್ಚಾಗಿದೆ. ಇವುಗಳಲ್ಲಿ ವಿಸ್ತಾರವಾಗಿ ಬರೆಯಬೇಕಾದ ಒಕ್ಕಣೆಯನ್ನು ಸ್ಥಳಸಂಕೋಚದಿಂದ ಆದಷ್ಟು ಕಡಿಮೆಮಾಡುತ್ತಿರುವರು. ಸ್ವಲ್ಪದರಲ್ಲಿ ಬರೆಯುವುದಕ್ಕಾಗಿ ಹಿಂದಿನವರೂ ಕೆಲವು ಸಂಕ್ಷೇಪಗಳನ್ನು ಮಾಡಿಕೊಂಡಿದ್ದರು. ಯಾರಿಗೆ ಬರೆಯುತ್ತೇವೆಯೋ ಅವರಿಗೂ ನಮಗೂ ಪರಿಚಯವು ಹೆಚ್ಚಾಗಿಲ್ಲದಿದ್ದರೆ ಈ ಸಲುಗೆಯನ್ನು ತೆಗೆದುಕೊಳ್ಳುವುದು ಆದಷ್ಟು ಸರಿಯಾಗಿ ತೋರುವುದಿಲ್ಲ. ಹೊಸಬರಿಗೆ ಮರ್ಯಾದೆಯ ಒಕ್ಕಣೆಯೆಲ್ಲ ಸರಿಯಾಗಿರಬೇಕು.

ಕಾರ್ಡುಗಳಲ್ಲಿ (ಅಥವಾ ಪರಿಚಿತರಿಗೆ ಬರೆಯುವ ಕಾಗದಗಳಲ್ಲಿ) ಉಪಯೋಗಿಸುವ ಸಂಕ್ಷೇಪಗಳು ಯಾವುವೆಂದರೆ:—

ತೀ॥ [ತೀರ್ಥರೂಪು]; ಮ॥ ರಾ॥ [ಮಹಾರಾಜಶ್ರೀ]; ರಾ॥ ರಾ॥ [ರಾಜ ಮಾನ್ಯ ರಾಜಶ್ರೀ]; ಸೌ॥ [ಸೌಭಾಗ್ಯವತಿ]; ಹ॥ ಕುಂ॥ [ಹರಿದ್ರಾಕುಂಕುಮಶೋಭಿತೆಯಾದ]; ಚಿ॥ [ಚಿರಂಜೀವಿ]; ಚ॥ ಸ॥ ಗೆ [ಚರಣಸರೋಜಂಗಳಿಗೆ]; ಚ॥ ಸ॥ ಕ್ಕೆ [ಚರಣಸನ್ನಿಧಾನಕ್ಕೆ]; ಉ॥ ಕು॥ [ಉಭಯಕುಶಲೋಪರಿ][4]

[4] 'ಉ॥ ಕು॥' ಎಂದು ಬರೆಯುವಾಗ 'ಈವರೆಗೆ ಇಲ್ಲಿ.... ಸಂಪ್ರತಿ' ಎಂಬ ಒಕ್ಕಣೆಯನ್ನು ಬಿಟ್ಟುಬಿಡಬೇಕು.

ಮೊದಲು ಬರೆಯುವ ಒಕ್ಕಣೆಯನ್ನೆಲ್ಲ ಬಿಟ್ಟು 'ನಮಸ್ಕಾರ' 'ಆಶೀರ್ವಾದ' — ಎಂದಿಷ್ಟೇ ಬರೆದು, ಕೊನೆಯಲ್ಲಿ 'ಇತಿ' ಎಂದು (ಬರೆದು ಅಥವಾ ಬರೆಯದೆ) ರುಜುಹಾಕಿಬಿಡುತ್ತಾರೆ.

## ಮಾದರಿ 2

### (ತಮ್ಮನಿಗೆ ಬರೆದ ಕಾರ್ಡು)

ಕುಶಲ ಶ್ರೀ ಬೆಂಗಳೂರು,

12–11–51

ಚಿ|| ರಾಮಣ್ಣನಿಗೆ ಆಶೀರ್ವಾದಗಳು, ಉಭಯಕುಶಲೋಪರಿ. ನಾನು ಇಲ್ಲಿಗೆ ಬಂದು ಮೂರು ತಿಂಗಳಾಯಿತು. ಇನ್ನೂ ಬಂದ ಕೆಲಸ ಮುಗಿಯಲಿಲ್ಲ. ನಾಳೆ ಅಥವಾ ನಾಡಿದ್ದು ಹೊರಟೇನು. ಬರುವಾಗ ನೀನು ಕೇಳಿದ ಸಾಮಾನುಗಳನ್ನೆಲ್ಲ ತರುತ್ತೇನೆ.

ಮನೆಯ ಕಡೆ ಜೋಕೆ. ಚಿಲ್ಲರೆ ಏನಾದರೂ ಹಣ ಬೇಕಾದರೆ ಮ|| ರಾ|| ತಿಮ್ಮಪ್ಪಯ್ಯನವರು ಕೊಡುತ್ತಾರೆ, ತೆಗೆದುಕೊಳ್ಳುವುದು. ಪಾಠಗಳನ್ನು ಮರೆಯದೆ ಓದಿಕೊಳ್ಳುತ್ತ ಇರು.

ಇಂತೀ ಆಶೀರ್ವಾದಗಳು,

ಕೃಷ್ಣಪ್ಪ

ಸೂ|| ಮೇಲೆ ರಾಮಣ್ಣನಿಗೆ ಕೃಷ್ಣಪ್ಪನ ಮೇಲು ವಿಳಾಸವು ಗೊತ್ತಿರುವುದರಿಂದ ಅದನ್ನು ಬಿಟ್ಟಿದೆ. ಇಲ್ಲದಿದ್ದರೆ "54, ಮಾಮೂಲುಪೇಟೆ, ಬೆಂಗಳೂರು ಸಿಟಿ"— ಎಂದು ಊರುಬರೆಯುವ ಸ್ಥಳದಲ್ಲಿರಬೇಕು.

## ಅಭ್ಯಾಸ 67

1. ರಾಮಣ್ಣನು ಈ ಮೊದಲೇ ಕೃಷ್ಣಪ್ಪನಿಗೆ ಬರೆದಿರಬಹುದಾದ ಒಂದು ಕಾರ್ಡನ್ನು ಬರೆಯಿರಿ. ಸಂಕ್ಷೇಪಗಳನ್ನುಪಯೋಗಿಸುವಾಗ ಅಕ್ಷರಗಳ ಮುಂದೆ || ಹೀಗೆ ಎರಡು ಗೀಟು ಹಾಕಬೇಕು.

2. ಮೇಲಿನ ಕಾಗದಕ್ಕೆ ರಾಮಣ್ಣನ ಉತ್ತರವನ್ನು ಬರೆಯಿರಿ. (ಕೃಷ್ಣಪ್ಪನು ಬೆಂಗಳೂರಿಂದ ಬಂದಿಲ್ಲ; ತಿಮ್ಮಪ್ಪಯ್ಯನವರು ಕೊಟ್ಟ ದುಡ್ಡೆಲ್ಲ ವೆಚ್ಚವಾಯಿತು. ಮನೆಯಲ್ಲಿ ಮಗುವಿಗೆ ಜ್ವರ.)

## ಮಾದರಿ 3

(ಮಗನಿಗೆ ಬರೆದ ಕಾಗದ)

ಕುಶಲ ಶ್ರೀ ಚಳ್ಳಕೆರೆ,

13–12–14

ಚಿ|| ಶೇಷಣ್ಣನಿಗೆ ಅನೇಕಾಶೀರ್ವಾದಗಳು.
ಉಭಯಕುಶಲೋಪರಿ.

ನೀನು ಇಲ್ಲಿಂದ ಹೊರಟುಹೋದಂದಿನಿಂದ ಒಂದು ಕಾಗದವನ್ನೂ ಬರೆಯಲಿಲ್ಲ. ನಮ್ಮೆಲ್ಲರಿಗೂ ಯೋಚನೆಯಾಗಿದೆ. ನಿನ್ನ ಆರೋಗ್ಯಕ್ಕೆ ಕೂಡಲೆ ಕಾಗದವನ್ನು ಬರೆಯುವುದು.

ಈವರ್ಷ ನೀನು ಪರೀಕ್ಷೆಗೆ ಕಟ್ಟಬೇಕಾಗುತ್ತದೆಯೆಂತ ಹೇಳಿದ್ದೆಯಷ್ಟೆ. ಅದಕ್ಕೆ ಹನ್ನೆರಡು ರೂಪಾಯಿಗಳನ್ನು ಕೂಡಿಸಿಟ್ಟಿದ್ದೇನೆ. ಯಾವ ತಿಂಗಳು ಬೇಕಾಗುತ್ತದೆಯೊ ತಿಳಿಸಿದರೆ ಕೂಡಲೆ ಕಳುಹಿಸುತ್ತೇನೆ.

ಅಲ್ಲಿಗೆ ನಮ್ಮೂರ ವೇ|| ಶಿವರಾಮಶಾಸ್ತ್ರಿಗಳು ಬಂದಿದ್ದರು. ಅವರು ನಿನ್ನನ್ನು ನೋಡಿದ್ದ ರಂತೆ. ಅವರು ಹೇಳಿದ್ದರಲ್ಲಿ ನಿನ್ನ ನಡತೆ ಸ್ವಲ್ಪಮಟ್ಟಿಗೆ ಬೇರ್ಪಟ್ಟಿರುವಂತೆ ತಿಳಿಯಿತು. ಇದು ಎಷ್ಟರಮಟ್ಟಿಗೆ ನಿಜವೆಂಬುದಕ್ಕೆ ನಿನ್ನ ಕೈಯಿಂದ ಬರೆದ ಕಾಗದದಿಂದಲೇ ತಿಳಿಯಬೇಕೆಂದು ಬಹಳ ಕುತೂಹಲವಾಗಿದೆ. ವಿದ್ಯೆಗೆಲ್ಲ ಯೋಗ್ಯತೆಯನ್ನು ಸಂಪಾದಿಸುವುದೇ ಉದ್ದೇಶವು. ಆದುದರಿಂದ ಮೊದಲು ನಿನಗಿದ್ದ ಒಳ್ಳೆಯ ನಡತೆಯಲ್ಲಿ ಹೆಚ್ಚುಕಡಿಮೆಯಾಗಿದೆಯೆಂತ ಕೇಳಿ ನಮಗೆಲ್ಲರಿಗೂ ಎಷ್ಟು ವ್ಯಥೆಯಾಗಿರಬಹುದೆಂಬುದನ್ನು ನೀನೇ ಊಹಿಸಬಹುದು. ಮುಖ್ಯ ವಾಗಿ ಕೆಟ್ಟ ಸಹವಾಸಕ್ಕೆ ಬೀಳದೆ ನೀನು ಮುಂದಕ್ಕೆ ಬಂದು ವಂಶಕ್ಕೆ ಒಳ್ಳೆಯ ಹೆಸರನ್ನು ತರಬೇಕೆಂಬುದೇ ನಮ್ಮ ಕೋರಿಕೆ.

ಇಂತೀ ಆಶೀರ್ವಾದ,

ವೆಂಕಣ್ಣ

## ಅಭ್ಯಾಸ 68

ಮೇಲಿನ ಕಾಗದಕ್ಕೆ ಉತ್ತರವನ್ನು ಬರೆಯಿರಿ. (ಪರೀಕ್ಷೆಗೆ ಈ ತಿಂಗಳೇ ಹಣ ಬೇಕು; ಪಾಠಶಾಲೆಯ ಪರೀಕ್ಷೆಯಲ್ಲಿ ತೇರ್ಗಡೆಯಾಗಿದೆ, ತಿಂಗಳ ಫೀಜನ್ನು ಕೊಡಬೇಕಾದ್ದಿಲ್ಲ, ಮನ್ನಿಸಿದೆ—ಎಂತ ಹೆಡ್‌ಮಾಸ್ಟರು ಹೇಳಿರುತ್ತಾರೆ; ನಡತೆಯ ವಿಷಯಕ್ಕೆ ಅವರಿಂದಲೂ ತಾನಿರುವ ಮನೆಯ ಗೋಪಲರಾಯರಿಂದಲೂ ತಿಳಿದುಕೊಳ್ಳಬಹುದು.)

## ಅಭ್ಯಾಸ 69

ನಮಗಿಂತ ದೊಡ್ಡವರಿಗೆ ಅಥವಾ ಹೊಸಬರಿಗೆ ಬರೆಯುವ ಕಾಗದಗಳನ್ನು ಬರೆಯುವಾಗ ಈ ವಾಕ್ಯಗಳ ಅರ್ಥವನ್ನು ಗೌರವ ತೋರುವಂತೆ ಹೇಗೆ ಬದಲಾಯಿಸ ಬೇಕಾಗುವುದು? ಬೇಕಾದ ಒಕ್ಕಣೆಯ ಮಾತುಗಳನ್ನೂ ಜೋಡಿಸಿ:—

1. ನಿನ್ನ ಯೋಗಕ್ಷೇಮಕ್ಕೆ ಆಗಿಂದಾಗ್ಗೆ ಬರೆಯುತ್ತಿರು. 2. ಈವೂರಿಗೆ ಯಾವಾಗ ಬರುತ್ತೀಯೆ? 3. ನೀನು ಹೀಗೆ ಮಾಡಿದ್ದು ತಪ್ಪು. 4. ನೀನು ಬರೆದ ಕಾಗದವು ತಲಪಿ ಅಭಿಪ್ರಾಯವಾಯಿತು. 5. ನಿನ್ನ ಸ್ನೇಹಿತ ರಾಮರಾಯನಿಗೆ ನಾನು ಯೋಗಕ್ಷೇಮ ಕೇಳಿದ್ದಾಗಿ ತಿಳಿಸು. 6. ನಿಮ್ಮ ಅಣ್ಣ ಈಗ ಏನುಮಾಡುತ್ತಿದ್ದಾನೆ? 7. ನಿಮ್ಮ ಅಕ್ಕ ಗಂಡನ ಊರಿಗೆ ಹೋದಳೊ? 8. ಅಜ್ಜಿಗೆ ಈ ಸಂಗತಿಯನ್ನು ತಿಳಿಸು. 9. ಮಿಕ್ಕ ಸಂಗತಿಗಳಿಗೆ ಇನ್ನೊಂದು ಸಲ ಬರೆಯುತ್ತೇನೆ. 10. ಈಗಲೂ ಅವಳೇ ಅಡಿಗೆಮಾಡುತ್ತಾಳೆಯೆ? 11. ನಿಮ್ಮ ಹುಡುಗ ಸುಮ್ಮನೆ ಹರಟುತ್ತಾನೆ; ಏತಕ್ಕೆ ಹೀಗೆ ಮಾಡುತ್ತಾನೋ ಒಂದು ಕಾಗದ ಬರೆದು ಕೇಳಿ. 12. ನನಗೆ ಮೂರು ರೂಪಾಯಿ ಕಳುಹಿಸು. 13. ನೀನು ಕಳುಹಿಸಿದ ಜೇಬಿನ ಗಡಿಯಾರ ಕೈ ಸೇರಿತು. 14. ನನಗೆ ತೇರ್ಗಡೆಯಾಯಿತು. 15. ಅವ್ವ ಊರಿಗೆ ಬಂದಿದಾಳೆಯೆ? 16. ಭಾವ ಏನು ಹೇಳಿದ? 17. ನನಗಾಗಿ ಹನುಮಂತದೇವರಿಗೆ ಹಣ್ಣುಕಾಯಿ ಕೊಡು.

ಇಲ್ಲಿರುವ ಗೌರವಾರ್ಥದ ಮಾತುಗಳನ್ನು ನಮಗಿಂತ ಚಿಕ್ಕವರಾದವರಿಗೆ ಅನ್ವಯಿಸುವುದಕ್ಕೆ ತಕ್ಕಂತೆ ತಿರುಗಿಸಿ ವಾಕ್ಯಗಳನ್ನು ಮಾಡಿ:– (ಮಾದರಿ:— ಹೀಗೆಂದು ಚಿ|| ರಾಮರಾಯ ಹೇಳುತ್ತಾನೆ.)

1. ಹೀಗೆಂದು ಮ|| ರಾ|| ರಾಮರಾಯರ ಅಪ್ಪಣೆಯಾಗಿದೆ. 2. ಈ ಸಂಗತಿಯನ್ನು ಮಾ|| ಸೌ|| ಗೌರಕ್ಕನವರಿಗೆ ತಿಳಿಸೋಣವಾಗಬೇಕು. 3. ತಮ್ಮ ಆಶೀರ್ವಾದ ಪತ್ರಿಕೆಯಲ್ಲಿ ಆ ವಿಚಾರವನ್ನೂ ಸೇರಿಸೋಣವಾಗಲಿ. 4. ಇದ್ದ ಸಂಗತಿ ವಿಜ್ಞಾಪಿಸಿಕೊಂಡಿರುತ್ತೇನೆ. 5. ತೀ|| ದೊಡ್ಡಣ್ಣನವರಿಗೆ ನನ್ನ ನಮಸ್ಕಾರವನ್ನು ತಿಳಿಸಬೇಕು. 6. ಈಸಲ ನವರಾತ್ರಿಗೆ ದಯಮಾಡಿಸುವಂತೆ ಅನುಗ್ರಹವಾಗಬೇಕು. 7. ಮುಂದಿನ ತಿಂಗಳು ನನಗೆ ಅಲ್ಲಿಗೆ ಬರುವುದಕ್ಕೆ ಅನಿವಾರ್ಯವಿರುವುದರಿಂದ ಕ್ಷಮಿಸಬೇಕು. 8. ಅರಿಕೆಮಾಡತಕ್ಕ ಹೆಚ್ಚಿಗೆ ಸಂಗತಿಗಳೇನೂ ಕಾಣುವುದಿಲ್ಲ.

## ಅಭ್ಯಾಸ 70

ಹೊಳಲುಕೆರೆಯಲ್ಲಿರುವ ನಾಗೇಶರಾಯರು ಭೀಮರಾಯನೆಂಬ ತಮ್ಮನಿಗೆ ಶಿವಮೊಗ್ಗೆಗೆ ಬರೆದ ಒಂದು ಬುದ್ಧಿವಾದ ಪತ್ರಿಕೆಯನ್ನು ಸಿದ್ಧಮಾಡಿ. (ಹೋಟಲು ತಿಂಡಿ ತಿನ್ನಬಾರದು; ಪರೀಕ್ಷೆಯು ಸಮೀಪಿಸುತ್ತ ಬಂದಿರುವುದರಿಂದ ಚೆನ್ನಾಗಿ ಓದಿಕೊಳ್ಳಬೇಕು; ಆರೋಗ್ಯವನ್ನು ಚೆನ್ನಾಗಿ ಕಾಪಾಡಿಕೊಳ್ಳಬೇಕು—ಈ ಸಂಗತಿಗಳನ್ನು ಸೇರಿಸಿ.)

## ಅಭ್ಯಾಸ 71

ಶಿವಮೊಗ್ಗೆಯಿಂದ ಭೀಮರಾಯನು ಪುಸ್ತಕಗಳಿಗಾಗಿ ಸಾಲಮಾಡಿರುವುದಾಗಿಯೂ ವರ್ಷದ ಮೊದಲು ಪರೀಕ್ಷೆಯಲ್ಲಿ ತೇರ್ಗಡೆಯಾಗದೆ ಇದ್ದದ್ದಕ್ಕಾಗಿ ಹಿಂದಕ್ಕೆ ಮನ್ನಿಸಿದ್ದ ಫೀಜನ್ನು ಕೊಡಬೇಕಾಗಿಯಾಗಿಯೂ (ತೇರ್ಗಡೆಯಾಗದೆ ಇದ್ದದ್ದಕ್ಕೆ ಕಾರಣವನ್ನು ತಿಳಿಸಿ) ನಾಗೇಶರಾಯನಿಗೆ ಬರೆದಂತೆ ಒಂದು ಕಾಗದವನ್ನು ಸಿದ್ಧಪಡಿಸಿ.

## ಅಭ್ಯಾಸ 72

ತಂದೆಯಿಲ್ಲದ ವೆಂಕಟರಾಯನೆಂಬ ಹುಡುಗನು ಅಪ್ಪರ್‌ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಹೊಂದಿರುವಂತೆಯೂ ಇನ್ನುಮುಂದೆ ಏನಾದರೂ ಕೆಲಸಮಾಡಿ ಕೊಳ್ಳುವುದಾಗಿಯೂ ಮೈಸೂರಿನಿಂದ ತನ್ನ ತಾಯಿಗೆ ಬರೆಯಬೇಕಾಗಿದೆ, ಆ ಕಾಗದವನ್ನು ಸಿದ್ಧಪಡಿಸಿ.

## ಅಭ್ಯಾಸ 73

ಮೇಲಿನ ಕಾಗದಕ್ಕೆ ತಾಯಿ ಪುಟ್ಟಮ್ಮನವರ ಹೇಳಿಕೆಯಂತೆ ಆ ಊರ ಲಕ್ಷ್ಮಣಸೆಟ್ಟಿ ಎಂಬಾತನು ಬರೆದ ಉತ್ತರವನ್ನು ಬರೆಯಿರಿ. (ಲಕ್ಷ್ಮಣಸೆಟ್ಟಿಯೂ ವೆಂಕಟರಾಯನೂ ಬಾಲ್ಯ ಸ್ನೇಹಿತರು.)

**22.** ಪತ್ರಗಳನ್ನು ಒಬ್ಬರಿಗೊಬ್ಬರು ಬರೆಯುವಾಗ ಬರೆಯುವವರ ಹೆಸರನ್ನಲ್ಲದೆ ತಮಗೆ ಉತ್ತರ ಬರಬೇಕಾದ ಸ್ಥಳ, ಊರು, ಕೇರಿ, ಮನೆಯ ನಂಬರು— ಮುಂತಾದ ವಿವರವನ್ನು ಪತ್ರದ ಮೇಲುಗಡೆಯಲ್ಲಿ ತೋರಿಸುವುದು ಒಳ್ಳೆಯದೆಂದು ಹಿಂದೆಯೇ (ಪುಟ ೪೪, ೫೧ ರಲ್ಲಿ) ತಿಳಿಸಿದೆಯಷ್ಟೆ. ಓದಿಕೊಳ್ಳುವವರ ಸೌಕರ್ಯಕ್ಕೆಂದು ಪತ್ರದ ಕೊನೆಯಲ್ಲಿ ಕೆಳಗಡೆ ಎಡಭಾಗಕ್ಕೆ, ಕಾಗದವನ್ನು ಯಾರಿಗೆ ಬರೆದಿದೆಯೋ ಅವರ ಹೆಸರು, ಮನೆ, ಬೀದಿ, ಅಧಿಕಾರ, ಊರು—ಇವುಗಳನ್ನು ತೋರಿಸುವ ವಿವರವೊಂದನ್ನು ಬರೆದಿಡುವುದು ಇಂಗ್ಲಿಷು ಕಾಗದಪತ್ರಗಳಲ್ಲಿ ಪದ್ಧತಿಯಿದೆ. ಬಂಧುಗಳಲ್ಲದವರಿಗೆ ಬರೆಯುವಾಗಲೂ ಬಂಧುಗಳಲ್ಲಿಯೂ ಗೌರವಪ್ರದರ್ಶನಪೂರ್ವಕವಾಗಿ ಬರೆಯುವಾಗಲೂ ಈ ಪದ್ಧತಿಯನ್ನು ಅನುಸರಿಸುವುದು ಮೇಲು. ಬರಿಯ ಹೆಸರಿನ ಹೋಲಿಕೆಯಿಂದ ತಮ್ಮದೆಂದು ಕಾಗದವನ್ನು ಒಡೆದು ನೋಡಿಕೊಂಡು, ಕಾಗದವು ತಮಗೆ ಹೇಗೆ ಯಾರಿಂದ ಬಂತೆಂಬುದನ್ನು ತಿಳಿಯದೆ ಕೆಲವರು ಪೇಚಾಡುವುದುಂಟು. ಮೇಲೆ ಹೇಳಿದ ಪದ್ಧತಿಯಿಂದ ಈ ವಿಧವಾದ ತಪ್ಪಿಗೆ ಅವಕಾಶವಿಲ್ಲದೆ ಹೋಗುವುದು. ಯಾರಿಗೆ ಬರೆದಿದೆಯೋ ಅವರ ಊರು, ಕೇರಿ — ಮುಂತಾದ ವಿವರವನ್ನು ತಿಳಿಸುವ ಒಕ್ಕಣೆಗೆ "**ವಿಳಾಸ**" ಎಂದು ಹೆಸರು.

**23.** ವಿಳಾಸಗಳನ್ನು ಕಾಗದದ ಮೇಲೆ ಬರೆಯುವಾಗ ಸ್ಪಷ್ಟವಾಗಿ ಒಂದೊಂದು ವಿವರಕ್ಕೂ ಒಂದೊಂದು ಸಾಲು ಬರುವಂತೆ ವಿಂಗಡಿಸಿ ಬರೆಯಬೇಕು. ಟಪ್ಪಾಲು ಮೂಲಕ ಕಳುಹಿಸುವ ಕಾಗದಗಳಂತೂ ಹೆಸರು, ಊರು—ಇವು ಸ್ಪಷ್ಟವಾಗಿ ಕಾಣುವಂತೆ ಹುಟ್ಟಕ್ಷರದಲ್ಲಿರಬೇಕು; ಇಲ್ಲದಿದ್ದರೆ ಸರಿಯಾಗಿ ತಲಪುವುದು ಕಷ್ಟವಾಗುವುದು. ಪೂರ್ವದ ಕಾಗದಗಳಲ್ಲಿ "ಅರಸೀಕೆರೆ ತಾ|| ಕಣಕಟ್ಟೆಯಲ್ಲಿರುವ ರಿಟೈರ್ಡ್ ಹೆಡ್ ಮುನಷಿ ತೀ|| ಮಲ್ಲಣ್ಣಯ್ಯ ಭಾವನವರಿಗೆ ತಲಪಿಸುವುದು" ಎಂದು ಉದ್ದಕ್ಕೆ ಬರೆಯುತ್ತಿದ್ದರು. ಇದರಲ್ಲಿ ಬರೆವಣಿಗೆ ಹೆಚ್ಚು, ಬೇಕಾದ ತಿಳಿವಳಿಕೆ ಬೇಗ ಆಗುವುದಿಲ್ಲ. ಆದ್ದರಿಂದ ಇಂಗ್ಲಿಷು ಮಾದರಿಯನ್ನು ಅನುಸರಿಸುತ್ತಿರುವ ಈಗಿನ ಪದ್ಧತಿಯೇ ಅನುಕೂಲ. ಈ ಮುಂದೆ ಕೆಲವು ವಿಳಾಸದ ಮಾದರಿಗಳನ್ನು ಕೊಟ್ಟಿರುತ್ತೇವೆ. ಭಾಗಗಳನ್ನು ಜೋಡಿಸಿರುವ ಬಗೆಯನ್ನೂ ಅಲ್ಪವಿರಾಮ, ಪೂರ್ಣವಿರಾಮ—ಮುಂತಾದ ಗುರುತುಗಳನ್ನೂ ಉಪಯೋಗಿಸಿರುವ ರೀತಿಯನ್ನೂ ವಿದ್ಯಾರ್ಥಿಗಳು ಲಕ್ಷ್ಯದಲ್ಲಿಡಬೇಕು.

## ಮೇಲುವಿಳಾಸಗಳು

[೧] ತೀ|| ಮಲ್ಲಣ್ಣಯ್ಯನವರು[5],
ರಿಟೈರ್ಡ್ ಹೆಡ್ ಮುನಷಿ,
ಕಣಕಟ್ಟೆ,
ಬಾಣಾವರ ಪೋಸ್ಟು.
[ಅರಸೀಕೆರೆ ತಾಲ್ಲೂಕು]

[೨] ಜಿ. ಬಿ. ಶಂಕರಪ್ಪ,
ವಿದ್ಯಾರ್ಥಿ, ೫ನೆಯ ತರಗತಿ,
ಗೌ|| ಮಿಡಲ್ ಸ್ಕೂಲ್,
ಹೊಳಲುಕೆರೆ.
[ಚಿತ್ರದುರ್ಗ ಡಿ||]

[೩] ಮ|| ರಾ||
ಶ್ರೀನಿವಾಸಯಂಗಾರ್ಯರವರು,
ರಿಟೈರ್ಡ್ ರಿಕಾರ್ಡ್ ಕೀಪರ್,
ದೇವಾಂಗದ ಬೀದಿ,
ದಾವಣಗೆರೆ.
(ಚಿತ್ರದುರ್ಗ ಡಿ||)

[೪] ವಿದ್ಯಾಸಾಗರ ಬುಕ್ ಡಿಪೋ
ಮ್ಯಾನೇಜರವರು,
ಚಿಕ್ಕಪೇಟೆ,
ಬೆಂಗಳೂರು ಸಿಟಿ.

[5] ಇಲ್ಲಿ 'ಮಲ್ಲಣಯ್ಯ ಭಾವನವರ ಸ|| ಕೈ'—ಅಥವಾ 'ಸನ್ನಿಧಿ ವಕ್ಕೆ'—ಎಂದು ಮುಂತಾದ ಗೌರವಸೂಚಕಶಬ್ದಗಳನ್ನು ಬರೆಯುವುದು ನಮ್ಮ ದೇಶದ ವಾಡಿಕೆ. ಬೇರೆಯವರ ಕೈಯಲ್ಲಿ ಕಳುಹಿಸಿದ ಹೊರತು, ಟಪ್ಪಾಲು ಮೂಲಕ ಹೋಗುವ ಕಾಗದಗಳಲ್ಲಿ ಇಲ್ಲಿ ತೋರಿಸಿರುವಷ್ಟನ್ನೇ ಬರೆದರೂ ಸಾಕೆಂದು ತೋರುವುದು.

[೫] ಶ್ರೀ॥ ಎಂ. ರಂಗಪ್ಪನವರು,
ರೇಷ್ಮೆಜವಳಿ ವ್ಯಾಪಾರಿಗಳು,
ಮೊಳಕಾಲ್ಮುರು.
(ಚಿತ್ರದುರ್ಗ ಡಿ॥)

[೬] ಮ॥ ರಾ॥ ಎಚ್.
ಚಿದಂಬರಯ್ಯನವರು,
ಕರ್ಣಾಟಕಕವಿರತ್ನ,
ಕುರ್ತಕೋಟಿ.
(ಧಾರವಾಡ ಜಿಲ್ಲೆ)

[೭] [ಲೋಕಲ್]
ಮ॥ ರಾ॥ ಎಸ್. ವೆಂಕಟರಾಯರು,
ಬಸವನಹಳ್ಳಿ,
ಚಿಕ್ಕಮಗಳೂರು.

[೮] ಮ॥ ರಾ॥ ಡಿ.
ಚಂದ್ರಶೇಖರಶಾಸ್ತ್ರಿಗಳವರು,
೭, ೨ನೆಯ ಬೀದಿ,
ಗವಿಪುರ ಎಕ್ಸ್‌ಟೆನ್‌ಷನ್,
ಬೆಂಗಳೂರು ಸಿಟಿ.
(ಮೈಸೂರು ಸಂಸ್ಥಾನ)

24. ಮೇಲುವಿಳಾಸವನ್ನು ಬರೆಯುವುದು ಟಪ್ಪಾಲಿನವರ ತಿಳಿವಳಿಕೆಗೆ; ಆದುದರಿಂದ ಪೋಸ್ಟಾಫೀಸಿರುವ ಸ್ಥಳವನ್ನು ಆದಷ್ಟು ಕೆಳಗಡೆ ಬರುವಂತೆ ಜೋಡಿಸಿ[6] ಅಂಥ ಸ್ಥಳದ ಹೆಸರಿನ ಕೆಳಗೆ ಒಂದು ಗೀಟು ಹಾಕಿರುವುದು ಒಳ್ಳೆಯದು. ಬಾಣಾವರ, ಹೊಳಲುಕೆರೆ — ಮುಂತಾದ ಒಂದೇ ಹೆಸರಿನ ಊರುಗಳು ಅನೇಕವಿರಬಹುದಾದ್ದರಿಂದ ಅಂಥ ಸಂದರ್ಭದಲ್ಲಿ ತಾಲ್ಲೂಕನ್ನೂ ತಿಳಿಸಬೇಕಾಗುವುದು. ಒಂದು ಸಂಸ್ಥಾನದಿಂದ ಮತ್ತೊಂದು ಸಂಸ್ಥಾನಕ್ಕೂ ಬರೆಯುವಾಗ ಅದನ್ನೂ ಸ್ಪಷ್ಟವಾಗಿ ಬರೆಯಬೇಕು. ಟಪ್ಪಾಲಿನಲ್ಲಿ ಸಾವಿರಗಟ್ಟಲೆ ಕಾಗದಗಳು ಓಡಾಡುತ್ತಿರುವುದರಿಂದ ದಾವಣಗೆರೆಯ ಕಾಗದವು ದೇವಗಿರಿಗೂ, ಮೂಡಗೆರೆಯ ಕಾಗದವು ಮಧುಗಿರಿಗೂ ನೋಡುವವರ ತಪ್ಪಿನಿಂದ ಹೋಗಿಬಿಡುವುವು. ಅಂಥ ಸ್ಥಳಗಳಿರುವ ತಾಲ್ಲೂಕು, ಜಿಲ್ಲೆ—ಮುಂತಾದುವುಗಳನ್ನು ಅರಸೀಕೆರೆ ತಾಲ್ಲೂಕು, ಧಾರವಾಡ ಜಿಲ್ಲ—ಎಂದು ತೋರಿಸುವುದರಿಂದ ಈ ಸಂದರ್ಭಗಳು ತಕ್ಕಮಟ್ಟಿಗೆ ಕಡಿಮೆಯಾಗುವುವು. ತಾಲ್ಲೂಕು, ಡಿಸ್ಟ್ರಿಕ್ಟು, ಸಂಸ್ಥಾನ—ಮುಂತಾದುವುಗಳ ಹೆಸರನ್ನು ತೋರಿಸುವಾಗ ಕಂಸಗಳಲ್ಲಿ ಬರೆಯುವುದು ಒಳ್ಳೆಯದು; ಹಾಗಿಲ್ಲದಿದ್ದರೆ ಕೊನೆಯಲ್ಲಿ ಬರೆದದ್ದೇ ಕಾಗದವು ಹೋಗಿ ಸೇರುವ ಸ್ಥಳವೆಂದು ಅಂಚೆಯವರು ಭ್ರಮಿಸುವ ಸಂಭವವುಂಟು. ದೊಡ್ಡ ಊರುಗಳಿಗೆ ಬರೆಯುವ ಕಾಗದದಲ್ಲಿ '7, 2ನೆಯ ಬೀದಿ, ಗವಿಪುರ ಎಕ್ಸ್‌ಟೆನ್‌ಷನ್, ಬೆಂಗಳೂರು ಸಿಟಿ' ಎಂದು ಮನೆಯ ನಂಬರು, ಬೀದಿ, ಪೇಟೆ—ಮುಂತಾದುವುಗಳ ವಿವರವೂ ಬೇಕಾಗುವುದು.

[6] ಉಪಾಧ್ಯಾಯರು ಒಂದೊಂದು ವಿಳಾಸವನ್ನೂ ಕಪ್ಪುಹಲಗೆಯ ಮೇಲೆ ಬರೆದು ಅದರಲ್ಲಿರುವ ಭಾಗಗಳ ವಿಷಯವಾಗಿ ಹುಡುಗರೊಡನೆ ಚರ್ಚಿಸಬೇಕು.

## ಅಭ್ಯಾಸ 74

ಈ ಮುಂದಿನ ವಿಳಾಸಗಳನ್ನು ಟಪ್ಪಾಲಿನವರ ತಿಳಿವಳಿಕೆಗೆ ಅನುಕೂಲಿಸುವಂತೆ ಜೋಡಿಸಿ ಬರೆಯಿರಿ. ಮೇಲುವಿಳಾಸದ ಪ್ರತಿಯೊಂದು ಭಾಗವನ್ನೂ ಎಡಕ್ಕೆ ಸ್ವಲ್ಪ ಸ್ಥಳವನ್ನು ಹೆಚ್ಚು ಹೆಚ್ಚು ಬಿಟ್ಟು, ಒಂದೊಂದು ಸಾಲಿನ ಕೊನೆಯಲ್ಲಿಯೂ ಅಲ್ಪ ವಿರಾಮವನ್ನು ಹಾಕಿ, ಪೋಸ್ಟಾಫೀಸಿನ ಸ್ಥಳದ ಹೆಸರಿನ ಕೊನೆಗೆ ಪೂರ್ಣವಿರಾಮ ಚಿಹ್ನೆಯನ್ನು ಹಾಕಿರಿ:—

1. ನಿಮ್ಮ ತಂದೆಯವರಿಗೆ
2. ನಿಮ್ಮ ಸ್ನೇಹಿತನಿಗೆ.
3. ನಿಮ್ಮ ತರಗತಿಯ ಉಪಾಧ್ಯಾಯರಿಗೆ
4. ಮದ್ರಾಸು ಆಧಿಪತ್ಯದಲ್ಲಿರುವ ನಿಮ್ಮ ಭಾವನವರಿಗೆ
5. ಯಾವುದಾದರೂ ಒಂದು ಕಂಪೆನಿಗೆ
6. ಒಂದು ಪತ್ರಿಕೆಯ ಸಂಪಾದಕರಿಗೆ
7. ಒಂದು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೀಷನರಿಗೆ
8. ಒಂದು ಮುದ್ರಣಾಲಯಕ್ಕೆ

**25.** ಮೇಲು ವಿಳಾಸಗಳನ್ನು ಬರೆಯುವಾಗ ವಿಳಾಸದಾರರಿಗೆ ಮ॥ ರಾ॥ ಮುಂತಾದ ಸಾಧಾರಣ ಗೌರವಸೂಚಕಶಬ್ದಗಳನ್ನಲ್ಲದೆ, ಬಿ.ಎ., ಎಂ.ಎ., ರಾವ್ ಬಹದ್ದೂರ್ — ಮುಂತಾದ ಬಿರುದುಗಳಿದ್ದರೆ ಅವನ್ನೂ ಅವಶ್ಯವಾಗಿ ಸೇರಿಸಿ ಬರೆಯಬೇಕು. ಕಾಗದಪತ್ರಗಳು ಬರವಣಿಗೆಯಲ್ಲಿ ನಿರ್ಮಲವಾಗಿಯೂ ಜೋಡಿಗೆಯಲ್ಲಿ ಅಚ್ಚುಕಟ್ಟಾಗಿಯೂ ಇರುವಂತೆ, ಭಾಷೆಯಲ್ಲಿ ಶುದ್ಧವಾಗಿಯೂ ಗೌರವಕ್ಕೆ ತಕ್ಕಂತೆಯೂ ಇರಬೇಕಾದದ್ದು ಅತ್ಯಾವಶ್ಯಕ. ಮೇಲುವಿಳಾಸಕ್ಕೆ ತಕ್ಕಂತೆ ಕವರುಗಳನ್ನು[7] ಸರಿಯಾದ ಪ್ರಮಾಣದಲ್ಲಿ ವಿನಿಯೋಗಿಸಿಕೊಳ್ಳಬೇಕು. ಎಡಗಡೆಯಲ್ಲಿ ಇಂಥವರಿಂದ ಎಂಬುದನ್ನು ಬರೆದಿದ್ದರೆ ಒಂದು ವೇಳೆ ಅಂಚೆಯವರಿಗೆ ಕಾಗದದ ವಿಳಾಸದಾರರು ಗೊತ್ತಾಗದಿದ್ದರೆ, ಅಥವಾ ಯಾವುದಾದರೂ ಕಾರಣದಿಂದ ಅವರು ಪತ್ರವನ್ನು ತೆಗೆದುಕೊಳ್ಳದೆ ಹೋದರೆ, ಬರೆದವರಿಗೆ ಅದನ್ನು ಹಿಂದಕ್ಕೆ ಕಳುಹಿಸಲು ಅನುಕೂಲವಾಗುವುದು. ಸಂಪೂರ್ಣವಾದ ಮೇಲು ವಿಳಾಸಗಳ ಮಾದರಿಯನ್ನು ಈ ಮುಂದೆ ತೋರಿಸಿರುತ್ತದೆ. ಕಾಗದವು ಬಂಧುಗಳಿಗಾಗಿದ್ದರೆ ಎಡಗಡೆಯ ಮೂಲೆಯಲ್ಲಿ "ಕ್ಷೇಮ" ಅಥವಾ "ಕುಶಲ"—ಎಂದು ಸೇರಿಸಿಕೊಳ್ಳಬೇಕು.

---

[7] ಕವರಿನ ಆಕಾರಕ್ಕೆ ಸರಿಯಾಗಿ ಕತ್ತರಿಸಿದ ಕಾಗದದ ತುಂಡುಗಳಲ್ಲಿ ವಿದ್ಯಾರ್ಥಿಗಳು ವಿಳಾಸವನ್ನು ಬರೆಯುವಂತೆ ಉಪಾಧ್ಯಾಯರು ಏರ್ಪಡಿಸಬೇಕು.

## ಮಾದರಿ 1

ಸ್ಟಾಂಪು

ಡಾಕ್ಟರ್ ಬಾಲಕೃಷ್ಣ,

ಎಂ.ಎ., ಪಿಎಚ್.ಡಿ., ಇವರಿಗೆ,

ಪ್ರಿನ್ಸಿಪಾಲ್,
ರಾಜಾರಾಮ್ ಕಾಲೇಜ್,
ಕೊಲ್ಲಾಪುರ

ಸಿ. ವೆಂಕಟರಮಣಯ್ಯ, ಪ್ರಿನ್ಸಿಪಾಲ್,
ಚಾಮರಾಜೇಂದ್ರ ಸಂಸ್ಕೃತ ಕಾಲೇಜ್,
ಬೆಂಗಳೂರು ಸಿಟಿ.
(ಮೈಸೂರು ಸಂಸ್ಥಾನ)

## ಮಾದರಿ 2

ಸ್ಟಾಂಪು

ರಾಜಸಭಾಭೂಷಣ
ಶ್ರೀ|| ಕರ್ಪೂರ ಶ್ರೀನಿವಾಸರಾವ್,

ವಿದ್ಯಾಭೂಷಣ ಇವರಿಗೆ,

ರಿಟೈರ್ಡ್ ಚೀಫ್ ಇಂಜನಿಯರ್,
1ನೆಯ ಬೀದಿ, ಚಾಮರಾಜಪೇಟೆ,
ಬೆಂಗಳೂರು ಸಿಟಿ.

ಸುರೇಂದ್ರ ಶಿವರಾವ್ ದೇಸಾಯಿ,
ಕಾರ್ಯದರ್ಶಿ,
ರಾಷ್ಟ್ರೀಯ ಶಿಕ್ಷಣ ಸಮಿತಿ,
ಧಾರವಾಡ.

## ಅಭ್ಯಾಸ 75

ನಿಮಗೆ ಗೊತ್ತಿರುವ ಬೇರೆ ಬೇರೆ ಬಿರುದುಗಳುಳ್ಳ ಹತ್ತು ಜನ ದೊಡ್ಡ ಮನುಷ್ಯರುಗಳ ಮೇಲುವಿಳಾಸಗಳನ್ನು ಬರೆಯಿರಿ.

## ಅಭ್ಯಾಸ 76

ಈ ಕೆಳಗೆ ಕೊಟ್ಟಿರುವ ಮೇಲುವಿಳಾಸಗಳಲ್ಲಿ ಜೋಡಿಗೆ, ಲೇಖನ ಚಿಹ್ನೆ, ಭಾಷಾಶುದ್ಧಿ, ಮರ್ಯಾದೆಯ ಒಕ್ಕಣೆ, ಟಪಾಲಿನವರ ಸೌಕರ್ಯ—ಈ ವಿಷಯ ಗಳಲ್ಲಿ ಕಂಡುಬರುವ ದೋಷಗಳನ್ನು ತಿಳಿಸಿ:–

1 ಬೆಂಗಳೂರಿನಲ್ಲಿರುವ ಆಧ್ಯಾತ್ಮಪ್ರಕಾಶಕಾರ್ಯಾಲಯದ ಮ್ಯಾನೇಜರವರಿಗೆ ಚಾಮರಾಜ ಪೇಟೆ ಎರಡನೇ ಬೀದಿ.

2 ಈ ಕಾಗದ ಕರ್ಣಾಟಕ ಕವಿರತ್ನಂ ಮ॥ ರಾ॥ ಚಿದಂಬರಯ್ಯ ಇವರು ನೋಡಿ ನಮ್ಮ ಪ್ರಿಯಮಿತ್ರರು ರಾ॥ ರಾ॥ ರಾಚಪ್ಪನವರಿಗೆ ತಲಪಿಸಬೇಕು. ಬೆಂಗಳೂರು ಬಸವನ ಗುಡಿ ಬಾಂದಿನವರ ಬೀದಿ.

3 ಕಡೂರಿಗೆ, ಬೆಂಗಳೂರಿಂದ ಬಂದಿರುವ ಫಾರೆಸ್ಟರು ಲಕ್ಷ್ಮೀನಾರಾಯಣರಾಯರವರ ಸಮಕ್ಷೇಮಂಗಳಿಗೆ ಜರೂರು ಜರೂರು.

4 ಮೈಸೂರಿಗೆ, ದಿನಸೀ ವ್ಯಾಪಾರಿಗಳು ಕೃಷ್ಣರಾಜವೊಹಲ್ಲಾದಲ್ಲಿರುವ ಬಿ. ರುದ್ರಪ್ಪ ಅಂಡ್ ಸನ್ಸ್—ಇವರಿಗೆ.

5 ಹೊನ್ನವಳ್ಳಿಯಲ್ಲಿರುವ ಗಂಗಾಭಾಗೀರಥಿಸಮಾನರಾದ ಕಂದಾಚಾರದ ನಾಗಮ್ಮನವ ರಿಗೆ, ತರೀಕೆರೆಯಿಂದ.

6 ಹಾಲೇಕಲ್ಲಿನಲ್ಲಿರುವ ಗಂಗಪ್ಪ ಈ ವಿಳಾಸ ನೋಡಿಕೊಂಡು ನಮ್ಮ ಬೋಗಯ್ಯನವ ರಿಗೆ ತಲಪಿಸಬೇಕು, ಮಾಚಪ್ಪನ ಬಾಬತು.

7 ಚಿರಂಜೀವಿ ನಮ್ಮ ಕಿಟ್ಟೂಗೆ, ಮಹಾರಾಜಮಾನ್ಯರಾಜೇಶ್ರೀ ಭಗವಂತರಾಯರು ನೋಡಿಕೊಡುವ ಬಗ್ಗೆ ಕಡೂರು ತಾಲ್ಲೂಕು ಎಳ್ಳಂಬಳಸೆಗೆ.

# ಐದನೆಯ ಅಧ್ಯಾಯ

## ವಾಕ್ಯಗಳನ್ನು ಬೆಳೆಯಿಸುವುದು

**26.** ವಾಕ್ಯಗಳೆಲ್ಲ ಒಂದೇ ಬಗೆಯಾಗಿರುವುದಿಲ್ಲ. ಕೆಲವು ಸಣ್ಣವಾಗಿರುತ್ತವೆ; ಕೆಲವು ದೊಡ್ಡವಾಗಿರುತ್ತವೆ. ಅಭಿಪ್ರಾಯವನ್ನು ತಿಳಿಸುವುದಕ್ಕೆ ಕೆಲವು ವೇಳೆ ಒಂದೊಂದೇ ಮಾತು ಸಾಕಾಗಿರುವುದು. ಮತ್ತೆ ಕೆಲವು ಸಂದರ್ಭಗಳಲ್ಲಿ ಅನೇಕ ಶಬ್ದಗಳನ್ನು ಸೇರಿಸಿ ವಾಕ್ಯವನ್ನು ಬೆಳೆಯಿಸಿಕೊಳ್ಳಬೇಕಾಗುವುದು. ಉದಾಹರಣೆಗೆ ಇಲ್ಲಿರುವ ವಾಕ್ಯಗಳನ್ನು ನೋಡಿ:

1 ನಡೆ!

2 ಕೂಡಲೆ ನಡೆ!

3 ನಾಳೆ ಮಧ್ಯಾಹ್ನದ ರೈಲಿನಲ್ಲಿ ನೀನೊಬ್ಬನೇ ಹೊರಡು.

4 ರಾಮನು ಹೊರಟು ಹೋದನು.

5 ನನ್ನ ಪ್ರೇಮದ ಕಂದನಾದ ಶ್ರೀರಾಮನು ನನ್ನ ಅವಿವೇಕದಿಂದ ಹೊರಟು ಹೋದನು.

6 ಇದನ್ನು ಕೇಳಿ ರಾಮನು ಗಾಬರಿಯಿಂದ ಏನೊಂದುತ್ತರವನ್ನೂ ಕೊಡದೆ ಜಗ್ಗನೆ ಎದ್ದು ಹೊರಟು ಹೋದನು.

7 ಏನೂ ತಿಳಿಯದ ಆ ಹುಡುಗರು ತುಂಟನಾದ ತಿಮ್ಮನನ್ನು ಮುಂದಾಳು ಮಾಡಿ ಕೊಂಡರು.

ಒಂದನೆಯ ವಾಕ್ಯದಲ್ಲಿ 'ನಡೆ'–ಎಂಬ ಕ್ರಿಯೆಯೊಂದೇ ಇದೆ. 'ನೀನು'—ಎಂಬ ಕರ್ತೃ ಅಧ್ಯಾಹಾರವಾಗಿರುವುದು. ಜೋರಿನಿಂದ ಕಟ್ಟುಮಾಡುವುದಕ್ಕೆ 'ಬೇಗ!', 'ಏಳು'—ಮುಂತಾದ ಒಂದೊಂದೇ ಮಾತು ಸಾಕು. ಆದರೆ ಅಂಥ ಸಂದರ್ಭಗಳಲ್ಲಿ ಕರ್ತೃವಾಗಲಿ, ಕ್ರಿಯೆಯಾಗಲಿ, ಇವೆರಡೂ ಆಗಲಿ—ಅಧ್ಯಾಹಾರ ವಾಗಿರುವುವು, ಅಷ್ಟೆ. ಅಂತೂ ವಾಕ್ಯದಲ್ಲಿ ಕರ್ತೃ, ಕ್ರಿಯೆ— ಎಂಬ ಎರಡು ಭಾಗ ಗಳಿದ್ದೇ ಇರಬೇಕು. ಅಭಿಪ್ರಾಯವನ್ನು ಸರಿಯಾಗಿ ತಿಳಿಸಬೇಕಾದರೆ 'ಯಾವಾಗ', 'ಯಾರ ಜೊತೆಯಲ್ಲಿ?' 'ಯಾವ?', 'ಎಂಥ' 'ಹೇಗೆ?',–ಮುಂತಾದುವನ್ನು ತಿಳಿಸುವುದಕ್ಕಾಗಿ 'ಕೂಡಲೆ', 'ನೀನೊಬ್ಬನೇ', 'ಮಧ್ಯಾಹ್ನದ', 'ಏನೂ ತಿಳಿಯದ' 'ಜಗ್ಗನೆ'– ಮುಂತಾದ ತಕ್ಕ ಪದಗಳನ್ನೋ ಸಂಯುಕ್ತಪದಗಳನ್ನೋ ಉಪಯೋಗಿಸ ಬೇಕಾಗುವುದು. ಕರ್ತೃವನ್ನು ವಿವರಿಸಬೇಕಾದರೆ ಅದಕ್ಕೆ ತಕ್ಕ ವಿಶೇಷಣಗಳುಬೇಕಾ ಗುತ್ತವೆ; ಉದಾಹರಣೆಗೆ ಐದನೆಯ ವಾಕ್ಯವನ್ನು ನೋಡಿ. ಕ್ರಿಯೆಯನ್ನು ಸರಿಯಾಗಿ ತಿಳಿಯಿಸುವುದಕ್ಕೆ ಅದಕ್ಕೂ ವಿಶೇಷಣಗಳು ಬೇಕಾಗುತ್ತವೆ; ಆರನೆಯ ವಾಕ್ಯವನ್ನು ನೋಡಿ.

**ಕರ್ತೃವಿಗೆ** (ಮತ್ತು ಉಳಿದ ಕಾರಕಗಳಿಗೆ) ಯಾವ? ಎಂಥ? ಎಷ್ಟು? (ಗಾತ್ರ, ತೂಕ, ಅಳತೆ, ಸಂಖ್ಯೆ)–ಎಂಬುದನ್ನು ತೋರಿಸುವ **ವಿಶೇಷಣಗಳು** ಬೇಕಾಗುವುವು.

**ಕ್ರಿಯೆಗೆ** ಎಲ್ಲಿ? ಯಾವಾಗ? ಹೇಗೆ? ಎಷ್ಟುಮಟ್ಟಿಗೆ? ಎಷ್ಟು ಸಲ? ಯಾವ ಉದ್ದೇಶದಿಂದ? ಏನು ಕಾರಣ? ಎಷ್ಟು? (ಹೊತ್ತು, ದೂರ, ತೂಕ) ಏನಾದರೆ? ಎಷ್ಟರೊಳಗೆ? ಏನಾದರೂ? ಏತರಂತೆ?–ಮುಂತಾದುವನ್ನು ತಿಳಿಸುವ **ವಿಶೇಷಣಗಳು**[1] ಬೇಕಾಗುವುವು.

## ಅಭ್ಯಾಸ 77

ಇಲ್ಲಿರುವ ವಾಕ್ಯಗಳಲ್ಲಿ (ಗುಣ, ಸಂಖ್ಯೆ, ಪರಿಮಾಣ — ಮೊದಲಾದುವುಗಳನ್ನು ತೋರಿಸುವುದಕ್ಕೂ ಕಾಲ, ಸ್ಥಳ, ಸಂದರ್ಭ, ರೀತಿ, ಕ್ರಮ, ಉಪಾಯ, ಕಾರಣ, ಉದ್ದೇಶ– ಮೊದಲಾದ ವಿವರವನ್ನು ಗೊತ್ತಾಗಿ ತಿಳಿಯಿಸುವುದಕ್ಕೂ) ತಕ್ಕ ಮಾತುಗಳನ್ನೋ ಸಂಯುಕ್ತ ಪದಗಳನ್ನೋ ಅಧೀನವಾಕ್ಯಗಳನ್ನೋ ವಿಶೇಷಣವಾಗಿ ಸೇರಿಸಿ ವಿಷಯವು ಚೆನ್ನಾಗಿ ರುಚಿಹತ್ತುವಂತೆ ಮಾಡಿ:—

### ದಶರಥನ ಕಳವಳ

ದಶರಥನು ಎಚ್ಚತ್ತನು. ರಾಮನು ಕಾಣಿಸಲಿಲ್ಲ. ಕೈಕೇಯಿಯೊಬ್ಬಳೇ ಕೂತಿದ್ದಳು. ದೊರೆಯು ಮೂರ್ಛೆಹೋದನು. ಅವನು "ರಾಮ! ರಾಮ!" ಎಂದು ಕನವರಿಸಿಕೊಳ್ಳುತ್ತಿದ್ದನು. ಮೇಲಕ್ಕೆದ್ದನು. ಕೈಕೇಯಿಯನ್ನು ಬೇಡಿಕೊಂಡನು. ಮೂರ್ಛೆಬಿದ್ದನು. ಎಚ್ಚತ್ತು ಕೈಕೇಯಿಯನ್ನು ಗದರಿಸಿದನು. ತನ್ನನ್ನು ತಾನೇ ನಿಂದಿಸಿ ಕೊಂಡನು. ಕೋಣೆಯಲ್ಲಿ ಓಡಾಡುತ್ತಿದ್ದನು. ಏನನ್ನೋ ಯೋಚಿಸಿಕೊಳ್ಳುತ್ತಿದ್ದನು. ಕೊನೆಗೆ ಮಲಗಿಕೊಂಡನು. ಬೆಳಕು ಹರಿಯಿತು.

**27.** ವಾಕ್ಯಗಳನ್ನು ಬೆಳೆಯಿಸುವುದಕ್ಕೆ ವಿಶೇಷಣಗಳನ್ನು ಸೇರಿಸುವುದೊಂದೇ ಉಪಾಯವಲ್ಲ. ಎರಡು ಮೂರು ಸಣ್ಣ ವಾಕ್ಯಗಳನ್ನು ಒಂದೇ ವಾಕ್ಯವಾಗಿ ಒಟ್ಟುಗೂಡಿಸಿ ಹೆಣೆಯಲೂ ಬಹುದು. ಉದಾಹರಣೆಗೆ ಈ ಮಹಾವಾಕ್ಯದಲ್ಲಿರುವ ವಾಕ್ಯಗಳನ್ನು ನೋಡಿ:–

"ಇಷ್ಟರಲ್ಲಿಯೆ ನನ್ನ ಹೊಗೆಬತ್ತಿಯ ಚಿಲುಮೆಯಲ್ಲಿದ್ದ ಬೆಂಕಿ ಆರಿಹೋಗಲು ದೂರದಲ್ಲಿ ಒಂದು ಡೇರೆಯ ಹತ್ತಿರ ಉರಿ ಕಾಣಿಸಿದುದರಿಂದ ಸ್ವಲ್ಪ ಬೇಗಬೇಗನೆ ಅಲ್ಲಿಗೆ ಹೊರಟೆನು. ಹೋಗುತ್ತಿರುವಾಗ ಮರಗಳ ಮೇಲೆ ಏನೋ ಥಳಥಳನೆ ಹೊಳೆದ ಹಾಗೆ ನನ್ನ ಕಣ್ಣಿಗೆ ಬೀಳಲು

---

[1] ತೃತೀಯಾ, ಚತುರ್ಥೀ, ಪಂಚಮೀ, ಸಪ್ತಮೀ ವಿಭಕ್ತಿಗಳೂ ಕ್ರಿಯಾವಿಶೇಷಣಗಳೇ; ಇವುಗಳನ್ನು ಕಾರಕರೂಪವಾದ ವಿಶೇಷಣಗಳೆಂದು ಕರೆಯುತ್ತಾರೆ.

ಅದರ ಹತ್ತಿರ ಹೋಗಿ ನೋಡಿದೆನು. ಅದೊಂದು ಸೊಗಸಾದ ರತ್ನದ ಉಂಗುರ. ಅದನ್ನು ತೆಗೆದುಕೊಂಡು 'ಬೆಳಗಾದ ಮೇಲೆ ಕೊತ್ವಾಲನ ಕೈಗೆ ಕೊಟ್ಟರೆ, ಯಾರದೋ ವಿಚಾರಿಸಿ ಕೊಡುವನು; ಅದುವರೆಗೂ ನನ್ನ ಬೆರಳಲ್ಲಿರಲಿ'—ಎಂದು ಅದನ್ನು ಬೆರಳಿಗೆ ಹಾಕಿಕೊಂಡೆನು. ಇಲ್ಲಿಯೂ ಆ ದುರದೃಷ್ಟವು ನನ್ನನ್ನು ಪರೀಕ್ಷಿಸಬೇಕೆ? ಉಂಗುರವನ್ನು ಕಿರುಬೆರಳಿಗೆ ಹಾಕಿಕೊಂಡೆನು. ಅದಕ್ಕೆ ಅದು ಸ್ವಲ್ಪ ಸಡಿಲವಾಗಿತ್ತು; ಆದುದರಿಂದ ನಾನು ಬತ್ತಿಯನ್ನು ಹತ್ತಿಸಿಕೊಂಡು ಬರುವ ಆತುರದಲ್ಲಿ ಅದನ್ನು ಎಲ್ಲಿಯೋ ಕೆಡವಿದೆನು. ಒಡನೆ ಎಲ್ಲಿ ಬಿತ್ತೋ ಎಂದು ಹುಡುಕಲು ಬಗ್ಗಿಕೊಂಡು ತಡಕಾಡುತ್ತಿದ್ದೆನು. ಮಗ್ಗುಲಲ್ಲಿಯೇ ಒಂದು ಹೇಸರಕತ್ತೆ ಕಟ್ಟಿಹಾಕಿತ್ತು. ಅದರ ಹತ್ತಿರ ಹಾಕಿದ್ದ ಹುಲ್ಲನ್ನು ನಾನು ಕೆದರುತ್ತಿರಲು ಆ ದುಷ್ಟಜಾತಿಯ ಮೃಗವು ಒಂದು ಸಾರಿ ಕಾಲನ್ನು ಬಲವಾಗಿ ಝಾಡಿಸಿತು. ಆ ಒದೆ ನನ್ನ ತಲೆಗೆ ಸರಿಯಾಗಿ ಬೀಳಲು ಮೈಮೇಲೆ ಪ್ರಜ್ಞೆಯಿಲ್ಲದೆ ಗಟ್ಟಿಯಾಗಿ ಕಿರಿಚಿಕೊಂಡೆನು.

ಇಲ್ಲಿರುವ ವಾಕ್ಯಗಳಲ್ಲಿ

1 ಬೆಳಗಾದ ಮೇಲೆ ಕೊತ್ವಾಲನ ಕೈಗೆ ಕೊಟ್ಟರೆ ಯಾರದೋ ವಿಚಾರಿಸಿ ಕೊಡುವನು; ಅದುವರೆಗೂ ನನ್ನ ಬೆರಳಲ್ಲಿರಲಿ.

2 ಅದಕ್ಕೆ ಅದು ಸ್ವಲ್ಪ ಸಡಿಲವಾಗಿತ್ತು; ಆದುದರಿಂದ ನಾನು ಬತ್ತಿಯನ್ನು ಹತ್ತಿಸಿಕೊಂಡು ಬರುವ ಆತುರದಲ್ಲಿ ಅದನ್ನು ಎಲ್ಲಿಯೋ ಕೆಡವಿದೆನು.

3 ಒಡನೆ ಎಲ್ಲಿ ಬಿತ್ತೋ ಎಂದು ಹುಡುಕಲು ಬಗ್ಗಿಕೊಂಡು ತಡಕಾಡುತ್ತಿದ್ದೆನು.

ಈ ಮೂರು ವಾಕ್ಯಗಳಲ್ಲಿಯೂ ಎರಡೆರಡು ಸಣ್ಣವಾಕ್ಯಗಳು ಸೇರಿಕೊಂಡಿವೆ. ಆ ಎರಡು ವಾಕ್ಯಗಳೂ ಸೇರಿ ಒಟ್ಟರ್ಥವನ್ನು ಕೊಡುವ ಒಂದೊಂದು ವಾಕ್ಯವಾಗಿದೆ. ಹೀಗೆ ಮತ್ತೊಂದು ದೊಡ್ಡ ವಾಕ್ಯದ ಭಾಗವಾಗಿರುವ ವಾಕ್ಯಕ್ಕೆ **ಉಪವಾಕ್ಯ**ವೆಂದು ಹೆಸರು. ಉಪವಾಕ್ಯದಲ್ಲಿ ಪೂರ್ಣಕ್ರಿಯಾಪದವಿರಬೇಕು; ಬರಿಯ ಕೃದಂತವಿದ್ದರೆ ಅದನ್ನು ಉಪವಾಕ್ಯವೆನ್ನಲಾಗದು. ಹೇಗೆಂದರೆ (1)ನೆಯ ವಾಕ್ಯದಲ್ಲಿ 'ಕೊಡುವನು', 'ಇರಲಿ'—ಎಂಬ ಎರಡು ಕ್ರಿಯಾಪದಗಳಿವೆ; (2)ನೆಯ ವಾಕ್ಯದಲ್ಲಿ 'ಇತ್ತು' 'ಕೆಡವಿದೆನು'—ಎಂಬ ಎರಡು ಕ್ರಿಯಾಪದಗಳಿವೆ; (3)ನೆಯ ವಾಕ್ಯದಲ್ಲಿ 'ಬಿತ್ತು', 'ತಡಕಾಡುತ್ತಿದ್ದೆನು'—ಎಂಬ ಎರಡು ಕ್ರಿಯಾಪದಗಳಿವೆ. ಆದ್ದರಿಂದ ಈ ಮೂರು ವಾಕ್ಯಗಳಲ್ಲಿಯೂ ಎರಡೆರಡು ಉಪವಾಕ್ಯಗಳಿವೆ.

ಆದರೆ ಈ ವಾಕ್ಯವನ್ನು ನೋಡಿ:—

ಆ ಒದೆ ನನ್ನ ತಲೆಗೆ ಸರಿಯಾಗಿ ಬೀಳಲು ಮೈಮೇಲೆ ಪ್ರಜ್ಞೆಯಿಲ್ಲದೆ ಗಟ್ಟಿಯಾಗಿ ಕಿರಿಚಿಕೊಂಡೆನು.

ಇಲ್ಲಿ 'ಕಿರಿಚಿಕೊಂಡೆನು' ಎಂಬ ಒಂದೇ ಪೂರ್ಣಕ್ರಿಯಾಪದವಿದೆ. 'ಬೀಳಲು' ಎಂಬುದು ಕ್ರಿಯಾಪದವಲ್ಲ, (ಪುರುಷವಚನಗಳನ್ನು ತಿಳಿಸದೆ ಬರಿಯ ಕ್ರಿಯೆಯನ್ನು ತಿಳಿಸುವ) ಕೃದಂತ. ಆದ್ದರಿಂದ ಈ ವಾಕ್ಯದಲ್ಲಿ ಒಂದೇ ಉಪವಾಕ್ಯವಿದೆ. ಈ ವಾಕ್ಯದಲ್ಲಿ ಎರಡು ಉಪವಾಕ್ಯಗಳಿರಬೇಕಾದರೆ,

'ಆ ಒದೆ ನನ್ನ ತಲೆಗೆ ಸರಿಯಾಗಿ ಬಿತ್ತು; ಆಗ ಮೈಮೇಲೆ ಪ್ರಜ್ಞೆಯಿಲ್ಲದೆ ಗಟ್ಟಿಯಾಗಿ ಕಿರಿಚಿಕೊಂಡೆನು' ಎಂದು ಬರೆಯಬೇಕಾಗುವುದು.

## ಅಭ್ಯಾಸ 78

ಈ ಕಥೆಯಲ್ಲಿ ಯಾವ ವಾಕ್ಯಗಳಲ್ಲಿ ಉಪವಾಕ್ಯ (ಎಂದರೆ ಪೂರ್ಣ ಕ್ರಿಯಾಪದ ಗಳಿಗಿರುವ ವಾಕ್ಯಭಾಗ) ಗಳಿವೆ? ಉಪವಾಕ್ಯಗಳನ್ನು ಬೇರೆ ಬೇರೆಯಾಗಿ ವಿಂಗಡಿಸಿ ಹೇಳಿರಿ:–

### ಚಿಕ್ಕ ತಾರ್ಕಿಕನು

ಒಬ್ಬ ಬ್ರಾಹ್ಮಣರ ಹುಡುಗನು ತರ್ಕಶಾಸ್ತ್ರವನ್ನು ಕಲಿಯುತ್ತಿದ್ದನು. ಒಂದು ದಿನ ಅವನ ತಂದೆಯು ಹೊಗೆಯಿದ್ದಲ್ಲಿ ಬೆಂಕಿಯಿರುವುದೆಂಬ ದೃಷ್ಟಾಂತವನ್ನು ಶಾಸ್ತ್ರದಲ್ಲಿ ಹೇಳಿಕೊಟ್ಟನು. ಅದೇ ರಾತ್ರಿಯಲ್ಲಿ ಹುಡುಗನು ಪೇಟೆಯಲ್ಲಿ ಹೋಗುತ್ತಿರುವಾಗ ಒಬ್ಬ ಮುಸಲ್ಮಾನನು ಬೀಡಿ ಸೇದುತ್ತಿರುವದನ್ನು ಕಂಡನು. ಅವನ ಮುಖದಿಂದ ಹೊಗೆ ಬರುತ್ತಿದ್ದುದನ್ನು ನೋಡಿದ ಈ ಹುಡುಗನು ಅವನ ಬಾಯಿಗೆ ಬೆಂಕಿಹತ್ತಿಕೊಂಡಿರಬೇಕೆಂದು ಊಹಿಸಿ ತನ್ನ ಕೈಯಲ್ಲಿದ್ದ ತಂಬಿಗೆಯ ನೀರನ್ನು ಕೂಡಲೆ ಅವನ ಮೇಲೆ ಎರಚಿದನು! ಇದನ್ನು ನೋಡಿದ ಜನರು "ಇದೇ ನಯ್ಯ? ನಿನಗೇನು ಹುಚ್ಚುಹಿಡಿದಿದೆಯೆ? ಅವನ ಮೇಲೇಕೆ ನೀರು ಹಾಕುತ್ತಿದ್ದೀಯೆ?" ಎಂದು ಕೇಳಲು ಹುಡುಗನು "ಅಯ್ಯೋ ಪಾಪ! ಅವನು ಬೆಂಕಿ ಹತ್ತಿಕೊಂಡು ಸುಟ್ಟು ಹೋಗುತ್ತಿದ್ದಾನಲ್ಲ! ಇದನ್ನು ನೋಡಿದರೂ ಸುಮ್ಮನಿರಬಹುದೆ?" ಎಂದನು. ಎಲ್ಲರೂ ಗೊಳ್ಳೆಂದು ನಕ್ಕರು.

28. ಉಪವಾಕ್ಯಗಳಲ್ಲಿ ಎರಡು ಪಂಗಡಗಳುಂಟು; ಒಂದು ಬಗೆಯ ಉಪವಾಕ್ಯ ಗಳನ್ನು ಬೇರೆಬೇರೆಯಾಗುವಂತೆ ಒಂದರಿಂದೊಂದನ್ನು ಅಗಲಿಸಿದರೂ ಸ್ವತಂತ್ರವಾಕ್ಯ ಗಳಾಗುತ್ತವೆ. ಅವುಗಳಲ್ಲಿ ಒಂದೊಂದಕ್ಕೂ ಸ್ವತಂತ್ರವಾದ ಅಭಿಪ್ರಾಯವಿರುತ್ತದೆ. ಇನ್ನೊಂದು ಬಗೆಯ ವಾಕ್ಯಗಳಿಗೆ ಹೀಗಿರುವುದಿಲ್ಲ. ಉದಾಹರಣೆಗೆ ಈ ವಾಕ್ಯಗಳ ನ್ನು ನೋಡಿ:–

1 ಬೆಳಗಾದಮೇಲೆ ಕೊತ್ವಾಲನ ಕೈಗೆ ಕೊಟ್ಟರೆ ಯಾರದೋ ವಿಚಾರಿಸಿ ಕೊಡುವನು; ಅದುವರೆಗೂ ನನ್ನ ಬೆರಳಿನಲ್ಲಿರಲಿ.

2 ಆದಕ್ಕೆ ಆ ಉಂಗುರವು ಸ್ವಲ್ಪ ಸಡಿಲವಾಗಿತ್ತು; ಆದುದರಿಂದ ನಾನು ಬತ್ತಿಯನ್ನು ಹತ್ತಿಸಿಕೊಂಡು ಬರುವ ಆತುರದಲ್ಲಿ ಅದನ್ನು ಎಲ್ಲಿಯೋ ಕೆಡವಿದೆನು.

3 ಒಡನೆ ಎಲ್ಲಿ ಬಿತ್ತೋ ಎಂದು ಹುಡುಕಲು ಬಗ್ಗಿಕೊಂಡು ತಡಕಾಡುತ್ತಿದ್ದೆನು.

ಇಲ್ಲಿ [1]ನೆಯ ವಾಕ್ಯದಲ್ಲಿ 'ವಿಚಾರಿಸಿಕೊಡುವನು' ಎಂಬಲ್ಲಿಗೆ ನಿಲ್ಲಿಸಿದರೂ ಅಷ್ಟಕ್ಕೆ ಆದಷ್ಟು ಅಭಿಪ್ರಾಯವು ಪೂರ್ಣವಾಗಿ ಗೊತ್ತಾಗುವಂತಿದೆ; [2]ನೆಯ ವಾಕ್ಯದಲ್ಲಿ 'ಸಡಿಲವಾಗಿತ್ತು' ಎಂಬಲ್ಲಿಗೆ ನಿಲ್ಲಿಸಿದರೂ ಅಷ್ಟಕ್ಕೆ ಆದಷ್ಟು ಅಭಿಪ್ರಾಯವು ಪೂರ್ಣವಾಗಿ ಗೊತ್ತಾಗುತ್ತದೆ. ಆದರೆ [3]ನೆಯ ವಾಕ್ಯದಲ್ಲಿ ಹೀಗಿಲ್ಲ. 'ಒಡನೆ ಎಲ್ಲಿ ಬಿತ್ತೋ ಎಂದು'—ಎಂಬಲ್ಲಿಗೆ ನಿಲ್ಲಿಸಿದರೆ ವಾಕ್ಯವು ಪೂರ್ಣವಾಗುವುದಿಲ್ಲ. ಇಲ್ಲಿ ಮುಂದೇನೆಂಬ ಪ್ರಶ್ನೆ ಬರುವುದು. ಆದ್ದರಿಂದ ಈ ಉಪವಾಕ್ಯಕ್ಕೆ ಮತ್ತೊಂದರ ಅಪೇಕ್ಷೆ ಇರುವದು. ಹೀಗೆ ಮುಂದೇನೆಂಬ ಪ್ರಶ್ನೆ ಬರುವಹಾಗಿದ್ದು ಮತ್ತೊಂದರ ಅಪೇಕ್ಷೆಯಿರುವುದಕ್ಕೆ ಆಕಾಂಕ್ಷೆಯೆಂದು ಹೆಸರು. ಆಕಾಂಕ್ಷೆಯಿರುವ ಉಪವಾಕ್ಯಕ್ಕೆ ಅಧೀನವಾಕ್ಯವೆಂದು ಹೆಸರು; ಆಕಾಂಕ್ಷೆಯಿಲ್ಲದ ಉಪವಾಕ್ಯಗಳಿಗೆ ಸಮಾನವಾಕ್ಯಗಳೆಂದು ಹೆಸರು.

## ಅಭ್ಯಾಸ 79

ಈ ಮಹಾವಾಕ್ಯವನ್ನು ಮೂರು ಮಹಾವಾಕ್ಯಗಳಾಗಿ ಬರೆಯಿರಿ. ಇಲ್ಲಿರುವ ವಾಕ್ಯಗಳಲ್ಲಿ ಒಂದಕ್ಕಿಂತ ಹೆಚ್ಚು ಕ್ರಿಯಾಪದಗಳಿರುವ ವಾಕ್ಯಗಳು ಯಾವುವು? ಅವುಗಳ ಉಪವಾಕ್ಯಗಳು ಅಧೀನವಾಕ್ಯಗಳೊ, ಸಮಾನವಾಕ್ಯಗಳೊ? ಏಕೆ?

## ಕೂರ್ಮಾವತಾರದ ಕಥೆ

ಒಮ್ಮೆ ದೇವತೆಗಳೂ ಅಸುರರೂ ಸೇರಿ ಅಮೃತವನ್ನು ಪಡೆಯುವುದಕ್ಕಾಗಿ ಮಂದಾರ ಪರ್ವತವನ್ನು ಕಡೆಗೋಲುಮಾಡಿಕೊಂಡು ಹಾಲ್ಗಡಲನ್ನು ಕಡೆಯುವುದಕ್ಕೆ ಮೊದಲು ಮಾಡಿದರು. ಆ ಪರ್ವತವು ಬಹು ಭಾರವಾಗಿದ್ದುದರಿಂದ ಸಮುದ್ರದಲ್ಲಿ ಮುಳುಗಿಹೋಗುವುದರಲ್ಲಿತ್ತು. ಅದು ಮುಳುಗಿಹೋಗಿದ್ದರೆ ಯಾರಿಗೂ ಅಮೃತವು ಸಿಕ್ಕುತ್ತಲೇ ಇರಲಿಲ್ಲ; ಆದ್ದರಿಂದ ದೇವತೆಗಳೆಲ್ಲರೂ ತಮಗೆ ಸಹಾಯಮಾಡಬೇಕೆಂದು ವಿಷ್ಣುವನ್ನು ಬೇಡಿಕೊಂಡರು. ದೇವತೆಗಳು ವಿಷ್ಣುವಿಗೆ ಭಕ್ತರು, ತನ್ನ ಭಕ್ತರಿಗೆ ಅಮೃತವನ್ನು ಕುಡಿಸಿ, ಅವರಿಗೆ ಸಾವಿನಂಜಿಕೆಯಿಲ್ಲದಂತೆ ಮಾಡಿ, ಅವರ ಹಗೆಗಳಾದ ಅಸುರರನ್ನು ಪಾತಾಳಕ್ಕೆ ತುಳಿಯಬೇಕೆಂದು ವಿಷ್ಣುವಿನ ಸಂಕಲ್ಪವಿತ್ತು. ಆದ್ದರಿಂದ ಅವನು ಒಂದು ದೊಡ್ಡ ಆಮೆಯ ರೂಪವನ್ನು ತೆಗೆದುಕೊಂಡು ಪರ್ವತವನ್ನು ತನ್ನ ಬೆನ್ನಮೇಲೆ ಹೊತ್ತುಕೊಂಡನು; ಇದರಿಂದ ಪರ್ವತವು ಮುಳುಗದಂತೆ ಸರಿಯಾಗಿ ನಿಂತುಕೊಂಡಿತು. ಇನ್ನು ದೇವತೆಗಳೂ ದೈತ್ಯರೂ ಸಲೀಸಾಗಿ ಸಮುದ್ರವನ್ನು ಕಡೆದರು. ಅದರಿಂದ ಒಳ್ಳೊಳ್ಳೆಯ ಬೆಲೆಯುಳ್ಳ ವಸ್ತುಗಳು ಹುಟ್ಟಿದುವು;

ಕೊನೆಗೆ ಅಮೃತವೂ ಮೇಲಕ್ಕೆ ಬಂತು. ಅದು ದೇವತೆಗಳಿಗೆ ದಕ್ಕಿಯೂ ದಕ್ಕಿತು; ಅದರ ಬಲದಿಂದ ಅಮರಾವತಿಯಲ್ಲಿ ಅಸುರರ ಹಾವಳಿಯೂ ಕಡಿಮೆಯಾಗುವಂತಾಯಿತು.

29. ಒಂದೇ ಪೂರ್ಣಕ್ರಿಯಾಪದವಿರುವ ವಾಕ್ಯಕ್ಕೆ **ಸಾಮಾನ್ಯವಾಕ್ಯ**ವೆಂದು ಹೆಸರು. ಸಮಾನವಾಕ್ಯಗಳು ಸೇರಿದ ವಾಕ್ಯಕ್ಕೆ **ಸಂಯೋಜಿತವಾಕ್ಯ**ವೆಂದೂ ಅಧೀನ ವಾಕ್ಯಗಳಿಂದ ಕೂಡಿದ ವಾಕ್ಯಕ್ಕೆ **ಮಿಶ್ರವಾಕ್ಯ**ವೆಂದೂ ಹೆಸರು.

ವಾಕ್ಯರಚನೆಯಲ್ಲಿ ಬರಿಯ ಸಾಮಾನ್ಯವಾಕ್ಯಗಳನ್ನೇ ಉಪಯೋಗಿಸಿದರೂ ಕೆಲವು ಕಡೆ ಸಾಗುತ್ತದೆ. ಇನ್ನು ಕೆಲವು ಕಡೆ ಸಂಯೋಜಿತ ವಾಕ್ಯವನ್ನೋ ಮಿಶ್ರ ವಾಕ್ಯವನ್ನೋ ಉಪಯೋಗಿಸಿದರೇ ತಾತ್ಪರ್ಯವು ಚೆನ್ನಾಗಿ ಗೊತ್ತಾಗುತ್ತದೆ.

ಉದಾ: (1) ಅವನು ಬರುವುದಿಲ್ಲವೆಂದು ಗೊತ್ತಾಯಿತಷ್ಟೆ?

(2) ತಾವು ಆಡಿದ ಮಾತುಗಳೇನೋ ಜನರಿಗೆ ಬಹುಕಾಲ ನೆನಪಿನಲ್ಲಿರುವುದಿಲ್ಲ; ಆದರೆ ಅವುಗಳಿಂದಾದ ಫಲವನ್ನು ಅವರು ಎಂದಿಗೂ ಮರೆಯಲಾರರು.

ಇಲ್ಲಿ [1]ನೆಯ ವಾಕ್ಯದಲ್ಲಿ 'ಅವರು ಬರುವುದಿಲ್ಲವೆಂದು'–ಎಂಬ ಅಧೀನ ವಾಕ್ಯವನ್ನು ತೆಗೆದು ಅದೇ ಅಭಿಪ್ರಾಯವನ್ನು ಕೊಡುವಂತೆ ಒಂದು ಪದವನ್ನಾಗಲಿ ಸಂಯುಕ್ತಪದವನ್ನಾಗಲಿ ಇಡುವುದಕ್ಕೆ ಆಗುವುದಿಲ್ಲ. ಬೇಕಾದರೆ 'ಅವನು ಬರುವುದಿಲ್ಲ. ಇದು ಗೊತ್ತಾಯಿತಷ್ಟೆ?' ಎಂದು ಎರಡು ಸಾಮಾನ್ಯವಾಕ್ಯಗಳಾಗಿ ವಿಂಗಡಿಸಬಹುದು; ಆದರೆ ಅಧೀನವಾಕ್ಯವನ್ನು ಉಪಯೋಗಿಸಿದರೆ ವಾಕ್ಯಾರ್ಥಗಳ ಸಂಬಂಧವು ಬೇಗ ಗೊತ್ತಾಗುತ್ತದೆ. [2]ನೆಯ ವಾಕ್ಯದಲ್ಲಿ ಎರಡು ಸಾಮಾನ್ಯವಾಕ್ಯಗಳನ್ನು ಒಟ್ಟುಗೂಡಿಸಿರುವುದರಿಂದ ಆಡಿದ ಮಾತುಗಳಿಗೂ ಅವುಗಳ ಪರಿಣಾಮಕ್ಕೂ ಇರುವ ತಾರತಮ್ಯವು ಎದ್ದು ಕಾಣುತ್ತದೆ.

## ಅಭ್ಯಾಸ 80

ಇಲ್ಲಿರುವ ಸಾಮಾನ್ಯವಾಕ್ಯಗಳನ್ನೂ ಮಿಶ್ರವಾಕ್ಯಗಳನ್ನೂ ಸಂಯೋಜಿತವಾಕ್ಯಗಳನ್ನೂ ಗೊತ್ತುಮಾಡಿ.

### ಸಂಗೀತರಸಿಕ

ಒಂದೂರಿನಲ್ಲಿ ರಾಮರೆಡ್ಡಿ ಎಂಬ ಸಾಹುಕಾರನಿದ್ದನು. ಅವನಿಗೆ ಸಂಗೀತದಲ್ಲಿ ಹೆಚ್ಚಾಗಿ ಅಭಿರುಚಿ ಇದ್ದುದರಿಂದ ಎಷ್ಟೋ ಜನ ಸಂಗೀತವಿದ್ವಾಂಸರು ಅವನಲ್ಲಿಗೆ ಬಂದು ಬಹುಮಾನವನ್ನು ಪಡೆಯುತ್ತಿದ್ದರು. "ಸಂಗೀತರಸವನ್ನು ತಿಳಿಯುವುದಕ್ಕೆ ರಾಮರೆಡ್ಡಿಯೇ ಸರಿ!" ಎಂದು—ಜನರು ಆತನನ್ನು ಕೊಂಡಾಡುತ್ತಿದ್ದರು.

ಹೀಗಿರಲು ನೆರೆಯೂರಿನಲ್ಲಿ ಅವನಷ್ಟೇ ಹಣಗಾರನಾದ ತಿಮ್ಮರೆಡ್ಡಿಗೆ ತಾನೂ ಜನರಲ್ಲಿ ಹೆಸರಾಗಬೇಕೆಂಬ ಆಸೆ ಹುಟ್ಟಿತು. ಆದರೆ ಅವನಿಗೆ ಸಂಗೀತಜ್ಞಾನದ ಗಂಧವೇ ಇರಲಿಲ್ಲ; ಆದುದರಿಂದ ಒಂದು ಉಪಾಯವನ್ನು ಮಾಡಿದನು, ಸಂಗೀತಗಾರರನ್ನು ಕರೆಯಿಸಿ ಅವರು

ಹಾಡುವಾಗ ರಸವತ್ತಾದ ಹಾಡಿಕೆಯ ಸಮಯಕ್ಕೆ ಸರಿಯಾಗಿ ತನ್ನ ಜುಟ್ಟಿಗೆ ಕಟ್ಟಿದ್ದ ಸಣ್ಣ ದಾರವನ್ನು ಎಳೆಯುವಂತೆ ಒಬ್ಬ ಸಂಗೀತಗಾರರನ್ನು ಗೊತ್ತುಮಾಡಿ ಹತ್ತಿರದಲ್ಲಿಟ್ಟುಕೊಂಡನು. ಇದರಂತೆ ಕೆಲವು ದಿನಗಳವರೆಗೆ ಇವನಲ್ಲಿಯೂ ಸಂಗೀತದ ಕಚೇರಿಗಳಾದವು.

ಒಂದು ದಿನ ತಂಜಾವೂರಿನಿಂದ ಒಬ್ಬ ಸಂಗೀತಗಾರನು ಬಂದನು. ಎಂದಿನಂತೆ ಸಭೆ ಸೇರಿ ಹಾಡಿಕೆಯು ಪ್ರಾರಂಭವಾಯಿತು. ಸಂಗೀತಗಾರನು ಒಳ್ಳೆಯ ಸಂಗತಿಯನ್ನು ಹಾಕಿಕೊಂಡು ಯಾವುದೋ ಪಲ್ಲವಿಯನ್ನು ಹಾಡುತ್ತಿದ್ದನು. ಹೀಗಿರುವಲ್ಲಿ ಸಾಹುಕಾರನ ಜುಟ್ಟಿಗೆ ಕಟ್ಟಿದ್ದ ದಾರವು ಏಕೋ ಕಿತ್ತುಕೊಂಡಿತು. ಕೂಡಲೆ ತಿಮ್ಮರೆಡ್ಡಿಯು ಗಾಬರಿಯಿಂದ "ತಡೆಯಯ್ಯ, ದಾರವು ಕಿತ್ತುಕೊಂಡಿದೆ!"—ಎಂದು ಕೂಗಿಕೊಂಡನು.

ಸಂಗೀತಗಾರನು ಬೆಪ್ಪಾದನು. ಅವನು "ಒಳ್ಳೆಯ ರಸಿಕನೆಂದು ತಿಳಿದುಕೊಂಡಿದ್ದ ಇವನು ಇಂಥ ಪಂಡಿತನೆಂದು ಮೊದಲೇ ಗೊತ್ತಾಗಲಿಲ್ಲವಲ್ಲ!" ಎಂದು ಪಶ್ಚಾತ್ತಾಪಪಡುತ್ತ ಕೂಡಲೆ ಎದ್ದು ಹೊರಟುಹೋದನು.

**30.** ಒಂದರಷ್ಟೇ ಇನ್ನೊಂದೂ ಮುಖ್ಯವಾಗಿರುವ ಎರಡು ಅಥವಾ ಹೆಚ್ಚು ಅಭಿಪ್ರಾಯಗಳು ಸೇರಿ ಒಂದು ಅಭಿಪ್ರಾಯವು ಏರ್ಪಟ್ಟಿದ್ದರೆ ಸಂಯೋಜಿತವಾಕ್ಯದಿಂದ ಅದನ್ನು ತಿಳಿಸಬೇಕಾಗುವುದು ಸಂಯೋಜಿತವಾಕ್ಯದಲ್ಲಿರುವ ಉಪವಾಕ್ಯಗಳು ಎರಡೇ ಇದ್ದು ಎರಡೂ ಸಣ್ಣವಾದರೆ ನಡುವೆ **ಅಲ್ಪವಿರಾಮ**(,)ವನ್ನು[2] ಹಾಕಬೇಕು; ಅವು ದೊಡ್ಡವಾಗಿದ್ದರೆ ಅಥವಾ ಎರಡಕ್ಕಿಂತ ಹೆಚ್ಚು ಉಪವಾಕ್ಯಗಳಿದ್ದರೆ ಅವುಗಳನ್ನು **ಅರ್ಧವಿರಾಮ**(;)ದಿಂದ ಬಿಡಿಸಬೇಕು. ಹೇಗೆಂದರೆ:—

1 ನೀನಲ್ಲ ನನ್ನನ್ನು ಬಯ್ದು ಹೀಯಾಳಿಸುವವನು, ನೀನು ನಿಂತಿರುವ ಆ ಉಪ್ಪರಿಗೆ.

2 ಅದು ಹಾವಾದರೂ ಆಗಲಿ, ಹಗ್ಗವಾದರೂ ಆಗಲಿ.

3 ಯಜಮಾನರು ಮನೆಯಲ್ಲಿರಲಿಲ್ಲವೆಂಬುದೇನೂ ಆಶ್ಚರ್ಯವಲ್ಲ; ಅವರು ನಿನ್ನೆಯೇ ರಾಜಧಾನಿಗೆ ಹೊರಟುಹೋದರು.

4 ವಿದ್ಯಾರ್ಥಿಯೆಂದರೆ ಕೈಯಲ್ಲಿ ಪುಸ್ತಕಗಳನ್ನು ಹಿಡಿದಿದ್ದರೆ ಆಗಲಿಲ್ಲ; ಉಪಾಧ್ಯಾಯರು ಹೇಳುವುದನ್ನೆಲ್ಲ ತಿಳಿದುಕೊಂಡು ಪಾಠಗಳನ್ನು ಗಟ್ಟಿಮಾಡಬೇಕು.

## ಅಭ್ಯಾಸ 81

ಈ ಕಥೆಯನ್ನು ನೋಡಿಕೊಂಡು ಬರೆಯಿರಿ. ಇಲ್ಲಿ ಮಹಾವಾಕ್ಯಗಳನ್ನೆಲ್ಲ ಕೂಡಿಸಿಬಿಟ್ಟಿದೆ; ಅವುಗಳನ್ನು ವಿಂಗಡಿಸಿರಿ. ವಾಕ್ಯಗಳಲ್ಲಿ ಪೂರ್ಣವಿರಾಮ, ಅರ್ಧವಿರಾಮ, ಅಲ್ಪವಿರಾಮ, ಪ್ರಶ್ನೆಯ ಚಿಹ್ನೆ—ಇವುಗಳನ್ನು ಬಿಟ್ಟುಬಿಟ್ಟಿದೆ; ಬೇಕಾದ ಕಡೆಯಲ್ಲಿ ಅವುಗಳನ್ನೂ ಹಾಕಿರಿ:—

[2] ಅಲ್ಪವಿರಾಮವನ್ನು ಕೆಲವರು 'ಪಾದವಿರಾಮ'ವೆನ್ನುತ್ತಾರೆ.

## ಬೆಸ್ತಸಂನ್ಯಾಸಿ

ಬೆಸ್ತರ ಸಹವಾಸದಿಂದ ಮೀನುಹಿಡಿಯುವ ಅಭ್ಯಾಸಕ್ಕೆ ಬಹುಕಾಲ ಸಿಕ್ಕಿದ ಒಬ್ಬ ಬ್ರಾಹ್ಮಣನು ಕೊನೆಗೆ ಒಬ್ಬ ಮಹಾತ್ಮನ ದಯೆಯಿಂದ ಸಂಸಾರದಲ್ಲಿ ವಿರಕ್ತನಾಗಿ ಸಂನ್ಯಾಸಿಯಾದನು. ಈತನು ಒಂದು ದಿನ ಬೆಳಗ್ಗೆ ಒಂದು ಕೆರೆಯ ಏರಿಯ ಮೇಲೆ ಹೋಗುತ್ತಿದ್ದನು ಹಿಂದಿನ ರಾತ್ರಿ ಬಹಳವಾಗಿ ಮಳೆ ಬಿದ್ದಿತ್ತಾದುದರಿಂದ ಕೆರೆಯನೀರು ಬಗ್ಗಡವಾಗಿತ್ತು ಎಷ್ಟೋ ಜನ ಬೆಸ್ತರು ಅದರಲ್ಲಿ ಮೀನುಹಿಡಿಯುವುದಕ್ಕೆಂದು ಬಂದಿದ್ದರು. ಒಂದು ಕಡೆಯಲ್ಲಿ ಕೆಲವರು ಬೆಸ್ತರ ಹುಡುಗರು ಒಂದು ಆಮೆಯನ್ನು ಹಿಡಿದು ಒಂದು ಕಲ್ಲಮೇಲೆ ಇಟ್ಟು ಚಚ್ಚುತ್ತಿದ್ದರು. ಇದನ್ನು ನೋಡಿ ಸಂನ್ಯಾಸಿಗೆ ಸುಮ್ಮನೆ ಇರುವುದಕ್ಕೆ ಆಗಲಿಲ್ಲ "ನಾವೇನೋ ಸಂನ್ಯಾಸಿಗಳು ನಮಗೇಕೆ ಆಮೆಯ ಗೊಡವೆ"–ಎಂದು ಒಂದು ಸಲ ಅಂದನು ಮತ್ತೆರಡು ನಿಮಿಷಗಳಲ್ಲಿ "ಹುಡುಗರಿಗೆ ಏನೂ ತಿಳಿಯದು ಹೀಗೆಯೇ ಆಮೆಯನ್ನು ಹೊಡೆಯುವುದು ಬೆನ್ನು ಕೆಳಗೆಮಾಡಿ ಒಂದು ಏಟು ಕೊಟ್ಟರಾಯಿತು ತಾನೇ ಒಡೆಯುತ್ತದೆ" ಎಂದನು ಇದನ್ನು ಕೇಳಿದೊಡನೆಯೇ ಹುಡುಗರು ಹಾಗೆಯೇ ಮಾಡಿದರು ವೇಷವು ಬದಲಾಯಿಸಿದ ಮಾತ್ರಕ್ಕೆ ಮನಸ್ಸು ಬದಲಾಯಿಸೀತೆ.

**31.** ಯಾವುದಾದರೂ ಎರಡು ವಾಕ್ಯಗಳನ್ನು ಅಲ್ಪವಿರಾಮದ ಅಥವಾ ಅರ್ಧವಿರಾಮದ ಗುರುತಿನಿಂದ ಸೇರಿಸಿದ ಮಾತ್ರಕ್ಕೆ ಸಂಯೋಜಿತವಾಕ್ಯವಾಗುವುದಿಲ್ಲ. ಆ ವಾಕ್ಯಗಳಿಗೇನಾದರೂ ಸಂಬಂಧವಿರಬೇಕು. ಉದಾಹರಣೆಗೆ ಈ ವಾಕ್ಯಗಳನ್ನು ನೋಡಿ:–

(1) ನಮ್ಮ ಊರಿನಲ್ಲಿ ಒಂದು ದೊಡ್ಡ ಹುಣಸೆಯ ಮರವಿದೆ. ತಿಪಟೂರಿನ ಸಂತೆ ಶನಿವಾರವಾಗುವುದು.

ಈ ಎರಡು ವಾಕ್ಯಗಳಿಗೇನಾದರೂ ಸಂಬಂಧವಿದೆಯೇ? ಏನೂ ಇಲ್ಲ. ಇವೆರಡನ್ನೂ ಕೂಡಿಸಿ ಸಂಯೋಜಿತವಾಕ್ಯವನ್ನು ಮಾಡುವುದಕ್ಕೆ ಆಗುವುದಿಲ್ಲ.

(2) ನಮ್ಮ ಊರಿನಲ್ಲಿ ಒಂದು ದೊಡ್ಡ ಹುಣಸೆಯ ಮರವಿದೆ; ಆದರೆ ಅದರಲ್ಲಿ ಒಂದು ಹುಣಸೇಕಾಯಿಯೂ ಬಿಡುವುದೇ ಇಲ್ಲ.

ಈ ಎರಡು ವಾಕ್ಯಗಳಲ್ಲಿ ಒಂದಕ್ಕೊಂದು ಸಂಬಂಧವಿದೆ. ಹುಣಸೆಯ ಮರವು ಹಣ್ಣನ್ನು ಬಿಡುವುದು ರೂಢಿಯಷ್ಟೆ, ಆದರೆ ಈ ಮರವು ಒಂದು ಹಣ್ಣನ್ನೂ ಬಿಡುವುದಿಲ್ಲ ಎಂಬ ವಿಶೇಷವನ್ನು ಎರಡನೆಯ ವಾಕ್ಯವು ತಿಳಿಸುವುದು. ಆದುದರಿಂದ ಇವೆರಡು ವಾಕ್ಯಗಳನ್ನೂ ಸೇರಿಸಿ ಒಂದು ಸಂಯೋಜಿತವಾಕ್ಯವನ್ನು ಮಾಡಬಹುದು.

(3) ತಿಪಟೂರಿನ ಸಂತೆ ಶನಿವಾರವಾಗುವುದು; ಆದುದರಿಂದ ನಾವು ಶುಕ್ರವಾರವೇ ಹೊರಡಬೇಕಾಗುವುದು.

ಇಲ್ಲಿರುವ ಎರಡು ವಾಕ್ಯಗಳಲ್ಲಿ ಎರಡನೆಯದರ ಅರ್ಥಕ್ಕೆ ಮೊದಲನೆಯದು ಕಾರಣವನ್ನು ಹೇಳುವುದು; ಆದುದರಿಂದ ಇವೆರಡು ವಾಕ್ಯಗಳಿಗೂ ಸಂಬಂಧವಿದ್ದ ಹಾಗಾಯಿತು. ಇವುಗಳನ್ನೂ ಸೇರಿಸಿ ಸಂಯೋಜಿತ ವಾಕ್ಯವನ್ನು ಮಾಡಬಹುದು.

**32.** ಸಂಯೋಜಿತವಾಕ್ಯದಲ್ಲಿರುವ ಉಪವಾಕ್ಯಗಳಲ್ಲಿ ಒಂದಕ್ಕೊಂದಕ್ಕೆ ಇರಬಹುದಾದ ಸಂಬಂಧಗಳು ಯಾವುವೆಂದರೆ:–

(1) ಒಂದು ಇನ್ನೊಂದರರ್ಥದ ಕಾರಣವನ್ನು ತಿಳಿಸುವುದು.

**ಉದಾ:** (a) ಯಜಮಾನರು ಮನೆಯಲ್ಲಿರಲಿಲ್ಲವೆಂಬುದೇನೂ ಆಶ್ಚರ್ಯವಲ್ಲ; ಅವರು ನಿನ್ನೆಯೇ ರಾಜಧಾನಿಗೆ ಹೊರಟುಹೋದರು.

(b) ರಾಜ್ಯವು ಅನಾಯಕವಾಯಿತು; ಕಂಡಕಂಡವರು ಪ್ರಜೆಗಳನ್ನು ಹಿಂಸಿಸುವುದಕ್ಕೆ ಪ್ರಾರಂಭಿಸಿದರು.

(ರಾಜಧಾನಿಗೆ ಹೊರಟುಹೋದದ್ದು ಮನೆಯಲ್ಲಿರಲಿಲ್ಲವೆಂಬುದಕ್ಕೆ ಕಾರಣ; ರಾಜ್ಯವು ಅನಾಯಕವಾದದ್ದು ಪ್ರಜೆಗಳನ್ನು ಹಿಂಸಿಸಿದ್ದಕ್ಕೆ ಕಾರಣ.)

(2) **ತಾರತಮ್ಯ**ವನ್ನು ಅಥವಾ **ವಿರೋಧ**ವನ್ನು ತಿಳಿಸುವುದು.

**ಉದಾ:** (a) ಅಮೆರಿಕದಲ್ಲಿ ದೊಡ್ಡ ದೊಡ್ಡ ಪರ್ವತಗಳು ಉತ್ತರದಿಂದ ದಕ್ಷಿಣಕ್ಕೆ ಹಬ್ಬಿವೆ; ಏಷಿಯದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಹೋಗಿರುತ್ತದೆ.

(b) ಸುಧನ್ವನನ್ನು ಕಾದೆಣ್ಣೆಯ ಕೊಪ್ಪರಿಗೆಯೊಳಕ್ಕೆ ಹಾಕಿದರು; ಆದರೆ ಅವನಿಗೆ ಒಂದಿಷ್ಟೂ ಬಾಧೆಯಾಗಲಿಲ್ಲ.

(ಮೊದಲನೆಯ ವಾಕ್ಯದಲ್ಲಿ ಅಮೆರಿಕಕ್ಕೂ ಏಷಿಯಕ್ಕೂ ಇರುವ ತಾರತಮ್ಯವನ್ನು ಎಂದರೆ ಹೆಚ್ಚುಕಡಿಮೆಯನ್ನು ತಿಳಿಸಿದೆ; ಎರಡನೆಯದರಲ್ಲಿ ಕಾದೆಣ್ಣೆಯಲ್ಲಿಯೂ ಮೈ ಸುಡಲಿಲ್ಲವೆಂಬ ವಿರೋಧವನ್ನು ತಿಳಿಸಿದೆ.)

(3) **ಸಮುಚ್ಚಯ** (ಎಂದರೆ ಒಂದರ ಜೊತೆಗೆ ಮತ್ತೊಂದು ವಿಷಯ)ವನ್ನು, ಕ್ರಮವನ್ನು ಅಥವಾ ವಿವರವನ್ನು ತಿಳಿಸುವುದು.

**ಉದಾ:** (a) ಇಷ್ಟರಲ್ಲಿ ಸೂರ್ಯನು ಮುಳುಗಿದನು; ಪಶ್ಚಿಮದಿಕ್ಕಿನಲ್ಲಿ ಕುಂಕುಮವನ್ನು ಎರಚಿದಂತಾಯಿತು; ಹಕ್ಕಿಗಳು ತಮ್ಮ ತಮ್ಮ ಗೂಡನ್ನು ಸೇರಿಸಿಕೊಳ್ಳುವುದಕ್ಕೆಂದು ಗುಂಪುಗುಂಪಾಗಿ ಹಾರಿ ಬರುತ್ತಿದ್ದುವು; ದನಕರುಗಳನ್ನು ಮೇಯಿಸಿಕೊಂಡು ದನಕಾಯುವವರು ಹಿಂದಿರುಗುತ್ತಿದ್ದರು. (ಸಮುಚ್ಚಯ).

(b) ಯಾರೋ ಹೊರಗೆ ಬರುವ ಸದ್ದು ಕೇಳಿಸಿತು; ಕದವು ಗಿರಕ್ಕೆಂದು ತೆಗೆದುಕೊಂಡು ಮುಚ್ಚಿಕೊಂಡಹಾಗಾಯಿತು; ಆಮೇಲೆ ನಡುಮನೆಯಲ್ಲಿಯೇ ಹೆಜ್ಜೆಯ ಸದ್ದು ಆಯಿತು. (ಕ್ರಮ)

(c) ನೀನು ಈಚೀಚೆಗೆ ಕೆಟ್ಟುಹೋಗುತ್ತಿದ್ದೀಯೆ: ಹಿರಿಯರು ಹೇಳಿದ ಮಾತುಗಳನ್ನು ಕೇಳುವುದಿಲ್ಲ; ನಿನಗೆ ಪಾಠಗಳಲ್ಲಿ ರುಚಿಯಿಲ್ಲ; ಗೆಳೆಯರೊಡನೆ ಆಟವಾಡುವುದಕ್ಕೆ ಕೂಡ ಹೋಗುವುದಿಲ್ಲ; ಊಟ, ನಿದ್ರೆ—ಇವೆರಡೇ ನಿನಗೆ ಬೇಕಾಗಿರುವಂತೆ ತೋರುತ್ತದೆ. (ವಿವರ)

ಕೊನೆಯ ವಾಕ್ಯದಲ್ಲಿ, ಕೆಟ್ಟುಹೋಗುತ್ತಿರುವುದು ಹೇಗೆಂಬುದನ್ನು ನಾಲ್ಕು ಉಪವಾಕ್ಯಗಳು ವಿವರಿಸುತ್ತವೆ. ಯಾವ ವಾಕ್ಯದ ಅರ್ಥವನ್ನು ವಿವರಿಸಬೇಕಾಗಿರುವುದೋ ಆದರ ಕೊನೆಯಲ್ಲಿ ವಿವರಣಚಿಹ್ನೆ(:) ಇರಬೇಕು.

## ಅಭ್ಯಾಸ 82

ಈ ಸಂಯೋಜಿತ ವಾಕ್ಯಗಳಲ್ಲಿರುವ ಉಪವಾಕ್ಯಗಳ ಸಂಬಂಧವನ್ನು ತಿಳಿಸಿ. (ಎಂದರೆ ಕಾರಣ, ತಾರತಮ್ಯ, ವಿರೋಧ, ಸಮುಚ್ಚಯ, ಕ್ರಮ, ವಿವರ–ಎಂಬಿವುಗಳಲ್ಲಿ ಯಾವ ಅರ್ಥವನ್ನು ತಿಳಿಸುತ್ತವೆಯೋ ಹೇಳಿ)

1. ನಾನು ಯಾವಾಗಲೂ ಆಟವಾಡುವಾಗಲೂ ಯಾರ ವಿಷಯದಲ್ಲಿಯೂ ಅನ್ಯತವನ್ನು ಚಿಂತಿಸಿದವಳಲ್ಲ; ಯಾರ ವಿಷಯದಲ್ಲಿಯೂ ಅಪಕಾರವನ್ನು ಎಣಿಸಿದವಳಲ್ಲ; ಆಡಿದ ಮಾತನ್ನು ತಪ್ಪಿದವಳಲ್ಲ. 2. ಈ ರಥಧ್ವನಿಯು ನಳಮಹಾರಾಜನ ರಥಧ್ವನಿಯಂತೆ ಕೇಳಿಸಿತು; ನಳಮಹಾರಾಜನು ಮಾತ್ರ ಕಾಣಿಸುವುದಿಲ್ಲವಲ್ಲ! 3. ಆ ಸಮಯದಲ್ಲಿ ಎಲ್ಲರೂ ಸಂತೋಷದಿಂದ ತುಂಬಿದ್ದರು. ಕೆಲವರು ಸಂಭ್ರಮದಿಂದ ಅತ್ತಿತ್ತ ತಿರುಗಾಡುತ್ತಿದ್ದರು; ಇನ್ನು ಕೆಲವರು ವಾದ್ಯಗಳನ್ನು ಬಾರಿಸುತ್ತಿದ್ದರು; ಮತ್ತೆ ಕೆಲವರು ನಗುತ್ತಲೂ ಕುಣಿಯುತ್ತಲೂ ಇದ್ದರು; ಎಷ್ಟೋ ಜನರು ಹೂಗಳನ್ನು ರಥದ ಮೇಲೆ ಎರಚುತ್ತಿದ್ದರು 4. ರಾಜನು ಈ ಕಾಲಕ್ಕೆ ಮಿಥಿಲೆಗೆ ಹೋಗಿದ್ದನು; ಆದುದರಿಂದ ಅವನಿಗೆ ಈ ಸಂಗತಿ ಬೇಗ ತಿಳಿಯುವುದಕ್ಕೆ ಅವಕಾಶವಿಲ್ಲದೆ ಹೋಯಿತು. 5. ಕಾಲವನ್ನು ಸ್ವಲ್ಪವೂ ಕಳೆಯಬಾರದು; ಯಾವಾಗಲೂ ಏನಾದರೂ ಉಪಯೋಗವಾದುದನ್ನು ಮಾಡುತ್ತಿರಬೇಕು, ಉಪಯೋಗವಿಲ್ಲದ ಕೆಲಸಗಳನ್ನು ಬಿಟ್ಟುಬಿಡಬೇಕು. 6. ಮೊದಲು ಏನೋ ಒಂದು ಬೆಳಕಿನ ರಾಶಿಯು ಕಾಣಿಸಿತು; ಆಮೇಲೆ ಒಂದು ಆಕಾರವೆಂದು ಕಂಡುಬಂತು; ಹತ್ತಿರಕ್ಕೆ ಬಂದಮೇಲೆ ಒಬ್ಬ ಮನುಷ್ಯನೆಂದು ಗೊತ್ತಾಯಿತು; ಕೊನೆಗೆ ಆತನು ನಾರದಋಷಿಯೆಂದು ನಿಶ್ಚಯವಾಯಿತು. 7. ಆ ವರ್ಷ ಬೇಕಾದ ಹಾಗೆ ಕಾಲದಲ್ಲಿ ಮಳೆಬಿತ್ತು; ಆದುದರಿಂದ ಪೈರುಪಚ್ಚೆಗಳು ಬೇಕಾದಹಾಗೆ ಬೆಳೆದಿದ್ದುವು.

**33.** ಪ್ರತಿಯೊಂದು ವಾಕ್ಯದಲ್ಲಿಯೂ ಕ್ರಿಯಾಪದವನ್ನು ಬಿಟ್ಟರೆ ಕರ್ತೃ, ಕರ್ತೃ ವಿಶೇಷಣ, ಕರ್ಮವೇ ಮುಂತಾದ ಕಾರಕಗಳು, ಕಾರಕಗಳ ವಿಶೇಷಣ, ಕ್ರಿಯಾ ವಿಶೇಷಣ—ಇಷ್ಟು ಭಾಗಗಳಿರಬಹುದಷ್ಟೆ; ಇವುಗಳಲ್ಲಿ ಒಂದೊಂದೇ ಮಾತು ಇದ್ದರೂ ಇರಬಹುದು, ಅನೇಕ ಮಾತುಗಳು ಸೇರಿಕೊಂಡಿದ್ದರೂ ಇರಬಹುದು. ಹೇಗೆಂದರೆ:–

1 ತಮ್ಮ ಅನ್ಯಾಯವು ಮೇಲೆಯೇ ಕಾಣಿಸುತ್ತದೆ.

2 ತಾವು ಅನ್ಯಾಯಮಾಡಿದ್ದು ಮೇಲೆಯೇ ಕಾಣಿಸುತ್ತದೆ.

3 ತಾವು ಅನ್ಯಾಯಮಾಡಿದಿರೆಂಬುದು ಮೇಲೆಯೇ ಕಾಣಿಸುತ್ತದೆ.

ಈ ಮೂರು ವಾಕ್ಯಗಳಗೂ ತಾತ್ಪರ್ಯವು ಒಂದೇ. ಮೊದಲನೆಯ ವಾಕ್ಯದಲ್ಲಿ 'ಅನ್ಯಾಯವು' ಎಂಬುದು ಕರ್ತೃ, 'ತಮ್ಮ' ಎಂಬುದು ಅದಕ್ಕೆ ವಿಶೇಷಣ; ಎರಡನೆಯ ವಾಕ್ಯದಲ್ಲಿ 'ತಾವು ಅನ್ಯಾಯಮಾಡಿದ್ದು' ಎಂಬ **ಸಂಯುಕ್ತಪದವೇ**[3] ಕರ್ತೃ; ಮೂರನೆಯ ವಾಕ್ಯದಲ್ಲಿ 'ತಾವು ಅನ್ಯಾಯ ಮಾಡಿದಿರೆಂಬುದು' ಎಂಬ ಉಪವಾಕ್ಯವೇ ಕರ್ತೃ. ಇಲ್ಲಿ ಉಪವಾಕ್ಯವು 'ಅನ್ಯಾಯವು' ಎಂಬ ಪ್ರಥಮಾ ವಿಭಕ್ತಿಯ ನಾಮಪದದ ಸ್ಥಾನದಲ್ಲಿ ಬಂದಿದೆ.

1 ನಿನಗೆ ಬೇಕಾದುದನ್ನು ತೆಗೆದುಕೊ.

2 ನಿನಗೆ ಯಾವುದು ಬೇಕೋ ತೆಗೆದುಕೊ.

ಈ ಎರಡು ವಾಕ್ಯಗಳಲ್ಲಿ ಮೊದಲನೆಯದರಲ್ಲಿ 'ನಿನಗೆ ಬೇಕಾದುದನ್ನು' ಎಂಬ ಸಂಯುಕ್ತಪದವು 'ತೆಗೆದುಕೊ' ಎಂಬುದರ ಕರ್ಮವು; ಎರಡನೆಯದರಲ್ಲಿ 'ನಿನಗೆ ಯಾವುದು ಬೇಕೋ' ಎಂಬ ಉಪವಾಕ್ಯವೇ' ಕರ್ಮವು; ಇದು 'ಇಷ್ಟವಾದುದನ್ನು' ಎಂಬ ದ್ವಿತೀಯಾವಿಭಕ್ತಿಯ ನಾಮಪದದ ಸ್ಥಾನದಲ್ಲಿ ಬಂದಿದೆ.

ಕರ್ತೃ, ಕರ್ಮ. ಮುಂತಾದ ಕಾರಕದ ಬದಲು ಹೀಗೆ ಒಂದೊಂದು ಅಧೀನ ವಾಕ್ಯವನ್ನೇ ಉಪಯೋಗಿಸಬಹುದಷ್ಟೇ; ಇದು ನಾಮಪದದ ಸ್ಥಾನದಲ್ಲಿ ಬಂದಿರುವುದರಿಂದ ಇದಕ್ಕೆ ನಾಮಾತ್ಮಕವಾಕ್ಯವೆಂದು ಹೆಸರು. ಇದನ್ನು ಕಾರಕವಾಕ್ಯವೆಂದೂ ಕರೆಯುವುದುಂಟು.

---

[3] 'ಅನ್ಯಾಯಮಾಡಿದ್ದು' ಎಂಬುದು ಪೂರ್ಣ ಕ್ರಿಯಾಪದವಲ್ಲವಾದುದರಿಂದ ತಾವು ಅನ್ಯಾಯಮಾಡಿದ್ದು' ಎಂಬುದು ಸಂಯುಕ್ತಪದ (Phrase)ವೇ ಹೊರತು ಉಪವಾಕ್ಯವಲ್ಲವೆಂಬುದನ್ನು ಹುಡುಗರ ಲಕ್ಷ್ಯಕ್ಕೆ ತರಬೇಕು. ಸಂಯುಕ್ತ ಪದವನ್ನು ಕೆಲವರು ವಚನ' ಎಂದು ಕರೆದಿರುತ್ತಾರೆ; ಆದರೆ 'ವಚನ' ವೆಂಬ ಮಾತಿಗೆ ವ್ಯಾಕರಣದಲ್ಲಿ ಬೇರೊಂದು ಅರ್ಥವು ರೂಢಿಯಲ್ಲಿರುವುದರಿಂದ ಆ ಮಾತನ್ನು ಇಲ್ಲಿ ನಾವು ಉಪಯೋಗಿಸಿಲ್ಲ.

**34.** ಈ ವಾಕ್ಯಗಳನ್ನು ನೋಡಿ:–

1 ತಂದೆಯು ಇಷ್ಟರಲ್ಲಿಯೇ ಬರಬಹುದೆಂಬ ಆಸೆಯಿಂದ ಅವರೆಲ್ಲರೂ ಅಲ್ಲಿಯೇ ಕಾದುಕೊಂಡಿದ್ದರು. (ಎಂಥ ಆಸೆ?)

2 ಎಷ್ಟೆಷ್ಟು ಕಷ್ಟಪಟ್ಟು ಕೆಲಸಮಾಡುವೆವೋ ಅಷ್ಟಷ್ಟು ಫಲವು ನಮಗೆ ದೊರಕುವುದು. (ಎಷ್ಟು ಫಲ?)

3 ತಾವು ಇಲ್ಲಿಗೆ ಬರಬಹುದೆಂದು ನಾನು ಇಲ್ಲಿಯೇ ಕೂತುಕೊಂಡುಬಿಟ್ಟೆನು. (ಏತಕ್ಕೆ ಕೂತುಕೊಂಡುಬಿಟ್ಟೆ?)

4 ಕಿರುಬನು ಯಾವಾಗ ಕೊಟ್ಟಿಗೆಯೊಳಕ್ಕೆನುಗ್ಗಿತೋ, ಆಗಲೇ ನಾಯಿಯು ಅದರ ಮೇಲೆ ಚಂಗನೆ ಹಾರಿತು. (ಯಾವಾಗ ಹಾರಿತು?)

ಇಲ್ಲಿ ಮೊದಲನೆಯ ವಾಕ್ಯದಲ್ಲಿ ಅಧೀನವಾಕ್ಯವು 'ಆಸೆ' ಎಂಬ ನಾಮಪದಕ್ಕೆ ವಿಶೇಷಣವಾಗಿದೆ; ಎರಡನೆಯದರಲ್ಲಿ 'ಅಷ್ಟಷ್ಟು' ಎಂಬ ನಾಮವಿಶೇಷಣಕ್ಕೆ ವಿಶೇಷಣವಾಗಿದೆ. ನಾಮಪದವು ಹೇಗೆ ವಿಶೇಷಣವಾಗಿರಬಹುದೋ ಹಾಗೆಯೇ ವಿಶೇಷಣವಾಗಿರುವುದರಿಂದ ಈ ಬಗೆಯ ಅಧೀನವಾಕ್ಯಕ್ಕೆ 'ನಾಮವಿಶೇಷಣ ವಾಕ್ಯ'ವೆಂದು[4] ಹೆಸರು; ಇದನ್ನು 'ಕಾರಕವಿಶೇಷಣವಾಕ್ಯ'ವೆಂತಲೂ ಕರೆಯುವುದುಂಟು.

ಮೂರನೆಯ ವಾಕ್ಯದಲ್ಲಿ ಅಧೀನವಾಕ್ಯವು 'ಕೂತುಕೊಂಡುಬಿಟ್ಟೆನು' ಎಂಬ ಕ್ರಿಯೆಗೆ ವಿಶೇಷಣವಾಗಿದೆ; ನಾಲ್ಕನೆಯದರಲ್ಲಿ 'ಆಗಲೇ' ಎಂಬ ಕ್ರಿಯಾವಿಶೇಷಣಕ್ಕೆ ವಿಶೇಷಣವಾಗಿದೆ. ಕ್ರಿಯಾವಿಶೇಷಣವಾಗುವ ಅವ್ಯಯದಂತೆಯೇ ವಿಶೇಷಣ ವಾಗಿರುವುದರಿಂದ ಈ ಬಗೆಯ ಅಧೀನವಾಕ್ಯಕ್ಕೆ ಕ್ರಿಯಾವಿಶೇಷಣವಾಕ್ಯವೆಂದು ಹೆಸರು.

## ಅಭ್ಯಾಸ 83

ಇಲ್ಲಿರುವ ಅಧೀನವಾಕ್ಯಗಳು ನಾಮಾತ್ಮಕ, ನಾಮವಿಶೇಷಣಾತ್ಮಕ, ಕ್ರಿಯಾ ವಿಶೇಷಣಾತ್ಮಕ—ಎಂಬಿವುಗಳಲ್ಲಿ ಯಾವುವೆಂಬುದನ್ನು ತಿಳಿಸಿ ಅವುಗಳ ಅನ್ವಯ ವನ್ನೂ ಹೇಳಿ:–

**1.** ತಾಳಿದವನು ಬಾಳಿಯಾನೆಂಬುದು ತಮಗೆಲ್ಲ ಗೊತ್ತಿರುವ ಮಾತು. **2.** ಅವನು ಬರುವುದಿಲ್ಲವೆಂದು ಗೊತ್ತಾಯಿತಷ್ಟೆ. **3.** ಕಾಯುವವನೂ ಕೊಲ್ಲುವವನೂ ಜನಾರ್ದನನೇ

[4] ನಾಮವಿಶೇಷಣವಾಕ್ಯವನ್ನು 'ಗುಣಾತ್ಮಕ'ವೆಂದು ಕರೆಯುವುದು ಸರಿಯಲ್ಲ; ಏಕೆಂದರೆ ಇದು ಯಾವಾಗಲೂ ಗುಣವೊಂದನ್ನೇ ಹೇಳುವುದಿಲ್ಲ. ಉದಾಹರಣೆಗೆ ಮೇಲೆ ಕೊಟ್ಟಿರುವ ಎರಡನೆಯ ವಾಕ್ಯವು ಪರಿಮಾಣವನ್ನು ತಿಳಿಸುವುದು.

ಎಂಬುದರ ಅರ್ಥವೇನು? 4. ನೀನು ಸುಮ್ಮನೆ ಜಂಭಕೊಚ್ಚಿಕೊಳ್ಳುತ್ತೀಯೇ ಹೊರತು ಯಾವ ಕೆಲಸವನ್ನೂ ಮಾಡುವುದಿಲ್ಲ. 5. ನೀವು ಹೋಗಬೇಕೆಂದರೆ ಹೋಗುತ್ತೇನೆ. 6. ದೊಡ್ಡವರು ಯಾವುದನ್ನು ಮನಸ್ಸಿನಲ್ಲಿ ಯೋಚಿಸುತ್ತಾರೋ ಅದನ್ನೇ ಮಾತಿನಲ್ಲಿ ಹೇಳುತ್ತಾರೆ. 7. ಅವನು ಹೋಗುತ್ತಾನೋ ಇಲ್ಲವೋ ನೋಡಬೇಕು. 8. ಕೂಡಲೆ ಹೊರಟುಬರಬೇಕಾಗಿ ಅವನಿಗೆ ಬರೆದಿದೆ. 9. ಅವರು ಯಾರೂ ಮನೆಯೊಳಗೆ ಇರಲಿಲ್ಲವಾಗಿ ಕಳ್ಳನಿಗೆ ಇನ್ನೂ ಅನುಕೂಲವಾಯಿತು. 10. ಅವನನ್ನು ಎಷ್ಟೆಷ್ಟು ಹೊಗಳುತ್ತಿದ್ದರೋ ಅಷ್ಟಷ್ಟು ಉಬ್ಬುತ್ತಿದ್ದನು. 11. ನಾನು ಇನ್ನೇನು ಹೊರಡಬೇಕು ಎನ್ನುವಷ್ಟರಲ್ಲಿ ಒಂದು ಕಾಗದವು ಬಂತು. 12. ನೀವು ಹೇಗೆ ಮಾಡೆಂದರೆ ಹಾಗೆ ಮಾಡುತ್ತೇನೆ. 13. ನೀನು ಕೊಟ್ಟೆಯಾ ನೀನು ಸೋತೆ, ನಾನು ಬಿಟ್ಟೆನೇ ನಾನು ಸೋತೆ. 14. ನಾವು ಸೌಖ್ಯದಿಂದ ಜೀವಿಸಿಕೊಂಡಿರಬೇಕಾದರೆ ಏನೇನು ಬೇಕಾಗುವುದು? 15. ನೀನು ಕಾಲಕ್ಕೆ ಸರಿಯಾಗಿ ಬಂದೆಯಾದರೂ ತರಬೇಕಾದ ಹಣವನ್ನು ತಂದಿಲ್ಲ. 16. ಮನುಷ್ಯನು ಎಂಥವನೇ ಆಗಿರಲಿ, ಡಂಭಕ್ಕೆ ಸೋಲುತ್ತಾನೆ.

## ಅಭ್ಯಾಸ 84

ಈ ವಾಕ್ಯಗಳಿಗೆ ಗುಣ, ಸಂಖ್ಯೆ, ಪರಿಮಾಣ, ಕಾಲ, ಸ್ಥಳ–ಮುಂತಾದ ಹೆಚ್ಚಿಗೆಯ ಸಂಗತಿಗಳನ್ನು ಗೊತ್ತಾಗಿ ತಿಳಿಸುವಂತೆ ಅಲ್ಲಲ್ಲಿಗೆ ತಕ್ಕ ವಿಶೇಷಣಗಳನ್ನು ಸೇರಿಸಿ ಬೆಳೆಯಿಸಿರಿ; ವಿಶೇಷಣಗಳಿಗೆ ಸಾಧ್ಯವಾದಷ್ಟು ಅಧೀನವಾಕ್ಯಗಳನ್ನೂ ಸಂಯುಕ್ತಪದಗಳನ್ನೂ ಉಪಯೋಗಿಸಿ:–

1. ತಾಯಿಯು ಮಗುವನ್ನು ಹುಡುಕುತ್ತಿದ್ದಳು. 2. ಬುಗುರಿಯು ತಿರುಗುತ್ತಿದೆ. 3. ನಾನು ಹೋದರೂ ಹೋದೇನು. 4. ಪೋಲೀಸಿನವನು ಆ ಬರಿಯ ಪೆಟ್ಟಿಗೆಯನ್ನು ಹಿಡಿದುಕೊಂಡು ಕೂತುಕೊಂಡನು. 5. ಅಂಬಿಗನು ಜನರನ್ನು ನದಿಯನ್ನು ದಾಟಿಸಿದನು. 6. ಆ ಸಾಹುಕಾರನು ಒಂದು ಬೆಕ್ಕನ್ನು ಸಾಕಿದ್ದನು. 7. ಹುಡುಗನು ಬಿದ್ದನು. 8. ನಿರಾಶನಾಗಬೇಡ.

## ಅಭ್ಯಾಸ 85

ಈ ಮುಂದೆ ಕೊಟ್ಟಿರುವ ವಾಕ್ಯಗಳಿಗೆ ಆವರಣದಲ್ಲಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರವಾಗಿ ಸಾಧ್ಯವಾದಕಡೆ ಮತ್ತೆ ಯಾವುದಾದರೂ ಅಧೀನವಾಕ್ಯಗಳನ್ನು ಸೇರಿಸಿ ಮಿಶ್ರವಾಕ್ಯಗಳಾಗಿ ಮಾಡಿ; ಇಲ್ಲದಿದ್ದರೆ ತಕ್ಕ ಪದಗಳನ್ನೋ ಸಂಯುಕ್ತಪದಗಳನ್ನೋ ವಿಶೇಷಣವಾಗಿ ಸೇರಿಸಿ ಸಾಮಾನ್ಯ ವಾಕ್ಯಗಳಾಗಿ ಮಾಡಿ:–

1. ನಾನು ನಮ್ಮ ಮನೆಯನ್ನು ಮಾರಿಬಿಟ್ಟೆ. (ಯಾವಾಗ? ಏಕೆ? ಹೇಗೆ?) 2. ಜನರು ಮೋಸಹೋಗುತ್ತಾರೆ. (ಎಂಥ ಜನರು?) 3. ಮುಂದೆ ತಿಳಿಯಬಹುದು. (ಯಾವುದನ್ನು?) 4. ನನಗೆ ಪಾಠಶಾಲೆಗೆ ಹೋಗುವುದಕ್ಕೆ ಇಷ್ಟ. (ಎಂಥ ಶಾಲೆಗೆ? ಏಕೆ?) 5. ತಮ್ಮನ್ನು ಬಂದು ಸೇರುತ್ತೇನೆ. (ಎಲ್ಲಿ?) 6. ಆ ಊರಿನವರು ಕಟ್ಟಳೆಯನ್ನು ಮಾಡಿಕೊಂಡರು. (ಏಕೆ? ಎಂಥ ಕಟ್ಟಳೆ?)

# ಆರನೆಯ ಅಧ್ಯಾಯ

## ವಾಕ್ಯಗಳನ್ನು ಹಿಗ್ಗಿಸುವುದು, ಕುಗ್ಗಿಸುವುದು

**35.** ವಾಕ್ಯರಚನೆಯಲ್ಲಿ ಬೇಸರವಿಲ್ಲದಂತೆ ಇರಬೇಕಾದರೆ ಎಲ್ಲಾ ವಾಕ್ಯಗಳನ್ನೂ ಒಂದೇ ಬಗೆಯವಾಗಿರದಂತೆ ನೋಡಿಕೊಳ್ಳಬೇಕು. ಕೆಲವು ಸಾಮಾನ್ಯವಾಕ್ಯಗಳಾಗಿರಬೇಕು. ಕೆಲವು ಸಂಯೋಜಿತ ವಾಕ್ಯಗಳಾಗಿರಬೇಕು, ಮತ್ತೆ ಕೆಲವು ಮಿಶ್ರವಾಕ್ಯಗಳಾಗಿರಬೇಕು. ಯಾವ ವಾಕ್ಯಗಳೇ ಆಗಲಿ, ತೀರ ಮೋಟಕಾಗಿರಬಾರದು, ಅಥವಾ ಅರ್ಥವು ಗೊತ್ತಾಗುವುದಕ್ಕೆ ಕಷ್ಟವಾಗುವಷ್ಟು ಉದ್ದುದ್ದವಾಗಿಯೂ ಇರಬಾರದು. ಇವನ್ನು ಎರಡು ಉದಾಹರಣೆಗಳಿಂದ ಸ್ಪಷ್ಟಗೊಳಿಸುತ್ತೇವೆ:

### ಕಾಗೆಯ ಯುಕ್ತಿ

ಒಂದು ಕಾಗೆಗೆ ಬಹಳ ಬಾಯಾರಿಕೆಯಾಯಿತು. ಅದು ಅತ್ತಿತ್ತ ನೋಡುತ್ತಿತ್ತು. ದೂರದಲ್ಲಿ ಒಂದು ಹೂಜಿಯಿತ್ತು. ಅದು ಕಣ್ಣಿಗೆ ಬಿತ್ತು. ಕಾಗೆ ಹೂಜಿಯ ಹತ್ತಿರಕ್ಕೆ ಹೋಯಿತು. ಒಳಗೆ ನೋಡಿತು. ತಳದಲ್ಲಿ ಸ್ವಲ್ಪ ನೀರಿತ್ತು. ನೀರು ಕೊಕ್ಕಿಗೆ ಎಟುಕುವಂತೆ ಇರಲಿಲ್ಲ. ಆಗ ಕಾಗೆ ಹಾರಿಹೋಯಿತು. ಕೆಲವು ಕಲ್ಲುಗಳನ್ನು ತಂದಿತು. ಅವುಗಳನ್ನು ಹೂಜಿಯೊಳಕ್ಕೆ ಒಂದೊಂದಾಗಿ ಹಾಕಿತು. ನೀರು ಮೆಲ್ಲಗೆ ಮೇಲಕ್ಕೆ ಬಂತು. ಕಾಗೆಗೆ ಬಹಳ ಸಂತೋಷವಾಯಿತು. ಅದು ನೀರು ಕುಡಿಯಿತು. ಹಾರಿಹೋಯಿತು.

ಈ ಹಿಂದಿನ ಕಥೆಯಲ್ಲಿ ತೀರ ಮೋಟಕಾದ ವಾಕ್ಯಗಳೇ ತುಂಬಿವೆ. ಇವುಗಳನ್ನು ಒಂದುಗೂಡಿಸಿ ಕಥೆಯನ್ನು ಎರಡು ಮಹಾವಾಕ್ಯಗಳಾಗಿ ವಿಂಗಡಿಸಿದರೆ ಹೇಗೆ ಕಾಣುವುದೋ ನೋಡಿ:–

### ಕಾಗೆಯ ಯುಕ್ತಿ

ಬಹಳ ಬಾಯಾರಿಕೆಯಾಗಿದ್ದ ಒಂದು ಕಾಗೆ ಅತ್ತಿತ್ತ ನೋಡುತ್ತಿರಲು ದೂರದಲ್ಲಿದ್ದ ಒಂದು ಹೂಜಿಯು ಕಣ್ಣಿಗೆ ಬಿತ್ತು. ಕಾಗೆ ಅದರ ಹತ್ತಿರಕ್ಕೆ ಹೋಗಿ ಒಳಗೆ ನೋಡಲು ತಳದಲ್ಲಿ ಸ್ವಲ್ಪ ನೀರಿತ್ತು, ಆದರೆ ಕೊಕ್ಕಿಗೆ ಎಟುಕುವಂತೆ ಇರಲಿಲ್ಲ.

ಕಾಗೆಯು ಹಾರಿಹೋಗಿ ಕೆಲವು ಕಲ್ಲುಗಳನ್ನು ತಂದು ಹೂಜಿಯೊಳಗೆ ಒಂದೊಂದಾಗಿ ಹಾಕಿತು. ನೀರು ಮೆಲ್ಲಗೆ ಮೇಲಕ್ಕೆ ಬಂತು. ಕಾಗೆ ಬಹಳ ಸಂತೋಷದಿಂದ ನೀರು ಕುಡಿದು ಹಾರಿಹೋಯಿತು.

ಇಲ್ಲಿ ಮೊದಲಿನಂತೆಯೇ ಸಾಮಾನ್ಯವಾಕ್ಯಗಳೇ ಹೆಚ್ಚಾಗಿವೆಯಾದರೂ, ಇವು ತಕ್ಕಮಟ್ಟಿಗೆ ಉದ್ದವಾಗಿವೆ. ಪುಡಿಪುಡಿಯಾಗಿ ಉದುರಿಸಿದಂತೆ ಇದ್ದ ವಾಕ್ಯಗಳನ್ನು ಹೊಂದಿಸಿ ಬರೆದಿರುವುದರಿಂದ ವಾಕ್ಯ ರಚನೆಗೆ ಬಿಗಿ ಬಂದಿದೆ. ಇಂಥ ಸಂದರ್ಭದಲ್ಲಿ ಎರಡುಮೂರು ಮೋಟು ವಾಕ್ಯಗಳನ್ನುಪಯೋಗಿಸುವುದಕ್ಕಿಂತ ಅರ್ಥವನ್ನು ಸ್ಪಷ್ಟವಾಗಿ ಒತ್ತಿ ತಿಳಿಸುವ ಸಂಯೋಜಿತವಾಕ್ಯವನ್ನೋ ಮಿಶ್ರವಾಕ್ಯವನ್ನೋ

ಉಪಯೋಗಿಸುವುದೇ ಒಳ್ಳೆಯದು. ಆದರೆ ಅರ್ಥವೇನೆಂಬುದೇ ಹೊಳೆಯದಷ್ಟು ಉದ್ದದ ವಾಕ್ಯವನ್ನು ಮಾತ್ರ ಎಂದಿಗೂ ಬರೆಯಕೂಡದು.

ಉದಾಹರಣೆಗೆ:–

"ದೇಶಾಭಿಮಾನಿಯಾದವನು ಬಾಹ್ಯಾಡಂಬರವನ್ನು ಅಪೇಕ್ಷಿಸಿದೆ ತನ್ನ ದೇಶದವರಿಗೆ ಗೌರವವೂ ಖ್ಯಾತಿಯೂ ಉಂಟಾಗಬೇಕೆಂದು ಆಶಿಸುತ್ತಾನಲ್ಲದೆ ತನ್ನ ವಂಶದವರೂ ಯಾವಾಗ್ಯೂ ಒಂದೇ ವಿಧವಾಗಿರದೆ ಇತರ ಜನಾಂಗದವರಂತೆ ಊರ್ಜಿತ ಸ್ಥಿತಿಗೆ ಬರ ಬೇಕೆಂದು ಪ್ರಯತ್ನಮಾಡುತ್ತಾನೆ."

ಇಲ್ಲಿ 'ಆಶಿಸುತ್ತಾನೆ'—ಎಂಬವರೆಗೆ ಒಂದು ಮಿಶ್ರವಾಕ್ಯವಿದೆ. 'ತನ್ನ' ಎಂಬುದ ರಿಂದ ಹಿಡಿದು 'ಪ್ರಯತ್ನಮಾಡುತ್ತಾನೆ'–ಎಂಬವರಿಗೆ ಮತ್ತೊಂದು ಮಿಶ್ರ ವಾಕ್ಯವಿದೆ. ಇವೆರಡೂ 'ಅಲ್ಲದೆ' ಎಂಬ ಸಮುಚ್ಚಯಾರ್ಥಕಾವ್ಯಯದಿಂದ ಸೇರಿ ಒಂದು ಸಂಯೋಜಿತವಾಕ್ಯವಾಗಿದೆ. ಇಂಥ ಕಡೆಯಲ್ಲಿ ಕೆಲವು ವಾಕ್ಯಗಳು ಹೆಚ್ಚಾ ದರೂ ಚಿಂತೆಯಿಲ್ಲ, ವಾಕ್ಯವನ್ನು ಒಡೆದು ಸಾಮಾನ್ಯವಾಕ್ಯಗಳಾಗಿ ಬರೆಯುವುದೇ ಉತ್ತಮ. ಹೇಗೆಂದರೆ:–

"ದೇಶಾಭಿಮಾನಿಯಾದವನು ಬಾಹ್ಯಾಡಂಬರವನ್ನು ಅಪೇಕ್ಷಿಸುವುದಿಲ್ಲ. ತನ್ನ ದೇಶ ದವರಿಗೆ ಗೌರವವೂ ಖ್ಯಾತಿಯೂ ಆಗಲೆಂದು ಬಯಸುತ್ತಾನೆ. ಆವನು ತನ್ನ ವಂಶದವರು ಯಾವಾಗ್ಯೂ ಒಂದೇ ವಿಧವಾಗಿ ಇರಕೂಡದು, ಅವರೂ ಇತರ ಜನಾಂಗದವರಂತೆ ಊರ್ಜಿತ ಸ್ಥಿತಿಗೆ ಬರಲಿ—ಎಂದು ಅದಕ್ಕಾಗಿ ಪ್ರಯತ್ನಮಾಡುತ್ತಿರುತ್ತಾನೆ."

ಹೀಗೆ ದೊಡ್ಡ ವಾಕ್ಯಗಳನ್ನು ಒಡೆಯುವುದರಿಂದ ಅರ್ಥವು ಬೇಗ ಗೊತ್ತಾಗು ತ್ತದೆ.

## ಅಭ್ಯಾಸ 86

ಇಲ್ಲಿ ಸಾಧ್ಯವಾಗುವ ಕಡೆಯಲ್ಲಿ ವಾಕ್ಯಗಳನ್ನು ಒಂದುಗೂಡಿಸಿ ಬರೆಯಿರಿ:–

### ಒಂಟೆ

ಒಂಟೆಯು ಮರಳುಗಾಡಿನ ಹಡಗೆನಿಸಿದೆ. ಈ ಪ್ರಾಣಿಯೊಂದೇ ಮರಳಿನ ಬಯಲು ಗಳನ್ನು ದಾಟಬಲ್ಲುದು. ಒಂಟೆ ಇರಲಿಲ್ಲವೆಂದು ಇಟ್ಟುಕೊಳ್ಳಿ. ಆಗ ಯಾರೂ ಮರಳು ಬಯಲನ್ನು ದಾಟಲಾಗುತ್ತಿರಲಿಲ್ಲ. ಒಂಟೆಯು ಮರಳುಬಯಲಿನ ಮೇಲೆ ಒಂದು ದೇಶದ ಸಾಮಾನನ್ನು ಇನ್ನೊಂದು ದೇಶಕ್ಕೆ ಹೊತ್ತುಕೊಂಡು ಹೋಗುತ್ತದೆ. ಅದರ ಯಜಮಾನನು ಆ ಸಾಮಾನನ್ನು ಹೊಸ ದೇಶದ ಸಾಮಾನಿಗೆ ಮಾರುಗೊಡುತ್ತಾನೆ.

ಒಂಟೆಯು ಈ ಕೆಲಸವನ್ನು ಮಾಡಬೇಕಾಗಿದೆಯಷ್ಟೆ. ಇದಕ್ಕೆ ಅದು ತಕ್ಕದ್ದಾಗಿಯೇ ಇದೆ. ಅದರ ಕಣ್ಣನ್ನು ನೋಡಿ ಅದು ಬಲು ದೂರ ನೋಡಬಲ್ಲುದು. ಅದರ ಕಣ್ಣಿನಮೇಲೆ ಹುಬ್ಬು ಗಳು ಜೋಲಾಡುತ್ತಿವೆ. ಇವು ಕಣ್ಣನ್ನು ಮುಚ್ಚಿಕೊಂಡಿವೆ. ಅದರಿಂದ ಬಿಸಿಲ ಝಳವು ಕಣ್ಣಿಗೆ ತಾಕದಂತಾಗಿದೆ.

**36.** ಎರಡು ಅಥವಾ ಹೆಚ್ಚು ಬಿಡಿಬಿಡಿಯ ವಾಕ್ಯಗಳನ್ನು ಸೇರಿಸಿ ಒಂದೊಂದು ಸಾಮಾನ್ಯವಾಕ್ಯವನ್ನು ಮಾಡುವುದಕ್ಕೆ ಹೇಗೆ ಸಂಬಂಧ ಸೂಚಕಗಳು ಉಪಯೋಗಕ್ಕೆ ಬೀಳುವುವೋ ಅದರಂತೆ ಉಪವಾಕ್ಯಗಳನ್ನು ಸೇರಿಸಿ ಸಂಯೋಜಿತವಾಕ್ಯಗಳನ್ನು ಅಥವಾ ಮಿಶ್ರವಾಕ್ಯಗಳನ್ನು ಮಾಡುವುದಕ್ಕೂ ಸಂಬಂಧಸೂಚಕಗಳು ಬೇಕಾಗುವುವು

1 ಈ ಹುಡುಗಿ ತೀರ ಚಿಕ್ಕವಳು; ಆದರೂ ಮನೆಯಲ್ಲಿ ಒದಗಿರುವ ಕಷ್ಟವು ಅವಳಿಗೆ ಚೆನ್ನಾಗಿ ಗೊತ್ತಾಗಿದೆಯಲ್ಲ!

2 ರಾಯರು ಬೆಳಗ್ಗೆ ಸಂಚಾರಕ್ಕೆ ಹೊರಡುತ್ತಾರೆ; ಇಲ್ಲದಿದ್ದರೆ ಗ್ರಂಥ ಕಾಲಕ್ಷೇಪವನ್ನು ಮಾಡುತ್ತಿರುತ್ತಾರೆ.

3 ನೀನು ನಿನ್ನೆ ಬಂದಿರಲಿಲ್ಲ; ಆದುದರಿಂದ ನಿನ್ನೊಡನೆ ಆತನು ಇದ್ದದ್ದು ಸುಳ್ಳಾಯಿತು.

4 ದುಷ್ಟರು ಮೊದಮೊದಲು ಒಳ್ಳೆಯವರಂತೆ ಕಾಣಿಸಿಕೊಳ್ಳುತ್ತಾರೆ, ಆಮೇಲೆ ಅವರ ನಿಜವಾದ ಸ್ವರೂಪವು ಹೊರಬೀಳುತ್ತದೆ.

5 ತಾವು ಅಲ್ಲಿಗೆ ಹೋಗಬೇಕಾದುದಿಲ್ಲವೆಂತ ತೋರುತ್ತದೆ.

6 ನಮ್ಮಲ್ಲಿ ಯಾರು ಬೇಕೆಂದರೆ ಅವರು ಬರುತ್ತೇವೆ.

7 ತಾವು ಎಲ್ಲಿ ಹೋಗಬೇಕೆಂದರೂ ಹೋಗುತ್ತೇವೆ.

8 ಎಲ್ಲಿ ಹೊಗೆ ಇರುವುದೋ ಅಲ್ಲಿ ಬೆಂಕಿ ಇರುವುದು.

ಮೊದಲನೆಯ ನಾಲ್ಕು ವಾಕ್ಯಗಳು ಸಂಯೋಜಿತವಾಕ್ಯಗಳು. ಇವುಗಳಲ್ಲಿ 'ಆದರೂ' — ಎಂಬ ಸಂಬಂಧಸೂಚಕವು ವಿರೋಧವನ್ನೂ 'ಇಲ್ಲದಿದ್ದರೆ' — ಎಂಬುದು ಮತ್ತೊಂದು ಬಗೆ ಎಂಬ ಅರ್ಥವನ್ನೂ 'ಆದುದರಿಂದ' — ಎಂಬುದು ಕಾರಣವನ್ನೂ 'ಆಮೇಲೆ' — ಎಂಬುದು ಹೆಚ್ಚಿಗೆಯ ವಿಷಯವನ್ನೂ ತಿಳಿಸುತ್ತವೆ.

ಕೊನೆಯ ನಾಲ್ಕು ವಾಕ್ಯಗಳು ಮಿಶ್ರವಾಕ್ಯಗಳು. ಇವುಗಳಲ್ಲಿ 'ಎಂತ' — ಎಂಬ ಸಂಬಂಧಸೂಚಕವು 'ತೋರುತ್ತದೆ' ಎಂಬ ಕ್ರಿಯಾಪದದ ಅರ್ಥವನ್ನು ಪೂರ್ಣ ಮಾಡುವ ವಾಕ್ಯಕ್ಕೆ ಸೇರಿದೆ. 'ಎಂದರೆ' — ಎಂಬುದು 'ಅವರು' ಎಂಬುದರ ವಿಶೇಷಣವಾಕ್ಯಕ್ಕೆ ಸೇರಿದೆ. 'ಎಂದರೂ' — ಎಂಬುದು ಎಲ್ಲಿಗೆ ಎಂಬರ್ಥವನ್ನು ತಿಳಿಸುವ ಕ್ರಿಯಾವಿಶೇಷಣವಾಕ್ಯದ ಸಂಬಂಧಸೂಚಕ. 'ಓ' — ಎಂಬುದು 'ಅಲ್ಲಿ' ಎಂಬುದನ್ನು ವಿವರಿಸುವ ವಿಶೇಷಣವಾಕ್ಯಕ್ಕೆ ಸೇರಿದೆ.

**37.** ಸಂಯೋಜಿತವಾಕ್ಯಗಳಲ್ಲಿ ವಿಶೇಷವಾಗಿ ಉಪಯೋಗವಾಗುವ ಸಂಬಂಧ ಸೂಚಕಗಳು ಯಾವುವೆಂದರೆ:–

(1) ಕಾರಣವನ್ನು ತಿಳಿಸುವುದಕ್ಕೆ: 'ಆದುದರಿಂದ,[1] 'ಆದದ್ದರಿಂದ', 'ಆದ್ದರಿಂದ', 'ಅದರಿಂದ', 'ಆದಕಾರಣ', 'ಹೀಗಿರುವುದರಿಂದ', 'ಏಕೆಂದರೆ'.

ಉದಾ: (a) ಆ ದಿನ ಮಳೆ ಬಂದು ನೆಲವು ಕೆಸರಾಗಿತ್ತು; **ಆದುದರಿಂದ** ದೊರೆಯು ಬರುವ ಹಾದಿಯಲ್ಲಿ ಒಂದು ಜಮಖಾನೆಯನ್ನು ಹಾಸಿದ್ದರು.

(b) ಅವನನ್ನು ನಾವು ಈಗ ನಂಬುವಹಾಗೇ ಇಲ್ಲ; **ಏಕೆಂದರೆ** ಅವನು ಇದು ವರೆಗೆ ಎಷ್ಟೋ ಸಲ ಸುಳ್ಳು ಹೇಳಿರುತ್ತಾನೆ.

(ಮೊದಲು ಹೇಳಿದ್ದಕ್ಕೆ ಕಾರಣವನ್ನು ತಿಳಿಸುವುದಕ್ಕೆ 'ಏಕೆಂದರೆ' ಎಂಬ ಮಾತನ್ನು ಉಪಯೋಗಿಸುವರು)

(2) ತಾರತಮ್ಯವನ್ನು ಅಥವಾ ವಿರೋಧವನ್ನು ತಿಳಿಸುವುದಕ್ಕೆ 'ಆದರೆ', 'ಆದರೂ', 'ಹೀಗಿದ್ದರೂ', 'ಅದಾಗ್ಯೂ', 'ಏನೋ' 'ಅಂತೂ', 'ಓ'.

ಉದಾ: (a) ಅವನು ಬಹಳ ಕಷ್ಟಪಟ್ಟು ಓದಿದನು; ಆದರೆ ಕೊನೆಗೆ ಜ್ವರದಿಂದ ಹಾಸಿಗೆಹಿಡಿದಿದ್ದರಿಂದ ಪರೀಕ್ಷೆಗೆ ಹೋಗುವುದಾಗಲಿಲ್ಲ.

(b) ಅವರೆಲ್ಲರೂ ಸೇರಿ ಅದನ್ನು ಹಿಡಿದೆತ್ತುವುದಕ್ಕೆ ಹೋದರು; ಆದರೂ ಅದು ಜುಮ್ಮೆನ್ನಲಿಲ್ಲ.

(c) ತಾವು ಮನಸ್ಸುಬಂದಂತೆ ಮಾಡಬಹುದು; ನಾನೇನೋ ಹೊರಟೇ ಹೊರಡುತ್ತೇನೆ.

(d) ನೀವು ಅಷ್ಟೈಶ್ವರ್ಯವಂತರು; ನಾವೋ ದಟ್ಟದರಿದ್ರರು.

ತಾರತಮ್ಯವನ್ನು ತಿಳಿಸುವ 'ಓ' ಎಂಬ ನಿಪಾತವನ್ನು ಎರಡನೆಯ ಉಪವಾಕ್ಯ ದಲ್ಲಿಯೇ ಉಪಯೋಗಿಸಬೇಕು.

'ಆದರೂ' ಎಂಬರ್ಥದಲ್ಲಿ 'ಯದ್ಯಪಿ' ಎಂಬ ಸಂಸ್ಕೃತದ ಅವ್ಯಯವನ್ನು ಕೆಲವರು ಉಪಯೋಗಿಸುತ್ತಾರೆ ಇದು ಸರಿಯಲ್ಲ. 'ಯದ್ಯಪಿ ಪಠಾಣರು ಬಲಿಷ್ಠರು' ಎಂದು ಬರೆಯುವುದಕ್ಕೆ ಬದಲು 'ಪಠಾಣರು ಬಲಿಷ್ಠರಾದಾಗ್ಯೂ' ಎಂದಾಗಲಿ 'ಪಠಾನರೇನೂ ಬಲಿಷ್ಠರೇ' ಎಂದಾಗಲಿ ಬರೆಯಬೇಕು.

---

[1] 'ಆದುದರಿಂದ' ಎಂದು ಬರೆಯುವುದಕ್ಕೆ ಹೊಸ ಕನ್ನಡದಲ್ಲಿ 'ಆದದ್ದರಿಂದ', 'ಆದ್ದರಿಂದ'—ಎಂಬ ರೂಪಗಳು ಬಂದಿವೆ.

(3) ಸಮುಚ್ಚಯ (ಎಂದರೆ ಒಂದರ ಜೊತೆಗೆ ಮತ್ತೊಂದೆಂಬರ್ಥ)ವನ್ನು ಕ್ರಮವನ್ನು ಅಥವಾ ವಿವರವನ್ನು ತಿಳಿಸುವುದಕ್ಕೆ: 'ಮತ್ತು',[2] 'ಹಾಗೂ',[3] 'ಅಲ್ಲದೆ', 'ಇದಲ್ಲದೆ', 'ಇದೂ ಅಲ್ಲದೆ', 'ಇದರ ಮೇಲೆ', 'ಊ', 'ಇನ್ನು', 'ಬೇರೆ', 'ಬಳಿಕ', 'ತರುವಾಯ', 'ಆಮೇಲೆ' 'ಆದಾಗಿ', 'ಅನಂತರ' (ನಂತರ ಎಂಬುದು ತಪ್ಪು).

ಉದಾ: (a) ಅವನು ನಮ್ಮನ್ನು ಕಷ್ಟಕಾಲದಲ್ಲಿ ಕಾಪಾಡಿದನಲ್ಲದೆ ಮುಂದಕ್ಕೆ ಅಂಥ ಕಷ್ಟಕ್ಕೆ ಸಿಕ್ಕಿಕೊಳ್ಳದಂತೆಯೂ ಸಹಾಯಮಾಡಿದನು.

(b) ಅವನು ನಿಮ್ಮ ನೆರೆಯವನು; ನಿಮ್ಮ ಜಾತಿಯವನು; ಇದರ ಮೇಲೆ ನಿಮ್ಮ ನೆಂಟನು. ಅವನಿಗೆ ಉಪಕಾರಮಾಡುವುದಕ್ಕಿಲ್ಲವೆ?

(c) ಮೊದಲು ಭೀಮನು ಬಂದನು. ಆಮೇಲೆ ಅರ್ಜುನನು ಬಂದನು.

(d) ಊರಿಗೆ ಹೋದದ್ದೂ ಆಯಿತು. ಸಾಹುಕಾರನನ್ನು ಕಂಡದ್ದೂ ಆಯಿತು.

(4) ಪಕ್ಷವನ್ನು ಅಥವಾ ಪಕ್ಷಾಂತರವನ್ನು ಎಂದರೆ ಮತ್ತೊಂದು ಬಗೆ ಎಂಬುದನ್ನು ತಿಳಿಸುವುದಕ್ಕೆ: 'ಹಾಗಾದರೆ', 'ಅಲ್ಲದಿದ್ದರೆ', 'ಇಲ್ಲದಿದ್ದರೆ', 'ಹಾಗಲ್ಲದಿದ್ದರೆ', 'ಇಲ್ಲವೆ', 'ಇಲ್ಲ', 'ಆದರೂ', 'ಅಥವಾ', 'ಆ ಪಕ್ಷದಲ್ಲಿ', 'ಆ ಪಕ್ಷಕ್ಕೆ', 'ಹಾಗಾದಪಕ್ಷದಲ್ಲಿ'.

ಉದಾ: (a) ನಾನಾದರೂ ಬರುತ್ತೇನೆ. ನನ್ನ ತಮ್ಮನನ್ನಾದರೂ ಕಳುಹಿಸುತ್ತೇನೆ.

(b) ನಾನು ಬರುತ್ತೇನೆ, ಇಲ್ಲದಿದ್ದರೆ ನನ್ನ ತಮ್ಮನನ್ನು ಕಳುಹಿಸುತ್ತೇನೆ.

'ಅಥವಾ' ಎಂಬುದು ಸಂಸ್ಕೃತವಾದರೂ ಬಹಳ ರೂಢಿಯಲ್ಲಿದೆ. ಕನ್ನಡಕ್ಕೆ ಇದು ಬೇಕೇಬೇಕೆಂಬ ನಿರ್ಬಂಧವೇನೂ ಇಲ್ಲ.

## ಅಭ್ಯಾಸ 87

ಇಲ್ಲಿರುವ ಸಂಯೋಜಿತವಾಕ್ಯಗಳಲ್ಲಿ ಉಪವಾಕ್ಯಗಳ ಸಂಬಂಧವನ್ನು ಸೂಚಿಸುವ ಮಾತುಗಳು ಯಾವುವು? ಅವು ಯಾವ ಅರ್ಥವನ್ನು ಹೇಳುತ್ತವೆ?

1. ಮಲ್ಲರರಾಯನು ರಘುನಾಥನ ವಿಷಯವನ್ನು ಮಿಶ್ರಮಹಾಶಯನಿಗೆ ಹೇಳಿದನು; ಆದಕಾರಣ ಅವರಿಬ್ಬರೂ ಆತನ ಮನೆಗೆ ಭೋಜನಕ್ಕೆ ಹೋಗಿದ್ದರು 2. ಅನೇಕ ವೇಳೆ ನಾವು ಕ್ಷಣಿಕಸುಖಕ್ಕೆ ಹಿಗ್ಗುವೆವು; ಮತ್ತು ಸ್ವಲ್ಪ ಕಷ್ಟವು ಬಂದೊದಗಿದ ಮಾತ್ರಕ್ಕೆ ಕಾತರರಾಗುವೆವು. 3. ಅವರು ಬುದ್ಧಿವಂತರೂ ಅಲ್ಲ, ಒಳ್ಳೆಯವರೂ ಅಲ್ಲ. 4. ಕಳ್ಳರು ಅವರನ್ನು ಬಾಸುಂಡೆ ಬರುವಂತೆ ಹೊಡೆದರು; ಆದುದರಿಂದ ಅವರು ಗೊಳೋ! ಎಂದು ಅತ್ತರು. 5. ನ್ಯಾಯವಾದ

---

[2] 'ಮತ್ತು' ಎಂಬುದನ್ನು ಉಪವಾಕ್ಯಗಳನ್ನು ಕೂಡಿಸುವ ಅವ್ಯಯವಾಗಿ ಉಪಯೋಗಿಸುವ ರೂಢಿಯೂ ಈಚೀಚೆಗೆ ಬಳಕೆಗೆ ಬರುತ್ತಿದೆಯಾದರೂ ಗ್ರಂಥಗಳಲ್ಲಿ ಇವರ ಪ್ರಯೋಗವು ಅಷ್ಟಿಲ್ಲ.

[3] ಇದನ್ನು ಧಾರವಾಡದ ಕಡೆಯವರು ಹೆಚ್ಚಾಗಿ ಪ್ರಯೋಗಿಸುವರು.

ನಡತೆಯಿಂದ ಕೀರ್ತಿಯನ್ನು ಸಂಪಾದಿಸುವುದು ಮನುಷ್ಯನ ಕರ್ತವ್ಯವೇ ಸರಿ; ಆದರೆ ಮತ್ತೊಬ್ಬನನ್ನು ಪೀಡಿಸಿ ತಾನು ದೊಡ್ಡವನೆನಿಸಿಕೊಳ್ಳಬೇಕೆಂಬ ಆಸೆ ಸರಿಯಾದುದಲ್ಲ. 6. ಆತನು ತಾನು ನಿರಪರಾಧಿಯೆಂದು ಎಷ್ಟೋ ಬಗೆಯಾಗಿ ಹೇಳಿಕೊಂಡನು; ಆದರೂ ಕೋರಡೆಯ ಏಟುಗಳು ಮಾತ್ರ ತಪ್ಪಲಿಲ್ಲ. 7. ಮೊದಲು ಭೀಮನು ಹೊರಟನು; ತರುವಾಯ ಅರ್ಜುನನು ಹೋದನು. 8. ಮೊದಲು ನನ್ನ ಒಡವೆಯನ್ನು ಅಲ್ಲಿಡು; ಬಳಿಕ ಮಾತನಾಡು. 9. ಇದುವರೆಗೆ ವಾಕ್ಯಸ್ವರೂಪವನ್ನು ಹೇಳಿದೆವಷ್ಟೆ; ಇನ್ನು ವಾಕ್ಯರಚನೆಯನ್ನು ತಿಳಿಸುತ್ತೇನೆ. 10. ನಿನ್ನ ಕೈಯಲ್ಲಿರುವುದನ್ನೆಲ್ಲ ಕೊಟ್ಟುಬಿಡಬೇಕು; ಹಾಗಾದರೆ ನಿನ್ನನ್ನು ಬಿಟ್ಟುಬಿಡುತ್ತೇವೆ. 11. ಈ ದಿವಸವೇ ಅಷ್ಟು ಕೆಲಸವನ್ನೂ ಮುಗಿಸಬೇಕು; ಇಲ್ಲದ್ದಿರೆ ನಿನಗೆ ಕೂಲಿ ಸಿಕ್ಕುವುದಿಲ್ಲ. 12. ಆಟವೂ ಮುಗಿಯಿತು, ಎಣ್ಣೆಯೂ ತೀರಿತು. 13. ವಯಸ್ಸು ಮೀರಿದವರು ಈ ಆಟದ ಗೋಜಿಗೆ ಹೋಗಬಾರದು; ಏಕೆಂದರೆ ಇದರಲ್ಲಿ ದೇಹಕ್ಕೆ ತುಂಬ ಅಪಾಯವುಂಟು. 14. ಮನೆಯ ಯಜಮಾನನ ಅಪ್ಪಣೆಯಿಲ್ಲದೆ ಯಾರನ್ನೂ ಒಳಕ್ಕೆ ಬಿಡುವುದು ತಪ್ಪು; ಇದು ಅಳಿಗೆ ಗೊತ್ತೂ ಇತ್ತು; ಹೀಗಿದ್ದರೂ ಅವನು ಆ ದಿನ ತುಸ ಧೈರ್ಯಮಾಡಿದನು.

## ಅಭ್ಯಾಸ 88

ಇಲ್ಲಿ ಕೊಟ್ಟಿರುವ ಸಾಮಾನ್ಯವಾಕ್ಯಗಳನ್ನು ತಕ್ಕ ಸಂಬಂಧ ಸೂಚಕಗಳಿಂದ ಸೇರಿಸಿ ಸಂಯೋಜಿತವಾಕ್ಯಗಳನ್ನು ಮಾಡಿ ವಾಕ್ಯಗಳು ಇರುವ ಕ್ರಮದಲ್ಲಿಯೇ ಸೇರಿಸಬೇಕು:—

(**ಮಾದರಿ:** 'ಆ ವರ್ಷ ಚೆನ್ನಾಗಿ ಮಳೆ ಆಗಿರಲಿಲ್ಲ. ಪೈರು ಸಾಧಾರಣವಾಗಿತ್ತು.' ಇವೆರಡನ್ನೂ ಸೇರಿಸಿ 'ಆ ವರ್ಷ ಚೆನ್ನಾಗಿ ಮಳೆ ಆಗಿರಲಿಲ್ಲವಾದ ಕಾರಣ ಪೈರು ಸಾಧಾರಣವಾಗಿತ್ತು' ಎಂದು ಬರೆಯಬೇಕು. 'ಆ ವರ್ಷ ಪೈರು ಸಾಧಾರಣವಾಗಿತ್ತು. ಚೆನ್ನಾಗಿ ಮಳೆ ಆಗಿರಲಿಲ್ಲ' ಎಂದಿದ್ದರೆ 'ಆ ವರ್ಷ ಪೈರು ಸಾಧಾರಣವಾಗಿತ್ತು; ಏಕೆಂದರೆ ಚೆನ್ನಾಗಿ ಮಳೆ ಆಗಿರಲಿಲ್ಲ' ಎಂದು ಬರೆಯಬೇಕು.)

1. ಆ ಅನ್ನವು ಮಧ್ಯಾಹ್ನದಲ್ಲಿ ಮಾಡಿದ್ದು. ಬ್ರಾಹ್ಮಣನು ಅದನ್ನು ಊಟ ಮಾಡದೆ ಹೋದನು. 2. ನೀವು ಮಾಡುವುದನ್ನೆಲ್ಲ ಮಾಡಿರಿ. ಅವರು ಒಳಗೆ ನುಗ್ಗಿಯೇ ತೀರುವರು. 3. ದಶರಥನು ಅವಳ ಕಾಲಿಗೆ ಬಿದ್ದು ಬೇಡಿಕೊಂಡನು. ಅವಳು ತನ್ನ ಹಟವನ್ನು ಬಿಡಲಿಲ್ಲ. 4. ಬೈರಾಗಿಯು ರಾಮನ ಮುಂದೆಯೇ ಅರ್ಧ ಗಂಟೆಯ ಕಾಲ ನಿಂತುಕೊಂಡಿದ್ದನು. ಅವನು ಎಲ್ಲಿ ಹೋದನೆಂಬುದು ಯಾರಿಗೂ ತಿಳಿಯಲಿಲ್ಲ. 5. ಅವನು ನಮಗೆ ತೀರ ಬೇಕಾದವನು. ಏನು ಮಾಡೋಣ? ನಾವೇ ಬುದ್ಧಿ ಹೇಳೋಣವೊ? ಪೋಲೀಸಿನವರಿಗೆ ತಿಳಿಸಿಬಿಡೋಣವೊ? 6. ನಿಮಗೆ ಮಕ್ಕಳು ಮರಿಗಳೇನೂ ಇಲ್ಲ. ನಿಮಗೆ ಅನ್ನ ಬಟ್ಟೆಗೆ ಕೊರತೆಯಿಲ್ಲ. ನಿಮಗೇಕೆ ಸಾಲ? 7. ಮಸೀದಿಯ ಒಳಗಡೆ ನೋಡಿದರೆ ದೇವಾಲಯದಂತೆ ಕಾಣಿಸುತ್ತದೆ. ಹಿಂದಕ್ಕೆ ಒಬ್ಬ ಹಿಂದೂ ರಾಜನು ಇದನ್ನು ಕಟ್ಟಿಸಿ ಶಿವಪ್ರತಿಷ್ಠೆಯನ್ನು ಮಾಡಿಸಿದ್ದನೆಂದು ಹೇಳುತ್ತಾರೆ. 8. ನನಗೆ ಹಸಿವೇನೂ ಆಗಿರಲಿಲ್ಲ. ನಾನು ಆಗತಾನೇ ಊಟಮಾಡಿ ಬಂದಿದ್ದೆನು. 9. ಕೂಡಲೆ ಅವನು ಬಾಕಿಯ ಸಾಲವನ್ನೆಲ್ಲ ತೀರಿಸಿದನು. ಅವನಿಗೆ ಬಂದೀಖಾನೆಯ

ವಾಸವಾಗುತ್ತಿತ್ತು. 10. ಮೊದಲು ತಟಕಲು ಹನಿಗಳು ಬಿದ್ದವು. ಜಡಿಮಳೆಯು ಸುರಿಯಿತು. ಸೋನೆ ಹಿಡಿದುಕೊಂಡಿತು. 11. ಹನುಮಂತನು ಅವನಿಗೆ ಹೆದರಲಿಲ್ಲ. ಅವನನ್ನು ಮುಖ ಸ್ತುತಿಮಾಡಲಿಲ್ಲ. 12. ನಾನು ಗಂಟುಕಟ್ಟಿಕೊಂಡು ಹೊರಟೆ. ಮಾವನವರು ಹೆಬ್ಬಾಗಿಲ ಬಳಿಗೆ ಬಂದರು.

## ಅಭ್ಯಾಸ 89

ಈ ಸಂಯೋಜಿತವಾಕ್ಯಗಳನ್ನು ಪೂರ್ತಿಮಾಡಿ:–

(**ಮಾದರಿ:** ಉಪಾಧ್ಯಾಯನು ಸಿಡಿಮೋರೆಯವನಾದಾಗ್ಯೂ ಪಾಠಹೇಳುವುದರಲ್ಲಿ ಜಾಣನು.)

1. ಉಪಾಧ್ಯಾಯನು ಸಿಡಿಮೋರೆಯವನಾದಾಗ್ಯೂ— 2. ನವನಂದರು ಚಾಣಾಕ್ಯನಿಗೆ ಅಪಮಾನವನ್ನು ಮಾಡಿದರು; ಆದ್ದರಿಂದ— 3. ನೀವು ಒಬ್ಬರೇ ಇದ್ದರೂ ಹೆದರಬೇಕಾಗಿಲ್ಲ; ಏಕೆಂದರೆ— 4. ಶತ್ರುಗಳು ಅಭಿಮನ್ಯುವಿನ ಮೇಲೆ ಬಾಣದ ಮಳೆಯನ್ನು ಕರೆದರು; ಆದರೂ— 5. ಅಪ್ಪನು ಆರು ಶಾಸ್ತ್ರಗಳನ್ನೂ ಬಲ್ಲವನು; ಮಗನೋ— 6. ಮೊದಲು ಮನೆಯವರ ಯೋಗಕ್ಷೇಮವನ್ನು ನೋಡಿಕೊಳ್ಳಬೇಕು; ಆಮೇಲೆ— 7. ನೀವು ರಾತ್ರೆ ಒಂಬತ್ತು ಘಂಟೆಯೊಳಗೆ ಮಲಗಿ ನಿದ್ರೆಹೋಗಬೇಕು; ಇಲ್ಲದಿದ್ದರೆ— 8. ಓದುಬರಹವಿಲ್ಲದವರಿಗೆ ಇನ್ನೂ ಒಂದು ಕಷ್ಟವುಂಟು; ಅದೇನೆಂದರೆ— 9. ತಾವು ದೊಡ್ಡವರು; ತಮ್ಮ ವಂಶವೂ ಹೆಸರಾದದ್ದು; ಹೀಗಿರುವಲ್ಲಿ— 10. ನೀವಾದರೂ ಪುಸ್ತಕವನ್ನು ಓದಿ— 11. ನಿಮ್ಮ ಹುಡುಗ ಸ್ಕೂಲಿಗೂ ಹೋಗಲಿಲ್ಲ— 12. ಮೊದಲು ಕಳ್ಳರ ಯಜಮಾನನು ಗುಹೆಯೊಳಗೆ ಹೋದನು. ತರುವಾಯ— 13. ನಿನ್ನ ತಮ್ಮನು ಊರಲ್ಲಿಯೇ ಇರಲಿಲ್ಲವಂತೆ; ಹಾಗಾದರೆ— 14. ಆ ದುಷ್ಟನು ಎಲ್ಲಿಗಾದರೂ ಹೋಗಲಿ, ನಾನಂತೂ—

**38.** ಸಂಯೋಜಿತವಾಕ್ಯದ ಉಪವಾಕ್ಯಗಳ ನಡುವೆ ಸಂಬಂಧ ಸೂಚಕಗಳಿದ್ದೇ ಇರಬೇಕೆಂಬ ನಿರ್ಬಂಧವೇನೂ ಇಲ್ಲ, ಅವುಗಳೆರಡಕ್ಕೂ ಯಾವುದಾದರೊಂದು ಸಂಬಂಧವಿದ್ದರೆ ಸಾಕು. ಈ ಮುಂದಿನ ವಾಕ್ಯಗಳನ್ನು ನೋಡಿ:–

(1) ಅಣ್ಣಪ್ಪ ಮನೆಯಲ್ಲಿದ್ದರೂ ಸರಿಯೆ, ದಂಡಿಗೆ ಹೋದರೂ, ಸರಿಯೆ.

(2) ನಾನು ಕರೆದದ್ದು ತಮ್ಮನ್ನಲ್ಲ, ನಮ್ಮ ಸ್ವಾಮಿಗಳನ್ನ.

(3) ಹುಡುಗನು ಚಿಕ್ಕಂದಿನಲ್ಲಿಯೇ ಅನಾಥನಾದನು; ಅವನ ಆಸ್ತಿಯು ಸಿಕ್ಕ ಸಿಕ್ಕವರ ಪಾಲಾಯಿತು.

ಮೊದಲನೆಯ ವಾಕ್ಯದಲ್ಲಿ 'ಅಥವಾ' ಎರಡನೆಯದರಲ್ಲಿ 'ಮತ್ತೆ ಯಾರನ್ನೆಂದರೆ,' ಮೂರನೆಯ ವಾಕ್ಯದಲ್ಲಿ 'ಆದ್ದರಿಂದ'–ಎಂಬ ಸಂಬಂಧ ಸೂಚಕಗಳನ್ನು

ಸೇರಿಸಿಯೂ ಬರೆಯಬಹುದಾಗಿತ್ತು; ಆದರೆ ವಾಕ್ಯವು ಇಷ್ಟು ಬಿಗಿಯಾಗಿರುತ್ತಿರಲಿಲ್ಲ. ಗಾದೆಗಳಲ್ಲಿ ಸಂಬಂಧ ಸೂಚಕಗಳನ್ನುಪಯೋಗಿಸದೆ ಇರುವುದೇ ಹೆಚ್ಚು.

**39.** ಮಿಶ್ರವಾಕ್ಯಕ್ಕೆ ಬೇಕಾಗುವ ಮುಖ್ಯಸಂಬಂಧಸೂಚಕಗಳು ಯಾವುವೆಂದರೆ:—

(a) **ನಾಮಾತ್ಮಕವಾಕ್ಯಕ್ಕೆ:** 'ಎಂಬುದು' ('ಎಂಬುದರಿಂದ', 'ಎಂಬುದಕ್ಕೆ', 'ಎಂಬುದರಲ್ಲಿ',) 'ಎಂದು', 'ಎಂತ', 'ಆಗಿ', 'ಎಂಬುದಾಗಿ' 'ಎಂದರೂ', 'ಏ', 'ಓ'.

**ಉದಾ:** (1) ಅವರು ಇಲ್ಲಿಗೆ ಬಂದಿದ್ದರೆಂಬುದು ಸುಳ್ಳಲ್ಲವೆ?
(2) ಅಂಥ ಸಂದರ್ಭದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದನ್ನು ಅನುಭವದಿಂದ ತಿಳಿದುಕೊಳ್ಳಬೇಕು.
(3) ಸಾವಿತ್ರಿಯು ಆ ರಾಜಕುಮಾರನನ್ನೇ ವರಿಸುವೆನೆಂದು ಹೇಳಿದಳು.
(4) ನಿಮ್ಮ ಸಾಲವನ್ನು ನಾಳೆ ತೀರಿಸಿಬಿಡುತ್ತೇನೆಂತ ಹೇಳುತ್ತಾನೆ.
(5) ಕೂಡಲೆ ಹೊರಟು ಬರಬೇಕಾಗಿ ಬರಬೇಕಾಗಿ ಅವರಿಗೆ ಬರೆಸಿರುತ್ತದೆ.
(6) ತಾವು ಏನು ಮಾಡೆಂದರೂ ಮಾಡುತ್ತೇನೆ.
(7) ಏನು ಆಗುತ್ತದೆಯೋ ಆಗಲಿ.

(b) **ನಾಮವಿಶೇಷಣವಾಕ್ಯಕ್ಕೆ** ಮತ್ತು **ನಾಮವಿಶೇಷಣವಿಶೇಷಣವಾಕ್ಯಕ್ಕೆ:** 'ಎಂಬ', 'ಎಂಬುದರ', 'ಓ', 'ಎಂದರೆ'.

**ಉದಾ:** (1) ಶತ್ರುಗಳು ರಾಜಧಾನಿಯ ಕಡೆಗೆ ಬರುತ್ತಿದ್ದಾರೆಂಬ ಸುದ್ದಿಯು ಅರಸನಿಗೆ ಮುಟ್ಟಿತು.
(2) 'ಕಾಯುವವನೂ ಕೊಲ್ಲುವವನೂ ಜನಾರ್ದನನೇ' ಎಂಬುದರ ಅರ್ಥವೇನು?
(3) ಆ ಮೂರ್ಖನು ಯಾವುದನ್ನು ತನ್ನ ಮನಸ್ಸಿನಲ್ಲಿ ಯೋಚಿಸಿಕೊಂಡಿದ್ದನೋ ಅದೇ ಅವನ ಬಾಯಿಂದ ಹೊರಕ್ಕೆ ಬಂತು.
(4) ನಮ್ಮಲ್ಲಿ ಯಾರು ಬರಬೇಕೆಂದರೆ ಅವರು ಬರುತ್ತೇವೆ.
(5) ನಿಮಗೆಷ್ಟು ಫಲವಾಯಿತೋ ಅವರಿಗೂ ಅಷ್ಟೇ ಫಲವಾಯಿತು.

**ಸೂ||** 'ಏನು—ಅದು' 'ಯಾವುದು—ಅದು', 'ಎಂಥ—ಅಂಥ', 'ಎಷ್ಟು — ಅಷ್ಟು' —ಎಂಬಿವು ಜೊತೆಜೊತೆಯಾಗಿ ಬರುವ ನಿತ್ಯಸಂಬಂಧ ವಾಕ್ಯಗಳಿಗೆ 'ಓ', 'ಎಂದರೆ' — ಎಂಬ ಸಂಬಂಧಸೂಚಕಗಳು ಬೇಕಾಗುವುವು.

(c) ಕ್ರಿಯಾವಿಶೇಷಣವಾಕ್ಯಕ್ಕೆ ಮತ್ತು ಕ್ರಿಯಾವಿಶೇಷಣ ವಿಶೇಷಣವಾಕ್ಯಕ್ಕೆ: 'ಎಂಬಂತೆ', 'ಎಂಬ ಹಾಗೆ', 'ಎಂಬ ಪ್ರಕಾರ', 'ಎಂಬ ಚಂದದಿಂದ', (ರೀತಿ); 'ಹೊರತು', 'ಅಲ್ಲದೆ' (ವಿರೋಧ) 'ಏ', 'ಆ' 'ಎಂದರೆ', (ಪಕ್ಷ): 'ಎಂದು', 'ಆಗಿ', 'ಎಂಬುದರಮೇಲೆ' (ಕಾರಣ); 'ಎಂದು' (ಉದ್ದೇಶ); 'ಓ', 'ಎಂದರೂ' (ಸ್ಥಾನ); ಕಾರಣ, ರೀತಿ, ಪರಿಮಾಣ (ಕಾಲ); 'ಎನ್ನುವಷ್ಟರಲ್ಲಿ' (ಕಾಲ); 'ಆದರೂ', '(ಆಗ)ಲಿ' (ಅಂಗೀಕಾರ).

**ಉದಾ:** 1. 'ನಾಯಿಯ ಹೆಸರು ಸಂಪಿಗೆ' ಎಂದ ಹಾಗಾಯಿತು. (ಹೇಗಾಯಿತು?)
2. 'ಇಂದು, ನಾಳೆ' ಎಂದು ಕಾಲ ಹಾಕುತ್ತಿದ್ದಾರೆಯೇ ಹೊರತು ಒಂದು ಕಾಸನ್ನೂ ಕೊಡುತ್ತಲಿಲ್ಲ. (ಕಾಲ ಹಾಕುತ್ತಿದ್ದಾರೆ, ಆದರೆ?)
3. ನಾನು ನಮ್ಮ ದೇವರ ಹೆಸರನ್ನು ಗಟ್ಟಿಯಾಗಿ ಹೇಳಿಕೊಂಡೆನಲ್ಲದೆ ತಮ್ಮನ್ನೇನೂ ಕರೆಯಲಿಲ್ಲ. (ಹೇಳಿಕೊಂಡೆ, ಆದರೆ!)
4. ನಾನು ಕೊಟ್ಟೆನೇ, ನಾನು ಸೋತೆ. ನೀನು ಬಿಟ್ಟೆಯಾ, ನೀನು ಸೋತೆ. (ಯಾವಪಕ್ಷದಲ್ಲಿ?)
5. ಅವರನ್ನು ಈ ದಿನವೇ ಕರೆಯಿಸಬೇಕಾದರೆ ನೀವೆಲ್ಲರೂ ಮೂರು ಘಂಟೆಗೆ ಬನ್ನಿರಿ. (ಯಾವ ಪಕ್ಷದಲ್ಲಿ?)
6. ತಮಗೆ ಹೇಗಿದ್ದರೂ ಗೊತ್ತೇ ಇದೆಯೆಲ್ಲ ಎಂದು ಮತ್ತೆ ಹೇಳಲಿಲ್ಲ. (ಅಥವಾ 'ಎಂಬುದರಮೇಲೆ', 'ಗೊತ್ತೇ ಇತ್ತಾಗಿ') ಏಕೆ?
7. ಒಂದು ದಿನ ದೇವರ ದರ್ಶನವನ್ನು ಮಡಿಕೊಳ್ಳೋಣವೆಂದು ಗುಡಿಗೆ ಹೋದೆನು ಯಾವ ಉದ್ದೇಶದಿಂದ?
8. ನಾನು ಎಲ್ಲಿಗೆ ಹೋಗುತ್ತೇನೋ ಹೋಗುತ್ತೇನೆ. ಎಲ್ಲಿಗೆ?
9. ತಾವು ಎಲ್ಲಿಗೆ ಬಾರೆಂದರೂ ಬರುತ್ತೇನೆ. ಎಲ್ಲಿಗೆ?
10. ನಾವು ಇನ್ನೇನು ಹೊರಡಬೇಕು ಎನ್ನುವಷ್ಟರಲ್ಲಿ ಒಂದು ಕಾಗದ ಬಂತು ಯಾವಾಗ?
11. ನಾವು ಹೊರಟೆವೋ ಇಲ್ಲವೋ, ಎಲ್ಲರೂ ಅಳುವುದಕ್ಕೆ ಪ್ರಾರಂಭಿಸಿದರು. ಯಾವಾಗ?
12. ತಾವು ಹೇಳಿದಿರಾದರೂ ಅವರು ನಂಬಲಿಲ್ಲ. ಯಾವುದನ್ನು ಒಪ್ಪಿದೆ?
13. ಅವನು ಬರಲಿ, ಬಿಡಲಿ, ನಮಗೇನೂ ಯೋಚನೆಯಿಲ್ಲ (ಯಾವುದನ್ನು ಆಗುವುದೆಂದು ಇಟ್ಟುಕೊಂಡಿದೆ?
14. ನೀವು ಎಲ್ಲಿಗೆ ಹೋಗಬೇಕೆಂದರೆ ಅಲ್ಲಿಗೆ ಹೋಗುತ್ತೇನೆ. ಎಲ್ಲಿಗೆ?

**ಸೂ||** 'ಎಂದು–ಅಂದು', 'ಯಾವಾಗ–ಆಗ', 'ಹೇಗೆ–ಹಾಗೆ'? 'ಎಲ್ಲಿ – ಅಲ್ಲಿ', 'ಯೆಷ್ಟು–ಅಷ್ಟು'–ಈ ನಿತ್ಯಸಂಬಂಧ ಶಬ್ದಗಳಿರುವ ಕ್ರಿಯಾವಿಶೇಷಣ

ವಾಕ್ಯಗಳಿಗೆ 'ಓ', 'ಯೆಂದರೆ'–ಯೆಂಬ ಸೂಚಕವು ಬೇಕಾಗುವುದು 'ಅಂದು', 'ಆಗ' – ಮುಂತಾದ ಸಂಬಂಧಸೂಚಕಗಳು ಇಲ್ಲದಿರುವಾಗುವುದು; 'ಯೆಂದರೂ' ಯೆಂಬ ಸೂಚಕವು ಬೇಕಾಗುವುದು.

**ಉದಾ:** 1. ಧಣಿಯು ಹೇಗೆ ಮಾಡೆಂದರೆ ಹಾಗೆ ಮಾಡಬೇಕು.

2. ಧಣಿಯು ಹೇಗೆ ಮಾಡೆಂದರೂ ಮಾಡಬೇಕು.

**40.** ಇದುವರೆಗೆ ಹೇಳಿರುವ ಸಂಬಂಧ ಸೂಚಕಗಳನ್ನು ತಿಳಿಸಿರುವುದು ವಾಕ್ಯ ರಚನೆಯಲ್ಲಿ ಉಪಯೋಗವಾಗಲೆಂದೇ ಹೊರತು ಇಂತಿಂಥ ಶಬ್ದಸಂಕೇತಗಳಿದ್ದರೆ ಇಂತಿಂಥ ಸಂಬಂಧದ ವಾಕ್ಯವೆಂದು ನಿಯಮಮಾಡುವುದಕ್ಕಲ್ಲ. ಉಪವಾಕ್ಯದ ಸಂಬಂಧವನ್ನು ಅರ್ಥದ ಮೇಲಿಂದ ಗೊತ್ತುಪಡಿಸಬೇಕೇ ಹೊರತು ಶಬ್ದಸಂಕೇತ ಗಳನ್ನು ನಂಬಲಾಗದು.

**ಉದಾ:** 1. ನಾವೂ ಸ್ಟೇಷನ್ನಿನ ಬಳಿಗೆ ಬಂದೆವು, ರೈಲೂ ಹೊರಟಿತು.

ಇಲ್ಲಿ 'ಊ' ಎಂಬುದು ನಾವು ಬಂದ ಕೂಡಲೆ ರೈಲು ಹೊರಟಿತೆಂಬ ಕ್ರಮವನ್ನು ಸೂಚಿಸುವುದು.

2. ಊಟವೂ ಆಯಿತು, ತಿಂಡಿಯೂ ಆಯಿತು. ಕೈಯಲ್ಲಿ ಸ್ವಲ್ಪ ದುಡ್ಡು ಕೊಟ್ಟಿದ್ದೂ ಆಯಿತು.

ಇಲ್ಲಿ 'ಊ' ಎಂಬ ಸಂಬಂಧಸೂಚಕದಿಂದ ಒಂದರ ಜೊತೆಗೆ ಇನ್ನೊಂದು ಎಂಬ **ಸಮುಚ್ಚಯ**ವನ್ನು ಹೇಳಿದೆ.

3. ಈ ಮತವನ್ನು ಸ್ಥಾಪಿಸಿದವನು ಇವನೇ ಎಂದು ನಿಶ್ಚಯಿಸುವುದಕ್ಕಾಗುವು- ದಿಲ್ಲ.

ಇಲ್ಲಿ ಉಪವಾಕ್ಯವು 'ಏನನ್ನು ನಿಶ್ಚಯಿಸುವುದಕ್ಕೆ?' ಎಂಬ ಪ್ರಶ್ನೆಗೆ ಉತ್ತರವನ್ನು ಹೇಳುವುದು; ಆದ್ದರಿಂದ ಇದು **ನಾಮಾತ್ಮಕ**.

4. ಇಂಥ ಸತ್ಪುರುಷನ ಚರಿತ್ರವು ಕನ್ನಡನಾಡಿನವರಿಗೂ ತಿಳಿಯಲೆಂದು ಇಲ್ಲಿ ಅದನ್ನು ಸಂಕ್ಷೇಪವಾಗಿ ಬರೆದಿದ್ದೇವೆ.

'ಯಾವ ಉದ್ದೇಶದಿಂದ?' ಎಂಬುದನ್ನು ಹೇಳುತ್ತದೆ; **ಕ್ರಿಯಾವಿಶೇಷಣ- ವಾಕ್ಯ.**

5. ತಾವು ಹೀಗೆ ಹೇಳಿದ್ದಿರಲ್ಲ–ಎಂದು ಇವರೆಲ್ಲರೂ ಕಾದುಕೊಂಡಿರುತ್ತಾರೆ. 'ಏಕೆ?' ಎಂಬುದನ್ನು ತಿಳಿಸುತ್ತದೆ; **ಕ್ರಿಯಾವಿಶೇಷಣವಾಕ್ಯ.**

ಏನು? ಏನನ್ನು? ಏತರಿಂದ? ಏತಕ್ಕೆ? (ಯಾವುದಕ್ಕೆ?) ಏತರಲ್ಲಿ?–ಎಂಬ ಪ್ರಶ್ನೆಗಳಿಗೆ ಉತ್ತರವಾಗಿ ಬರುವುವು ನಾಮಾತ್ಮಕ ವಾಕ್ಯಗಳು; ಎಂಥ? ಎಷ್ಟು?

ಯಾವ?–ಎಂಬ ಪ್ರಶ್ನೆಗಳಿಗೆ ಉತ್ತರವಾಗಿ ಬರುವುವು ನಾಮವಿಶೇಷಣವಾಕ್ಯಗಳು, ಅಥವಾ ನಾಮವಿಶೇಷಣ ವಿಶೇಷಣವಾಕ್ಯಗಳು; ಎಲ್ಲಿ? ಏಕೆ? ಹೇಗೆ? ಯಾವಾಗ? ಎಷ್ಟು ಮಟ್ಟಿಗೆ?–ಎಂಬ ಪ್ರಶ್ನೆಗಳಿಗೆ ಉತ್ತರವಾಗಿ ಬರುವುವು ಕ್ರಿಯಾ ವಿಶೇಷಣವಾಕ್ಯಗಳು. ಅಥವಾ ಕ್ರಿಯಾವಿಶೇಷಣವಿಶೇಷಣವಾಕ್ಯಗಳು.

## ಅಭ್ಯಾಸ 90

ಇಲ್ಲಿರುವ ಅಧೀನವಾಕ್ಯಗಳು ಯಾವ ಅರ್ಥವನ್ನು ಹೇಳುತ್ತವೆ? ಇವುಗಳು ನಾಮಾತ್ಮಕ, ನಾಮವಿಶೇಷಣಾತ್ಮಕ, ಕ್ರಿಯಾವಿಶೇಷಣಾತ್ಮಕ, ವಿಶೇಷಣವಿಶೇಷಣಾತ್ಮಕ–ಎಂಬ ಯಾವ ಪಂಗಡಕ್ಕೆ ಸೇರಿವೆಯೋ ಹೇಳಿ:–

1. ರಾಣಿಯವರು ತಾವು ನಂಬಿದ ಧರ್ಮವನ್ನು ದೃಢವಾಗಿ ಪಾಲಿಸುವುದಕ್ಕೆ ಎಷ್ಟು ತತ್ಪರರಾಗಿದ್ದರೋ, ಆಂಗ್ಲೇಯರೊಂದಿಗೆ ಸ್ವತೇಜೋಬಲವನ್ನು ನಿರ್ಭಯದಿಂದ ಹೇಗೆ ಪ್ರಕಟಮಾಡುತ್ತಿದ್ದರೋ ಅದು ಆ ಪತ್ರದಿಂದ ವ್ಯಕ್ತವಾಗುತ್ತದೆ. 2. ಹೆಂಗಸರೆಲ್ಲರೂ ತಿಳಿಗೇಡಿಗಳೆಂಬ ಮಾತು ಶುದ್ಧ ಸುಳ್ಳು. 3. ಇಂಗ್ಲಿಷರು ಈ ದೇಶದಲ್ಲಿ ಶಾಂತಿಯು ನೆಲೆಗೊಂಡ ಕೂಡಲೆ ಅಲ್ಲಲ್ಲಿ ಪಾಠಶಾಲೆಗಳನ್ನು ಸ್ಥಾಪಿಸಿದರೆಂಬುದರಿಂದ ನಾವು ತಿಳಿಯಬೇಕಾದುದೇನು? 4. ನೀನು ಅಲ್ಲಿಗೆ ಹೋದೆ ಎಂಬುದಕ್ಕೆ ಸಾಕ್ಷಿಯೇನು? 5. ನೀನು ಎಷ್ಟುಹೊತ್ತಿಗೆ ಹೊರಡಬೇಕೆಂದರೆ ಅಷ್ಟುಹೊತ್ತಿಗೆ ಸಿದ್ಧನಾಗಿರುವೆನು. 6. ನನಗೆ ಬೇಕಾದದ್ದನ್ನು ಕೊಡುತ್ತೇನೆಂದರೆ ಬರುತ್ತೇನೆ. 7. ಅವಳು ಊಟಮಾಡುವೆನೆಂದ ಹೊರತು ನಾನು ಬಿಡಲಿಲ್ಲ. 8. ನೀವು ಎಲ್ಲಿಗೂ ಹೋಗಕೂಡದೆಂಬುದೇ ನಿಮ್ಮ ತಮ್ಮನ ಅಭಿಪ್ರಾಯ. 9. ಸಹಾಯವು ಎಲ್ಲಿಯಾದರೂ ದೊರೆತೀತೋ ಎಂದು ಮಗನೊಡನೆ ಊರೂರು ಅಲೆಯುತ್ತಾ ಬಲು ಬೇಸತ್ತು ಕೊನೆಗೆ ಒಂದು ಮಠದ ಬಾಗಿಲಲ್ಲಿ ನಿಂತನು. 10. ಸಮುದ್ರವೂ ಆಕಾಶವೂ ಸೇರುವಂತೆ ಒಂದೇ ತೆರನಾಗಿದ್ದಿತೇ ಹೊರತು ನೆಲವೆಂಬುದೇ ಕಾಣಬರಲಿಲ್ಲ. 11. ನೀವು ಎಷ್ಟೆಷ್ಟು ಕಲಿಯುತ್ತೀರೋ ಅಷ್ಟಷ್ಟು ಹೇಳಿಕೊಡುತ್ತೇನೆ. 12. ನಿರ್ಮಲವಾದ ವಾಯು ಹೇಗೆ ಕಣ್ಣಿಗೆ ಕಾಣಿಸುವುದಿಲ್ಲವೋ ಹಾಗೆಯೇ ಕಶ್ಮಲವಾದ ವಾಯುವೂ ಕಾಣಿಸುವುದಿಲ್ಲ. 13. ಇಂಡಿಯಾ ದೇಶದಲ್ಲಿ ಯಾವುದಾದರೊಂದು ಭಾಗದ ವಾಯುಗುಣವನ್ನು ನಿಶ್ಚಯಿಸಬೇಕಾದರೆ ನಾಲ್ಕು ವಿಷಯಗಳನ್ನು ಲಕ್ಷ್ಯದಲ್ಲಿಟ್ಟಿರಬೇಕು. 14. ನಾಳೆ ನಾವೆಲ್ಲರೂ ಬರಬೇಕೆಂದು ಹೇಳೋಣವಾಯಿತಷ್ಟೆ? 15. ಅವನಿಗೆ ಕೂಡಲೆ ಹೊರಟುಬರಬೇಕೆಂದು ತಿಳಿಸಿದೆ.

## ಅಭ್ಯಾಸ 91

ಇಲ್ಲಿ ಕೊಟ್ಟಿರುವ ವಾಕ್ಯಗಳನ್ನು ನಾಮಾತ್ಮಕಾಧೀನವಾಕ್ಯವಿರುವ ಮಿಶ್ರವಾಕ್ಯಗಳಾಗಿ ಮಾಡಿ ಅಧೀನವಾಕ್ಯದ ಅನ್ವಯವನ್ನು ತಿಳಿಸಿ:–

(**ಮಾದರಿ:** ನೀನು ಆ ದಿನ ಸುಳ್ಳು ಹೇಳಿದೆಯೆಂಬುದು ಈಗ ಸಿದ್ಧವಾಯಿತು 'ಸಿದ್ಧವಾಯಿತು' ಎಂಬುದರ ಕರ್ತೃ.)

1. ನೀನು ಆದಿನ ಸುಳ್ಳುಹೇಳಿದೆ. ಅದು ಈಗ ಸಿದ್ಧವಾಯಿತು. 2. ಅವರು ಯಾವುದೋ ಒಂದು ದಿನ ಬರುತ್ತಾರೆ. ಆ ದಿನ ನನಗೆ ಗೊತ್ತಿಲ್ಲ. 3. ಅವರು ಒಂದು ಸಂಕಲ್ಪಮಾಡಿದರು. ಒಬ್ಬರ ತಲೆಯನ್ನೊಬ್ಬರು ಒಡೆಯುವುದೇ ಸಂಕಲ್ಪ. 4. ಹೈದರನು ಇಂಗ್ಲಿಷರಿಗೆ ಒಂದು ಮಾತನ್ನು ಹೇಳಿಕಳುಹಿಸಿದನು. ಇಂಗ್ಲಿಷರು ತಮ್ಮ ಒಪ್ಪಂದದಂತೆ ತನಗೆ ಸಹಾಯವಾಗಬೇಕು. 5. ಕಾಲವನ್ನು ಸರಿಯಾಗಿ ಉಪಯೋಗಿಸುವುದು ಹೇಗೆ? ಇದನ್ನು ಇಲ್ಲಿ ವಿಚಾರ ಮಾಡೋಣ. 6. ನಾನು ಈ ಕೆಲಸವನ್ನು ಮಾಡಲೆ? ನನಗೆ ಹಾಗೆ ಮನಸ್ಸಿಗೆ ಬಂದಿದೆ. 7. ಯಾವಾಗಲೂ ಓದುತ್ತಿರುವುದೇ ಒಳ್ಳೆಯದು ಇದು ಕೆಲವರ ಅಭಿಪ್ರಾಯ. 8. ಬೆಂಕಿಕಡ್ಡಿಯೆಂದರೇನು? ಇದು ಅವರಿಗೆ ಗೊತ್ತಿರಲಿಲ್ಲ. 9. ವ್ಯಾಜ್ಯವು ಹುಟ್ಟಿದಾಗ ನೀವಿಬ್ಬರೂ ಎಲ್ಲಿದ್ದಿರಿ? ಅದು ನನಗೆ ತಿಳಿಯಬೇಕು. 10. ನಿಮ್ಮಿಬ್ಬರೊಳಗೆ ಒಬ್ಬರದು ನ್ಯಾಯ. ಇನ್ನೊಬ್ಬರದು ಅನ್ಯಾಯ; ಇದನ್ನು ಅಲ್ಲಿಯವರೆಗೆ ಬಗೆಹರಿಸಲಾರೆ. 11. ನೀನು ಮನೆಯಲ್ಲಿ ಏನೋ ಮಾಡಿದೆ, ಏನೋ ಬಿಟ್ಟೆ; ಅದನ್ನು ನನಗೆ ಹೇಳಬೇಕಾದುದಿಲ್ಲ.

## ಅಭ್ಯಾಸ 92

ಇಲ್ಲಿರುವ ವಾಕ್ಯಗಳನ್ನು ನಾಮವಿಶೇಷಣರೂಪವಾದ ಅಧೀನ ವಾಕ್ಯವಿರುವ ಮಿಶ್ರವಾಕ್ಯವಾಗಿ ಬರೆಯಿರಿ. ಅಧೀನವಾಕ್ಯದ ಅನ್ವಯವನ್ನೂ ತಿಳಿಸಿ–(ಅಧೀನವಾಕ್ಯದಲ್ಲಿ ಕ್ರಿಯಾಪದವಿರಬೇಕು, ಕೃದಂತವಿದ್ದ ಮಾತ್ರದಿಂದ ವಾಕ್ಯವೆನಲಾಗದು. ಉದಾ: "ಕೆಂಪು" ಅಂಗಿಯನ್ನೂ ರೇಷ್ಮೆಯ ರುಮಾಲನ್ನೂ ಧರಿಸಿದ್ದ ಗೌಡನು ಅಲ್ಲಿ ಹೋಗುತ್ತಿದ್ದನು' ಇಲ್ಲಿ 'ಗೌಡನು'–ಎಂಬುದಕ್ಕೆ ವಿಶೇಷಣವು ವಾಕ್ಯವಲ್ಲ.)

**ಮಾದರಿ:** ('ಅಲ್ಪರ ಸಂಗ, ಅಭಿಮಾನಭಂಗ' ಎಂಬ ಗಾದೆಯ ಅರ್ಥವೇನು?)

1. ಅಲ್ಪರ ಸಂಗ, ಅಭಿಮಾನಭಂಗ' ಎಂಬ ಗಾದೆಯ ಅರ್ಥವೇನು? 2. ಹೀಗೆ ಕೆಲವರು ಹೇಳುತ್ತಾರೆ. ಅವರು ಸುಳ್ಳರು. 3. ನೀನು ಸ್ವಲ್ಪ ದಕ್ಷಿಣೆ ಕೊಡುತ್ತೀಯೆ. ಅದಕ್ಕೆ ತಕ್ಕಷ್ಟು ಪ್ರದಕ್ಷಿಣೆ ಮಾಡುತ್ತೇನೆ. 4. ನೀನು ಏನನ್ನಾದರೂ ಕೇಳು. ಅದನ್ನು ಕೊಡುತ್ತೇನೆ. 5. ಸ್ಥಳವನ್ನು ಬಿಡಕೂಡದೆ? ಇದು ತಿಳಿಯದವರು ಹೇಳತಕ್ಕ ಮಾತು. 6. ಈ ಭರತಖಂಡದಲ್ಲಿ ಲೆಕ್ಕವಿಲ್ಲದಷ್ಟು ದೊಡ್ಡ ದೊಡ್ಡ ಸಾಧುಗಳೂ ವಿದ್ವಾಂಸರೂ ಕವಿಗಳೂ ಇರುತ್ತಿದ್ದರು. ಇದೇ ಭರತಖಂಡದಲ್ಲಿ ಈಗ ಪರದೇಶದ ಸಾಧುಗಳ ಮತ್ತು ಕವಿಗಳ ಚರಿತ್ರೆಯನ್ನು ಮಟ್ಟಿಗೆ ಓದುವ ಜನರು ಹೆಚ್ಚಾಗಿರುವರು. ಕನ್ನಡದಲ್ಲಿರುವ ವಾಕ್ಯಗಳ ಸ್ವರೂಪವನ್ನು ತಕ್ಕಮಟ್ಟಿಗಾದರೂ ವಿವರಿಸಬೇಕು. ಈ ಉದ್ದೇಶದಿಂದ ಈ ಗ್ರಂಥವನ್ನು ಬರೆದಿದ್ದೇನೆ. 7. ನಾನು ಏನು ಮಾಡಬೇಕು? ಹೇಳು, ಮಾಡಿಬಿಡುತ್ತೇನೆ.

## ಅಭ್ಯಾಸ 93

ಇಲ್ಲಿರುವ ವಾಕ್ಯಗಳನ್ನು ಕ್ರಿಯಾವಿಶೇಷಣವಾಕ್ಯಗಳಿಗಿರುವ ಮಿಶ್ರವಾಕ್ಯವಾಗಿ ಒಂದುಗೂಡಿಸಿರಿ:—

1. ಕಳ್ಳರು ಒಂದು ದೊಡ್ಡ ಪೆಟ್ಟಿಗೆಯನ್ನು ತೆಗೆದುಕೊಂಡು ಹೋಗಿದ್ದಾರೆ. ಅವರು ಇನ್ನೇನೂ ಮುಟ್ಟಿಲ್ಲ. 2. ಆ ಹುಡುಗನಿಗೆ ಈ ಉದ್ಯೋಗವು ದೊರಕಿತೆಂದು ಇಟ್ಟುಕೊಳ್ಳಿ. ಆಗ ಅವನ ಬಡ ತಂದೆತಾಯಿಗಳು ಬದುಕಿದರು. ಅದು ದೊರಕಲಿಲ್ಲವೆಂದು ಇಟ್ಟುಕೊಳ್ಳಿ. ಆಗ ಅವರು ಕೆಟ್ಟರು. 3. ಆ ದಿನ ನನ್ನ ಸಾಮಾನುಗಳನ್ನು ನಾನು ತೆಗೆದುಕೊಂಡು ಹೋದೆನು. ನಿಮ್ಮದನ್ನೇನಾದರೂ ಮುಟ್ಟಿದೆನೆ? 4. ನೀವು ಬೇಕಾದಷ್ಟು ಹೇಳಬಹುದು. ನನ್ನ ಬಡತನವು ಮಾತ್ರ ಇಂಗುವಹಾಗಿಲ್ಲ. 5. ಅವನು ಒಂದು ದಿನ ಚೆನ್ನಾಗಿ ಅಲಂಕರಿಸಿಕೊಂಡು ಹೊರಟನು. ಅದು ಬಡಬಗ್ಗರಲ್ಲಿರಬೇಕಾದ ಕರುಣೆಯ ವಿಷಯದಲ್ಲಿ ಉಪನ್ಯಾಸಮಾಡುವುದಕ್ಕೆ. 6. ರಾಜನು ಪಾದಚಾರಿಯಾಗಿ ಊರನ್ನು ಬಿಟ್ಟು ಹೊರಟನು. ಪ್ರಜೆಗಳೆಲ್ಲರೂ ಗೋಳೋ! ಎಂದು ಅಳುತ್ತಾ ಅವನನ್ನೇ ಹಿಂಬಾಲಿಸಿದರು. 7. ಆಕೆಯು ಬಾವಿಯಲ್ಲಿ ಬೀಳುವುದರಲ್ಲಿದ್ದಳು. ಅಷ್ಟರಲ್ಲಿ ಒಬ್ಬ ಪೋಲಿಸಿನವನು ಅಲ್ಲಿಗೆ ಬಂದನು. 8. ಈ ಪುಸ್ತಕವು ಇನ್ನು ಹದಿನೈದು ದಿನಗಳಲ್ಲಿ ಮುಗಿಯಬೇಕು. ಇದನ್ನು ಎಲ್ಲಿ ಅಚ್ಚುಮಾಡಿಸಿದರಾಯಿತು? 9. ಗೌಡರು ಬಂದೇ ಇದ್ದರು, ಅವರನ್ನು ಯಾರೂ ಕರೆಯುವುದಕ್ಕೆ ಹೋಗಲಿಲ್ಲ. 10. ಅವರು ಹಾಗೆ ಮಾಡಬಹುದು. ಅವರು ಹಾಗೆ ಮಾಡದೆ ಇರಬಹುದು. ನಮ್ಮ ಕೆಲಸವನ್ನು ನಾವು ಬಿಡುವುದಿಲ್ಲ.

## ಅಭ್ಯಾಸ 94

ಇಲ್ಲಿ ಕೊಟ್ಟಿರುವ ವಾಕ್ಯಗಳನ್ನು ಪೂರ್ತಿಗೊಳಿಸಿ ಅಧೀನವಾಕ್ಯದ ಅನ್ವಯವನ್ನು ಹೇಳಿ:—

(**ಮಾದರಿ:** 'ಹೀಗೆ ಯಾರು ಹೇಳುತ್ತಾರೋ ಅವರು ಅವಿವೇಕಿಗಳು. ನಾಮವಿಶೇಷಣ ವಾಕ್ಯ; 'ಅವರು' ಎಂಬುದಕ್ಕೆ ವಿಶೇಷಣ. 'ಹೀಗೆ ಯಾರು ಹೇಳುತ್ತಾರೋ ಹೇಳಲಿ.' ನಾಮಾತ್ಮಕವಾಕ್ಯ; 'ಹೇಳಲಿ' ಎಂಬುದರ ಕರ್ತೃ.)

1. ಹೀಗೆ ಯಾರು ಹೇಳುತ್ತಾರೋ— 2. ನೀವು ಎಷ್ಟು ದಕ್ಷಿಣೆಯನ್ನು ಕೊಡುತ್ತೀರೋ — 3. ನೀವು ಅಲ್ಲಿ ಇರಲಿಲ್ಲವಾಗಿ— 4. ತಂದೆಯ ಅಪ್ಪಣೆಯನ್ನು ಪಡೆದೇ ಹೊರಡಬೇಕೆಂದು— 5. ಯಾರು ಯಾರು ಎಲ್ಲೆಲ್ಲಿದ್ದರೋ— 6. ಆ ಬಡಗಿಯು ಎಂಥ ಸಾಮಾನನ್ನು ಹೇಗೆ ಮಾಡಿಕೊಡಬೇಕೆಂದರೆ— 7. ಸಾಮಾನನ್ನು ಗಾಡಿಯೊಳಗೆ ಇಡಬೇಕೆನ್ನುವಷ್ಟರಲ್ಲಿ— 8. ಆ ದುಷ್ಟರು ಎಲ್ಲಿಗೆ ಹೋದರೋ— 9. ಪ್ಲೇಗು ಬಂದಾಗಲೆಲ್ಲ ಊರನ್ನು ಬಿಡಬೇಕೆಂಬ — 10. ರಾಜನು ಸಿಂಹಾಸನದಲ್ಲಿ ಕುಳಿತುಕೊಂಡನೋ ಇಲ್ಲವೋ— 11. ದಫೇದಾರನು ರಾತ್ರಿಯೆಲ್ಲ ಕಾವಲಿರಬೇಕೆಂದು ಕಟ್ಟುಮಾಡಿದ್ದನಾದರೂ— 12. ಇದರಿಂದ ನಮಗೆ ಅನುಕೂಲವಾಗಲಿ, ಬಿಡಲಿ— 13. ತಮ್ಮ ಯೋಗಕ್ಷೇಮಕ್ಕೆ ಆಗಿಂದಾಗ್ಗೆ ಕಾಗದ ಬರೆಯಿಸುತ್ತಿರಬೇಕಾಗಿ — 14. ಅವರ ಆದಾಯವೆಷ್ಟೋ ಸಾಲವೆಷ್ಟೋ— 15. ಇನ್ನು ಮೇಲೆ ಬರಲೇ

ಕೂಡದೆಂದರೂ— 16. ಆ ಪ್ರಾಣಿಯನ್ನು ಹನುಮಯ್ಯನೇ ಕೊಂದನೆಂಬುದಕ್ಕೆ — 17. ಯಾರೇ ಆಗಲಿ—

## ಅಭ್ಯಾಸ 95

ಈ ಕಥೆಯಲ್ಲಿ ಸಾಮಾನ್ಯವಾಕ್ಯಗಳೇ ಹೆಚ್ಚಾಗಿ ಅಲ್ಲಿಗಲ್ಲಿಗೆಕಚ್ಚಾದಂತೆ ಇದೆ. ಓದುವುದಕ್ಕೆ ಚೆನ್ನಾಗುವ ರೀತಿಯಲ್ಲಿ ಸಂದರ್ಭಕ್ಕೆ ತಕ್ಕಂತೆ ವಾಕ್ಯಗಳನ್ನು ಕೂಡಿಸಿ ಬರೆಯಿರಿ. ಕೂಡಿಸಿ ಬರೆದ ವಾಕ್ಯವು ಸಾಮಾನ್ಯವಾಗಲಿ, ಸಂಯೋಜಿತವಾಗಲಿ, ಮಿಶ್ರವಾಗಲಿ, ತೀರ ದೊಡ್ಡದಾಗದಂತೆ ನೋಡಿಕೊಳ್ಳಬೇಕು. ಕಥೆಯಲ್ಲಿ ಮೂರು ಮಹಾವಾಕ್ಯಗಳಿರಲಿ.

### ಜಿಂಕೆಯ ಕೊಂಬುಗಳು

ಒಂದು ಜಿಂಕೆ ಒಂದು ಕೆರೆಯಲ್ಲಿ ನೀರು ಕುಡಿಯುತ್ತಿತ್ತು. ಅದು ತಿಳಿನೀರಿನಲ್ಲಿ ತನ್ನ ನೆರಳನ್ನು ಕಂಡಿತು. ಆ ಪ್ರಾಣಿ ತನ್ನ ಕೊಂಬುಗಳ ಸೌಂದರ್ಯಕ್ಕೆ ಬೆರಗಾಯಿತು. ಆದರೆ ತನ್ನ ಬಡಕಾಲುಗಳು ಅಷ್ಟು ಅದರ ಮನಸ್ಸಿಗೆ ಬರಲಿಲ್ಲ. “ಇಂಥ ಸೊಗಸಾದ ಪ್ರಾಣಿಗೆ ಈ ಹಾಳು ಕಾಲುಗಳೆ? ನನ್ನ ಕೊಂಬಿಗೆ ತಕ್ಕ ಕಾಲುಗಳಾಗಲಿಲ್ಲವಲ್ಲ!”–ಹೀಗೆಂದು ಆ ಮಂಕು ಪ್ರಾಣಿಯು ನಿಟ್ಟುಸಿರುಬಿಡುತ್ತಿತ್ತು. ಅಷ್ಟರಲ್ಲಿ ಸೀಳುನಾಯಿಗಳು ಬಗುಳಿದವು. ಆ ಧ್ವನಿ ಅದಕ್ಕೆ ಕೇಳಿಸಿತು. ಕೂಡಲೆ ಜಿಂಕೆ ಚಂಗನೆ ಹಾರಿತು. ಓಡುತ್ತೋಡುತ್ತ ಹೋಯಿತು. ಆ ಮೈದಾನದ ಆಚೆ ಒಂದು ತೋಟವಿತ್ತು. ಅಲ್ಲಿ ಒಂದು ದಟ್ಟವಾದ ಪೊದೆಯಿತ್ತು; ಅದು ಕಣ್ಣಿಗೆ ಬಿತ್ತು. ಹಿಂದೆ ಬೇಟೆಯ ನಾಯಿಗಳು ಇನ್ನೂ ಬಗುಳುತ್ತಿದ್ದವು. ಅದು ಕೇಳಿಸುತ್ತಿತ್ತು. ಆ ಜಿಂಕೆಯು ಹಿಂದುಮುಂದು ನೋಡಲಿಲ್ಲ. ಪೊದೆಯೊಳಕ್ಕೆ ನುಗ್ಗಿತು, ಅದರ ಕೊಂಬುಗಳು ಡೊಂಕುಡೊಂಕಾಗಿ ಬೆಳೆದಿದ್ದವು. ಅವು ಗಿಡದ ಕೊಂಬೆಯಲ್ಲಿ ಸಿಕ್ಕಿಕೊಂಡವು. ಅಷ್ಟರಲ್ಲಿ ನಾಯಿಗಳು ಓಡಿಬಂದವು. ಅವು ಹಿಂದೆ ಇದ್ದವು; “ನಾನು ಹೀಯಾಳಿಸಿದ ಕಾಲುಗಳು ಇಲ್ಲಿಯವರೆಗೆ ಕರೆತಂದವು. ಅಷ್ಟೊಂದು ಹೊಗಳಿದ ಈ ಕೆಟ್ಟ ಕೊಂಬುಗಳು ಈ ಗತಿಗೆ ತಂದವಲ್ಲ!”—ಹೀಗೆಂದು ಆ ಬಡಪ್ರಾಣಿಯು ಮರುಗುತ್ತಿತ್ತು. ಹಾಗೆಯೇ ಆ ನಾಯಿಗಳ ಬಾಯಿಗೆ ತುತ್ತಾಯಿತು.

## ಅಭ್ಯಾಸ 96

ಈ ಕಥೆಯಲ್ಲಿರುವ ವಾಕ್ಯಗಳನ್ನು ಓದುವುದಕ್ಕೆ ಚೆನ್ನಾಗಿರುವಂತೆ ಅಲ್ಲಿಗಲ್ಲಿಗೆ ಕೂಡಿಸಿ ವಾಕ್ಯಗಳ ಸಂಖ್ಯೆಯನ್ನು ಕಡಿಮೆಮಾಡಿ. ಕಥೆಯನ್ನು ಮೂರು ಮಹಾವಾಕ್ಯಗಳಾಗಿ ವಿಂಗಡಿಸಿ.

### ಇವನೇ ಕಳ್ಳ!

ಒಬ್ಬ ಸಾಹುಕಾರನ ಮನೆಯಲ್ಲಿ ಬಹು ಜನ ಆಳುಗಳಿದ್ದರು. ಅವರಲ್ಲಿ ಒಬ್ಬನು ಒಂದು ಬೆಳ್ಳಿಯ ಬಟ್ಟಲನ್ನು ಕದ್ದನು. ಇದು ಯಜಮಾನನಿಗೆ ತಿಳಿಯಿತು. ಆತನು ಎಲ್ಲಾ ಆಳುಗಳನ್ನೂ

ಕರೆಯಿಸಿದನು. ಒಬ್ಬೊಬ್ಬರಿಗೆ ಒಂದೊಂದು ಕೋಲನ್ನು ಕೊಟ್ಟನು. ಆ ಕೋಲುಗಳೆಲ್ಲ ಒಂದೇ ಅಳತೆಯಾಗಿದ್ದವು. "ನಾಳೆಯ ದಿನ ಕಳ್ಳನ ಕೋಲು ಒಂದು ಅಂಗುಲ ಹಿಗ್ಗಿರುವುದು"—ಎಂದು ಹೇಳಿದನು. ಕಳ್ಳನು ಈ ಮಾತನ್ನು ಕೇಳಿದನು. ಅವನ ಮನಸ್ಸು ತಳಮಳಗೊಂಡಿತು. ಅವನು ತಿಳಿಗೇಡಿ, ಅವನು ಕೋಲನ್ನು ಒಂದು ಅಂಗುಲದಿಷ್ಟು ಕತ್ತರಿಸಿದನು. ಇದನ್ನು ಯಾರೂ ಕಾಣಲಿಲ್ಲ, ಉಳಿದವರೇನೋ ಸುಮ್ಮನೆ ಇರುತ್ತಿದ್ದರು. ಮಾರನೆಯ ದಿನ ಎಲ್ಲರಿಗೂ ಕರೆಬಂತು. ಕಳ್ಳನ ಕೋಲು ಒಂದಂಗುಲ ಕಡಿಮೆಯಾಗಿತ್ತು. ಇದನ್ನು ಕಂಡು 'ಇವನೇ ಕಳ್ಳ!'—ಎಂದು ಸಾಹುಕಾರನು ಹೇಳಿದನು. ಇದನ್ನು ಎಲ್ಲರೂ ಕೇಳಿದರು. ಅವರಿಗೆ ಆಶ್ಚರ್ಯವಾಯಿತು.

**41.** ಸಾಮಾನ್ಯವಾಕ್ಯಗಳಿಂದಲೇ ಅರ್ಥವು ಸ್ಪಷ್ಟವಾಗುತ್ತಿರುವಾಗ ಸಂಯೋಜಿತವಾಕ್ಯವನ್ನಾಗಲಿ ಮಿಶ್ರವಾಕ್ಯವನ್ನಾಗಲಿ ಅನವಶ್ಯವಾಗಿ ಉಪಯೋಗಿಸುವುದು ಸರಿಯಲ್ಲ.

**ಉದಾ:** (1) ಸೂರ್ಯನು ಉದಯಿಸಿದನು; ಮತ್ತು ಆಕಾಶದಲ್ಲೆಲ್ಲ ತನ್ನ ಪ್ರಕಾಶವನ್ನು ಬೀರಿದನು.

ಇದನ್ನು "ಸೂರ್ಯನು ಉದಯಿಸಿ ಆಕಾಶದಲ್ಲೆಲ್ಲ ತನ್ನ ಪ್ರಕಾಶವನ್ನು ಬೀರಿದನು" ಎಂದು ಒಂದು ಸಾಮಾನ್ಯವಾಕ್ಯವಾಗಿ ಬರೆಯಬಹುದು.

(2) ನೀನಾದರೂ ನನ್ನನ್ನು ಬಯ್ದಿರಬೇಕು; ಇಲ್ಲದಿದ್ದರೆ ನಿಮ್ಮಪ್ಪನಾದರೂ ನನ್ನನ್ನು ಬಯ್ದಿರಬೇಕು.

ಇದನ್ನು 'ನನ್ನನ್ನು ನೀನಲ್ಲದಿದ್ದರೆ ನಿಮ್ಮಪ್ಪನಾದರೂ ಬಯ್ದಿರಬೇಕು' ಎಂದು ಬರೆದರೆ ಹೆಚ್ಚು ಬಿಗಿಯಾಗುವುದು.

(3) ಹನುಮನು ನಿಮ್ಮ ಮನೆಯ ಅನ್ನವನ್ನು ಎಷ್ಟೋ ದಿನದಿಂದ ತಿಂದಿದ್ದಾನೆ; ಅವನು ಕಳ್ಳರಿಗೆ ಸಹಾಯ ಮಾಡಿಯಾನೆ?

ಇದನ್ನು 'ಎಷ್ಟೋ ದಿನದಿಂದ ನಿಮ್ಮ ಮನೆಯ ಅನ್ನವನ್ನು ತಿಂದಿರುವ ಹನುಮನು ಕಳ್ಳರಿಗೆ ಸಹಾಯಮಾಡಿಯಾನೆ?' ಎಂದು ಸ್ವಲ್ಪದರಲ್ಲಿಯೇ ಬರೆಯಬಹುದು

ಎರಡನೆಯ ಅಧ್ಯಾಯದಲ್ಲಿ ತಿಳಿಸಿರುವಂತೆ ಸಂಬಂಧಸೂಚಕಗಳು ವಿಶೇಷಣಗಳು, ಕೃದಂತಗಳು[4]—ಇವುಗಳನ್ನುಪಯೋಗಿಸಿ ಸಂಯೋಜಿತವಾಕ್ಯಗಳನ್ನು ಸಾಮಾನ್ಯವಾಕ್ಯಗಳಾಗಿ ಬರೆಯಬಹುದು.

---

[4] ಸಂಯೋಜಿತವಾಕ್ಯದಲ್ಲಿ ಎರಡು ಅಥವಾ ಹೆಚ್ಚು ಕ್ರಿಯಾಪದಗಳಿರುವುವೆಂಬುದನ್ನೂ ಕೃದಂತಗಳು ಕ್ರಿಯಾಪದಗಳಲ್ಲವೆಂಬುದನ್ನೂ ಹುಡುಗರ ಲಕ್ಷ್ಯಕ್ಕೆ ತರಬೇಕು.

## ಅಭ್ಯಾಸ 97

ಈ ಸಂಯೋಜಿತವಾಕ್ಯಗಳರ್ಥವನ್ನು ಸಾಮಾನ್ಯವಾಕ್ಯಗಳಿಂದ ತಿಳಿಸಿರಿ. ದಪ್ಪಕ್ಷರದಲ್ಲಿರುವ ಕ್ರಿಯಾಪದವನ್ನು ಉಳಿಸಿಕೊಳ್ಳಿರಿ.

(**ಮಾದರಿ:** ಅವನಿಗೆ ತಿಳಿಯದೆ ಇದ್ದರೆ ಹೀಗೆ ನಗುತ್ತಿದ್ದನೆ?)

1. ಅವನಿಗೆ ತಿಳಿದಿರಬೇಕು; ಇಲ್ಲದಿದ್ದರೆ ಹೀಗೆ ನಗುತ್ತಿದ್ದನೆ? 2. ನನ್ನ ಪರಾಕ್ರಮವನ್ನು ಸಂಜೀವಕನು ತಿಳಿದಿದಾನೆ; ಅವನು ನನಗೆ ಹೇಗೆ ದ್ರೋಹಮಾಡಿಯಾನು? 3. ನಮ್ಮ ಬೀಗರನ್ನು ನೋಡಬೇಕು; ಆದುದರಿಂದ ಹೊರಟಿದ್ದೇನೆ. 4. ಬೇಸಗೆಯಲ್ಲಿ ಕಾಲುಹೊಳೆಗಳು ಬತ್ತಿಹೋಗುವಲ್ಲವೆ? ಹಾಗೆ ದರಿದ್ರನ ಕಾರ್ಯಗಳು ಕೆಟ್ಟುಹೋಗುವುವು. 5. ಅವನು ಸ್ವಲ್ಪಮಟ್ಟಿಗೆ ಕಲಿತಿದ್ದನು; ಮತ್ತು ಅಷ್ಟರಮಟ್ಟಿಗೇ ಹಾಡಿದನು. 6. ಅವನನ್ನು ನಾವು ಬಾ ಎನ್ನುತ್ತೇವೆ; ಆದರೆ ಅವನು ಬರುವುದಿಲ್ಲ. 7. ಮೋಡವು ಮುಚ್ಚಿಕೊಂಡಾಗ ಇಂಥ ಮನೆಗಳು ರಮ್ಯವಾಗಿ ಕಾಣದೆ ಇರಬಹುದು; ಆದರೆ ಇವುಗಳನ್ನು ಭದ್ರವಾಗಿ ಕಟ್ಟಿರುವುದರಿಂದ ಅವುಗಳಲ್ಲಿ ನೀರು ಸೋರುವುದಿಲ್ಲ. 8. ಈಗ ಮಳೆ ಬಂದಿದೆ; ಆದುದರಿಂದ ಮತ್ತೆ ನೀರು ಹಾಯಿಸಬಾರದು. 9. ದೊರೆಯು ಸಿಂಹಾಸನವನ್ನೇರಿದನು; ಬಳಿಕ ಸಭಿಕರೆಲ್ಲರೂ ತಮ್ಮ ತಮ್ಮ ಸ್ಥಾನದಲ್ಲಿ ಕುಳಿತುಕೊಂಡರು. 10. ತಾವೇನಾದರೂ ಮಾಡಬಹುದು; ನಾನಂತೂ ಹೊರಟೇ ಹೊರಡುತ್ತೇನೆ. 11. ನಾನಾದರೂ ಬರುತ್ತೇನೆ; ನನ್ನ ತಮ್ಮನನ್ನಾದರೂ ಕಳುಹಿಸುತ್ತೇನೆ. 12. ನಾನು ತಮಗೆ ಕಾಗದವನ್ನು ಬರೆದು ಎರಡು ತಿಂಗಳು ಆಗುತ್ತಾ ಬಂತು; ಆದಾಗ್ಯೂ ಇನ್ನೂ ಉತ್ತರಬರಲಿಲ್ಲ. 13. ಅವನು ಭಾವಿಯನ್ನು ನೋಡಲಿಲ್ಲ. ಆದುದರಿಂದ ಕಾಲುಜಾರಿ ಅದರೊಳಕ್ಕೆ ಬಿದ್ದನು. 14. ಮಂತ್ರಿಸಬಹುದು; ಆದರೆ ಮಾವಿನಕಾಯಿ ಬೀಳಬೇಕಾಯಿತಲ್ಲ! 15. ಮೊದಲು ಆ ಹುಡುಗಿಯು ಸತ್ತಳು, ಕೂಡಲೆ ಅವಳ ಅಣ್ಣಂದಿರಿಬ್ಬರೂ ಬಾವಿಗೆ ಬಿದ್ದರು.

42. ಮಿಶ್ರವಾಕ್ಯಗಳನ್ನು ಸಾಮಾನ್ಯವಾಕ್ಯವಾಗಿ ಮಾಡಬೇಕಾದರೂ ಪೂರ್ಣ ಕ್ರಿಯಾಪದಗಳನ್ನೆಲ್ಲ ತೆಗೆದು ಕೃದಂತಗಳನ್ನೋ ಕೃದಂತಗಳಿಂದೊಡಗೂಡಿದ ನಾಮಪದ ಅಥವಾ ಅವ್ಯಯ—ಇವುಗಳನ್ನೋ ಉಪಯೋಗಿಸಬೇಕು. ಹೇಗೆಂದರೆ—

### ಮಿಶ್ರವಾಕ್ಯಗಳು

(1) ಇದರಿಂದ ಏನು ಆಗುತ್ತದೆಯೋ ಆಗಲಿ.

(2) ನಿಮ್ಮ ಸಾಲವನ್ನು ಮುಂದಿನ ತಿಂಗಳು ತೀರಿಸುವೆನೆಂತ ಹೇಳುತ್ತಾನೆ.

(3) ಆಗ ನಾವು ಏನು ಮಾಡಬೇಕೆಂಬ ಆಲೋಚನೆ ಹುಟ್ಟುವುದು.

(4) ನಿನಗೆ ಎಷ್ಟು ಬೇಕೋ ಅಷ್ಟು ಮುತ್ತುಗಳನ್ನು ಚೀಲದಲ್ಲಿ ತುಂಬಿಕೊ.

(5) ಅವರು ಹೊಸದೊಂದು ರಾಜ್ಯವನ್ನು ಸ್ಥಾಪಿಸುವುದಕ್ಕೆ ಹೊರಟಿದ್ದಾರೋ ಎಂಬಂತೆ ಠೀವಿಯಿಂದ ಹೋಗುತ್ತಿದ್ದರು.

(6) ನೀನು ಸುಮ್ಮನೆ ಜಂಭಕೊಚ್ಚಿಕೊಳ್ಳುತ್ತೀಯೇ ಹೊರತು ಯಾವ ಕೆಲಸವನ್ನೂ ಮಾಡುವುದಿಲ್ಲ.

(7) ಆತನು ಯಾವಾಗ ಎಲ್ಲಿ ಹುಟ್ಟಿದನೋ ಯಾರಿಗೂ ತಿಳಿಯದು.

(8) ಅವರು ಹೀಗೆ ಮಾಡಿದರಲ್ಲ, ಎಂದು ನಮಗೆಲ್ಲ ವ್ಯಸನವಾಯಿತು.

## ಸಾಮಾನ್ಯ ವಾಕ್ಯಗಳು

(1) ಇದರಿಂದ ಆಗುವದಾಗಲಿ.

(2) ನಿಮ್ಮ ಸಾಲವನ್ನು ಮುಂದಿನ ತಿಂಗಳು ತೀರಿಸುವುದಾಗಿ ಹೇಳುತ್ತಾನೆ.

(3) ಆಗ ನಾವು ಮಾಡಬೇಕಾದದ್ದರ ವಿಷಯಕ್ಕೆ ಆಲೋಚನೆ ಹುಟ್ಟುವುದು.

(4) ನಿನಗೆ ಬೇಕಾದಷ್ಟು ಮುತ್ತುಗಳನ್ನು ಚೀಲದಲ್ಲಿ ತುಂಬಿಕೊ.

(5) ಹೊಸದೊಂದು ರಾಜ್ಯವನ್ನು ಸ್ಥಾಪಿಸುವುದಕ್ಕೆ ಹೊರಟಿರುವ ಹಾಗೆ ಅವರು ಠೀವಿಯಿಂದ ಹೋಗುತ್ತಿದ್ದರು.

(6) ನೀನು ಸುಮ್ಮನೆ ಜಂಭಕೊಚ್ಚಿಕೊಳ್ಳುವುದೊಂದು ಹೊರತು ಮತ್ತೆ ಯಾವ ಕೆಲಸವನ್ನೂ ಮಾಡುವುದಿಲ್ಲ.

(7) ಅವನು ಹುಟ್ಟಿದ ಕಾಲವಾಗಲಿ ಸ್ಥಳವಾಗಲಿ ಯಾರಿಗೂ ತಿಳಿಯದು.

(8) ಅವರು ಹೀಗೆ ಮಾಡಿದ್ದಕ್ಕೆ ನಮಗೆಲ್ಲ ವ್ಯಸನವಾಯಿತು.

## ಅಭ್ಯಾಸ 98

ಈ ವಾಕ್ಯಗಳನ್ನು ಸಾಮಾನ್ಯವಾಕ್ಯಗಳಾಗಿ ಮಾಡಿ. (32, 33, 34ನೆಯ ಅಭ್ಯಾಸಗಳಮೇಲೆ ತೋರಿಸಿರುವ ಕೃದಂತಗಳಲ್ಲಿ) ಉಪಯೋಗವಾಗುವ ಕೃದಂತವನ್ನು ಪೂರ್ಣಕ್ರಿಯಾಪದಗಳಿಗೆ ಬದಲಾಗಿ ಉಪಯೋಗಿಸಿ ಒಂದೇ ಕ್ರಿಯಾಪದವನ್ನುಳಿಸಿಕೊಳ್ಳಿ.

1. ಜಯಮಲ್ಲನು ರಾಯನನ್ನು ಬೆದರಿಸಿ ಬಲಾತ್ಕಾರದಿಂದ ಅವನ ಮಗಳನ್ನು ಕರೆದುಕೊಂಡು ಹೋಗಿ ಮದುವೆಮಾಡಿಕೊಳ್ಳಬೇಕೆಂದು ಪ್ರಯತ್ನಪಟ್ಟನು. 2. ನೀನು ಹೇಗೆ ಹೇಳಿದ್ದೆಯೋ ಹಾಗೆಯೇ ಆಯಿತು. 3. ಲೋಕವು ನಿಷ್ನನ್ನು ಕಾಣದಂತಿರಬೇಕೆಂದು ಗರಳವನ್ನು ಏರಿಸಿದೆನು. 4. ಬೆಳಕು ಹರಿಯಿತೋ ಇಲ್ಲವೋ ಜನರ ಸಂದಣಿ ಮೊದಲಾಗುವುದು.

5. ಭೂಮಿಯೂ ಅಂತರಿಕ್ಷವೂ ಒಂದಾದವೋ ಏನೋ ಎಂಬಂತೆ ಕಾಣುತ್ತಿತ್ತು. 6. ಆವ ನನ್ನು ಎಲ್ಲಿ ಸುಟ್ಟರೋ ಯಾರಿಗೆ ಗೊತ್ತು? 7. ಎಷ್ಟು ಕರಗಬಹುದೋ ಅಷ್ಟು ಉಪ್ಪು ಕರಗಿ ಮಿಕ್ಕದ್ದು ಕೆಳಗೆ ನಿಲ್ಲುತ್ತದೆ. 8. ಆತನ ಪ್ರಾಣವು ಉಳಿದೀತೆಂಬ ಆಸೆ ಹೋಯಿತು. 9. ಎಂದು ರಾಮನು ಬರುವನೋ ಅಂದು ನಿನಗೆ ಶಾಪದಿಂದ ಬಿಡುಗಡೆಯಾಗುವುದು. 10. ಏನು ಮಾಡುತ್ತಾನೋ ಯಾರು ಬಲ್ಲವರು? 11. ಯಾವನು ಉಪ್ಪುತಿನ್ನುವನೋ ಅವನು ನೀರು ಕುಡಿಯುವನು. 12. ತಾವು ಇದನ್ನು ಯಾರಿಗೆ ಕೊಡೆಂದರೆ ಅವರಿಗೆ ಕೊಡುತ್ತೇನೆ. 13. ನೀವು ಎಲ್ಲಿಗೆ ಹೋಗುತ್ತೀರೋ ಹೋಗಿ. 14. ಎಲ್ಲಿ ಹೊಗೆಯಿರುವುದೋ ಅಲ್ಲಿ ಬೆಂಕಿಯಿರುವುದು.

---

# ಏಳನೆಯ ಅಧ್ಯಾಯ

## ವಾಕ್ಯರಚನೆಗೆ ಕಳೆಕಟ್ಟುವ ರೀತಿ

43. ಕಥೆಯನ್ನು ಹೇಳುವುದು, ವಸ್ತುಗಳನ್ನು ವರ್ಣಿಸುವುದು, ಕಾಗದಗಳನ್ನು ಬರೆಯುವುದು—ಇವು ಮೂರೇ ಸಾಮಾನ್ಯವಾಗಿ ಪಾಠಶಾಲೆಯ ಹುಡುಗರು ಬರೆಯುವ ವಾಕ್ಯರಚನೆಗಳು. ಇವುಗಳನ್ನು ಬರೆಯುವ ಬಗೆಯನ್ನು ಕುರಿತು ಈ ಪುಸ್ತಕದಲ್ಲಿ ಸಂದರ್ಭಾನುಸಾರವಾಗಿ ಬೇರೆ ಬೇರೆ ಕಡೆಯಲ್ಲಿ ಬರೆದಿರುತ್ತದೆ. ಈಗ ಈ ವಾಕ್ಯರಚನೆಗಳಿಗೆ ಹೊಳಪನ್ನು ಕೊಡುವುದಕ್ಕೆ ಏನೇನು ಲಕ್ಷ್ಯದಲ್ಲಿರಬೇಕೆಂಬುದನ್ನು ತಿಳಿಸಲಾಗುತ್ತದೆ.

### 1 ಕಥೆಗಳು

44. ಕಥೆಗಳನ್ನು ಬರೆಯುವಾಗ ಸಂಗತಿಗಳು ನಡೆದ ಕ್ರಮದಲ್ಲಿಯೇ ಅವುಗಳನ್ನು ಬರೆಯಬೇಕೇ ಹೊರತು ಮೊದಲು ನಡೆದಿರಬೇಕಾದದ್ದನ್ನು ಆಮೇಲೆ ತಿಳಿಸಬಾರದು. ಯಾವ ಸಂದರ್ಭದಲ್ಲಿ ಯಾವ ಸಂಗತಿಯು ನಡೆಯಿತೋ ಅದನ್ನು ತಿಳಿಸುವುದಕ್ಕೆ ಆಯಾ ಸ್ಥಳ, ಮನುಷ್ಯರು, ವಸ್ತುಗಳು—ಮುಂತಾದದ್ದನ್ನು ವಿವರಿಸುವ ವಿಶೇಷಣಗಳನ್ನೂ ಆಯಾ ಕ್ರಿಯೆಗಳಿಗೆ ತಕ್ಕ ವಿಶೇಷಣಗಳನ್ನೂ ಉಪಯೋಗಿಸಬೇಕು. ಸಾಧ್ಯವಾದ ಕಡೆಗಳಲ್ಲಿ ಕಥೆಯಲ್ಲಿ ಒಬ್ಬರೊಡನೊಬ್ಬರು ಮಾತನಾಡಿದ ಸಂದರ್ಭಗಳನ್ನು ಕಲ್ಪಿಸಿಕೊಂಡು ಅದನ್ನೂ ಸೇರಿಸಿ ಬರೆಯಬೇಕು; ಇದರಿಂದ ಕಥೆಯ ಸ್ವಾರಸ್ಯವು ಹೆಚ್ಚುತ್ತದೆ. ಉದಾಹರಣೆಗೆ ಈ ಕೆಳಗಿನ ಕಥೆಯನ್ನು ನೋಡಿ:—

## ನರಿಯೂ ಕೊಕ್ಕರೆಯೂ

ಒಂದು ದಿನ ಒಂದು ನರಿಯು ಒಂದು ಕೊಕ್ಕರೆಯನ್ನು ತನ್ನ ಮನೆಗೆ ಊಟಕ್ಕೆ ಕರೆಯಿತು. ಕೊಕ್ಕರೆಯು ಅದಕ್ಕೆ ಒಪ್ಪಿ ಹೊತ್ತಿಗೆ ಸರಿಯಾಗಿ ನರಿಯ ಮನೆಗೆ ಬಂದಿತು. ಆ ದಿನ ಮಾಡಿದ್ದ ಅಡಿಗೆ ಬರಿಯ ಖೀರು, ಕೊಕ್ಕರೆಗೆ ಅದನ್ನು ತಿನ್ನುವುದಕ್ಕೆ ಆಗುವಂತಿರಲಿಲ್ಲ. ನರಿಯು ಮಾತ್ರ ಅದನ್ನು ಬೇಗನೆ ನೆಕ್ಕಿಕೊಳ್ಳುತ್ತಿತ್ತು. ನರಿಯು ತಾನು ಮಾಡಿದ್ದ ಪಾಯಸ ವನ್ನು ಒಂದು ಅಗಲವಾದ ತಟ್ಟೆಯಲ್ಲಿ ಬಡಿಸಿತು.

ಕೊಕ್ಕರೆಯು ಮರುದಿನ ತನ್ನ ಮನೆಯಲ್ಲಿ ಒಂದು ಅಡಿಗೆಯನ್ನು ಮಾಡಿತು. ಅದನ್ನು ಒಂದು ಹೂಜಿಯಲ್ಲಿ ಬಡಿಸಿತು. ನರಿಯನ್ನೂ ಊಟಕ್ಕೆ ಕರೆದಿತ್ತು. ಈ ದಿನ ನರಿಗೆ ಊಟವೇ ಇಲ್ಲ. ಕೊಕ್ಕರೆಯು ಮಾತ್ರ ಒಂದೊಂದು ತುಂಡನ್ನು ತೆಗೆದುಕೊಂಡು ರುಚಿನೋಡುತ್ತಿತ್ತು.

ಮೇಲಿನ ಕಥೆಯಲ್ಲಿ ನಡೆದ ಸಂಗತಿಗಳೆಲ್ಲ ಇವೆಯಾದರೂ ಅವುಗಳನ್ನು ನಡೆದ ಕ್ರಮದಲ್ಲಿಯೇ ಹೇಳಿಲ್ಲ. ಉದಾಹರಣೆಗೆ 'ನರಿಯನ್ನು ಊಟಕ್ಕೆ ಕರೆದಿತ್ತು' ಎಂಬ ಸಂಗತಿಯನ್ನು 'ಹೂಜಿಯಲ್ಲಿ ಅಡಿಗೆಯನ್ನು ಬಡಿಸಿತು' ಎಂಬುದು ಆದಮೇಲೆ ತಿಳಿ ಸಿರುತ್ತದೆ. ಕೊಕ್ಕರೆಯು ನರಿಯ ಮನೆಗೆ ಬಂದ ಕಾಲದಲ್ಲಿ ಅದರ ಮನಸ್ಸಿನ ಸ್ಥಿತಿ ಹೇಗಿತ್ತು? ನರಿಯು ಅದರೊಡನೆ ಆಡಿದ ಮಾತುಗಳೇನು? ಕೊಕ್ಕರೆಗೆ ಊಟ ಮಾಡುವುದಕ್ಕೆ ಏಕೆ ಆಗಲಿಲ್ಲ? ಮಾರನೆಯದಿನ ಕೊಕ್ಕರೆಯು ನರಿಗೆ ಔತಣಮಾಡಿ ಸಿದ್ದರ ಉದ್ದೇಶವೇನು? ಇವೇ ಮುಂತಾದ ಸಂಗತಿಗಳನ್ನು ತಿಳಿಸುವ ವಿಶೇಷಣ ಗಳನ್ನೂ ಸಂಭಾಷಣೆಗಳನ್ನೂ ಸೇರಿಸಿಲ್ಲವಾದ್ದರಿಂದ ಕಥೆಯು ಸಪ್ಪೆಯಾಗಿದೆ. ಇದೇ ಕಥೆಯನ್ನು ಈ ವಿವರಗಳ ಸಮೇತವಾಗಿ ಬರೆದರೆ ಹೇಗಾಗುವುದು ನೋಡಿ:–

## ನರಿಯೂ ಕೊಕ್ಕರೆಯೂ

ಒಂದು ದಿನ ಒಂದು ನರಿಯು ತನ್ನ ನೆರೆಯಲ್ಲಿದ್ದ ಒಂದು ಕೊಕ್ಕರೆಯನ್ನು ತನ್ನ ಮನೆಗೆ ಊಟಕ್ಕೆ ಬರಬೇಕೆಂದು ಕರೆಯಿತು. ಕೊಕ್ಕರೆಯು ಅದಕ್ಕೆ ಒಪ್ಪಿ ಹೊತ್ತಿಗೆ ಸರಿಯಾಗಿ ನರಿಯ ಮನೆಗೆ ಬಂದಿತು. ಆ ದಿನ ಮಾಡಿದ್ದ ಅಡಿಗೆ ಬರಿಯ ಖೀರು. ಖೀರು ಬಲು ರುಚಿಯಾಗಿತ್ತು, ಕೊಕ್ಕರೆಯೂ ಬಹಳ ಹಸಿದಿತ್ತು; ಆದುದರಿಂದ ಬೇಗನೆ ಊಟಕ್ಕೆ ಕೂತರೆ ಆದೀತೆಂದು ಅದು ತವಕಿಸುತ್ತಿತ್ತು.

ಆದರೆ ತಂತ್ರಿಯಾದ ಆ ನರಿಯು ನಿಜವಾಗಿ ಉದಾರಬುದ್ಧಿಯಿಂದ ಕೊಕ್ಕರೆಗೆ ಔತಣ ಹೇಳಿರಲಿಲ್ಲ. ಸ್ವಲ್ಪ ಕುಚೇಷ್ಟೆಮಾಡಿ ನೋಡಬೇಕೆಂಬುದೇ ಅದರ ಉದ್ದೇಶ. ಆದ್ದರಿಂದ ತಾನು ಮಾಡಿದ್ದ ಪಾಯಸವನ್ನು ಒಂದು ಅಗಲವಾದ ತಟ್ಟೆಯಲ್ಲಿ ಬಡಿಸಿತು. ಕೊಕ್ಕರೆಯು ತನ್ನ ನೀಳವಾದ ಕತ್ತನ್ನು ಬಗ್ಗಿಸಿಕೊಂಡು ಎಷ್ಟು ಪ್ರಯತ್ನ ಪಟ್ಟರೂ ಅದನ್ನು ತಿನ್ನುವುದಕ್ಕೆ ಆಗುವಂತಿರಲಿಲ್ಲ. ನರಿಯು ಮಾತ್ರ ಪಾಯಸವನ್ನು ಬೇಗ ಬೇಗನೆ ಹೀರಿಕೊಳ್ಳುತ್ತ, ಬಾಯಿ ಚಪ್ಪರಿಸುತ್ತ, ನಡುನಡುವೆ, "ಏನಯ್ಯ, ಇದೇಕೆ ಹೀಗೆ ಕೂತಿದ್ದೀಯೆ? ಅಡಿಗೆ ಚೆನ್ನಾಗಿಲ್ಲ ವೇನೋ!"–ಎಂದು ಕೇಳುತ್ತಿತ್ತು.

ಕೊಕ್ಕರೆಯು ತನ್ನ ಮನಸ್ಸಿನ ಭಾವವನ್ನು ಹೊರಗೆ ತೋರಿಸಿಕೊಳ್ಳಲಿಲ್ಲ. "ಬಹಳ ಚೆನ್ನಾಗಿದೆ! ಇದಲ್ಲವೆ, ಔತಣ! ಭಲೆ! ಹೀಗಿರಬೇಕು!"—ಎಂದು ಮೆಚ್ಚಿಕೆಯನ್ನು ತೋರಿಸಿ "ನಾಳೆ ನೀನೂ ನಮ್ಮ ಮನೆಗೆ ತಪ್ಪದೆ ಬರಬೇಕಯ್ಯ, ನಾನೂ ಕೈಲಾದ ಅಡಿಗೆಯನ್ನು ಮಾಡಬೇಕೆಂದಿದ್ದೇನೆ"—ಎಂದು ಕೇಳಿಕೊಂಡಿತು.

ನರಿಯು ನಿಜವಾಗಿಯೂ ಆ ಮಂಕುಕೊಕ್ಕರೆಗೆ ತನ್ನ ತಂತ್ರವು ತಿಳಿಯಲಿಲ್ಲವೆಂದೇ ಬಗೆಯಿತು. ಕೊಕ್ಕರೆಯು ಊಟಕ್ಕೆ ಕರೆದಕೂಡಲೆ ಆತುರದಿಂದ ಒಪ್ಪಿ ಮರುದಿನ ಬೇಗಬೇಗನೆ ಹೋಗಿ ಹೊತ್ತಿಗೆ ಮುಂಚೆಯೇ ಕೊಕ್ಕರೆಯ ಮನೆಯನ್ನು ಸೇರಿತು.

"ಹೀಗೆ ಬಾರಯ್ಯ, ಇಲ್ಲಿ ಕೂತುಕೊ"—ಎಂದು ಕೊಕ್ಕರೆಯು ಉಪಚಾರದಿಂದ ನರಿಯನ್ನು ಕರೆದು ಕುಳ್ಳಿರಿಸಿ ತಾನು ಮೊದಲೇ ಸಿದ್ಧಪಡಿಸಿದ್ದ ಕಡುಬನ್ನು ಒಂದು ಸಣ್ಣ ಬಾಯಿಯ ಹೂಜಿಯಲ್ಲಿ ಬಡಿಸಿತು. ನರಿಗೆ ತನ್ನ ಮುಸುಡಿಯನ್ನು ಹೂಜಿಯೊಳಕ್ಕೆ ಹಾಕುವ ಹಾಗೆಯೇ ಇರಲಿಲ್ಲ. ಕೊಕ್ಕರೆಯು ತನ್ನ ಕೊಕ್ಕಿನಿಂದ ಒಂದೊಂದು ತುಂಡನ್ನು ಎತ್ತಿಕೊಂಡು ರುಚಿನೋಡುತ್ತಾ ಆಗಾಗ ನರಿಯ ಕಡೆ ಕಣ್ಣು ಹಾಕುತ್ತಿತ್ತು. ಅಂದು ನರಿಯ ಮುಖದ ಕಳೆ ಹೇಗಿತ್ತೆಂಬುದನ್ನು ಹೇಳಬೇಕೆ!

ಇಲ್ಲಿ ನಡೆದ ಸಂಗತಿಗಳನ್ನು ಕ್ರಮವಾಗಿ ಹೇಳಿರುವುದಲ್ಲದೆ ವಸ್ತುಗಳನ್ನೂ ಕ್ರಿಯೆಗಳನ್ನೂ ವರ್ಣಿಸುವ ತಕ್ಕ ವಿಶೇಷಣಗಳನ್ನೂ ಜೋಡಿಸಿರುವುದರಿಂದಲೂ ಸಂಭಾಷಣೆಯ ಕ್ರಮವನ್ನೂ ಅಲ್ಲಲ್ಲಿ ಅನುಸರಿಸಿರುವುದರಿಂದಲೂ ಕಥೆಗೆ ಹೆಚ್ಚು ಸವಿ ಬಂದಿರುತ್ತದೆ.

**45.** ಒಬ್ಬರು ಆಡಿದ ಮಾತನ್ನು ಮತ್ತೊಬ್ಬರಿಗೆ ತಿಳಿಸುವುದಕ್ಕೆ 'ಅನುವಾದ'ವೆಂದು ಹೆಸರು. ಅನುವಾದವನ್ನು ಬರೆಯುವಾಗ ಆಡಿದ ಮಾತನ್ನು ಆಡಿದಂತೆಯೇ ಬರೆದರೆ ಆ ಭಾಗವನ್ನು " "—ಹೀಗೆ **ವಿಶೇಷಕಚಿಹ್ನೆ**ಯೊಳಗೆ[1] ಸೇರಿಸಬೇಕು. ಮೊದಲಿನ ಮಾತುಗಳನ್ನು ಮಾರ್ಪಡಿಸಿದ ಅನುವಾದಕ್ಕೆ **ವಿರೂಪಾನುವಾದ**ವೆಂದು[2] ಹೆಸರು; ಮೊದಲು ಆಡಿದ ರೂಪದಲ್ಲಿಯೇ ತಿಳಿಸುವ ಅನುವಾದಕ್ಕೆ **ಸ್ವರೂಪಾನುವಾದ**ವೆಂದು ಹೆಸರು.

---

[1] ಇದಕ್ಕೆ 'ಅನುವಾದಕಚಿಹ್ನೆ'ಯೆಂದೂ ಹೆಸರಿಡಬಹುದು. ಕೆಲವರು ಇದನ್ನು 'ಅನುಕರಣಚಿಹ್ನೆ'ಯೆಂದು ಕರೆಯುತ್ತಾರೆ; ಆದರೆ ಅದು ಅಷ್ಟು ಸರಿಯಲ್ಲ.

[2] ವಿರೂಪಾನುವಾದವನ್ನು ಪರೋಕ್ಷಸಂಭಾಷಣೆಯೆಂದೂ ಸ್ವರೂಪಾನುವಾದವನ್ನು ಪ್ರತ್ಯಕ್ಷಸಂಭಾಷಣೆಯೆಂದೂ ಕೆಲವರು ಕರೆದಿರುತ್ತಾರೆ. ಆದರೆ ಈ ಹೆಸರುಗಳು ಅಷ್ಟು ಒಪ್ಪುವ ಹಾಗಿಲ್ಲವೆಂದು ತೋರುವುದು. ಏಕೆಂದರೆ 'ನೀನು ನಾಳೆ ಬರುವುದಾಗಿ ಹೇಳಿದೆ' ಎಂಬ ವಾಕ್ಯವನ್ನು ಪರೋಕ್ಷಸಂಭಾಷಣೆ ಎನ್ನುವುದಕ್ಕೂ ಇಲ್ಲ, ಪ್ರತ್ಯಕ್ಷ ಸಂಭಾಷಣೆ ಎನ್ನುವುದಕ್ಕೂ ಇಲ್ಲ.

## ಅಭ್ಯಾಸ 99

ಈ ಮುಂದಿನ ಕಥೆಯಲ್ಲಿ ಸೇರಿನ ತಳವನ್ನು ಕುಟ್ಟುವ ಮುಂಚೆ ವರ್ತಕನು ತನಗೆ ತಾನೇ ಹೇಳಿಕೊಂಡಿರಬಹುದಾದ ಮಾತುಗಳು, ಲಿಂಗಯ್ಯ ಶೆಟ್ಟಿಯು ಹೇಳಿದ ಮಾತುಗಳು, ಗೋವಿಂದಶೆಟ್ಟಿಯು ತೀರ್ಮಾನಮಾಡುವಾಗ ಆಡಿರಬಹುದಾದ ಮಾತುಗಳು—ಇವುಗಳನ್ನೂಹಿಸಿ ಅನುವಾದಕ ಚಿಹ್ನೆಯೊಳಗೆ ಆ ಮಾತುಗಳನ್ನು ಇಟ್ಟು ಕಥೆಯನ್ನು ವಿಸ್ತರಿಸಿ:–

### ಏಲಕ್ಕಿಯ ಅಳತೆ

ಪೂರ್ವದಲ್ಲಿ ಹಾವೇರಿಯಲ್ಲಿ ಏಲಕ್ಕಿಯ ವ್ಯಾಪಾರವು ಬಹಳವಾಗಿ ನಡೆಯುತ್ತಿತ್ತಂತೆ. ಆಗ್ಗೆ ಅಲ್ಲಿದ್ದ ಮಲ್ಲಿಶೆಟ್ಟಿ ಎಂಬ ವರ್ತಕನು ದುರಾಶೆಯವನಾದ್ದರಿಂದ ಒಂದು ದಿನ ಸೇರಿನ ತಳವನ್ನು ಕುಟ್ಟಿ ಸ್ವಲ್ಪ ಮೇಲಕ್ಕೇರಿಸಿ ಅಳೆಯುವುದಕ್ಕೆ ಆರಂಭಿಸಿದನು. ಇದರಿಂದ ಕೊಳ್ಳುವ ವ್ಯಾಪಾರಿಗಳಿಗೆ ಸ್ವಲ್ಪ ನಷ್ಟವಾದರೂ ಆವೂರಿನಲ್ಲಿ ಇವನೊಬ್ಬನೇ ಏಲಕ್ಕಿಯ ಶೆಟ್ಟಿಯಾದ್ದರಿಂದ ಅವರು ಯತ್ನವಿಲ್ಲದೆ ಅವನು ಕೊಟ್ಟ ಹಾಗೆಯೇ ತೆಗೆದುಕೊಳ್ಳುತ್ತಾ ಬಂದರು.

ಇದರಿಂದ ಶೆಟ್ಟಿಗೆ ವ್ಯಾಪಾರದಲ್ಲಿ ಭರವಸೆ ಹೆಚ್ಚಿತು. ಒಂದು ದಿನ ಇವನು ತಳವನ್ನು ಸೇರಿನ ಅರ್ಧಕ್ಕಿಂತ ಮೇಲಕ್ಕೇರಿಸಿದನು. ಆ ದಿನ ವ್ಯಾಪಾರಕ್ಕೆ ಬಂದ ಲಿಂಗಯ್ಯಶೆಟ್ಟಿ ಎಂಬಾತನು ಈ ಅನ್ಯಾಯವನ್ನು ಸಹಿಸಲಾರದೆ ಸೇರನ್ನು ತಿರುಗಿಸಿ ಅಳೆಯಬೇಕೆಂದು ಹಠ ಹಿಡಿದನು. ಮಲ್ಲಿಶೆಟ್ಟಿಯು ಈ ಕಡೆಗೇ ಅಳೆಯುವೆನೆಂದು ಪಟ್ಟು ಹಿಡಿದನು.

ಇಷ್ಟರಲ್ಲಿ ಇಬ್ಬರ ಜಗಳವನ್ನೂ ನೋಡುತ್ತಿದ್ದ ಗೋವಿಂದಶೆಟ್ಟಿಯು ಇವರಿಗೆ ಸಮಾಧಾನ ಹೇಳುವುದಕ್ಕೆ ಹೊರಟನು. ಇಬ್ಬರ ಅಭಿಪ್ರಾಯವೂ ಬೇಡ; ಯಾರಿಗೂ ಅನ್ಯಾಯವಿಲ್ಲದ ಹಾಗೆ ಸೇರನ್ನು ಅಡ್ಡಡ್ಡಲಾಗಿಟ್ಟು ಅಳೆದರಾಯಿತು ಎಂಬುದೇ ಅವನ ತೀರ್ಪಾಗಿತ್ತು.

**46.** ಸಂಭಾಷಣೆಯನ್ನು ಬರೆಯುವಾಗ ಆಡಿದ ಮಾತನ್ನು ಆಡಿದಂತೆಯೇ ಬರೆಯುವ ಸ್ವರೂಪಾನುವಾದವೇ ಕನ್ನಡದಲ್ಲಿ ಹೆಚ್ಚು ರೂಢಿ. ಆದರೆ ಓದುವವರಿಗೆ ಬೇಸರಿಕೆಯಾಗದಿರಲೆಂದು ಕೆಲಕೆಲವು ಕಡೆ ವಿರೂಪಾನುವಾದದ ರೀತಿಯನ್ನು ಈ ಕೆಳಗಿನ ಉದಾಹರಣೆಗಳಿಂದ ತಿಳಿಯಬಹುದು.

| ಸ್ವರೂಪಾನುವಾದ | ವಿರೂಪಾನುವಾದ |
|---|---|
| 1. ರಾಮನು "ನನಗೆ ಬಹಳ ಹಸಿವಾಗಿದೆ" ಎಂದನು. | 1. ರಾಮನು ತನಗೆ ಬಹಳ ಹಸಿವಾಗಿರುವುದಾಗಿ ಹೇಳಿದನು. |
| 2. ಗೋವಿಂದನು ಆಳನ್ನು "ಗಾಡಿ ಹೊಡೆ" ಎಂದನು. | 2. ಗೋವಿಂದನು ಆಳಿಗೆ ಗಾಡಿಯನ್ನು ಹೊಡೆಯುವಂತೆ ಹೇಳಿದನು. |

| | |
|---|---|
| 3. ರಾಜನು ರಾಯಸದವನನ್ನು "ಕೂಡಲೆ ಕಾಗದವನ್ನು ಬರೆ" ಎಂದನು. | 3. ರಾಜನು ರಾಯಸದವನಿಗೆ ಕೂಡಲೆ ಕಾಗದವನ್ನು ಬರೆಯಲು ಕಟ್ಟು ಮಾಡಿದನು. |
| 4. ಗುಮಾಸ್ತೆಯು "ಸ್ವಾಮಿ ನನಗೆ ಮೂರು ದಿನದ ರಜ ಕೊಡುತ್ತೀರ?" ಎಂದು ಕೇಳಿದನು. | 4. ಗುಮಾಸ್ತೆಯು ಮೂರು ದಿನದ ರಜವನ್ನು ಕೇಳಿದನು. |
| 5. ವೈದ್ಯನು "ನಿಮ್ಮ ತಂದೆಗೆ ಹೇಗಿದೆ?" ಎಂದು ನನ್ನನ್ನು ಕೇಳಿದನು. | 5. ವೈದ್ಯನು ನಮ್ಮ ತಂದೆಯವರ ಆರೋಗ್ಯಸ್ಥಿತಿಯನ್ನು ವಿಚಾರಿಸಿದನು. |
| 6. ರಾಮನು ಕೃಷ್ಣನನ್ನು "ನಾಳೆ ನಿಮ್ಮ ಮನೆಗೆ ಬರಲೆ"? ಎಂದನು. | 6. ರಾಮನು ಕೃಷ್ಣನನ್ನು ಕುರಿತು ಮರುದಿನ ಅವರ ಮನೆಗೆ ಬರುವುದಕ್ಕೆ ಅನುಜ್ಞೆಯನ್ನು ಕೇಳಿದನು. |
| 7. ಆತನು "ಆಹಾ! ಈ ಚಿತ್ರವು ಎಷ್ಟು ಸುಂದರವಾಗಿದೆ" ಎಂದನು. | 7. ಆತನು ಆ ಚಿತ್ರದ ಸೌಂದರ್ಯವನ್ನು ಬಲುವಾಗಿ ಮೆಚ್ಚಿದನು. |
| 8. ಕಳ್ಳನು "ಅಯ್ಯೋ! ಇದೇನು ನನ್ನ ದುರದೃಷ್ಟ!" ಎಂದನು. | 8. ಕಳ್ಳನು ಅದು ತನ್ನ ಹೆಚ್ಚಿನ ದುರದೃಷ್ಟವೆಂದು ವ್ಯಸನಪಟ್ಟನು. |

ವಿರೂಪಾನುವಾದದಲ್ಲಿ ಆಗುವ ಹೆಚ್ಚು ಕಡಿಮೆಗಳು ಯಾವುವೆಂದರೆ[3] (1) ಮುಖ್ಯಕ್ರಿಯಾಪದದ ಕರ್ತೃವನ್ನು ಹೇಳುವ ಉತ್ತಮ ಪುರುಷದ ಸರ್ವನಾಮಗಳು ಪ್ರಥಮಪುರುಷದ ರೂಪಗಳಾಗುವುವು. (2) ಸಮೀಪವಾಚಿಗಳಾದ 'ಇದು', 'ಅಲ್ಲಿ', 'ಈಗ', 'ಇಂದು', 'ನಿನ್ನೆ', 'ನಾಳೆ', ಮುಂತಾದ ಶಬ್ದಗಳು ಅರ್ಥಕ್ಕನುಸಾರವಾಗಿ ದೂರವಾಚಿಗಳಾದ 'ಅದು', 'ಅಲ್ಲಿ', 'ಆಗ' 'ಆ ದಿನ', ('ಆ ಹೊತ್ತು', 'ಅಂದು'), 'ಮುನ್ನಿನ ದಿನ', ('ಮರುದಿನ', ('ಮಾರನೆಯ ದಿನ')—ಮುಂತಾದ ರೂಪಗಳನ್ನು ಪಡೆಯುವುವು. (3) ಅನುವಾದಕಚಿಹ್ನೆಯೊಳಗಿನ ಕ್ರಿಯೆಯು ಕೃದಂತವಾಗುವುದು. ಇದಕ್ಕೆ ಸಾಮಾನ್ಯವಾಗಿ 'ಆಗಿ'–ಎಂಬ ಅವ್ಯಯವೂ ವಿಧಿರೂಪದ ಕ್ರಿಯೆಗೆ 'ಅಂತೆ', 'ಅಲು', '(ಅ)'–ಎಂಬ ಪ್ರತ್ಯಯಗಳೂ ಸೇರುವುವು. ಕೃದಂತವಾಗದೆ ಇದ್ದರೆ ಅದು ಅಧೀನವಾಕ್ಯದ ಕ್ರಿಯೆಯಾಗುವುದು. (4) ಅನುವಾದಕಚಿಹ್ನೆಯೊಳಗಣ ಪ್ರಶ್ನೆಗಳೂ ಭಾವಬೋಧಕವಾಕ್ಯಗಳೂ ಆಯಾ ಅಭಿಪ್ರಾಯದ ವಸ್ತುಬೋಧಕ (ಅಥವಾ ನಿಷೇಧಕ) ವಾಕ್ಯಗಳಾಗುವುವು. ಸ್ವರೂಪಾನುವಾದದಲ್ಲಿದ್ದ ಸಂಬೋಧನಶಬ್ದಗಳೂ ಭಾವಬೋಧಕನಿಪಾತಗಳೂ ಹೋಗಿಬಿಡುವುವು.

---

[3] ಒಂದೊಂದು ಮಾರ್ಪಾಟಿಗೂ ಒಂದೊಂದು ಉದಾಹರಣೆಯನ್ನು ಹಲಗೆಯ ಮೇಲೆ ಬರೆದು ವಿದ್ಯಾರ್ಥಿಗಳೊಡನೆ ಚರ್ಚಿಸಬೇಕು.

## ಅಭ್ಯಾಸ 100

ಇಲ್ಲಿರುವ ಸಂಭಾಷಣೆಯ ವಾಕ್ಯಗಳನ್ನು ಅಭಿಪ್ರಾಯವು ಹೆಚ್ಚು ಕಡಿಮೆಯಾಗದಂತೆ ವಿರೂಪಾನುವಾದಕ್ಕೆ ತಿರುಗಿಸಿ, ಒಂದೊಂದು ವಾಕ್ಯದಲ್ಲಿಯೂ ಆದ ಮಾರ್ಪಾಟುಗಳನ್ನು ಹೇಳಿ:–

1. ನಳ್ಳಿ ಕೊಕ್ಕರೆಯನ್ನು ನೋಡಿ "ಇನ್ನು ಮೇಲೆ ನನ್ನನ್ನು ಕರೆದುಕೊಂಡು ಹೋಗಬಾರದೆ?" ಎಂದಿತು. 2. ದಮಯಂತಿಯು "ಎಲೈ ಮಹಾರಾಜನೆ, ನೀನು ನನ್ನನ್ನು ಬಿಡಕೂಡದು" ಎಂದಳು. 3. "ಕ್ಷೇಮವೇ?" ಎಂದು ನನ್ನ ಸ್ನೇಹಿತನು ಕೇಳಿದನು. 4. ವೈದ್ಯನು "ನಾನು ಒಂದು ಸಲ ಹತ್ತು ಜನ ಕಳ್ಳರನ್ನು ಓಡಿಸಿದೆನು" ಎಂದನು. 5. ಯಜಮಾನನು ಅಂಗಡಿಯವನನ್ನು ಕುರಿತು "ನನಗೊಂದು ಹೊಸ ಗಡಿಯಾರ ಬೇಕು" ಎಂದನು. 6. ಆತನು ಅಂಗಡಿಯವನನ್ನು ಕುರಿತು "ರೂಪಾಯಿ ಕಡಿಮೆಯಾದರೇನು? ನಿನಗೆ ಎಣಿಸುವುದಕ್ಕೆ ಮತ್ತೂ ಹಗುರವಾಯಿತಲ್ಲ!" ಎಂದನು. 7. ತೋಳವು "ನೀರನ್ನೇಕೆ ಕಲುಕುತ್ತೀಯೊ?" ಎಂದು ಕುರಿಮರಿಯನ್ನು ಕೇಳಿತು. 8. ವಿಶ್ವಾಮಿತ್ರನು "ಎಲೈ ಹರಿಶ್ಚಂದ್ರನೆ, ನಿನ್ನ ಮಗನನ್ನು ಕರೆ" ಎಂದನು. 9. "ನಿನ್ನೆ ನಾನು ಅಲ್ಲಿಗೆ ಹೋಗಲಿಲ್ಲ ನಾಳೆ ಹೋಗಬಹುದು" ಎಂದು ತಿರುಕನು ಉತ್ತರಕೊಟ್ಟನು. 10. "ಅಯ್ಯೋ! ನನ್ನ ಕಂದ! ನನ್ನನ್ನು ಬಿಟ್ಟುಹೋದೆಯ!" ಎಂದು ತಾಯಿ ಗೋಳಿಡುತ್ತಿದ್ದಳು. 11. ಪೋಲೀಸಿನವನು "ಎಲಾ ಮೋಸಗಾರ! ಇನ್ನು ನೀನು ತಪ್ಪಿಸಿಕೊಳ್ಳಲಾರೆ" ಎಂದು ಕಳ್ಳನನ್ನು ಗದರಿಸಿದನು.

**47.** ವಿರೂಪಾನುವಾದದಲ್ಲಿ ಮೊದಲಿನ ಮಾತು ಎಷ್ಟೋ ಮಾರ್ಪಾಟನ್ನು ಹೊಂದಿರುವುದರಿಂದ ಮೂಲಭಾಷಣದ ರೂಪವನ್ನು ಊಹಿಸುವುದು ಕಷ್ಟವಾಗಿರುತ್ತದೆ. ಸ್ವರೂಪಾನುವಾದದಲ್ಲಿ ಎರಡು ಮೂರು ಬಗೆಯ ವಾಕ್ಯಗಳಿದ್ದರೂ ವಿರೂಪಾನುವಾದದಲ್ಲಿ ಅವೆಲ್ಲ ವಸ್ತು ಬೋಧಕಗಳಾಗಿಬಿಡುವುದರಿಂದ ತಾತ್ಪರ್ಯವೂ ಬೇಗ ಹೊಳೆಯುವುದಿಲ್ಲ. ಇದರಿಂದ ಭಾಷೆಯ ಅಂದವೂ ಕೆಡುವುದು. ಬರೆಯುವವರಿಗೂ ಕಷ್ಟವಾಗಿ ಓದುವವರಿಗೂ ತಾತ್ಪರ್ಯವನ್ನು ತಿಳಿಯುವುದಕ್ಕೆ ಕಷ್ಟವಾಗುವ ಈ ವಿರೂಪಾನುವಾದವನ್ನು ಎಷ್ಟು ಮಿತವಾಗಿ ಉಪಯೋಗಿಸಿದರೆ ಅಷ್ಟು ಮೇಲು. ಈ ಮುಂದಿನ ಉದಾಹರಣೆಗಳಿಂದ ವಿರೂಪಾನುವಾದಕ್ಕೂ ಸ್ವರೂಪಾನುವಾದಕ್ಕೂ ಇರುವ ಯೋಗ್ಯತೆಯ ತಾರತಮ್ಯವನ್ನು ಮನಗಾಣಬಹುದು:–

| ವಿರೂಪಾನುವಾದ | ಸ್ವರೂಪಾನುವಾದ |
|---|---|
| 1. ತಿರುಕನು ಅನ್ನ ಕೊಡಬೇಕೆಂದು ಕೂಗಿ-ಕೊಳ್ಳುತ್ತಿದ್ದನು. | 1. ತಿರುಕನು "ಅನ್ನ ಕೊಡಿರಮ್ಮ, ಅನ್ನ!" ಎಂದು ಕೂಗಿಕೊಳ್ಳುತ್ತಿದ್ದನು. |
| 2. ಇವರು ಬಹು ಕೆಟ್ಟಹುಡುಗರೆಂದು ಮುದುಕನು ಗೊಣಗುಟ್ಟಿಕೊಂಡನು. | 2. "ಅಯ್ಯೊ! ಇವರೆಂಥ ಕೆಟ್ಟ ಹುಡುಗರು!" ಎಂದು ಮುದುಕನು ಗೊಣಗುಟ್ಟಿ-ಕೊಂಡನು. |
| 3. ಸಿಪಾಯಿಯು ಆತನಿಗೆ ಬೀಳದಂತೆ ಎಚ್ಚರಿಕೆಕೊಡುತ್ತಿದ್ದನು. | 3. "ಜೋಕೆ! ಬಿದ್ದೀಯೆ!" ಎಂದು ಸಿಪಾಯಿಯು ಆತನಿಗೆ ಎಚ್ಚರಿಕೆಕೊಡು-ತ್ತಿದ್ದನು. |
| 4. ಆ ಕೂಗನ್ನು ಕೇಳಿ ಒಂದು ನರಿ ಅಲ್ಲಿಗೆ ಬಂದು ಕೋಳಿಯನ್ನು ಬಲು ಒಳ್ಳೆಯ ಪಕ್ಷಿಯೆಂತಲೂ ಸಕಲ ಪ್ರಾಣಿಗಳಿಗೂ ಹೆಚ್ಚಿನ ಉಪಕಾರಿಯೆಂತಲೂ ಹೊಗ-ಳುತ್ತ, ಇಬ್ಬರೂ ಪ್ರಾತರಾಹ್ನಿಕಗಳನ್ನು ಮಾಡಿ ಸಂತೋಷಪಡುವುದಕ್ಕಾಗಿ ಕೋಳಿಯನ್ನು ಕೆಳಕ್ಕೆ ಇಳಿದು ಬರುವಂತೆ ಹೇಳಿತು. | 4. ಆ ಕೂಗನ್ನು ಕೇಳಿ ಒಂದು ನರಿ ಅಲ್ಲಿಗೆ ಬಂದು "ಆಹ! ನೀನು ಎಷ್ಟು ಒಳ್ಳೆಯ ಪಕ್ಷಿ! ಸಕಲ ಪ್ರಾಣಿಗಳಿಗೂ ಎಷ್ಟು ಉಪಕಾರಿ! ನಾವಿಬ್ಬರೂ ಪ್ರಾತರಾಹ್ನಿಕಗಳನ್ನು ಮಾಡಿ ಸಂತೋಷ-ಪಡೋಣ, ಕೆಳಕ್ಕೆ ಬಾರಯ್ಯ" ಎಂದಿತು. |
| 5. ತನ್ನನ್ನು ಬಯ್ದು ಹೀಯಾಳಿಸಿದ್ದು ಮೇಕೆಯಮರಿ ನಿಂತಿದ್ದ ಉಪ್ಪರಿಗೆಯೇ ಹೊರತು ಆ ಹೇಡಿಯಾದ ಮೇಕೆಯ ಮರಿಯಲ್ಲವೆನ್ನುತ್ತ ತೋಳವು ಹೊರಟು ಹೋಯಿತು. | 5. "ಎಲಾ ಹೇಡಿ! ನೀನಲ್ಲ ನನ್ನನ್ನು ಬಯ್ದು ಹೀಯಾಳಿಸುವವನು, ನೀನು ನಿಂತಿರುವ ಆ ಉಪ್ಪರಿಗೆ!" ಎಂದು ತೋಳವು ಮೇಕೆಯಮರಿಗೆ ಉತ್ತರ ಕೊಟ್ಟು ಹೊರಟುಹೋಯಿತು. |

48. ಸ್ವರೂಪಾನುವಾದದಲ್ಲಿ ಭಾವಬೋಧಕವಾಕ್ಯಗಳೂ ಪ್ರಶ್ನೆಗಳೂ ಆಗಾಗ್ಗೆ ಬರುತ್ತಿರಬೇಕು. ಇವುಗಳ ಅಭಿಪ್ರಾಯವು ಎದ್ದು ಕಾಣುವಂತೆ ಸಂಬೋಧನೆಗಳನ್ನೂ ನಿಪಾತಾವ್ಯಯಗಳನ್ನೂ[4] ಸೇರಿಸಿಕೊಂಡರೆ ವಾಕ್ಯಗಳು ಗೆಲುವಾಗುವುವು. ಸಂಬೋಧನಾವಿಭಕ್ತಿಯ ಮುಂದೆ ಅಲ್ಪವಿರಾಮವಿರಬೇಕು. ನಿಪಾತದ ಮುಂದೆ ಭಾವಬೋಧಕ ಚಿಹ್ನೆಯಿರಬೇಕು.

[4] ಕೆಲವು ನಿಪಾತಾವ್ಯಯಗಳನ್ನು ಹಿಗನೆಯ ಅಭ್ಯಾಸದಲ್ಲಿರುವ ವಾಕ್ಯಗಳಲ್ಲಿ ಪ್ರಯೋಗಿಸಿರುತ್ತದೆ. ಇದನ್ನು ಹುಡುಗರ ಲಕ್ಷ್ಯಕ್ಕೆ ತರಬೇಕು.

ಉದಾ: 1. ನನಗೆ ತುಂಬ ಹಸಿವಾಗಿದೆ. ಮುಂದಕ್ಕೆ ಹೆಜ್ಜೆಯಿಡಲಾರೆ—ಏನಾದರೂ ತಿಂಡಿ ಕೊಡಿ.
2. ತೆಂಗಿನ ಮರದ ಮೇಲೆ ಎಂದಿಗೂ ಹುಲ್ಲು ಬೆಳೆಯುವುದಿಲ್ಲ.
3. ತಾವು ರಾಮರಾಯರ ಮಕ್ಕಳೆಂಬುದನ್ನು ಕೇಳಿ ನನಗೆ ಆಶ್ಚರ್ಯವಾಯಿತು.
4. ಈ ಬಡವನ ಮನೆಯನ್ನೇ ಮುಳುಗಿಸಿದ್ದೀಯೆ. ನಿನಗೆ ಹೆಚ್ಚಿನ ನರಕವು ಆಗುವುದು.
5. ಈ ಕಡೆ ತಾವು ಬಂದದ್ದಕ್ಕೆ ಕಾರಣ ನನಗೆ ತಿಳಿಯದು. ಹೇಳಬೇಕು.
6. ಒಳ್ಳೆ ಕೆಲಸ ಮಾಡಿದೆ, ರಾಣಿಯವರು ಕೇಳಿದರೆ ತುಂಬ ಹಿಗ್ಗುವರೆಂಬುದಕ್ಕೆ ಸಂಶಯವಿಲ್ಲ.

ಈ ಆರುವಾಕ್ಯಗಳನ್ನೂ ಹೀಗೆ ಮಾರ್ಪಡಿಸಿ ಬರೆದರೆ ಎಷ್ಟು ಕಳೆ ಬರುವುದು ನೋಡಿ:

1. ಅಯ್ಯೋ! ಅಪ್ಪಾ! ನನಗೆ ತುಂಬ ಹಸಿವಾಗಿದೆ. ಮುಂದಕ್ಕೆ ಹೆಜ್ಜೆಯನ್ನೇ ಇಡಲಾರೆನಲ್ಲ! ಏನಾದರೂ ತಿಂಡಿ ಕೊಡಿರಪ್ಪ!
2. ಛೀ! ಹುಚ್ಚ! ತೆಂಗಿನ ಮರದ ಮೇಲೆ ಎಲ್ಲಾದರೂ ಹುಲ್ಲು ಬೆಳೆಯುವುದುಂಟೆ?
3. ಓಹೋ! ಹಾಗೆಯೆ? ತಾವು ರಾಮರಾಯರ ಮಕ್ಕಳೇನೆ!
4. ಎಲಾ ಪಾಪಿ? ಈ ಬಡವನ ಮನೆಯನ್ನೇ ಮುಳುಗಿಸಿದೆಯಲ್ಲ! ನಿನಗೆ ಇನ್ನು ಯಾವ ನರಕವು ಸಿದ್ಧವಾಗಿರುವುದೊ!
5. ಓಹೋ! ಇದೇನು ರಾಯರೆ, ಇತ್ತಲಾಗಿ?
6. ಭಲೆ! ಒಳ್ಳೆಯಕೆಲಸಮಾಡಿದೆ. ರಾಣಿಯವರು ಕೇಳಿದರೆ ಇನ್ನೆಷ್ಟು ಹಿಗ್ಗುವರೊ!

## ಅಭ್ಯಾಸ 101

ಈ ಸಂಭಾಷಣೆಯ ವಾಕ್ಯಗಳಿಗೆ ತಕ್ಕ ಸಂಬೋಧನೆಗಳು, ನಿಪಾತಗಳು — ಮುಂತಾದುವುಗಳನ್ನು ಸೇರಿಸುವುದರಿಂದಲೂ ವಾಕ್ಯಗಳನ್ನು ಪ್ರಶ್ನೆಗಳಾಗಿ ಅಥವಾ ಭಾವಬೋಧಕಗಳಾಗಿ ಮಾರ್ಪಡಿಸುವುದರಿಂದಲೂ ಗೆಲುವು ಬರುವಂತೆ ಮಾಡಿ:—

1. ನನ್ನ ಕೈಯಲ್ಲಿ ಸಿಕ್ಕರೆ ಅವನು ಉಳಿಯಲಾರ. 2. ಈ ತಂಗಳುಹಿಟ್ಟನ್ನು ತೆಗೆದು ಕೊಂಡು ಹೋಗು, ಗದ್ದಲಮಾಡಬೇಡ. 3. ನೀನು ಮಾಡಿದ ಉಪಕಾರಕ್ಕೆ ಒಂದು ರೂಪಾಯಿ ಕೊಡುತ್ತೇನೆ. 4. ಅವನು ಬಡ ಹಾರವನು. ಅವನಿಗೆ ನೀವು ಇಷ್ಟೊಂದು ಕೊಡಬೇಕಾದ್ದಿಲ್ಲ. 5. ಆ ಕಸದ ಗುಡ್ಡೆಯಮೇಲೆ ಕೂರುವುದಕ್ಕೆ ನನಗೆ ಅಸಹ್ಯವಾಗುತ್ತದೆ. 6. ನಿನಗೆ ತೇರ್ಗಡೆಯಾದದ್ದು ನಮಗೆ ಬಹಳ ಸಂತೋಷ. 7. ರಾಮುವಿನಷ್ಟು ಜಾಣ ಹುಡುಗರು ಯಾರೂ ಇಲ್ಲ. 8. ಕಳ್ಳರು ನಮ್ಮ ಮನೆಗೆ ನುಗ್ಗಿದ್ದಾರೆ, ಸಹಾಯಮಾಡಿರಿ. 9. ನಾವು ಬರುವವರೆಗೂ ಸ್ವಲ್ಪ ನಿಲ್ಲಿರಿ. 10. ರೈಲು ಹೊರಟೇಬಿಟ್ಟಿತು; ನಾನೇನು ಮಾಡಬೇಕೋ ತಿಳಿಯದು.

## ಅಭ್ಯಾಸ 102

ಇಲ್ಲಿರುವ ವಿರೂಪಾನುವಾದಗಳನ್ನು ನೋಡಿ ಇವುಗಳಿಂದ ಮೊದಲು ಆಡಿರಬಹುದಾದ ಮಾತುಗಳನ್ನೂಹಿಸಿ ಸ್ವರೂಪಾನುವಾದವಾಗಿ ಬರೆಯಿರಿ. ಸಂಭಾಷಣೆಗೆ ತಕ್ಕ ಸಂಬೋಧನ, ನಿಪಾತಾವ್ಯಯ—ಮುಂತಾದ ಅಭಿಪ್ರಾಯವನ್ನು ಪೋಷಿಸುವ ಮಾತುಗಳನ್ನೂ ಬೇಕಾದಕಡೆ ಸೇರಿಸಿಕೊಳ್ಳಿ. ಸಂಬೋಧನಾವಿಭಕ್ತಿಯ ಮುಂದೆ ಅಲ್ಪ ವಿರಾಮವನ್ನೂ ನಿಪಾತಗಳ ಮತ್ತು ಭಾವಬೋಧಕವಾಕ್ಯಗಳ ಮುಂದೆ ಭಾವಬೋಧಕಚಿಹ್ನೆಯನ್ನೂ ಹಾಕಿರಿ.

1. ಮೊದಲನೆಯ ಪ್ರಯಾಣಿಕನು ತಾವಿಬ್ಬರೂ ತುಂಬ ನಿರ್ಭಾಗ್ಯರೆಂದು ಹೇಳಿದನು. 2. ಆ ಕುದುರೆ ತನ್ನದೆಂತ ಗೌಡನು ಅಮಲ್ದಾರರಲ್ಲಿ ಅರಿಕೆಮಾಡಿಕೊಂಡನು. 3. ತನ್ನ ತಪ್ಪನ್ನು ಕ್ಷಮಿಸುವಂತೆ ಕೃಷ್ಣರಾಯರು ತನ್ನ ಸ್ನೇಹಿತನಿಗೆ ಬರೆದುಕೊಂಡಿರುತ್ತಾನೆ. 4. ತೋಳವು ಪೇಚಾಡಬೇಕಾದ್ದಿಲ್ಲವೆಂತಲೂ ತನ್ನಂತೆ ಅದೂ ಆಗಬೇಕಾದರೆ ತಾನು ಮಾಡುವ ಕೆಲಸವನ್ನು ಅದೂ ಮಾಡಿದರಾಯಿತೆಂತಲೂ ನಾಯಿ ಹೇಳಿತು. 5. ಆಗ ಇಲಿಯು ಸಿಂಹವನ್ನು ಕುರಿತು ತಿಳಿಯದೆ ಮಾಡಿದ ತನ್ನ ಅಪರಾಧವನ್ನು ಕ್ಷಮಿಸಬೇಕೆಂದೂ ಅಲ್ಪಪ್ರಾಣಿಯಾದ ತನ್ನನ್ನು ಕೊಂದರೆ ಅದರ ಘನತೆಗೆ ನ್ಯೂನತೆ ಬಂದೀತೆಂದೂ ಆರ್ತಸ್ವರದಿಂದ ಹೇಳಿತು. 6. ಆ ಕಿರಾತನು ಹೆದರಿ ಸಿಂಹವನ್ನು ನೋಡಿ ತಾನು ಬಡವನೆಂದೂ ಅದು ರಾಜನೆಂದೂ ತನಗೂ ಅದಕ್ಕೂ ನೆಂಟತನ ಒಪ್ಪಲಾರದೆಂದೂ' ಮರ್ಯಾದೆಯ ಮಾತನಾಡುತ್ತ ಹಿಂಜರಿದನು. 7. ತೋಳವು ಕುರಿಮರಿಯನ್ನು ಅಲ್ಲಿ ನಿಲ್ಲಬಾರದೆಂತಲೂ ಪೂಜಾರಿ ಕಂಡರೆ ಬಲಿಕೊಡುವನೆಂತಲೂ ಹೆದರಿಸಿ ಬೇಗನೆ ಹೊರಕ್ಕೆ ಹೊರಟು ಬರುವಂತೆ ಹೇಳಿತು. 8. ಕುರಿಮರಿಯು ತೋಳನು ಕುಡಿಯುತ್ತಿದ್ದ ನೀರು ತನ್ನಿಂದ ಕೆಸರಾಗಲಾರದೆಂತಲೂ ತೋಳನ ಕಡೆಯಿಂದ ತನ್ನ ಕಡೆಗೆ ನೀರು ಬರುತ್ತಿತ್ತೇ ಹೊರತು ತನ್ನ ಕಡೆಯಿಂದ ಹರಿಯುತ್ತಿರಲಿಲ್ಲವೆಂತಲೂ ವಿನಯದಿಂದ ಉತ್ತರ ಕೊಟ್ಟಿತು.

## ಅಭ್ಯಾಸ 103

ಈ ಕಥೆಯಲ್ಲಿ ಮೊದಲಿಂದ ಕೊನೆಯವರೆಗೂ ವಿರೂಪಾನುವಾದವೇ ಇರುವುದರಿಂದ ಅರ್ಥವು ಚೆನ್ನಾಗಿ ತೋರದಂತೆ ಆಗಿದೆ. ಅನುವಾದಕಚಿಹ್ನೆ, ಅಲ್ಪ ವಿರಾಮ, ಅರ್ಧವಿರಾಮ-ಮುಂತಾದ ಲೇಖನ ಚಿಹ್ನೆಗಳನ್ನು ಹಾಕಿಕೊಂಡು ಸ್ವರೂಪಾನುವಾದವನ್ನುಪಯೋಗಿಸಿ.[5] ಕಥೆಯನ್ನು ಮೂರು ಮಹಾವಾಕ್ಯಗಳಾಗಿ ವಿಂಗಡಿಸಿ:—

---

[5] ಸಂಭಾಷಣೆಗೆ ಬೇಕಾದ ಸಂಬೋಧನೆಗಳು, ಭಾವಸೂಚಕವಾದ ನಿಪಾತಗಳು—ಇವುಗಳನ್ನುಪಯೋಗಿಸುವುದನ್ನು ಹುಡುಗರು ಮರೆಯುವ ಸಂಭವವಿದೆ. ಉಪಾಧ್ಯಾಯರು ಸಹಾಯಮಾಡಿ ಅವುಗಳನ್ನು ಸೇರಿಸಬೇಕು.

## ಉಪಯೋಗವಿಲ್ಲದ ಸಿಟ್ಟು

ಒಂದಾನೊಂದು ಕಾಲದಲ್ಲಿ ಒಂದು ಬಾತು ತನ್ನ ಮರಿಗಳಿಗೆ ಒಂದು ಕೊಳದ ಬಳಿಯಲ್ಲಿ ಆಹಾರಕೊಡುತ್ತಿತ್ತು. ಆಗ ಅತ್ತಕಡೆಗೆ ಯಾವ ಪ್ರಾಣಿಯೇ ಆಗಲಿ ಹೆಜ್ಜೆಯಿಟ್ಟರೆ ಸಾಕು, ಅದು ಹೆಮ್ಮೆಯಿಂದ ಅವರನ್ನು ಆಚೆಗೆ ಹೋಗುವಂತೆ ಹೇಳುತ್ತಾ ಕೊಳವು ತನ್ನದೆಂದೂ ತನ್ನ ಮಕ್ಕಳು ಊಟಮಾಡುವ ಕಾಲಕ್ಕೆ ಅಲ್ಲಿಗೆ ಯಾರು ಬರುವುದಕ್ಕೂ ಕಾರಣವಿಲ್ಲವೆಂದೂ ಗದರಿಸಿ ರೆಕ್ಕೆಗಳನ್ನು ಬಡಿದುಕೊಳ್ಳುತ್ತಾ ಹುಶ್ಶೆನ್ನುತ್ತಿತ್ತು. ಹೀಗೆ ಎಷ್ಟೋ ಹಂದಿಗಳನ್ನು ಕೋಳಿಯಮರಿಗಳನ್ನೂ ಬಾತುಮರಿಗಳನ್ನೂ ಅದು ಹೆದರಿಸಿ ಓಡಿಸಿತು. ಕೊನೆಗೆ ಆ ದಾರಿಯಲ್ಲಿ ಒಂದು ಮಂದೆಯ ನಾಯಿಬಂತು. ಅದಕ್ಕೆ ಬಹಳ ಬಾಯಾರಿಕೆಯಾಗಿದ್ದುದರಿಂದ ಸ್ವಲ್ಪ ನೀರು ಕುಡಿಯೋಣವೆಂದು ಕೊಳದಲ್ಲಿ ಮುಸುಡಿಯನ್ನು ಇಟ್ಟಿತೊ ಇಲ್ಲವೊ, ಆ ತಾಯಿ ಬಾತು ಅದರ ಕಡೆಗೆ ಹಾರಿ ಬಂದು ಸಿಡಿಮೋರೆಯಿಂದ ರೆಕ್ಕೆಗಳನ್ನು ಬಡಿದುಕೊಳ್ಳುತ್ತಲೂ ಕೊಕ್ಕಿನಿಂದ ಅದನ್ನು ಚುಚ್ಚುತ್ತಲೂ ಅಂಥ ಸಮಯದಲ್ಲಿ ತನ್ನ ಕೊಳಕ್ಕೆ ಹೇಳದೆ ಕೇಳದೆ ನುಗ್ಗುವುದಕ್ಕೆ ಕಾರಣವೇನೆಂದು ಕೇಳಿತು. ನಾಯಿಯು ತನ್ನ ಕೋಪವನ್ನಣಗಿಸಿಕೊಂಡು ಕೈಯಲ್ಲಿ ಸಾಗದವರು ಸುಮ್ಮನಿರುವುದೇ ಮೇಲೆಂದೂ ರೆಕ್ಕೆಯ ಬಡಿದಾಟವೂ ಹುಶ್ಶೆನ್ನುವುದೂ ಅದರ ತಲೆ ಹಾರುವುದಕ್ಕೆ ಕಾರಣವೇ ಹೊರತು ಮತ್ತೊಬ್ಬರಿಗೆ ಅದರಿಂದೇನೂ ಆಗಲಾರದೆಂದೂ ಕೊನೆಗೆ ಬಾತಿನ ರಕ್ಷಣೆಯುಕೂಡ ಅದರಿಂದ ಆಗುವ ಹಾಗಿಲ್ಲವೆಂದು ಆ ಹುಚ್ಚು ಬಾತಿಗೆ ಬುದ್ಧಿಕಲಿಸಿತು.

## ಅಭ್ಯಾಸ 104

ಈ ಕಥೆಯಲ್ಲಿರುವ ಸ್ವರೂಪಾನುವಾದಗಳನ್ನು ವಿರೂಪಾನುವಾದವಾಗಿಯೂ ವಿರೂಪಾನುವಾದವನ್ನು ಸ್ವರೂಪಾನುವಾದವಾಗಿಯೂ ತಿರುಗಿಸಿ ಕಥೆಯನ್ನು ನಿಮ್ಮ ಸ್ವಂತಮಾತಿನಲ್ಲಿ ಬರೆಯಿರಿ. ಇಲ್ಲಿ ಅನವಶ್ಯವಾಗಿ ಬೆಳೆದಿರುವ ವಾಕ್ಯಗಳನ್ನು ಕುಗ್ಗಿಸಿ, ತೀರ ಮೊಟಕಾಗಿರುವುದೆಂದು ತೋರುವ ವಾಕ್ಯಗಳನ್ನು ಬೆಳೆಯಿಸಿರಿ.

## ಮುದುಕನ ಗತಿ

ಒಂದು ಪಟ್ಟಣದಲ್ಲಿ ಒಬ್ಬ ಧನಿಕನಾದ ವೈಶ್ಯನಿದ್ದನು. ಅವನಿಗೆ ಐದು ಜನ ಗಂಡು ಮಕ್ಕಳಿದ್ದರು. ಅವರೆಲ್ಲರಿಗೂ ಮದುವೆಯಾಗಿತ್ತು. ಸಾಹುಕಾರನು ಬೇಕಾದಷ್ಟು ಹಣವನ್ನು ಸಂಪಾದನೆಮಾಡಿದ್ದನಾದುದರಿಂದ ಅವನನ್ನು ಮನೆಯಲ್ಲಿ ಎಲ್ಲರೂ ಗೌರವಿಸುತ್ತಿದ್ದರು. ಹೀಗಿರುವಲ್ಲಿ ವೈಶ್ಯನು ತನಗೆ ವಾರ್ಧಕ್ಯವು ಪ್ರಾಪ್ತವಾದುದನ್ನು ಕಂಡು ಆಸ್ತಿಯನ್ನೆಲ್ಲ ಮಕ್ಕಳಿಗೆ ಹಂಚಿಕೊಟ್ಟನು.

ಆಸ್ತಿಯು ವಶವಾದಮೇಲೆ ಮಕ್ಕಳು ತಂದೆಯನ್ನು ನೋಡಿ "ತಾವು ಇನ್ನು ಮೇಲೆ ಯಾವ ಕೆಲಸವನ್ನೂ ಮಾಡಕೂಡದು; ನಮ್ಮ ಸೇವೆಯನ್ನು ಕೈಕೊಳ್ಳುತ್ತ ದಿವಾನಖಾನೆಯಲ್ಲಿಯೇ ಕುಳಿತಿರಬೇಕು"–ಎಂದು ಬೇಡಿಕೊಂಡರು. ಇದೇ ಸರಿಯಾದದ್ದೆಂದು ತಂದೆಯು ಅಂದಿನಿಂದ ಯಾವ ಗೋಜಿಗೂ ಹೋಗದೆ ಇದ್ದುಬಿಟ್ಟನು. ಮಕ್ಕಳು ಅವನಿಗೆ ಯಾವ ಕಾಲಕ್ಕೆ ಏನು ಬೇಕೋ ವಿಚಾರಿಸಿಕೊಳ್ಳುತ್ತಿದ್ದರು.

ಹಾಗೆ ಸ್ವಲ್ಪಕಾಲ ನಡೆದಮೇಲೆ ಸಾಹುಕಾರನ ಸೊಸೆಯರು ತಮ್ಮ ತಮ್ಮ ಗಂಡಂದಿರೊಡನೆ ಮಾವನು ದಿವಾನಖಾನೆಯಲ್ಲಿ ಯಾವಾಗಲೂ ಕುಳಿತಿರುವುದರಿಂದ ತಮಗೆ ಹೊರಕ್ಕೂ ಒಳಕ್ಕೂ ಓಡಾಡುವುದಕ್ಕೆ ನಾಚಿಕೆಯಾಗುತ್ತದೆಯೆಂತಲೂ ಆತನು ಮಹಡಿಯ ಮೇಲುಭಾಗದ ಚಿಕ್ಕಮನೆಯಲ್ಲಿದ್ದರೆ ಉತ್ತಮವೆಂತಲೂ ಸೂಚಿಸಿದರು. ಅದರಂತೆ ಆ ಗಂಡುಮಕ್ಕಳು ವೃದ್ಧನಾದ ತಂದೆಯನ್ನು ಉಪ್ಪರಿಗೆಯ ಮೇಲಕ್ಕೆ ಸಾಗಿಸಿ ಆತನ ಬಳಿಯಲ್ಲಿ ಒಂದು ಗಂಟೆಯನ್ನು ಇಟ್ಟು ಏನಾದರೂ ಬೇಕಾದರೆ ಗಂಟೆಯನ್ನು ಬಾರಿಸಬೇಕೆಂದು ಹೇಳಿದರು. ಹೀಗೆ ಬಾರಿಸುತ್ತಲೂ ಅವನಿಗೆ ಏನೇನು ಉಪಚಾರಗಳಾಗಬೇಕೋ ಅದನ್ನೆಲ್ಲ ಸಿದ್ಧಮಾಡುವಹಾಗೆ ಏರ್ಪಾಡುಮಾಡಿದರು.

ಹೀಗಿರುವಲ್ಲಿ ಒಂದು ದಿನ ಆ ವೈಶ್ಯನ ಮುಮ್ಮಕ್ಕಳಲ್ಲಿ ಒಬ್ಬನು ಉಪ್ಪರಿಗೆಯನ್ನು ಹತ್ತಿ ಸ್ವಲ್ಪ ಹೊತ್ತು ಅಲ್ಲಿಯೇ ಆಟವಾಡುತ್ತಿದ್ದು ಮುದುಕನ ಬಳಿಯಲ್ಲಿದ್ದ ಗಂಟೆಯನ್ನು ತೆಗೆದುಕೊಂಡನು. ಅದನ್ನು ಬಾರಿಸುತ್ತ ಬಾರಿಸುತ್ತ ಕೊನೆಗೆ ಅದರ ನಾಲಗೆಯನ್ನು ಕಳಚಿ ತೆಗೆದುಕೊಂಡು ಹೊರಟುಹೋದನು. ಮುದುಕನಿಗೆ ಇದು ಯಾವುದೂ ತಿಳಿಯದೆ ಇದ್ದುದರಿಂದ ಅವನು ಸ್ವಲ್ಪ ಹೊತ್ತಿನ ಮೇಲೆ ಎಂದಿನಂತೆ ಆ ಗಂಟೆಯನ್ನು ಅಲ್ಲಾಡಿಸಿದನು; ಅದು ನಾದವಾಗಲಿಲ್ಲ. ಆಗ ಅವನಿಗೆ ಕೂಗುವುದಕ್ಕೆ ಶಕ್ತಿಯಿರಲಿಲ್ಲ; ಇಳಿಯುವುದಕ್ಕೆ ಮೊದಲೇ ಕೈಯಲ್ಲಿ ಸಾಗದೆ ಇತ್ತು. ಮುದುಕನು "ಅಯ್ಯೋ! ನನ್ನ ಗತಿ ಹೀಗಾಯಿತೆ!"—ಎಂದು ಕೊರಗುತ್ತ ಹಸಿವನ್ನು ತಡೆಯಲಾರದೆ ಯಮಪುರಿಯನ್ನೈದಿದನು.

## ಅಭ್ಯಾಸ 105

ಈ ಕಥೆಯಲ್ಲಿರುವ ವಿರೂಪಾನುವಾದಗಳಿಂದ ನಂಜಪ್ಪನೂ ತಿಮ್ಮಯ್ಯನೂ ಆಡಿರಬಹುದಾದ ಮಾತುಗಳನ್ನು ಊಹಿಸಿ ಬರೆಯಿರಿ. ಸ್ವರೂಪಾನುವಾದಕ್ಕೆ ತಕ್ಕ ಸಂಬೋಧನೆ, ನಿಪಾತ—ಮುಂತಾದುವುಗಳನ್ನು ಸೇರಿಸಿ ಕಥೆಯನ್ನು ಸವಿಹತ್ತುವಂತೆ ಮಾಡಿರಿ. ಕಥೆಯನ್ನು ತಕ್ಕಂತೆ ಮಹಾವಾಕ್ಯಗಳಾಗಿ ವಿಂಗಡಿಸಿರಿ:—

### ಜಂಭಕೊಚ್ಚುವುದು

ಒಂದು ದಿನ ನಂಜಪ್ಪ, ತಿಮ್ಮಯ್ಯ—ಎಂಬಿಬ್ಬರು ಸ್ನೇಹಿತರು ಒಂದು ಹೊಲದ ಬದಿಯಲ್ಲಿ ಹೋಗುತ್ತಿದ್ದರು. ನಂಜಪ್ಪನು ಹೊಲದಲ್ಲಿದ್ದ ಒಂದು ದೊಡ್ಡ ಸೌತೆಯಕಾಯಿಯನ್ನು ಕಂಡು ಅಷ್ಟು ದೊಡ್ಡ ಕಾಯಿಯನ್ನು ತಾನು ಎಂದೂ ನೋಡಿರಲಿಲ್ಲವೆಂದನು. ತಿಮ್ಮಯ್ಯನು ತುಸು ಜಂಭಗಾರನಾದುದರಿಂದ "ತಿರುಪತಿಗೆ ಹೋಗಿದ್ದಾಗ, ನಮ್ಮ ನಾಡಿಗರ ಮನೆಯಷ್ಟು ಗಾತ್ರ ಕಾಯಿಯನ್ನು ನೋಡಿದ್ದೇನೆ" ಎಂದನು. ನಂಜಪ್ಪನು ಕಮ್ಮಾರನು. ಅವನು "ನಾನೊಂದು ಸಲ ಒಂದು ಕೊಳದಪ್ಪಲೆಯನ್ನು ಮಾಡಿದ್ದೆನು. ಅದು ನಮ್ಮೂರು ಕೇಶವದೇವರ ಗುಡಿಯ ಅಷ್ಟಿತ್ತು" ಎಂದುತ್ತರವಿತ್ತನು. ಆಗ ತಿಮ್ಮಯ್ಯನು ಬೆರಗಾಗಿ ಅದನ್ನೇತಕ್ಕೆ ಮಾಡಿಸಿದ್ದರೆಂದು ಕೇಳಲು ನಂಜಪ್ಪನು "ನೀನು ಹೇಳಿದ ಸೌತೇಕಾಯಿಯನ್ನು ಬೇಯಿಸಿ ಹುಳಿಮಾಡುವುದಕ್ಕೆ!" ಎಂದನು. ಆಗ ತಿಮ್ಮಯ್ಯನು ನಾಚಿಕೆಯಿಂದ ತಲೆಬಗ್ಗಿಸಬೇಕಾಯಿತು.

## ಅಭ್ಯಾಸ 106[6]

### ತೋಳ ಬಂತು!

ಹೀಗೆ ಕಥೆಯ ಮೇಲುಗಡೆ ಬರೆದು, ತೋಳದ ಗುಲ್ಲುಮಾಡುತ್ತಿದ್ದ ಕುರುಬರ ಹುಡುಗನ ಕಥೆಯನ್ನು ಬರೆಯಿರಿ. ಹುಡುಗನ ಮಾತನ್ನೂ ನೆರೆಯವರ ಮಾತನ್ನೂ ಸ್ವರೂಪಾನುವಾದದಲ್ಲಿ ಬರೆಯಿರಿ.

## 2. ವಸ್ತುವರ್ಣನೆ

**49.** ಎದುರಿಗಿಟ್ಟಿರುವ ವಸ್ತುವನ್ನು ಅಥವಾ ಚಿತ್ರವನ್ನು ವರ್ಣಿಸುವಾಗ ಅದರ ಭಾಗಗಳನ್ನು ಒಂದು ಕ್ರಮದಲ್ಲಿ ವಿವರಿಸುತ್ತಾ ಹೋಗಬೇಕು. ಆಮೇಲೆ ಆಯಾ ಭಾಗಗಳ ಮತ್ತು ಒಟ್ಟು ವಸ್ತುವಿನ ಉಪಯೋಗವನ್ನೂ ಚಿತ್ರವಾದರೆ ನಿಜವಾದ ವಸ್ತುವಿಗೂ ಅದಕ್ಕೂ ಇರುವ ಸಂಬಂಧವನ್ನೂ ವಿವರಿಸಬಹುದು, ಅಥವಾ ಆಯಾ ಭಾಗಗಳ ಉಪಯೋಗವನ್ನು ತಿಳಿಸುತ್ತಲೇ ಅವುಗಳ ಉಪಯೋಗವನ್ನು ತಿಳಿಸಿ ಆಮೇಲೆ ಒಟ್ಟುವಸ್ತುವಿನ ಉಪಯೋಗವನ್ನು ತಿಳಿಸಬಹುದು. ಇಲ್ಲಿ ಎರಡು ಉದಾಹರಣೆಗಳನ್ನು ಕೊಟ್ಟಿರುತ್ತದೆ:–

### (1) ಲೇಖನಿ

ನನ್ನ ಎದುರಿಗಿಟ್ಟಿರುವುದೊಂದು ಲೇಖನಿ. ಬರೆಯುವುದಕ್ಕೆ ಉಪಯೋಗಿಸುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ಸೀಸದಕಡ್ಡಿ, ಬಳಪ—ಮುಂತಾದುವುಗಳನ್ನೂ ಬರೆಯುವುದಕ್ಕೆ ಉಪಯೋಗಿಸುತ್ತಾರಾದರೂ ಮಸಿಯಲ್ಲಿ ಅದ್ದಿ ಕಾಗದದ ಮೇಲೆ ಬರೆಯುವ ಕಡ್ಡಿಗಳಿಗೇ ಲೇಖನಿಗಳೆಂಬ ಹೆಸರು ವಾಡಿಕೆಯಲ್ಲಿದೆ. ಲೇಖನಿಗಳನ್ನು ರೂಢಿಯಾಗಿ 'ಲೇಖಣಿಗಳು' ಎಂದು ಕರೆಯುತ್ತಾರೆ.

ಈ ಲೇಖನಿಯಲ್ಲಿ ಮೂರು ಭಾಗಗಳಿವೆ. ಹಿಡಿದುಕೊಳ್ಳುವುದಕ್ಕೆ ತಕ್ಕಷ್ಟು ಉದ್ದವಾದ ಕಡ್ಡಿಯು ಇದರ ಒಂದನೆಯ ಭಾಗ. ಇದರ ಮುಂದುಗಡೆಯಲ್ಲಿ ಕೈಯ ಹಾಗೆ ಒಳಕ್ಕೆ ಮಡಿಸಿಕೊಂಡಿರುವ ಒಂದು ತವರದ ಹಿಡಿಯಿದೆ; ಇದು ಎರಡನೆಯ ಭಾಗ. ಇದರೊಳಕ್ಕೆ ಒಂದು ಉಕ್ಕಿನ ಮುಳ್ಳನ್ನು ಸಿಕ್ಕಿಸಿರುತ್ತದೆ; ಇದು ಮೂರನೆಯ ಭಾಗ.

ಕಡ್ಡಿಯು ಕಳ್ಳಿಯ ಕಡ್ಡಿಯ ಹಾಗೆ ಕಾಣುತ್ತದೆ. ಇದರಮೇಲೆ ಗೀರುಗೀರಾಗಿ ಸುತ್ತಲೂ ಕೊಯ್ದಿದೆ. ಆಮೇಲೆ ಹುರಿಮಂಜಿನ ಬಣ್ಣವನ್ನು ಬಳಿದಿರುತ್ತದೆ. ಇದಕ್ಕಿಂತಲೂ ಗಟ್ಟಿಯಾಗಿಯೂ ಬೇರೆಬೇರೆ ಬಣ್ಣಹಾಕಿದವುಗಳಾಗಿಯೂ ಇರುವ ಲೇಖನಿಯ ಕಡ್ಡಿಗಳನ್ನೂ ನಾನು

---

[6] 100, 103ನೆಯ ಅಭ್ಯಾಸಗಳಲ್ಲಿ ಸೂಚಿತವಾಗಿರುವ ಕಥೆಗಳನ್ನೆಲ್ಲ ಹೀಗೆ ಉಪಯೋಗಿಸಬಹುದು; ಕಥೆಗಳನ್ನು ಅರ್ಧವಾಗಿ ಕೊಟ್ಟು ಮಿಕ್ಕದ್ದನ್ನು ಸ್ವರೂಪಾನುವಾದದ ಸಂದರ್ಭಗಳನ್ನು ಸೇರಿಸಿ ಪೂರ ಬರೆಯುವಂತೆ ಹೇಳಬಹುದು. ಕೆಲವು ಪ್ರಶ್ನೆಗಳನ್ನು ಹಾಕಿ ಕಥೆಯ ವಿಷಯವನ್ನು ಹುಡುಗರಿಗೆ ಸೂಚಿಸಿ ಕಥೆಯನ್ನು ಪೂರ ಬರೆಯಿಸಬಹುದು. ಕಥಾಸಪ್ತಶತಿ, ಕಥಾಮಂಜರಿ, ನೀತಿರತ್ನಾಕರ, ನೀತಿಚಿಂತಾಮಣಿ—ಮುಂತಾದ ಪುಸ್ತಕಗಳನ್ನು ಈ ಸಂದರ್ಭದಲ್ಲಿ ಉಪಯೋಗಿಸಬಹುದು. ಹೊಸ ಕಥೆಗಳನ್ನು ಉಪಾಧ್ಯಾಯರು ತಾವೇ ಹೇಳಬಹುದು. ಹುಡುಗರಿಗೆ ಬರುವ ಕಥೆಗಳಿದ್ದರೆ ಅವನ್ನೇ ಬರೆಯಿಸಲೂ ಬಹುದು.

ನೋಡಿದ್ದೇನೆ; ಆದರೆ ಈ ಲೇಖನಿಗೆ ಬೆಲೆ ಬಹಳ ಕಡಿಮೆಯೆಂತ ಕಾಣುತ್ತದೆ. ಹಿಡಿಯು ತವರದ್ದಾದರೂ ಹಿತ್ತಾಳೆಯ ಹಾಗೆ ಕಾಣುವ ಮುಲಾಮು ಇದರಮೇಲೆ ಮಾಡಿದೆ. ಕೆಲವು ಕಡೆ ಮುಲಾಮು ಹೋಗಿರುವುದರಿಂದ ತವರವು ಬೆಳ್ಳಗೆ ಎದ್ದು ಕಾಣಿಸುತ್ತದೆ. ಕೆಲವು ಲೇಖನಿಗಳಿಗೆ ಹಿತ್ತಾಳೆಯ ಹಿಡಿಗಳೂ, ಇನ್ನೂ ಕೆಲವಕ್ಕೆ ಉಕ್ಕಿನ ಹಿಡಿಗಳೂ ಇರುತ್ತವೆ; ಆದರೆ ಅವಕ್ಕೆ ಬೆಲೆ ಹೆಚ್ಚಾಗುವುದು. ಈ ಲೇಖನಿಯ ಮುಳ್ಳಿನ ನಡುವೆ ಒಂದು ರಂಧ್ರವು ಇರುತ್ತದೆ. ಲೇಖನಿಯನ್ನು ಅದ್ದಿದಾಗ ಇದರ ಸಹಾಯದಿಂದ ಮುಳ್ಳು ಸ್ವಲ್ಪ ಹೆಚ್ಚು ಮಸಿಯನ್ನು ಹಿಡಿದುಕೊಳ್ಳುವ ಹಾಗೆ ತೋರುತ್ತದೆ. ಮುಳ್ಳನ್ನು ಉಗುರಿನಮೇಲೆ ಒತ್ತಿ ನೋಡಿದೆನು. ಕೊನೆಯ ಟಾಕು ಎರಡು ಭಾಗವಾಗಿ ಸೀಳಿದೆ. ಅಕ್ಷರವು ದಪ್ಪಗೆ ಆಗಬೇಕಾದಾಗ ಮುಳ್ಳನ್ನು ಒತ್ತಬೇಕು. ಟಾಕು ಸೀಳಿರುವುದರಿಂದ ಒತ್ತಿ ಬರೆಯುವಾಗ ಲೇಖನಿಯ ಬಾಯಿ ಅಗಲವಾಗಿ ಕಾಗದದ ಮೇಲೆ ದಪ್ಪ ಗೆರೆ ಬೀಳುವುದು.

ನಮ್ಮ ಸೀಮೆಯಲ್ಲಿ ಹಿಂದಕ್ಕೆ ಲಾಳದ ಕಡ್ಡಿಗಳನ್ನೂ ಬಗನೆಯ ಕಡ್ಡಿಗಳನ್ನೂ ಚೂಪಾಗೆ ಚಾಕಿನಿಂದ ಹೆರೆದು ಟಾಕು ಸೀಳಿ ಅಥವಾ ಸೀಳದೆ ಲೇಖನಿಗಳನ್ನು ಮಾಡಿಕೊಳ್ಳುತ್ತಿದ್ದರಂತೆ. ಇಂಥದ್ದೊಂದನ್ನು ನಮ್ಮ ಉಪಾಧ್ಯಾಯರು ಕೆಲವು ದಿನಗಳ ಹಿಂದೆ ಮಾಡಿ ತೋರಿಸಿದ್ದರು. ಈಗ ಉಕ್ಕಿನ ಮುಳ್ಳುಗಳೇ ಎಲ್ಲಾ ಕಡೆಯಲ್ಲಿಯೂ ಹರಡಿರುತ್ತವೆ. ಇವುಗಳು ಪರದೇಶದಲ್ಲಿ ತಯಾರಾಗಿ ಕಾಗದದ ಪೊಟ್ಟಣಗಳಲ್ಲಿ ಅಂಗಡಿಗಳಿಗೆ ಬರುತ್ತವೆ. ನಮ್ಮ ಅಂಗಡಿಯವರು ಅವನ್ನು ಚಿಲ್ಲರೆಯಾಗಿ ಮಾರುತ್ತಾರೆ.

## (2) ಶ್ರೀರಾಮಪಟ್ಟಾಭಿಷೇಕದ ಚಿತ್ರ

ನಮ್ಮ ಎದುರಿಗಿರುವುದು ಶ್ರೀರಾಮನಿಗೆ ಪಟ್ಟಾಭಿಷೇಕವಾದ ಸಂದರ್ಭವನ್ನು ತಿಳಿಸುವ ಚಿತ್ರವು. ಇಲ್ಲಿ ಶ್ರೀರಾಮ, ಸೀತೆ, ಲಕ್ಷ್ಮಣ, ಭರತಶತ್ರುಘ್ನರು, ಹನುಮಂತ – ಇಷ್ಟು ಜನಗಳನ್ನು ತೋರಿಸಿರುತ್ತದೆ.

ಶ್ರೀರಾಮನು ಸೀತೆಯನ್ನು ತನ್ನ ಎಡದ ತೊಡೆಯಮೇಲೆ ಕೂರಿಸಿಕೊಂಡು ಸಿಂಹಾಸನದ ಮೇಲೆ ಕೂತಿದ್ದಾನೆ. ಸಿಂಹಾಸನದ ಕೆಳಗಡೆ ಕಾಲಿಡುವುದಕ್ಕೆ ಒಂದು ಲೋಡನ್ನು ಇಟ್ಟಿದೆ. ಇದರಮೇಲೆ ಸೀತಾರಾಮರ ಒಂದೊಂದು ಕಾಲಿನ ತುದಿಯು ನಿಂತಿರುವ ಹಾಗೆ ತೋರುತ್ತದೆ. ಸಿಂಹಾಸನದ ಮೇಲೆಯೂ ಒಂದು ದುಂಡನೆಯ ಲೋಡನ್ನು ಇಟ್ಟಿದೆ. ಈ ಲೋಡಿನ ಸುತ್ತಲೂ ಕಮಲದ ದಳಗಳ ಹಾಗೆ ಕಾಣುವ ಬಟ್ಟೆಯ ತುಂಡುಗಳನ್ನು ಹಾಕಿ ಹೊಲಿದು ಕಸೂತಿಯ ಕೆಲಸವನ್ನು ಮಾಡಿರುತ್ತದೆ.

ಶ್ರೀರಾಮನ ಹಿಂದೆ ಎಡಗಡೆಗೆ ಭರತನು ಛತ್ರಿಯನ್ನು ಹಿಡಿದುಕೊಂಡು ನಿಂತಿದ್ದಾನೆ. ಬಲಗಡೆಗೆ ಲಕ್ಷ್ಮಣನು ಚಾಮರವನ್ನು ಹಿಡಿದುಕೊಂಡು ನಿಂತಿದ್ದಾನೆ. ತೀರ ಎಡಗಡೆಗೆ ಶತ್ರುಘ್ನನೂ ಬಲಗೈಯಲ್ಲಿ ಚಾಮರವನ್ನು ಹಿಡಿದುಕೊಂಡಿದ್ದಾನೆ. ಇವನ ಎಡದ ಕೈಯಲ್ಲಿ ಎರಡು ಬಾಣಗಳಿವೆ; ಇವನು ಬೆನ್ನಿಗೆ ಬತ್ತಳಿಕೆಯನ್ನು ಕಟ್ಟಿಕೊಂಡಿದ್ದಾನೆ. ಇದರಿಂದ ಇವನು ರಾಮನ ಅಂಗರಕ್ಷಕನಾಗಿರುವಂತೆ ಕಾಣುತ್ತದೆ. ಶ್ರೀರಾಮನ ಮುಂದುಗಡೆಯಲ್ಲಿ ಹನುಮಂತನು ಸೊಂಟಕಟ್ಟಿಕೊಂಡು ನಿಂತಿರುತ್ತಾನೆ.

ಸೀತೆಯ ಎಡಗೈಯಲ್ಲಿ ಒಂದು ಕಮಲವಿದೆ. ಈಕೆಯ ಕೈಯಲ್ಲಿ ಕಡಗ, ತೋಳಿನಲ್ಲಿ ವಂಕಿ, ಕೊರಳಿನಲ್ಲಿ ಹಾರ, ಮೂಗಿನಲ್ಲಿ ಮುಖರ, ಕಿವಿಯಲ್ಲಿ ಚಳ ತುಂಬು, ಕೆನ್ನೆಯ ಸರ ಪಳಿ – ಇಷ್ಟು ಒಡವೆಗಳು ಕಾಣುತ್ತಿವೆ. ಗಂಡಸರೆಲ್ಲರೂ ಕೊರಳಲ್ಲಿ ಹಾರವನ್ನು ಹಾಕಿಕೊಂಡಿದ್ದಾರೆ; ತಲೆಗೆ ತುರಾಯಿಯಿಂದ ಕೂಡಿದ ಕಿರೀಟವನ್ನು ಇಟ್ಟುಕೊಂಡಿದ್ದಾರೆ; ಕೈಯ್ಯಲ್ಲಿ ರತ್ನಕಂಕಣವನ್ನು ಧರಿಸಿದ್ದಾರೆ.

## ಅಭ್ಯಾಸ 107[7]

ನಿಮ್ಮ ಎದುರಿಗಿಟ್ಟಿರುವ ಈ ವಸ್ತುಗಳಲ್ಲಿ ಒಂದನ್ನು ವರ್ಣನೆ ಮಾಡಿರಿ:

ಚಾಕು, ಕನ್ನಡಕ, ಇಟ್ಟಿಗೆ, ಬದನೆಯಕಾಯಿ, ದೀಪದ ಕಂಬ, ಲ್ಯಾಂಟರ್ನ್ ಎಂಬ ಕೈದೀಪ, ರಾಗಿಯ ತೆನೆ, ಮುಸುಕಿನ ಜೋಳ.

## ಅಭ್ಯಾಸ 108[7]

ನಿಮ್ಮ ಎದುರಿಗಿಟ್ಟಿರುವ ಈ ಚಿತ್ರದಲ್ಲಿ ಒಂದನ್ನು ವರ್ಣಿಸಿ:–

ಕುಚೇಲನೂ ಕೃಷ್ಣನೂ; ಗಂಗೆಯು ಭೂಲೋಕಕ್ಕೆ ಇಳಿದದ್ದು; ಮಾರೀಚನು ಮೃಗವಾಗಿ ಬಂದದ್ದು; ಶಿವನು ಕಿರಾತನಾದದ್ದು.

**50.** ವಸ್ತುಗಳನ್ನೂ ಪ್ರಾಣಿಗಳನ್ನೂ ವರ್ಣಿಸುವುದಕ್ಕೆ ಅವುಗಳ ವಿಷಯವಾಗಿ ಬೇರೆ ಬೇರೆಯ ಪ್ರಶ್ನೆಗಳನ್ನು ನಮಗೆ ನಾವೇ ಹಾಕಿಕೊಳ್ಳುವುದರಿಂದ ವಿಷಯವನ್ನು ಗೊತ್ತುಪಡಿಸಬಹುದು. ವಾಕ್ಯರಚನೆಯು ಓದುವವರಿಗೆ ಒಪ್ಪಾಗಬೇಕಾದರೆ ವರ್ಣನೆಯಲ್ಲಿ ತಕ್ಕ ವಿಶೇಷಣಗಳನ್ನು ಜೋಡಿಸಬೇಕು; ಎಂದರೆ ವಸ್ತುವಿನ ಆಕಾರ, ಗಾತ್ರ, ಬಣ್ಣ–ಮುಂತಾದುವುಗಳನ್ನೂ ಪ್ರಾಣಿಯ ಸ್ವಭಾವವನ್ನೂ ತಿಳಿಸುವುದಕ್ಕೆ ತಕ್ಕ ಮಾತುಗಳನ್ನು ಅಲ್ಲಿಗಲ್ಲಿಗೆ ಹೊಂದುವಹಾಗೆ ಸೇರಿಸಬೇಕು. ಆಗ ವರ್ಣನೆಗೆ ಹೆಚ್ಚಿನ ಮೆರುಗು ಬರುತ್ತದೆ.

ಉದಾಹರಣೆಗೆ 'ಈ ಮಹಾವಾಕ್ಯವನ್ನು ನೋಡಿ'—

### ಆನೆ

ಆನೆಯಷ್ಟು ದೊಡ್ಡ ಪ್ರಾಣಿಯನ್ನು ನಾನು ಎಲ್ಲಿಯೂ ನೋಡಿಲ್ಲ; ದೂರಕ್ಕೆ ಅದೊಂದು ಭಾರಿಯ ಕರಿಯ ಬಂಡೆಯಂತೆಯೇ ತೋರುವುದು. ಅದರ ನಾಲ್ಕು ಕಾಲುಗಳೂ, ನಾಲ್ಕು ಕಲ್ಲುಕಂಬಗಳ ಹಾಗೆ ದಪ್ಪನಾಗಿವೆ. ಬೆನ್ನೂ ಪಕ್ಕಗಳೂ ಹಾಸುಗಲ್ಲಿನ ಹಾಗೆ ವಿಶಾಲವಾಗಿವೆ. ಕಿವಿಗಳು ಗೆರಸಿಯ ಹಾಗೆ ಅಗಲವಾಗಿವೆ; ಆದರೆ ಬಾಲವು ಮೋಟು, ಕಣ್ಣು ತೀರ ಸಣ್ಣ.

---

[7] ಇಲ್ಲಿ ಕೊಟ್ಟಿರುವ ವಸ್ತುಗಳೂ ಚಿತ್ರಗಳೂ ಉದಾಹರಣೆಗಾಗಿ ಕೊಟ್ಟಿರುವುವಾಗಿವೆ. ಪಾಠಶಾಲೆಯಲ್ಲಿ ದೊರೆಯುವ ವಸ್ತುಗಳನ್ನೂ ಚಿತ್ರಗಳನ್ನೂ ಪಾಠಶಾಲೆಯ ತೋಟದಲ್ಲಿರುವ ಗಿಡಗಳನ್ನೂ ಅನುಕೂಲವಿದ್ದಹಾಗೆ ಉಪಯೋಗಿಸಿಕೊಳ್ಳಬೇಕು. ಹುಡುಗರ ನಿರೀಕ್ಷಣಶಕ್ತಿಯನ್ನು ವಾಕ್ಯರಚನೆಗೆ ಹೊಂದಿಸಿಕೊಳ್ಳುವುದೇ ಈ ಅಭ್ಯಾಸಗಳ ಉದ್ದೇಶ. ಚಿತ್ರಗಳು ಪುರಾಣಕ್ಕಾಗಲಿ ಚರಿತ್ರೆಗಾಗಲಿ ಸಂಬಂಧಪಟ್ಟದ್ದರೆ ಕಥಾಸಂದರ್ಭವೂ ಅವರಿಗೆ ನೆನಪಿರಬೇಕಾಗುವುದು.

ಮುಂದೆ ಒನಕೆಯ ಹಾಗೆ ಇಳಿಯಬಿದ್ದಿರುವ ಇದರ ಸೊಂಡಿಲು ಮತ್ತೊಂದು ಕಾಲಿನ ಹಾಗೆಯೇ ತೋರುವುದು. ಈ ಸೊಂಡಿಲು ಅದಕ್ಕೆ ಮೂಗಿನ ಕೆಲಸವನ್ನು ಮಾಡುವುದಲ್ಲದೆ ಮರಗಳ ಕೊಂಬೆಯೇ ಮುಂತಾದುವುಗಳನ್ನು ಮುರಿದುಕೊಳ್ಳುವುದಕ್ಕೂ ತಾನು ತಿನ್ನುವ ಎಲೆ ಗಳನ್ನು ಬಾಯಿಗೆ ಹಾಕಿಕೊಳ್ಳುವುದಕ್ಕೂ ಕೈಯಿನಂತೆಯೇ ಸಹಾಯಮಾಡುವುದು. ಸೊಂಡಿಲಿನ ಎರಡು ಕಡೆಗಳಲ್ಲಿಯೂ ಎರಡು ಬಿಳಿಯ ದಂತಗಳು ಹೊರಕ್ಕೆ ಚಾಚಿಕೊಂಡಿವೆ. ಇವುಗಳಲ್ಲಿ ಒಂದು ಉದ್ದವಾಗಿದೆ, ಒಂದು ಗಿಡ್ಡವಾಗಿದೆ. ಅಂತೂ ಈ ಪ್ರಾಣಿಯು ಬಲು ವಿಚಿತ್ರವಾಗಿರುವುದು.

## ಅಭ್ಯಾಸ 109[8]

ನಾಯಿ, ಹಸು, ಕುದುರೆ, ಬೆಕ್ಕು—ಈ ಪ್ರಾಣಿಗಳಲ್ಲಿ ಒಂದರ ವಿಷಯವಾಗಿಯೂ ಕಾಗೆ, ಗಿಣಿ, ಪಾರಿವಾಳ, ಹದ್ದು—ಈ ಪಕ್ಷಿಗಳಲ್ಲಿ ಒಂದರ ವಿಷಯವಾಗಿಯೂ ನಿಮಗೆ ತಿಳಿದಿರು ವುದನ್ನು ಮೂರುಮೂರು ಮಹಾವಾಕ್ಯಗಳಲ್ಲಿ ಬರೆಯಿರಿ. ಇವುಗಳ ಆಕಾರ, ಆಹಾರ, ಉಪ ಯೋಗ—ಇವುಗಳನ್ನು ವಿವರಿಸಿ. ಅಲ್ಲಿಗಲ್ಲಿಗೆ ತಕ್ಕ ವಿಶೇಷಣಗಳನ್ನೂ ಹೋಲಿಕೆಯ ಮಾತು ಗಳನ್ನೂ ಜೋಡಿಸಿಕೊಳ್ಳಿ.

## ಅಭ್ಯಾಸ 110[8]

ಬಾಳೆಯ ಗಿಡ, ದಾಳಿಂಬರೆಯ ಗಿಡ, ನಿಂಬೆಯ ಗಿಡ, ಮಲ್ಲಿಗೆಯ ಬಳ್ಳಿ. ಜಾಜಿಯ ಬಳ್ಳಿ—ಇವುಗಳಲ್ಲಿ ಯಾವುದಾದರೂ ಎರಡು ವಿಷಯವಾಗಿ ನಿಮಗೆ ತಿಳಿದದ್ದನ್ನು ಎರಡೆರಡು ಮಹಾವಾಕ್ಯಗಳಲ್ಲಿ ಬರೆಯಿರಿ. (ಪ್ರತಿಯೊಂದೂ ನೋಡುವುದಕ್ಕೆ ಹೇಗೆ ಕಾಣುವುದೆಂಬು ದನ್ನು ವಿವರಿಸಿ ಅದರ ಉಪಯೋಗವನ್ನು ತಿಳಿಸಿ)

## ಅಭ್ಯಾಸ 111

ನಿಮ್ಮ ತರಗತಿಯಿರುವ ಪಾಠಶಾಲೆಯ ಭಾಗವನ್ನು ವರ್ಣಿಸಿ ಅದರ ಉದ್ದ, ಅಗಲ, ಒಳಗಿರುವ ಪದಾರ್ಥಗಳು, ವಿದ್ಯಾರ್ಥಿಗಳು, ಉಪಾಧ್ಯಾಯರು ಕೂತುಕೊಂಡಿರುವ ತೀರಿ — ಇವೆಲ್ಲವನ್ನೂ ಸೇರಿಸಿ. ಅಲ್ಲಿಗಲ್ಲಿಗೆ ತಕ್ಕ ವಿಶೇಷಣಗಳಿರಬೇಕು.

---

[8] ಪ್ರಾಣಿಯ ಮತ್ತು ಪಕ್ಷಿಯ ಅವಯವಗಳನ್ನೂ ಗಿಡದ ಅಥವಾ ಬಳ್ಳಿಯ ಭಾಗಗಳನ್ನೂ ವರ್ಣಿಸುವುದಕ್ಕೆ ಬೇಕಾದ ಮಾತುಗಳನ್ನೂ ಇವುಗಳ ಉಪಯೋಗವನ್ನು ಸೂಚಿಸುವ ಮಾತುಗಳನ್ನೂ ಬೇಕಾದರೆ ಉಪಾಧ್ಯಾಯರು ಕಪ್ಪುಹಲಗೆಯ ಮೇಲೆ ಬರೆದು ವಿದ್ಯಾರ್ಥಿಗಳಿಗೆ ಸಹಾಯಮಾಡಬಹುದು.

## ಅಭ್ಯಾಸ 112

ನೀವು ನೋಡಿರುವ ಒಂದು ಮಂಚ, ಕುರ್ಚಿ, ಅಥವಾ ಪೆಟ್ಟಿಗೆಯನ್ನು ವರ್ಣಿಸಿ ಎರಡು ಮಹಾವಾಕ್ಯಗಳನ್ನು ಬರೆಯಿರಿ. ಅದರ ಆಕಾರ, ಭಾಗಗಳು—ಇವುಗಳನ್ನು ಕುರಿತು ಒಂದು ಮಹಾವಾಕ್ಯದಲ್ಲಿಯೂ ಉಪಯೋಗವನ್ನು ಕುರಿತು ಇನ್ನೊಂದು ಮಹಾವಾಕ್ಯದಲ್ಲಿಯೂ ಬರೆಯಿರಿ.

## 2. ಕಾಗದಗಳು

**51.** ಕಾಗದವನ್ನು ಬರೆಯುವಾಗ ಒಕ್ಕಣೆಯಲ್ಲಿಯೂ ಮಿಕ್ಕ ವಿಷಯದಲ್ಲಿಯೂ ಯಾರಿಗೆ ಬರೆಯುತ್ತೇವೆಯೋ ಅವರಿಗೂ ನಮಗೂ ಇರುವ ಪರಿಚಯಕ್ಕೂ ಅವರ ವಯಸ್ಸು, ಸ್ಥಿತಿ—ಮುಂತಾದುವಕ್ಕೂ ತಕ್ಕಂತೆ ಗೌರವದ ಮಾತುಗಳಿರಬೇಕು. ತಂದೆ ತಾಯಿಗಳೊಡನೆ ಮಾತಾಡುವಾಗ ಹುಡುಗರು ಸಾಧಾರಣವಾಗಿ ಏಕವಚನವನ್ನೇ ಉಪಯೋಗಿಸುವರು. ಆದರೂ ಅವರಿಗೆ ಕಾಗದವನ್ನು ಬರೆಯುವಾಗ ಗೌರವದ ಬಹುವಚನವನ್ನೇ ಉಪಯೋಗಿಸಿರುವುದು ಉದಾಹರಣೆಗಳಿಂದ ಗೊತ್ತಾಗಿರಬಹುದು. ಇದರಂತೆ ಸ್ನೇಹಿತರಿಗೆ ಬರೆಯುವ ಕಾಗದದಲ್ಲಿಯೂ ಗೌರವವಾಗಿ ಬರೆಯುವುದೇ ಮೇಲು. ಪಾಠಶಾಲೆಗಳಲ್ಲಿ ಬಂಧುಗಳಿಗೆ ಬರೆಯುವ ಕಾಗದಗಳನ್ನು ಬಿಟ್ಟರೆ ಮಿತ್ರರಿಗೆ ಬರೆಯುವ ಕಾಗದಗಳೇ ಹೆಚ್ಚು. ಆದ್ದರಿಂದ ಅವರಿಗೆ ಬರೆಯುವ ಒಕ್ಕಣೆಗಳ ರೂಪವನ್ನೂ ಎರಡು ಮಾದರಿಯ ಕಾಗದಗಳನ್ನೂ ಇಲ್ಲಿ ಕೊಡುತ್ತೇವೆ.

### ಒಕ್ಕಣೆ

(1) ಪ್ರಿಯಮಿತ್ರ ಪುಟ್ಟಯ್ಯನಿಗೆ ಉಭಯಕುಶಲೋಪರಿ.

(2) ಪರಮಮಿತ್ರರಾದ ಲಕ್ಷ್ಮೀನಾರಣಪ್ಪನವರಿಗೆ ತಮ್ಮ ರಾಮರಾಯನ ವಿಜ್ಞಾಪನೆ.

(3) ರಾಜಮಾನ್ಯರಾಜಶ್ರೀ ('ಮಹಾರಾಜಶ್ರೀ', ಅಥವಾ 'ಮಹಾರಾಜ ಮಾನ್ಯರಾಜಶ್ರೀ') ವೆಂಕಟರಾಯರಿಗೆ ಸೇವಕ ಕೃಷ್ಣರಾಯನ ವಿಜ್ಞಾಪನೆಗಳು.

ಇವುಗಳಲ್ಲಿ (1)ನೆಯ ರೂಪವನ್ನು ಸಲುಗೆ ಇರುವ ಕಡೆ ಉಪಯೋಗಿಸಬಹುದು. (2)ನೆಯ ರೂಪವನ್ನು ಸಾಮಾನ್ಯವಾಗಿ ಗೌರವವನ್ನು ತೋರಿಸಬೇಕಾದ ಕಡೆಯಲ್ಲಿಯೂ, (3)ನೆಯ ರೂಪವನ್ನು ಹೆಚ್ಚಾಗಿ ಉಪಚಾರೋಕ್ತಿಗಳು ಬೇಕಾದ ಕಡೆಯಲ್ಲಿಯೂ ಉಪಯೋಗಿಸಬೇಕು.

## (1) ಗೆಳೆಯನಿಗೆ ಬರೆದ ಕಾಗದ

ಬಸವನಗುಡಿ

13-1-12

ಪರಮಮಿತ್ರ ಪುಟ್ಟಯ್ಯನಿಗೆ

ಈ ದಿನ ಸಾಯಂಕಾಲ ೭ ಗಂಟೆಗೆ 'ವೈ. ಎಮ್. ಸಿ. ಎ. ಹಾಲ್' ಎಂಬಲ್ಲಿ ಮಾಯಾ ದೀಪದ ಚಿತ್ರಗಳನ್ನು ತೋರಿಸುತ್ತಾರಂತೆ. ನಮ್ಮ ತಂದೆಯವರೂ ಹೊರಡುತ್ತಾರೆ. ಹುಡುಗ ರಿಗೆ ಒಂದೊಂದಾಣೆ ಟಿಕೆಟ್ ಇಟ್ಟಿರುತ್ತಾರಂತೆ. ಏನೇನೋ ಚಿತ್ರಗಳನ್ನು ತೋರಿಸುತ್ತಾರೆಂತ ಹೇಳುತ್ತಾರೆ. ನನಗೆ ನೋಡಬೇಕೆಂದು ತುಂಬ ಕುತೂಹಲವಿದೆ. ನೀನೂ ಬರುತ್ತೀಯ? ರಾಮು, ಕಿಟ್ಟು—ಎಲ್ಲರೂ ಬರುತ್ತಾರೆ. ನೀನೂ ಇದ್ದರೆ ಚೆನ್ನಾಗಿದ್ದೀತು. ಸಂತೋಷದಿಂದ ಒಂದು ಘಳಿಗೆ ಕಾಲಹಾಕಿ ಬರಬಹುದು.

ಈ ಕೂಡಲೆ ಉತ್ತರವನ್ನು ಬರೆ, ಮರೆಯಬೇಡ.

ಇಂತೀ ನಿನ್ನ ಮಿತ್ರ,

ಭೀಮಣ್ಣ.

**ಸೂ॥** ಸ್ನೇಹಿತರು ಒಬ್ಬರಿಗೊಬ್ಬರು ತುಂಬ ಪರಿಚಯವಿದ್ದರೆ ಮೇಲಿನ ಮಾದರಿ ಯಲ್ಲಿ ತೋರಿಸಿರುವಂತೆ ಏಕವಚನದಲ್ಲಿಯೇ ಬರೆದರೆ ಸಾಕಾಗುತ್ತದೆ. ಇದರಲ್ಲಿ "ವಿಜ್ಞಾಪನೆ" ಮುಂತಾದ ಮಾತುಗಳೂ ಇರಬೇಕಾದದ್ದಿಲ್ಲ. ಆದರೆ ಮೊದಲೇ ನಾವು ಹೇಳಿರುವಂತೆ ಕಾಗದಗಳನ್ನು ಬರೆಯುವಾಗ ಗೌರವವಾಗಿ ಬಹುವಚನದಲ್ಲಿ ಬರೆಯುವುದೇ ಕನ್ನಡಕ್ಕೆ ಹೆಚ್ಚು ಒಪ್ಪುವುದೆಂತ ತೋರುತ್ತದೆ.

## ಅಭ್ಯಾಸ 113

ಯಾವುದೋ ಒಂದು ಆಟಕ್ಕೆ ಬರಬೇಕೆಂತ ನಿಮ್ಮ ಸ್ನೇಹಿತನು ಬರೆದಿರುತ್ತಾನೆ. ಪರೀಕ್ಷೆಯು ಸಮೀಪವಾಗುತ್ತಿರುವುದರಿಂದ ಬರುವುದಕ್ಕಾಗುವುದಿಲ್ಲವೆಂತ ಉತ್ತರ ಬರೆ ಯಿರಿ. ಅಲ್ಲಲ್ಲಿಗೆ ವಿನಯದ ಮಾತುಗಳನ್ನು ಜೋಡಿಸಿರಿ.

## ಅಭ್ಯಾಸ 114

ಜ್ವರ ಬಂದು ಪಾಠಶಾಲೆಗೆ ಒಂದು ವಾರದಿಂದ ಬರದೆ ಇರುವ ನಿಮ್ಮ ಗೆಳೆಯನ ಸ್ಥಿತಿ ಯನ್ನು ವಿಚಾರಿಸುವುದಕ್ಕೆ ಒಂದು ಕಾಗದವನ್ನು ಬರೆಯಿರಿ. ಅವನಿಗೆ ಸಂತೋಷವಾಗ ಬಹುದಾದ ಯಾವುದಾದರೊಂದು ಸುದ್ದಿಯನ್ನು ಕಾಗದದಲ್ಲಿ ಸೇರಿಸಿ.

## (2) ಸ್ನೇಹಿತನಿಗೆ ಬರೆದ ಕಾಗದ

ಪ್ರಿಯಮಿತ್ರರಾದ ರಾ|| ರಾಚಪ್ಪನವರಿಗೆ
ತಮ್ಮ ಅನಂತಯ್ಯನ ವಿಜ್ಞಾಪನೆಗಳು.

ನಿನ್ನೆಯ ದಿನ ನನಗೆ ತಲೆನೋವು ಬಂದದ್ದರಿಂದ ಪಾಠಶಾಲೆಗೆ ಬದಲು ಅನುಕೂಲಿಸ ಲಿಲ್ಲ. ಭೂಗೋಳದಲ್ಲಿ ಯಾವ ಪಾಠವನ್ನು ಗಟ್ಟಿಮಾಡಬೇಕೋ ತಿಳಿಯದೆ ಇದೆ. ದಯ ವಿಟ್ಟು ತಿಳಿಸುತ್ತೀರ? ತಮ್ಮ ನಕ್ಷೆಯ ಪುಸ್ತಕವನ್ನು ಕಳುಹಿಸಿದರೆ ಸಾಯಂಕಾಲಕ್ಕೆ ತಿರುಗಿ ಕೊಡುತ್ತೇನೆ.

ಸಾಯಂಕಾಲಕ್ಕೆ ಆಟಕ್ಕೆ ಸೇರಿದಾಗ ಹೆಚ್ಚಿನ ಸಂಗತಿಗಳನ್ನು ಅರಿಕೆಮಾಡಿಕೊಳ್ಳುವೆನು.

ಇಂತೀ ವಿಜ್ಞಾಪನೆ,
ಅನಂತಯ್ಯ.

## ಅಭ್ಯಾಸ 115

ಒಂದನೆಯ ಮಾದರಿಯಲ್ಲಿ ಬರೆದಿರುವ ಕಾಗದವನ್ನು ಗೌರವದ ಬಹುವಚನವನ್ನುಪ ಯೋಗಿಸಿ ಬರೆಯಿರಿ.

## ಅಭ್ಯಾಸ 116

ನಿಮ್ಮ ಮನೆಯಲ್ಲಿ ನಡೆಯುವ ಯಾವುದಾದರೊಂದು ಹಬ್ಬಕ್ಕೆ ಅಥವಾ ನಿಮ್ಮೂರಿನಲ್ಲಿ ನಡೆಯುವ ಯಾವುದಾದರೊಂದು ಉತ್ಸವಕ್ಕೆ ಬರಬೇಕೆಂದು ನಿಮ್ಮ ಸ್ನೇಹಿತನಿಗೊಂದು ಕಾಗದವನ್ನು ಬರೆಯಿರಿ.

## ಅಭ್ಯಾಸ 117

ಮೇಲಿನ ಕಾಗದಕ್ಕೆ ನಿಮ್ಮ ಸ್ನೇಹಿತ ಬರೆಯಬಹುದಾದ ಉತ್ತರವನ್ನು ಬರೆಯಿರಿ.

## ಅಭ್ಯಾಸ 118

ನಿಮ್ಮಲ್ಲಿರುವ ಒಂದು ಗಡಿಯಾರವನ್ನು ವರ್ಣಿಸಿ ನಿಮ್ಮ ಸ್ನೇಹಿತನಿಗೆ ಒಂದು ಕಾಗದ ವನ್ನು ಬರೆಯಿರಿ. ಅದರ ಆಕಾರ, ಭಾಗಗಳು, ಉಪಯೋಗ, ಅದನ್ನು ಎಲ್ಲಿ ಹೇಗೆ ಇಟ್ಟು ಕೊಂಡಿದ್ದೀರಿ—ಈ ವಿಷಯಗಳನ್ನೆಲ್ಲ ಸೇರಿಸಿ.

## ಅಭ್ಯಾಸ 119

ನಿಮ್ಮ ಮನೆಯಲ್ಲಿ ಎಮ್ಮೆಯ ಕರು ಹುಟ್ಟಿದ ಸುದ್ದಿಯನ್ನು ನಿಮ್ಮ ಸ್ನೇಹಿತನಿಗೆ ಒಂದು ಕಾಗದದಲ್ಲಿ ತಿಳಿಸಿರಿ. ಬರೆವಣಿಗೆಯಲ್ಲಿ ಹಾಸ್ಯವಿರಲಿ. ಕರುವನ್ನು ಮಗುವೆಂತ ಭಾವಿಸಿ. (ಸಂತೋಷ, ಸುದ್ದಿ, ಸಕ್ಕರೆ, ಹೆಣ್ಣು, ಗಂಡು, ಗಬ್ಬ, ಹಾಲು, ಪೇಚಾಟ, ಕೆಚ್ಚಲು, ಗೀಬು, ಹಳ್ಳಿ, ಅಂಗಡಿ, ನಾಮಕರಣ, ಗಂಗೆ, ಸೃಷ್ಟಿ, ಬಾಗಿಲು, ಹಾರಾಡು, ಚಿಮ್ಮು, ಕೂಸು, ಬಾಣಂತಿ, ಯೋಗಕ್ಷೇಮ—ಈ ಮಾತುಗಳನ್ನು ಸೇರಿಸಿ) ತಕ್ಕಂತೆ ತಾರೀಖು, ಸ್ಥಳ, ವಿಳಾಸ— ಮುಂತಾದುವನ್ನು ಜೋಡಿಸಿಕೊಳ್ಳಿರಿ.

## ಅಭ್ಯಾಸ 120

ಪೂನಾದಿಂದ ರಂಗಯ್ಯನ ಸೋದರಮಾವನು ಅವನಿಗೆ ಒಂದು ಬುಟ್ಟಿ ಅಂಜೂರದ ಹಣ್ಣನ್ನು ಕಳುಹಿಸಿರುತ್ತಾರೆ. ಅದು ಬಂದು ತಲಪಿದ್ದನ್ನು ತಿಳಿಸಿ, ಬರುವಾಗ ಮತ್ತಷ್ಟು ತರ ಬೇಕೆಂದು ಸೂಚಿಸಿ, ಬೇರೆ ಯೋಗಕ್ಷೇಮದ ಸಂಗತಿಗಳನ್ನೂ ಸೇರಿಸಿ, ಒಂದು ಕಾಗದವನ್ನು ಬರೆಯಿರಿ. ರಂಗಯ್ಯನು ತುಮಕೂರಿನ ಮಿಡಲ್ ಸ್ಕೂಲಿನಲ್ಲಿದ್ದಾನೆಂದು ಇಟ್ಟುಕೊಳ್ಳಿ.

# ಸಂಸ್ಥಾಪಕರ ಸ್ಮರಣೆ



ವೇದಧರ್ಮದ ಪುನರುತ್ಥಾನ ಮತ್ತು ವೇದಾಂತಕ್ಕೊಂದು ನವಚೇತನ ತುಂಬಿದ ಮಹತ್ಕಾರ್ಯ ಸರ್ವದಾ ಸ್ಮರಣೀಯರಾದ ಶ್ರೀಶಂಕರ ಭಗವತ್ಪಾದರದು. ಬ್ರಹ್ಮೀಭೂತ ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರು (ಪೂರ್ವಾಶ್ರಮದ ಶ್ರೀಯಲ್ಲಂಬಳಸೆ ಸುಬ್ರಹ್ಮಣ್ಯಶರ್ಮರು - ವೈ. ಸುಬ್ಬರಾಯರು, ಜನನ 5-1-1880) ಶ್ರೀ ಶಂಕರವೇದಾಂತ ಸರಣಿಯಿಂದ ಆಕರ್ಷಿತರಾಗಿ, ಆಳವಾದ ಅಧ್ಯಯನ, ಚಿಂತನ ಮಂಥನಗಳಿಂದ, ತಮ್ಮ ವಿಶಿಷ್ಟ ಸಂಶೋಧನಾ ಪ್ರವೃತ್ತಿಯನ್ನು ಬಳಸಿ, ಶಂಕರರ ಅಮೋಘವಾದ ಪ್ರಸ್ಥಾನತ್ರಯ ಭಾಷ್ಯಗಳಿಗೆ ಹತ್ತಿದ್ದ ಕಳೆಯನ್ನು, ಮುತ್ತಿದ್ದ ಧೂಳನ್ನು ತೊಡೆದು, ಶಾಂಕರವೇದಾಂತದ ನೈಜ ತಿರುಳನ್ನು ಕಂಡುಕೊಂಡರು. ಶಾಂಕರ ವೇದಾಂತಕ್ಕೆ 20ನೇ ಶತಮಾನದ ಅಧಿಕೃತ ವಕ್ತಾರರಾದರು, ಪ್ರತಿಪಾದಕರಾದರು, 'ಅಭಿನವ ಶಂಕರ' ರಾದರು.

'ಬೆಳಿಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿನಿಂದ ಬದುಕಿರುವವರೆಗೂ ವೇದಾಂತ ಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆ ಯಾಗಿದ್ದ ಶ್ರೀ ಶ್ರೀಗಳವರು ತಮ್ಮ ಬಾಲ್ಯದಿಂದ 96 ನೇ ವಯಸ್ಸಿನವರೆಗೂ ವೇದಾಂತ ಗ್ರಂಥ ಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು 'ಪುರುಷ ಸರಸ್ವತಿ' ಎಂಬ ಅನ್ವರ್ಥನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲೀಷ್, ಸಂಸ್ಕೃತ ಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತ ಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಸಂಸ್ಕೃತ ಬಾರದ ಅಧ್ಯಾತ್ಮ ವಿಚಾರದ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

ಶಾಲಾ ಉಪಾಧ್ಯಾಯರಾಗಿ ಸೇವೆ ಸಲ್ಲಿಸುವಾಗಲೇ ಅಧ್ಯಾತ್ಮ ಒಲವಿನಿಂದ ಸಂಸ್ಕೃತ ಕಲಿತು ಸಾಧಕರಾದರು. ಆ ಸಮಯದಲ್ಲಿ ಶ್ರೀ ಹೊಸಕೆರೆ ಚಿದಂಬರಯ್ಯನವರ, ಶ್ರೀ ಮಹಾಭಾಗವತರ ಸಂಪರ್ಕ, ಅಧ್ಯಾತ್ಮ ಬಾಂಧವ್ಯ, ಆತ್ಮೀಯತೆ, ಅನಂತರ ಶ್ರೀ ಗೋಂದಾವಲಿ ಮಹಾರಾಜರಲ್ಲಿ ಶ್ರೀರಾಮತಾರಕ ಮಂತ್ರೋಪದೇಶ, ಶೃಂಗೇರಿ ಜಗದ್ಗುರುಗಳು ಶ್ರೀ ಸಚ್ಚಿದಾನಂದಶಿವಾಭಿನವನೃಸಿಂಹಭಾರತೀ ಮಹಾಸ್ವಾಮಿಗಳವರಿಂದ ಭಾಷ್ಯಶಾಂತಿ ಪಾಠಗಳು ಅವರ ಶ್ರದ್ಧಾ ಕಾರ್ಯತತ್ಪರತೆಗೆ ಮೆರುಗನ್ನು ನೀಡಿದವು.

1937 ರಲ್ಲಿ ಹೊಳೆನರಸೀಪುರದಲ್ಲಿ ನೆಲೆಸಿದ ಮೇಲೆ ತಮ್ಮನ್ನು ಪೂರ್ಣವಾಗಿ ಶಾಂಕರ ವೇದಾಂತಕ್ಕೆ ಅರ್ಪಿಸಿಕೊಂಡರು. 1948 ರಲ್ಲಿ ಸಂನ್ಯಾಸ ಸ್ವೀಕಾರ ಮಾಡಿದರು. ಶುದ್ಧ ತತ್ತ್ವಾನ್ವೇಷಣೆ, ನಿಖರವಾದ ಬರವಣಿಗೆ, ಆಚಾರನಿಷ್ಠೆ ಮತ್ತು ಕಠೋರನಿಯಮಪಾಲನೆಗೆ ಶ್ರೀ ಶ್ರೀಗಳವರು ಹೆಸರಾದವರು. ಅವರು ಸ್ಥಾಪಿಸಿರುವ (1920) ಅಧ್ಯಾತ್ಮಪ್ರಕಾಶ ಕಾರ್ಯಾಲಯವು ಈಗಲೂ ನಿಜವಾದ ಅಧ್ಯಾತ್ಮವಿದ್ಯಾ ಪ್ರಸಾರ ಕೇಂದ್ರವಾಗಿದೆ.

ಪೂಜ್ಯರು 1975 ನೇ ಆಗಸ್ಟ್ 5 ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿ ಪೀಠವು ಹೊಳೇನರಸೀಪುರದಲ್ಲಿದೆ. ಇಂದಿಗೂ ಚೈತನ್ಯ ಸ್ವರೂಪಿಗಳಾಗಿ ಕಾರ್ಯಾಲಯದ ಮೂಲ ಶಕ್ತಿಯಾಗಿದ್ದಾರೆ.

ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹಿ
ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ॥